ವಿಶ್ವವಾಣಿ
ವಿಶ್ವಾಸವೇ ವಿಶ್ವ

ಗುರುವಂದನೆ

ನಂಜನಗೂಡು ತಾಲೂಕಿನ ಹೊಸಕೋಟೆ ಗ್ರಾಮದ ಉದ್ಯಮಿ ರಾಘವೇಂದ್ರ ರಾವ್ ಅವರ ಮನೆಯಲ್ಲಿ ನಡೆದ ಗುರುವಂದನೆ ಕಾರ್ಯಕ್ರಮದಲ್ಲಿ ಮಂತ್ರಾಲಯ ಮಠದ ಪೀಠಾಧಿಪತಿಗಳಾದ ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರು ಹಾಗೂ ಸುತ್ತೂರು ಮಠದ ಪೀಠಾಧಿಪತಿಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ವಿಶ್ವವಾಣಿ ಪತ್ರಿಕೆ ಪ್ರಧಾನ ಸಂಪಾದಕ ವಿಶ್ವೇಶ್ವರ್ ಭಟ್ ಅವರನ್ನು ಸನ್ಮಾನಿಸಿ, ಆಶೀರ್ವದಿಸಿದರು.

ಪುಟ ತೆರೆದಂತೆ...

ನಿತ್ಯಮಂತ್ರವಾಗಲಿ 'ಸ್ವಚ್ಛಮೇವ ಜಯತೆ'!
ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ

ಸಂ.ಪುಟ | 6

ನಾಡಹಬ್ಬದಲ್ಲೂ ದರ್ಬಾರ್ ಬೇಕೆ?
ಲೋಕಮತ
ಲೋಕೇಶ್ ಕಾಯರ್ಗ

ಸಂ.ಗಮ | 7

ಮಾತಂದ್ರೆ ಮಾತು

ಜಾತಿಗಣತಿ ಬಗ್ಗೆ ಬಿಜೆಪಿಗೆ ಯಾವ ತಕರಾರು-ವಿರೋಧ ಇಲ್ಲ, ಅದರ ಅನುಷ್ಠಾನಕ್ಕೆ ನಮ್ಮ ಬೆಂಬಲ ಸದಾ ಇದ್ದೇ ಇರುತ್ತದೆ ಎಂಬ ವಿರೋಧಪಕ್ಷದ ನಾಯಕ ಆರ್.ಅಶೋಕ್ ಹೇಳಿಕೆಯಿಂದ ಮನಸ್ಸು ನಿರಾಳವಾಯಿತು. ಅಶೋಕ್ ಅವರೇ, ನಮ್ಮ ಪಕ್ಷದೊಳಗಿನ ತಕರಾರುಗಳ ಬಗ್ಗೆ ತಲೆಕೆಡಿಸಿಕೊಳ್ಳಬೇಡಿ, ಅವುಗಳನ್ನು ನಾವು ಬಗೆಹರಿಸಿಕೊಳ್ಳುತ್ತೇವೆ.ನೀವು ನುಡಿದಂತೆ ನಡೆದರೆ, ಜಾತಿಗಣತಿ ಜಾರಿಯಾಗಿ ನೀವೇ ಹೇಳಿಕೊಂಡಿರುವ ನಿಮ್ಮ ಪಕ್ಷದ ಕನಸಿನ ಅಂತ್ಯೋದಯ ಸಾಕಾರಗೊಳ್ಳುತ್ತದೆ.

- ಸಿದ್ದರಾಮಯ್ಯ, ಮುಖ್ಯಮಂತ್ರಿ

ದಾರಿದೀಪೋಕ್ತಿ

ಸದವಕಾಶಗಳು ಬರಲಿ ಎಂದು ಕಾಯುತ್ತಾ ಇರಬಾರದು. ಅಂಥ ಅವಕಾಶಗಳನ್ನು ನಾವೇ ಸೃಷ್ಟಿ ಮಾಡಲು ಸಾಧ್ಯವಿದ್ದರೆ ಅದಕ್ಕೆ ಮುಂದಾಗಬೇಕು. ಈ ವಿಷಯದಲ್ಲಿ ಕಾಯುವುದಕ್ಕಿಂತ, ನಾವೇ ಸೃಷ್ಟಿ ಮಾಡುವುದು ಒಳ್ಳೆಯದು.

ವಕ್ರತುಂಡೋಕ್ತಿ

ಬದುಕು ತನ್ನ ಬಾಗಿಲು ಮುಚ್ಚಿದಾಗ ತೆರೆಯಬೇಕು. ಬಾಗಿಲು ಆಗಾಗ ಮುಚ್ಚಿಕೊಳ್ಳುತ್ತದೆ. ಅದು ಕೆಲಸ ಮಾಡುವುದೇ ಹಾಗೆ.

ಹರಿಯಾಣದಲ್ಲಿ ಕೇಸರಿ ಪಡೆ ಸೈನಿಂಗ್, ಸತತ 3ನೇ ಗೆಲುವಿನೊಂದಿಗೆ ಹ್ಯಾಟ್ರಿಕ್ ಸಾಧನೆ, ತಲೆಕೆಳಗಾದ ಸಮೀಕ್ಷೆ
ಜಮ್ಮು-ಕಾಶ್ಮೀರದಲ್ಲಿ ನ್ಯಾಷನಲ್ ಕಾನ್ಫರೆನ್ಸ್- ಕಾಂಗ್ರೆಸ್ ಮೈತ್ರಿಗೆ ಜಯ, ಉಮರ್‌ಗೆ ಮತ್ತೆ ಮುಖ್ಯಮಂತ್ರಿ ಯೋಗ
ಜಾಟರ ರಾಜ್ಯದಲ್ಲಿ ಕಾಂಗ್ರೆಸ್‌ಗೆ ಮುಳುವಾದ ಅತಿ ಆತ್ಮವಿಶ್ವಾಸ, ಆಡಳಿತ ವಿರೋಧಿ ಅಲೆ ಮೆಟ್ಟಿ ನಿಂತ ಕೇಸರಿ ಪಕ್ಷ

ಬಿಜೆಪಿಗೆ ಹರಿವಾಣ, ಅಬ್ದುಲ್ಲಾ ಮತ್ತೆ ಸುಲ್ತಾನ

ನವದೆಹಲಿ: ಕಳೆದ ಲೋಕಸಭಾ ಚುನಾವಣೆಯಂತೆ ಮತದಾನೋತ್ತರ ಸಮೀಕ್ಷೆ ಮತ್ತೊಮ್ಮೆ ಸುಳ್ಳಾಗಿದೆ. ಹರಿಯಾಣ ಮತ್ತು ಜಮ್ಮು-ಕಾಶ್ಮೀರದಲ್ಲಿ ನಡೆದ ವಿಧಾನಸಭಾ ಚುನಾವಣೆಯ ಫಲಿತಾಂಶ ಸಮೀಕ್ಷೆಗಳಿಗೆ ಮರ್ಮಾಘಾತ ನೀಡಿದೆ. ಹರಿಯಾಣದಲ್ಲಿ ಪ್ರಚಂಡ ಬಹುಮತದಿಂದ ಬಿಜೆಪಿ ಮೂರನೇ ಬಾರಿಗೆ ಅಧಿಕಾರದ ಗದ್ದುಗೇರಿದರೆ, ಅಧಿಕಾರದ ಕನಸು ಕಂಡಿದ್ದ ಕಾಂಗ್ರೆಸ್‌ಗೆ ಭಾರಿ ಹೊಡೆತ ಬಿದ್ದಿದೆ. ಮೂರನೇ ಬಾರಿ ಆಡಳಿತ ವಿರೋಧಿ ಅಲೆ ಕೆಲಸ ಮಾಡದಿರುವುದು ನಿಚ್ಚಳವಾಗಿದೆ. ಪ್ರಧಾನಿ ನರೇಂದ್ರ ಮೋದಿಯ ವರ್ಚಸ್ಸಿಗೆ ಮತ್ತೆ ಮತದಾರರು ಮಣೆಹಾಕಿದ್ದಾರೆ ಎಂದು ಬಿಜೆಪಿ ಬಣ್ಣಿಸಿದ್ದು, ಕಮಲ ಪಾಳಯದಲ್ಲಿ ವಿಜಯೋತ್ಸವ ನಡೆದಿದೆ.

ಅತ್ತ, ಜಮ್ಮು-ಕಾಶ್ಮೀರದಲ್ಲಿ ಮಿತ್ರಪಕ್ಷ ನ್ಯಾಷನಲ್ ಕಾನ್ಫರೆನ್ಸ್ ಮತ್ತು ಕಾಂಗ್ರೆಸ್ ಮೈತ್ರಿ ಸರಕಾರ ಅಧಿಕಾರಕ್ಕೇರಲು ವೇದಿಕೆ ಸಿದ್ಧವಾಗಿದೆ. ಆದರೆ ಜಮ್ಮು ಪ್ರಾಂತ್ಯದಲ್ಲಿ ಇತರ ಪಕ್ಷಗಳನ್ನು ಧೂಳೀಪಟ ಮಾಡಿದ ಬಿಜೆಪಿ , ಮುಸ್ಲಿಂ ಬಾಹುಳ್ಯದ ಪ್ರದೇಶಗಳಲ್ಲೂ ಗಣನೀಯ ಸಾಧನೆ ಮಾಡಿದೆ.

ಜನರ ನಾಡಿಮಿಡಿತ ಅರಿಯಲು ಸಮೀಕ್ಷೆ ವಿಫಲ

ಚುನಾವಣಾ ಫಲಿತಾಂಶದ ದಿಕ್ಸೂಚಿಯೆನಿಸಿರುವ ಮತದಾನೋತ್ತರ ಸಮೀಕ್ಷೆ ಕಳೆದ ಲೋಕಸಭಾ ಚುನಾವಣೆಯಂತೆ ಎರಡೂ ರಾಜ್ಯಗಳ ವಿಧಾನ ಸಭಾ ಚುನಾವಣೆಯಲ್ಲಿ ಮತದಾರರ ನಾಡಿಮಿಡಿತ ಅರಿಯಲು ವಿಫಲವಾಗಿದೆ. ಹರಿಯಾಣದಲ್ಲಿ ಬಿಜೆಪಿಗೆ ಸೋಲಾಗ ಲಿದ್ದು, ಕಾಂಗ್ರೆಸ್ ಭಾರಿ ಬಹುಮತದಿಂದ ಅಧಿಕಾರಕ್ಕೆ ಬರಲಿದೆ. ಜಮ್ಮು-ಕಾಶ್ಮೀರದಲ್ಲಿ ಯಾರಿಗೂ ಬಹುಮತ ಬಾರದೆ ಅತಂತ್ರ ವಿಧಾನಸಭೆ ಸೃಷ್ಟಿಯಾಗಲಿದೆ ಎಂದು ಎಲ್ಲ ಚಾನಲ್‌ಗಳ ಮತಗಟ್ಟೆ ಸಮೀಕ್ಷೆಗಳು ಹೇಳಿದ್ದವು. ಆದರೆ ಮಂಗಳವಾರ ಹೊರಬಿದ್ದ ಫಲಿತಾಂಶದಲ್ಲಿ ಎಲ್ಲವೂ ಏರುಪೇರಾಗಿದ್ದು, ಬಿಜೆಪಿ ಹ್ಯಾಟ್ರಿಕ್ ಜಯದೊಂದಿಗೆ ಅಧಿಕಾರಕ್ಕೆ ಮರಳಿದ್ದರೆ, ಕಣಿವೆ ರಾಜ್ಯದಲ್ಲಿ ಫರೂಖ್ ಅಬ್ದುಲ್ಲಾ ನೇತೃತ್ವದ ಎನ್‌ಸಿ ಹಾಗೂ ಕಾಂಗ್ರೆಸ್ ಮೈತ್ರಿಕೂಟ ಪ್ರಚಂಡ ಬಹುಮತ ಗಳಿಸಿದೆ.

→ 4

ಹರಿಯಾಣದ ಚುನಾವಣೆಯಲ್ಲಿ ಪಕ್ಷ ಪ್ರಚಂಡ ಜಯ ದಾಖಲಿಸುತ್ತಿದ್ದಂತೆ ದೆಹಲಿಯ ಬಿಜೆಪಿ ಕೇಂದ್ರ ಕಚೇರಿ ಮುಂದೆ ಕಾರ್ಯಕರ್ತರ ವಿಜಯೋತ್ಸವ.



48	37	2	3
ಬಿಜೆಪಿ	ಕಾಂಗ್ರೆಸ್	ಐಎನ್‌ಎಲ್‌ಡಿ+	ಇತರೆ



49	29	3	9
ಕಾಂಗ್ರೆಸ್ +ಎನ್‌ಸಿ	ಬಿಜೆಪಿ	ಪಿಡಿಪಿ	ಇತರೆ

ಜಮ್ಮು-ಕಾಶ್ಮೀರದಲ್ಲಿ ಮೈತ್ರಿಕೂಟ ಗೆಲುವು ಸಾಧಿಸಿದ್ದಕ್ಕೆ ನ್ಯಾಷನಲ್ ಕಾನ್ಫರೆನ್ಸ್ ಮತ್ತು ಕಾಂಗ್ರೆಸ್ ಕಾರ್ಯಕರ್ತರ ಶ್ರೀನಗರದಲ್ಲಿ ವಿಜಯೋತ್ಸವ.

ಹರಿಯಾಣದಲ್ಲಿ ಕೈ ಕಚ್ಚಲು ಕಾರಣ

1. ಆಡಳಿತ ವಿರೋಧಿ ಅಲೆಯಲ್ಲಿ ಬಿಜೆಪಿ ಸೋತು ತನಗೆ ಭಾರಿ ಬಹುಮತ ಬರಲಿದೆ ಎಂಬ ಅತಿಯಾದ ಆತ್ಮವಿಶ್ವಾಸ
2. ಭೂಪೀಂದರ್ ಸಿಂಗ್ ಹೂಡಾ ಮತ್ತು ಕುಮಾರಿ ಶೆಲ್ಜಾ ನಡುವಣ ಮುಸುಕಿನ ಗುದ್ದಾಟ, ಒಳಜಗಳ
3. ಆಮ್ ಆದ್ಮಿ ಪಕ್ಷದ ಜತೆ ಮೈತ್ರಿ ಮಾಡಿಕೊಳ್ಳದ ನಿರ್ಧಾರ ಕೈ ಪಕ್ಷಕ್ಕೆ ಮುಳುವು.
4. ಜಾಟ್ ಸಮುದಾಯದ ಮತಗಳನ್ನು ಸೆಳೆಯಲು ಯಶಸ್ವಿಯಾದರೂ ವಿರೋಧಿ ಮತಗಳನ್ನು ಬಿಜೆಪಿಗೆ ಸುಲಭವಾಗಿ ಬಿಟ್ಟುಕೊಟ್ಟಿದ್ದು.
5. ಕೇಜ್ರಿವಾಲ್ ನೇತೃತ್ವದ ಆಮ್ ಆದ್ಮಿ ಪಕ್ಷದ ಕಾಂಗ್ರೆಸ್ ಮತಗಳನ್ನು ಪಡೆದಿದ್ದು.

ಕಮಲ ಅರಳಿದ್ದು ಹೀಗೆ..

1. ಚುನಾವಣೆಗೆ ಮುನ್ನ ನಯಾಬ್ ಸಿಂಗ್ ಸೈನಿ ಅವರನ್ನು ಸಿಎಂ ಸ್ಥಾನಕ್ಕೇರಿಸಿದ ತಂತ್ರ ಯಶಸ್ವಿ
2. ಜಾಟ್ ವಿರೋಧಿ ಮತಗಳನ್ನು ಪಡೆಯಲು ಯಶಸ್ವಿಯಾಗಿದ್ದು..
3. ಕಾಂಗ್ರೆಸ್‌ನಂತೆ ಬಿಜೆಪಿಯಲ್ಲಿ ಒಳಜಗಳ ಉಂಟಾಗದಂತೆ ಎಚ್ಚರಿಕೆ ವಹಿಸಿದ್ದು..
4. ಇಂಡಿಯಾ ಕೂಟದ ಪಕ್ಷಗಳಾದ ಕಾಂಗ್ರೆಸ್ ಮತ್ತು ಆಪ್ ಪ್ರತ್ಯೇಕವಾಗಿ ಸ್ಪರ್ಧಿಸಿದ್ದರಿಂದ ಮತಗಳ ವಿಭಜನೆಯಾಗಿ ಬಿಜೆಪಿ ಅನುಕೂಲವಾಯಿತು.

ಹರಿಯಾಣದಲ್ಲಿ ಬಿಜೆಪಿಯ ಹ್ಯಾಟ್ರಿಕ್ ಗೆಲುವು ದೇಶಾದ್ಯಂತ ಪ್ರತಿಧ್ವನಿಸಲಿದೆ. ಮೂರನೇ ಬಾರಿಗೆ ಕಮಲ ಅರಳಿದ್ದು ಇದೊಂದು ಪವಿತ್ರ ದಿನ. ಬಿಜೆಪಿ ಪ್ರತಿ ಜಾತಿ ,ವರ್ಗ ನೀಡಿದ ಬೆಂಬಲ ರಾಜ್ಯದ ಆಡಳಿತದ ಯಶಸ್ಸಿಗೆ ನೀಡಿದ ಕೊಡುಗೆ ಎಂದು ಭಾವಿಸಿದ್ದೇನೆ. ಭಗವದ್ಗೀತೆಯ ನಾಡಿನಲ್ಲಿ ಮತ್ತೊಮ್ಮೆ ಸತ್ಯಕ್ಕೆ ಜಯ ಸಿಕ್ಕಿದೆ.

- ನರೇಂದ್ರ ಮೋದಿ, ಪ್ರಧಾನಮಂತ್ರಿ

ಕಣಿವೆಯಲ್ಲಿ ಎನ್‌ಸಿ-ಕೈ ಕೇಕೆ

1. ಮುಸ್ಲಿಂ ಮತಗಳು ವ್ಯಾಪಕವಾಗಿ ಮೈತ್ರಿಕೂಟಕ್ಕೆ ಹರಿದುಬಂದದ್ದು
2. 370ನೇ ವಿಧಿ ಮರುಸ್ಥಾಪನೆ ಮಾಡುವುದಾಗಿ ಫಾರೂಕ್ ಅಬ್ದುಲ್ಲಾ ಭರವಸೆ
3. ಕಾಶ್ಮೀರ ಕಣಿವೆಯಲ್ಲಿ ಬಿಜೆಪಿ ಬಗ್ಗೆ ಒಲವು ತೋರದ ಮುಸ್ಲಿಂ ಮತದಾರರು
4. ಬಿಜೆಪಿ ವಿರುದ್ಧ ಇಂಡಿಯಾ ಒಕ್ಕೂಟದ ಪರಿಣಾಮಕಾರಿ ಪ್ರಚಾರ

ಬಿಜೆಪಿ ವಿಫಲವಾಗಿದ್ದು ಏಕೆ?

1. ಮುಸ್ಲಿಂ ಬಾಹುಳ್ಯದ ಪ್ರದೇಶಗಳಲ್ಲಿ ಹೆಚ್ಚಿನ ಪರಿಣಾಮ ಬೀರಲು ಬಿಜೆಪಿ ವಿಫಲ.
2. ನಯಾ ಕಾಶ್ಮೀರದ ಬಗ್ಗೆ ಫಲಿಸದ ಬಿಜೆಪಿ ಪ್ರಚಾರ
3. ಜಮ್ಮು-ಕಾಶ್ಮೀರ ಅಭಿವೃದ್ಧಿಯ ವಿಷಯವನ್ನು ಮತಗಳಾಗಿ ಪರಿವರ್ತಿಸಲು ವಿಫಲವಾಗಿದ್ದು.
4. ನ್ಯಾಷನಲ್ ಕಾನ್ಫರೆನ್ಸ್ ಮತ್ತು ಕಾಂಗ್ರೆಸ್ ಸಂಘಟಿತ ಪ್ರಚಾರಕ್ಕೆ ಗೆಲುವು

ಮುಫ್ತಿ ಮಗಳಿಗೆ ಸೋಲು

ಬಿಜ್ ಬಿಹಾರಾ ಕ್ಷೇತ್ರದಲ್ಲಿ ಮೆಹಬೂಬಾ ಮುಫ್ತಿ ಪುತ್ರಿ ಇಲ್ತಿಜಾ ಸೋತಿದ್ದಾರೆ. 1996ರಲ್ಲಿ ಇದೇ ಕ್ಷೇತ್ರದಿಂದ ಗೆದ್ದು ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದ್ದ ಮೆಹಬೂಬಾ ಪುತ್ರಿಯನ್ನು ಕಣಕ್ಕಿಳಿಸಿದ್ದರು.

ಸಾವಿತ್ರಿ ಜಿಂದಾಲ್ ಗೆಲುವು

ಹರಿಯಾಣದ ಹಿಸಾರ್ ವಿಧಾನ ಸಭಾ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿದ್ದ ದೇಶದ ಅತ್ಯಂತ ಸಿರಿವಂತ ಮಹಿಳೆ, ಹೆಸರಾಂತ ಉದ್ಯಮಿ ಸಾವಿತ್ರಿ ಜಿಂದಾಲ್ ಗೆಲುವು ಸಾಧಿಸಿದ್ದಾರೆ.

ಚುನಾವಣಾ ಕುಸ್ತಿ ಗೆದ್ದ ಫೋಗಟ್

ರಾಷ್ಟ್ರೀಯ ಕುಸ್ತಿ ಒಕ್ಕೂಟದ ಅಧ್ಯಕ್ಷ ಬ್ರಿಜ್ ಭೂಷಣ್ ವಿರುದ್ಧದ ಹೋರಾಟದ ಮೂಲಕ ದೇಶದ ಗಮನ ಸೆಳೆದಿದ್ದ ಕುಸ್ತಿಪಟು ವಿನೇಶ್ ಫೋಗಟ್ ಕಾಂಗ್ರೆಸ್ ಸೇರಿ ಜೂಲಾನಾ ಕ್ಷೇತ್ರದಲ್ಲಿ ಚುನಾವಣೆಗೆ ಸ್ಪರ್ಧಿಸಿ ಬಿಜೆಪಿ ಅಭ್ಯರ್ಥಿ ವಿರುದ್ಧ ಗೆಲುವು ಸಾಧಿಸಿದ್ದಾರೆ.

ಅಕ್ರಮ ಹಣ ವಸೂಲಿ ಆರೋಪ, ನಗದು ವಶ
ಬೆಂಗಳೂರು ಸೇರಿ ಆರು ಚೆಕ್‌ಪೋಸ್ಟ್ ಪರಿಶೀಲನೆ

ಆರ್‌ಟಿಒ ಚೆಕ್‌ಪೋಸ್ಟ್‌ಗಳ ಮೇಲೆ ಲೋಕಾಯುಕ್ತ ದಾಳಿ

ಬೆಂಗಳೂರು :ಅಕ್ರಮವಾಗಿ ಹಣ ವಸೂಲಿ ಮಾಡುತ್ತಿರುವ ಆರೋಪದ ಮೇರೆಗೆ ರಾಜ್ಯದ 8 ಜಿಲ್ಲೆಗಳ 12 ಪ್ರಾದೇಶಿಕ ಸಾರಿಗೆ ಆಯುಕ್ತರ ಕಚೇರಿ (ಆರ್‌ಟಿಒ) ಚೆಕ್‌ಪೋಸ್ಟ್‌ಗಳ ಮೇಲೆ ಕಳೆದ ಎರಡು ದಿನಗ ಳಿಂದ ಲೋಕಾ ಯುಕ್ತ ಅಧಿಕಾರಿ ಗಳು ದಾಳಿ ನಡೆಸು ತ್ತಿದ್ದು ಲಕ್ಷಾಂತರ ರೂಪಾಯಿ ಹಣ ವಶಕ್ಕೆ ಪಡೆದುಕೊಂಡಿದ್ದಾರೆ.

ಚೆಕ್‌ಪೋಸ್ಟ್‌ಗಳಲ್ಲಿ ಸರಕಾರಿ ಅಧಿಕಾರಿಗಳು, ಸಿಬ್ಬಂದಿ ಖಾಸಗಿ ವ್ಯಕ್ತಿಗಳೊಂದಿಗೆ ಸೇರಿಕೊಂಡು ಸಾರ್ವಜನಿಕರಿಂದ ಅಕ್ರಮವಾಗಿ ಹಣ ವಸೂಲಿ ಮಾಡುತ್ತಿರುವ ಬಗ್ಗೆ ವ್ಯಾಪಕ ದೂರುಗಳು ಬಂದ ಮೇರೆಗೆ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಕಲಬುರಗಿ, ಬೆಳಗಾವಿ ವಿವಿಧ ಚೆಕ್‌ಪೋಸ್ಟ್‌ಗಳಲ್ಲಿ ದಾಳಿ ನಡೆಸಲಾಗಿದೆ. ಈ ವೇಳೆ 3.45 ಲಕ್ಷ ನಗದು ಹಣವನ್ನು ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಹಗರಿ ಚೆಕ್‌ಪೋಸ್ಟ್‌ನಲ್ಲಿ ದಾಳಿ ವೇಳೆ ಕಿಟಕಿಯಿಂದ ನಗದು ಎಸೆದಿರುವುದು ಪತ್ತೆಯಾಗಿದೆ. ತಪಾಸಣಾ ವೇಳೆ ಹಲವು ನ್ಯೂನತೆಗಳು ಕಂಡುಬಂದಿದ್ದು, ಈ ಬಗ್ಗೆ ಹೆಚ್ಚಿನ ವಿಚಾರಣೆ ಕೈಗೊಳ್ಳಲಾಗಿದೆ ಎಂದು ಲೋಕಾಯುಕ್ತ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಎಲ್ಲಾ ಚೆಕ್‌ಪೋಸ್ಟ್‌ಗಳಲ್ಲಿ ದಾಖಲೆಗಳನ್ನು ಸರಿಯಾಗಿ ನಿರ್ವಹಿಸಿಲ್ಲ, ಅಲ್ಲದೆ ಚೆಕ್‌ಪೋಸ್ಟ್‌ನಲ್ಲಿ ಸಿಬ್ಬಂದಿ ಇಲ್ಲದೇ ಇರುವುದು, ವಾಹನಗಳ ದಾಖಲೆಗಳ ಪರಿಶೀಲನೆ ವೇಳೆ ನಿಯಮ ಉಲ್ಲಂಘನೆ, ಲಂಚ ನೀಡಬಾರದು ಎಂದು ಘೋಷಣೆ ಮತ್ತು ಲೋಕಾಯುಕ್ತ ದೂರು ಸಂಖ್ಯೆ ಇರುವ ಫಲಕ ಹಾಕದೇ ಇರುವುದು ಸೇರಿ ಹಲವು ಲೋಪಗಳು ಪತ್ತೆಯಾಗಿವೆ.

ಅಕ್ರಮ ಹಣ ಪತ್ತೆ

ವಿಜಯಪುರದ ಝಳಕಿ ಚೆಕ್‌ಪೋಸ್ಟ್‌ನಲ್ಲಿ 2 ಲಕ್ಷ, ಬಳ್ಳಾರಿಯ ಹಗರಿ ಚೆಕ್‌ಪೋಸ್ಟ್‌ನಲ್ಲಿ 45 ಸಾವಿರ, ಅತ್ತಿಬೆಲೆಯಲ್ಲಿ 45 ಸಾವಿರ, ಕಲಬುರಗಿಯ ಹುಮನಾಬಾದ್‌ನಲ್ಲಿ 42 ಸಾವಿರ, ಬೆಳಗಾವಿ ನಿಪ್ಪಾಣಿಯಲ್ಲಿ 13.5 ಸಾವಿರ ಸೇರಿದಂತೆ ಒಟ್ಟು 3.45 ಲಕ್ಷ ರೂ ಹಣ ಜಪ್ತಿ ಮಾಡಲಾಗಿದೆ. ದಾಳಿಯ ವೇಳೆ ಸರಕಾರಿ ಅಧಿಕಾರಿ, ಸಿಬ್ಬಂದಿ ಖಾಸಗಿ ವ್ಯಕ್ತಿಗಳೊಂದಿಗೆ ಸೇರಿ ಅಕ್ರಮಣ ವಸೂಲಿ ಯಲ್ಲಿ ಶಾಮೀಲಾಗಿರುವುದು ಕಂಡುಬಂದಿದೆ.

ಸಿಎಂ ಕಾನ್‌ವೇಗೆ ಅಡ್ಡಬಂದ ರೆಡ್ಡಿ ಕಾರು ವಶ

ಗಂಗಾವತಿ: ಸಿಸಿದ್ದರಾಮಯ್ಯ ಅವರು ಇತ್ತೀಚೆಗೆ ಗಂಗಾವತಿ ಮಾರ್ಗವಾಗಿ ಬಳ್ಳಾರಿಗೆ ತೆರಳುವಾಗ ಅವರ ಬೆಂಗಾವಲು ವಾಹನಗಳ ವಿರುದ್ಧ ದಿಕ್ಕಿಗೆ ಶಾಸಕ ಜನಾರ್ದನ ರೆಡ್ಡಿಯ ಕಾರುಗಳು ಸಾಗಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಕ್ರಮ ಕೈಗೊಂಡಿದ್ದಾರೆ. ರೆಡ್ಡಿಯ ಒಂದು ಹಾಗೂ ಬೆಂಬಲಿಗರ ಎರಡು ಕಾರುಗಳನ್ನು ಮಂಗಳ ವಾರ ವಶಕ್ಕೆ ಪಡೆದಿದ್ದಾರೆ. ಝೀರೊ ಟ್ರಾಫಿಕ್ ನಿಯಮ ಉಲ್ಲಂಘಿಸಿದ್ದರಿಂದ ಪೊಲೀಸರು ಜನಾರ್ದನರೆಡ್ಡಿಯ ಕಾರುಗಳ ಚಾಲಕರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಆದರೆ ಎಫ್‌ಐಆರ್‌ನಲ್ಲಿ ಯಾರ ಹೆಸರನ್ನೂ ಉಲ್ಲೇಖಿಸಿಲ್ಲ.

ದರ್ಶನ್ ಜಾಮೀನು ವಿಚಾರಣೆ ಮುಂದಕ್ಕೆ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣ ಸಂಬಂಧ ನಟ ದರ್ಶನ್ ಜಾಮೀನು ಅರ್ಜಿಯ ವಿಚಾರಣೆಯನ್ನು ಬೆಂಗಳೂರಿನ 57ನೇ ಸಿಸಿಎಚ್ ನ್ಯಾಯಾಲಯ ಬುಧವಾರಕ್ಕೆ ಮುಂದೂಡಿದೆ. ಚಾರ್ಜ್‌ಶೀಟ್‌ನಲ್ಲಿರುವ ಅಂಶಗಳ ಬಗ್ಗೆ ನಟ ದರ್ಶನ್ ಪರ ವಕೀಲ ಸಿ.ವಿ.ನಾಗೇಶ್ ಮಂಡಿಸಿದ ವಾದಕ್ಕೆ ಸರಕಾರ ಪರ ಅಭಿಯೋಜಕ ಪ್ರಸನ್ನ ಕುಮಾರ್ ಪ್ರತಿವಾದ ಮಂಡಿಸಿದರು. ವಾದ ಮಂಡನೆಗೆ ಕಾಲಾವಕಾಶ ಕೋರಿದ ಹಿನ್ನೆಲೆ ಜಾಮೀನು ಅರ್ಜಿ ಬುಧವಾರ ಮಧ್ಯಾಹ್ನ 12.30ಕ್ಕೆ ವಿಚಾರಣೆ ಮುಂದೂಡಲಾಯಿತು.

ಕಿರಿಯ ವೈದ್ಯರ ಮುಷ್ಕರ ಬಿರುಸು

ಕೋಲ್ಕತ್ತ: ಕಿರಿಯ ವೈದ್ಯೆ ಅತ್ಯಾಚಾರ ಮತ್ತು ಹತ್ಯೆ ಪ್ರಕರಣದಲ್ಲಿ ತ್ವರಿತ ನ್ಯಾಯಕ್ಕೆ ಒತ್ತಾಯಿಸಿ ಆಮರಣಾಂತ ಉಪವಾಸ ಸತ್ಯಾಗ್ರಹ ಕೈಗೊಂಡಿರುವ ಪಶ್ಚಿಮ ಬಂಗಾಳದ ವಿವಿಧ ಆಸ್ಪತ್ರೆಗಳ 7 ಕಿರಿಯ ವೈದ್ಯರಿಗೆ ಬೆಂಬಲ ವ್ಯಕ್ತವಾಗಿದೆ. ಆರ್.ಜಿ ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ 50 ಹಿರಿಯ ವೈದ್ಯರು ಮಂಗಳವಾರ ತಮ್ಮ ಹುದ್ದೆಗಳಿಗೆ ಸಾಮೂಹಿಕವಾಗಿ ರಾಜೀನಾಮೆ ಸಲ್ಲಿಸಿದ್ದಾರೆ. ಎಲ್ಲ ವೈದ್ಯರು ರಾಜೀನಾಮೆ ಪತ್ರಕ್ಕೆ ಸಹಿಹಾಕಿದ್ದು, ಯುವ ವೈದ್ಯರ ಹೋರಾಟ ಬೆಂಬಲಿಸುವುದಾಗಿ ಪ್ರಕಟಿಸಿದ್ದಾರೆ.

ರೈತ ನಾಯಕಿಯಿಂದ ಕಾಂಗ್ರೆಸ್ ನಾಯಕನ ವಿರುದ್ಧ ಆರೋಪ, ಎಫ್ ಐಆರ್

ವಿನಯ್ ಕುಲಕರ್ಣಿ ವಿರುದ್ಧ ಅತ್ಯಾಚಾರ ದೂರು

ಬೆಂಗಳೂರು: ಶಾಸಕ ವಿನಯ್ ಕುಲಕರ್ಣಿ ವಿರುದ್ಧ ಅತ್ಯಾಚಾರ ಹಾಗೂ ಲೈಂಗಿಕ ಕಿರುಕುಳ ಆರೋಪ ಕೇಳಿ ಬಂದಿದ್ದು, ಸಂಜಯನಗರ ಪೊಲೀಸ್ ಠಾಣೆ ಯಲ್ಲಿ ಎಫ್ ಐಆರ್ ದಾಖಲಾಗಿದೆ.

ರೈತ ನಾಯಕಿಯೊಬ್ಬರು ಶಾಸಕ ವಿನಯ್ ಕುಲಕರ್ಣಿ ವಿರುದ್ಧ ಸಂಜಯ ನಗರ ಪೊಲೀಸ್ ಠಾಣೆಗೆ ಮಂಗಳವಾರ ದೂರು ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ವಿರುದ್ಧ ಪ್ರಕರಣ ದಾಖಲಾಗಿದೆ.

ದೂರಿನಲ್ಲಿ ಏನಿದೆ...?

ಸಮಾಜ ಸೇವಕಿಯಾಗಿರುವ ನಾನು ಹಲವಾರು ರೈತ ಹಾಗೂ ಸಾಮಾಜಿಕ ಹೋರಾಟ ನಡೆಸಿದ್ದೇನೆ. 2022ರಲ್ಲಿ ನನಗೆ ವಿನಯ್ ಕುಲಕರ್ಣಿ ಪರಿಚಯವಾಗಿತ್ತು. ಯಾರಿಂದಲೋ ನನ್ನ ಮೊಬೈಲ್ ಸಂಖ್ಯೆ ಪಡೆದು ಕರೆ, ಮೆಸೇಜ್, ವಿಡಿಯೊ ಕಾಲ್ ಮಾಡುತ್ತಿದ್ದರು. ರಾತ್ರಿ 11, 12ರ ನಂತರವೇ ಕಾಲ್ ಮಾಡಿ ಮೊದಲು ಕುಶಲೋಪರಿ ವಿಚಾರಿಸು ತ್ತಿದ್ದರು. ಆ ಬಳಿಕ ಇದು ಸರಸ ಸಂಭಾಷಣೆಯಾಗುತ್ತಿತ್ತು ಎಂದು ಆರೋಪಿಸಿದ್ದಾಳೆ.

ಬೆತ್ತಲೆಯಾಗಿ ನೋಡು: ವಿಡಿಯೊ ಕಾಲ್‌ನಲ್ಲಿ ಸಂಪೂರ್ಣ ಬೆತ್ತಲೆಯಾಗಿ ನನ್ನನ್ನು ನೋಡು ಎನ್ನುತ್ತಿದ್ದರು. ಮಧ್ಯರಾತ್ರಿಯಲ್ಲಿ ಇಬ್ಬರೂ ಒಟ್ಟಿಗೆ ಸಿಗೋಣ ಎನ್ನುತ್ತಿದ್ದ. ನಾನು ಬೇಡ ಎಂದರೆ, ರೌಡಿ ಪಡೆಯ ಮೂಲಕ ಕರೆ ಮಾಡಿಸುತ್ತಿದ್ದ. ನಾನು ಇದ್ದಲ್ಲಿಗೆ ರೌಡಿಗಳು ಬರುತ್ತಿದ್ದರು. ಇದೇ ಕಾರಣಕ್ಕೆ ವಿಧಿಯಿಲ್ಲದೆ ಅವರೊಂದಿಗೆ ಸರಸ ಸಂಭಾಷಣೆಗೆ ಒಪ್ಪಿದ್ದೆ.

→ 4

ಕಾಂತಾರ ಚಿತ್ರದ ಅತ್ಯುತ್ತಮ ಅಭಿನಯಕ್ಕಾಗಿ ಕನ್ನಡಿಗ ರಿಷಭ್ ಶೆಟ್ಟಿ ದೆಹಲಿಯ ವಿಜ್ಞಾನ್ ಭವನ್‌ನಲ್ಲಿ ಮಂಗಳವಾರ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಪ್ರಶಸ್ತಿ ಸ್ವೀಕರಿಸಿದರು.

ಸ್ಥಾಯಿ ಸಮಿತಿಗೆ ಶಾಸಕರ ನೇಮಕ

ಬೆಂಗಳೂರು: ವಿಧಾನಸಭೆಯ ಮೂರು ವಿವಿಧ ಸ್ಥಾಯಿ ಸಮಿತಿಗಳಿಗೆ ಮೂವರು ಶಾಸಕರನ್ನು ಸದಸ್ಯರನ್ನಾಗಿ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ನಾಮ ನಿರ್ದೇಶನ ಮಾಡಿದ್ದಾರೆ. ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಸದಸ್ಯರಾಗಿದ್ದ ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರು ಅವರನ್ನು ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳ ಸಮಿತಿ ಸದಸ್ಯರಾಗಿ ನಾಮ ನಿರ್ದೇಶನ ಮಾಡಿದ್ದಾರೆ. ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ ಸದಸ್ಯರಾಗಿದ್ದ ಶಾಸಕ ಶ್ರೀನಿವಾಸಯ್ಯ ಎನ್. ಅವರನ್ನು ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ. ಸರಕಾರಿ ಭರವಸೆಗಳ ಸಮಿತಿ ಸದಸ್ಯರಾಗಿದ್ದ ಶರಣಗೌಡ ಕಂದಕೂರ ಅವರನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಲಾಗಿದೆ ಎಂದು ವಿಧಾನಸಭೆ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ತಿಳಿಸಿದ್ದಾರೆ.

ಬಾಲಕರು ನೀರುಪಾಲು

ವಿಜಯನಗರ: ಕೂಡ್ಲಿಗಿ ತಾಲೂಕಿನ ಕಾನಾಹೊಸಹಳ್ಳಿ ಸಮೀಪ ಕುಮತಿಯ ಹಳ್ಳದಲ್ಲಿ ಈಜಲು ತೆರಳಿದ್ದ ಮೂವರು ಮಕ್ಕಳು ನೀರಿನಲ್ಲಿ ಮುಳುಗಿ ದಾರುಣವಾಗಿ ಸಾವನ್ನಪ್ಪಿರುವ ಘಟನೆ ಅ.8ರ ಮಂಗಳವಾರ ಸಂಜೆ ನಡೆದಿದೆ. ಸಾಗರ್ (14), ಗುರು (14), ವಿನಯ್ (11) ಮೃತ ದುರ್ದೈವಿಗಳು.

ಫನ್‌ತರಂಗ

- ರಘುಪತಿ ಶೃಂಗೇರಿ -

ಮುಡಾ ತನಿಖೆ ಚುರುಕು, ಸ್ನೇಹಮಯಿ ಕೃಷ್ಣರಿಂದ ಮತ್ತೊಂದು ದೂರು - ಸುದ್ದಿ

ಏನಣ್ಣಾ ಕಥೆ...ಸ್ನೇಹಮಯಿ ನಮ್ ಪಾಲಿಗೆ ದ್ವೇಷಮಯಿ ಆಗ್ಬುಟ್ರಲ್ಲಾ...!



ರಾಜ್ಯಕ್ಕೆ ಮಾದರಿ ಯೋಜನೆ ರೂಪಿಸಿಕೊಂಡ ಶಾಸಕ ಪ್ರದೀಪ್ । ಗ್ರಾಮೀಣ ಭಾಗದ ಜನರ ಸಮಸ್ಯೆ ಆಲಿಸಲು ಈ ಯೋಜನೆ

ನಮ್ಮೂರಿಗೆ ನಮ್ಮ ಶಾಸಕ; ಪ್ರದೀಪರಿಂದ ಅಭಿಯಾನ

ಬೆಂಗಳೂರು: ತಮ್ಮ ಮಾತಿನಿಂದ ಭರ್ಜರಿ ಫ್ಯಾನ್ ಬೇಸ್ ಪಡೆದಿರುವ ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಇದೀಗ ಮತ್ತೊಂದು ವಿನೂತನ ಅಭಿಯಾನದ ಮೂಲಕ ರಾಜ್ಯದ ಜನರನ್ನು ಸೆಳೆದಿದ್ದಾರೆ.

ಶಾಸಕರಾಗಿ ಆಯ್ಕೆಯಾದ ದಿನದಿಂದಲೇ, ಚಿಕ್ಕಬಳ್ಳಾಪುರ ಕ್ಷೇತ್ರದ ಜನರೊಂದಿಗೆ ನಿತ್ಯ ಸಂಪರ್ಕವನ್ನು ಹೊಂದಿರುವ ಪ್ರದೀಪ್ ಇದೀಗ 'ನಮ್ಮೂರಿಗೆ ನಮ್ಮ ಶಾಸಕ' ಎನ್ನುವ ವಿಶಿಷ್ಟ ಕಾರ್ಯಕ್ರಮದ ಮೂಲಕ ರಾಜ್ಯದ ಉಳಿದ ಶಾಸಕರಿಗೆ ಮಾದರಿಯಾಗಿದ್ದಾರೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸುತ್ತಿದ್ದಂತೆ ನಮಸ್ತೆ ಚಿಕ್ಕಬಳ್ಳಾಪುರದ ಮೂಲಕ ಚಿಕ್ಕಬಳ್ಳಾಪುರ ನಗರ ಭಾಗದಲ್ಲಿ ನಿತ್ಯ ಬೆಳಗ್ಗೆ ಮನೆಮನೆಗೆ ತೆರಳಿ ಸಮಸ್ಯೆಯನ್ನು ಆಲಿಸುವ ಮೂಲಕ ಭಾರಿ ಸದ್ದು ಮಾಡಿದ್ದರು. ಇದೀಗ ಇದರ ಮುಂದುವರಿದ ಭಾಗವಾಗಿ 'ನಮ್ಮೂರಿಗೆ ನಮ್ಮ ಶಾಸಕ' ಎನ್ನುವ ವಿಶಿಷ್ಟ ಯೋಜನೆಯನ್ನು ಆರಂಭಿಸಿದ್ದು, ತಿಂಗಳಲ್ಲಿ ಎರಡು ಬಾರಿ ಕ್ಷೇತ್ರದ ವ್ಯಾಪ್ತಿಯ ಒಂದು ಗ್ರಾಮ ಪಂಚಾಯಿತಿಗೆ ಭೇಟಿ ನೀಡಲಿದ್ದಾರೆ. ಈ ಭೇಟಿಯ ವೇಳೆ ಶಾಸಕರೊಂದಿಗೆ ತಹಶೀಲ್ದಾರ್, ಇಒ ಸೇರಿದಂತೆ ತಾಲೂಕು ಮಟ್ಟದ ಎಲ್ಲ ಅಧಿಕಾರಿಗಳು ಗ್ರಾಮ ಪಂಚಾಯಿತಿಯ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ. ಈ ವೇಳೆ ಆಯಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಜನರ ಕುಂದು ಕೊರತೆಗಳನ್ನು ಆಲಿಸಿ, ಸೂಕ್ತ ಪರಿಹಾರವನ್ನು ಅಧಿಕಾರಿಗಳ ವ್ಯಾಪ್ತಿಯಲ್ಲಿ ಒಂದು ತಿಂಗಳಲ್ಲಿ ನೀಡಬೇಕು. ಒಂದು ವೇಳೆ ಸರಕಾರ ಮಟ್ಟದಲ್ಲಿದ್ದರೆ, ಸರಕಾರದೊಂದಿಗೆ ಸಂವಹನ ನಡೆಸಲಾಗುತ್ತಿದೆ.

→ 4

ನಮ್ಮೂರಿಗೆ ನಮ್ಮ ಶಾಸಕ ವಿನೂತನ ಕಾರ್ಯಕ್ರಮದಲ್ಲಿ ಮತದಾರರ ಕುಂದುಕೊರತೆ ಆಲಿಸುತ್ತಿರುವ ಶಾಸಕ ಪ್ರದೀಪ್ ಈಶ್ವರ್.

ಅನಾಥನಾಗಿ ಬೆಳೆದ ನನಗೆ ಜನರ ಸಂಕಷ್ಟದ ಅರಿವಿದೆ. ಈಗಾಗಲೇ ನಮಸ್ತೆ ಚಿಕ್ಕಬಳ್ಳಾಪುರ ಕಾರ್ಯಕ್ರಮದ ಮೂಲಕ ನಗರ ಭಾಗವನ್ನು ಪೂರ್ಣಗೊಳಿಸಿದ್ದು, ನಮ್ಮೂರಿಗೆ ನಮ್ಮ ಶಾಸಕ ಅಭಿಯಾನದ ಮೂಲಕ ಗ್ರಾಮೀಣ ಭಾಗದ ಜನರ ಸಮಸ್ಯೆ ಬಗ್ಗೆ ಗಮನಹರಿಸುತ್ತೇನೆ. ಒಂದು ವೇಳೆ ಸರಕಾರದ ಮಟ್ಟದಲ್ಲಿಯೇ ಆಗಬೇಕಿರುವ ಕೆಲಸಗಳಿದ್ದರೆ, ಅದಕ್ಕೂ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

- ಪ್ರದೀಪ್ ಈಶ್ವರ್, ಶಾಸಕ

'ನಮ್ಮೂರಿಗೆ ನಮ್ಮ ಶಾಸಕ' ವಿಶೇಷವೇನು?

- ತಿಂಗಳಿಗೆ ಒಂದೆರೆಡು ಬಾರಿ ಗ್ರಾಮ ಪಂಚಾಯಿತಿಗೆ ಭೇಟಿನೀಡಿ ಜನರಿಂದ ಅರ್ಜಿ ಸ್ವೀಕಾರ
- ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿರುವ 350 ಗ್ರಾಮ, 30 ಗ್ರಾಮ ಭೇಟಿ
- ಯಾವುದೇ ಸಭಾ ಕಾರ್ಯಕ್ರಮವಿಲ್ಲದೇ, ನೇರ ಜನರಿಂದ ಅರ್ಜಿ ಸ್ವೀಕಾರ
- ಶಾಸಕರೊಂದಿಗೆ ತಾಲೂಕು ಮಟ್ಟದ ಅಧಿಕಾರಿಗಳಿರುವುದರಿಂದ ಸಮಸ್ಯೆ ಪರಿಹಾರ ಸುಲಭ
- ಬಹುತೇಕ ಸಮಸ್ಯೆಗಳಿಗೆ ಒಂದು ತಿಂಗಳಲ್ಲಿ ಪರಿಹಾರಕ್ಕೆ ಕ್ರಮ

ಎರಡು ಗ್ರಾ.ಪಂ.ನಲ್ಲಿ ಮುಕ್ತಾಯ

ಕಳೆದ ತಿಂಗಳು ಆರಂಭಿಸಿದ ಈ ಯೋಜನೆಯಲ್ಲಿ ಈಗಾಗಲೇ ಎರಡು ಗ್ರಾಮ ಪಂಚಾಯಿತಿಗಳಿಗೆ ಭೇಟಿ ನೀಡಿ ಜನರ ಕುಂದುಕೊರತೆ ಆಲಿಸಲಾಗಿದೆ. ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ನೂರಕ್ಕೂ ಹೆಚ್ಚು ಅರ್ಜಿಗಳು ಕೇಳಿಬಂದಿದ್ದವು. ಈ ವೇಳೆ ಗ್ರಾಮಸ್ಥರು ರಸ್ತೆ, ಚರಂಡಿ, ಕಲ್ಯಾಣಿ ಸ್ವಚ್ಛತೆ, ಸ್ಮಶಾನಕ್ಕೆ ಜಾಗ, ಸ್ಮಶಾನಕ್ಕೆ ರಸ್ತೆ ಒತ್ತುವರಿ, ವಿದ್ಯುತ್, ಜಮೀನು ಖಾತೆ, ಪಿಂಚಣಿ ಸೇರಿದಂತೆ ಹಲವು ಸಮಸ್ಯೆಗಳನ್ನು ಶಾಸಕರ ಗಮನಕ್ಕೆ ಸಾರ್ವಜನಿಕರು ತರುತ್ತಿದ್ದಾರೆ. ಈ ಎಲ್ಲ ಸಮಸ್ಯೆಗಳಿಗೆ ಒಂದು ತಿಂಗಳಲಿನಲ್ಲಿ ಪರಿಹಾರ ಕಂಡುಕೊಳ್ಳುವಂತೆ ಅಧಿಕಾರಿಗಳಿಗೆ ಪ್ರದೀಪ್ ಸೂಚನೆ ನೀಡಿದ್ದಾರೆ.

ವಿಮಾ ಪರಿಹಾರ: ಹೈಕೋರ್ಟ್ ಸೂಚನೆ

ಬೆಂಗಳೂರು: ಅಪಘಾತ ನಡೆದ ಸಂದರ್ಭದಲ್ಲಿ ವಾಹನಕ್ಕೆ ಪರವಾನಗಿ ಮತ್ತು ಫಿಟ್ನೆಸ್ ಸರ್ಟಿಫಿಕೇಟ್ ಇಲ್ಲದಿದ್ದರೂ ವಿಮಾ ಕಂಪನಿ ಘಟನೆಯಿಂದ ನೊಂದವರಿಗೆ ಪರಿಹಾರ ಪಾವತಿಸಬೇಕು ಎಂದು ಹೈಕೋರ್ಟ್ ಆದೇಶಿಸಿತು. ಅಲ್ಲದೆ, ಪರಿಹಾರದ ಮೊತ್ತವನ್ನು ವಾಹನ ಮಾಲೀಕರಿಂದ ವಿಮಾ ಕಂಪನಿ ವಸೂಲಿ ಮಾಡಿಕೊಳ್ಳಬಹುದು ಎಂದು ತಿಳಿಸಿದೆ. ಅಪಘಾತಕ್ಕೊಳಗಾದ ವಾಹನಕ್ಕೆ ಫಿಟ್ನೆಸ್ ಸರ್ಟಿಫಿಕೇಟ್ ಇಲ್ಲದಿದ್ದರೂ ಪರಿಹಾರಕ್ಕೆ ಸೂಚಿಸಿದ್ದ ನ್ಯಾಯಾಧಿಕರಣದ ಆದೇಶ ಪ್ರಶ್ನಿಸಿ ಶ್ರೀರಾಮ ಜನರಲ್ ಇನ್ಶೂರೆನ್ಸ್ ಕಂಪನಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಟಿ.ಜಿ.ಶಿವಶಂಕರೇಗೌಡ ಅವರು ಈ ಆದೇಶ ಪ್ರಕಟಿಸಿದರು.

ಸಮಾಚಾರ ಸಣ್ಣದಲ್ಲ

ಅಧ್ಯಕ್ಷ-ಉಪಾಧ್ಯಕ್ಷರ ಅವಿರೋಧ ಆಯ್ಕೆ

ಬ್ಯಾಡಗಿ: ತಾಲೂಕಿನ ಗುಂಡನಹಳ್ಳಿ ಗ್ರಾಮ ಪಂಚಾಯತಿ ನೂತನ ಅಧ್ಯಕ್ಷರಾಗಿ ಭಾಗ್ಯ ಮಹೇಂದ್ರ ತಳವಾರ ಅವಿರೋಧವಾಗಿ ಆಯ್ಕೆಯಾದರು. ತ್ತೀಚೆಗೆ ನಡೆದ ಚುನಾವಣೆ ಪ್ರಕ್ರಿಯೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕೇವಲ ಬಿಜೆಪಿ ಬೆಂಬಲಿತ ಭಾಗ್ಯ ಮಹೇಂದ್ರ ತಳವಾರ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಶಿವಯೋಗಿ ಗುಂಡಪ್ಪ ಹುಣಸಿಕಟ್ಟಿ, ಇಬ್ಬರೇ ನಾಮಪತ್ರ ಸಲ್ಲಿಸಿದ ಹಿನ್ನಲೆಯಲ್ಲಿ ಇಬ್ಬರನ್ನು ಚುನಾವಣಾ ಅಧಿಕಾರಿ ಅವಿರೋಧವಾಗಿ ಆಯ್ಕೆ ಮಾಡಿದರು. ನೂತನ ಅಧ್ಯಕ್ಷ ಉಪಾಧ್ಯಕ್ಷರಾಗಿ ಆಯ್ಕೆಯಾದ ಇಬ್ಬರನ್ನು ಮಾಜಿ ಶಾಸಕ ವಿರುಪಾಕ್ಷಪ್ಪ ಬಳ್ಳಾರಿ, ಮುಖಂಡರಾದ ವಿಜಯ ಭರತ ಬ ಳ್ಳಾರಿ, ಸುರೇಶ ಯತ್ನಳ್ಳಿ, ನಿಂಗಪ್ಪ ಬಟ್ಟಲಕಟ್ಟಿ, ಸೇರಿದಂತೆ ಗ್ರಾಮದ ಹಿರಿಯರು ಸನ್ಮಾನಿಸಿ ಗೌರವಿಸಿದರು.

ಬೆಂಬಲ ವ್ಯಕ್ತಿಗಳಾಗಿ ಸೇವೆ ಸಲ್ಲಿಸಲು ಅರ್ಜಿ ಆಹ್ವಾನ

ಹಾವೇರಿ: ಪೋಕ್ಸೋ ಕಾಯ್ದೆಯಡಿ ಸಂತ್ರಸ್ತ ಮಕ್ಕಳಿಗೆ ಬೆಂಬಲ ವ್ಯಕ್ತಿಗಳಾಗಿ ಸೇವೆ ಸಲ್ಲಿಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಮಕ್ಕಳೊಂದಿಗೆ ಕೆಲಸ ಮಾಡಲು ಕನಿಷ್ಠ ಮೂರು ವರ್ಷಗಳ ಅನುಭವದೊಂದಿಗೆ ಸಮಾಜ ಕಾರ್ಯ ವಿಷಯದಲ್ಲಿ ಪದವಿ ಹೊಂದಿರಬೇಕು. ಮಕ್ಕಳ ಆರೈಕೆ ಕೇಂದ್ರದಲ್ಲಿ ಮಕ್ಕಳೊಂದಿಗೆ ಕೆಲಸ ಮಾಡುವ ಅಧಿಕಾರಿಗಳು ಮತ್ತು ಮಕ್ಕಳ ಹಕ್ಕುಗಳ ಕ್ಷೇತ್ರದಲ್ಲಿ ಕೆಲಸ ಮಾಡುವ ಯಾವುದೇ ಸಂಸ್ಥೆ ಕೂಡ ಅರ್ಜಿ ಸಲ್ಲಿಸಬಹುದು. ಪ್ರತಿ ಪ್ರಕರಣಕ್ಕೆ ರೂ.ಮೂರು ಸಾವಿರ ಸಂಭಾವನೆ ನಿಗದಿಪಡಿಸಲಾಗಿದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ಕ್ಷೇತ್ರ ಕಾರ್ಯವನ್ನು ಮಾಡಲು ಮತ್ತು ಅಪರಾಧ ನ್ಯಾಯ ವ್ಯವಸ್ಥೆಯ ಮೂಲಕ ಮಕ್ಕಳ ಮತ್ತು ಅವರ ಕುಟುಂಬಗಳಿಗೆ ಸಹಾಯ ಮಾಡಲು ತರಬೇತಿ ನೀಡಲಾಗುತ್ತದೆ.ಆಸಕ್ತ ಅಭ್ಯರ್ಥಿಗಳು ಅರ್ಜಿ ನಮೂನೆಯನ್ನು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಜೆ.ಕೆ.ಟವರ್ 3ನೇ ಮಹಡಿ, ಎಂ.ಎಂ.ಸರ್ಕಲ್, ಗೂಗಿಕಟ್ಟಿ ಓಣ , ಮಹಿಳಾ ಪೊಲೀಸ್ ಠಾಣೆ ಹತ್ತಿರ , ಹಾವೇರಿ ಈ ವಿಳಾಸದಲ್ಲಿ ಪಡೆದು, ಅಗತ್ಯ ದಾಖಲೆಗಳೊಂದಿಗೆ ಭರ್ತಿಮಾಡಿದ ಅರ್ಜಿಯನ್ನು ದಿನಾಂಕ 15-10-2024ರೊಳಗಾಗಿ ಸಲ್ಲಿಸಬೇಕು ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಸರಾ ಹಬ್ಬದ ಪ್ರಯುಕ್ತ ಹೆಚ್ಚುವರಿ ಸಾರಿಗೆ ಸೌಲಭ್ಯ

ಹಾವೇರಿ: ದಸರಾ ಹಬ್ಬದ ಪ್ರಯುಕ್ತ ಸಾರ್ವಜನಿಕರು ತಮ್ಮ ಸ್ವಂತ ಊರುಗಳಿಗೆ ತೆರಳಲು ವಾ.ಕ.ರ.ಸಾ. ಸಂಸ್ಥೆಯ ವ್ಯಾಪ್ತಿಯ ಹುಬ್ಬಳ್ಳಿ, ಧಾರವಾಡ, ಗದಗ, ಬೆಳಗಾವಿ, ಉತ್ತರ ಕನ್ನಡ, ಹಾವೇರಿ, ಚಿಕ್ಕೋಡಿ ಮತ್ತು ಬಾಗಲಕೋಟೆ ವಿಭಾಗಗಳಿಂದ ಸುಮಾರು 220 ಹೆಚ್ಚುವರಿ ವಿಶೇಷ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಅ. 11 ರಂದು ಶುಕ್ರವಾರ ಮಹಾನವಮಿ/ಆಯುಧ ಪೂಜೆ, ದಿನಾಂಕ 12ರಂದು ಶನಿವಾರ ವಿಜಯ ದಶಮಿ ಹಬ್ಬ ಹಾಗೂ ದಿನಾಂಕ 13 ರಂದು ರವಿವಾರ ಇರುವುದರಿಂದ ಬೆಂಗಳೂರು ಮತ್ತು ಇತರೇ ಪ್ರಮುಖ ಸ್ಥಳಗಳಿಂದ ಹೆಚ್ಚಿನ ಪ್ರಯಾಣ ಕರು ತಮ್ಮ ತಮ್ಮ ಊರುಗಳಿಗೆ ತೆರಳಲು ಹೆಚ್ಚುವರಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುವುದು. ಬೆಂಗಳೂ ರಿನಿಂದ ರಾಜ್ಯ ಹಾಗೂ ಅಂತರರಾಜ್ಯದ ವಿವಿಧ ಸ್ಥಳಗಳಿಗೆ ತೆರಳಲು ಅ.10ರ ರಾತ್ರಿ ಹಾಗೂ ಅ. 11ರಂದು ಹೆಚ್ಚುವರಿ ವಿಶೇಷ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ. ಹಬ್ಬ ಮುಗಿದ ಮೇಲೆ ಅ. 13 ಹಾಗೂ ದಿ. 14ರಂದು ಮತ್ತು ನಂತರದ ದಿನಗಳಂದು ಪ್ರಮುಖ ಸ್ಥಳಗಳಿಂದ ಜನದಟ್ಟಣೆಗೆ ಅನುಗುಣವಾಗಿ ಹೆಚ್ಚುವರಿಸಾರಿಗೆಗಳನ್ನು ಕಾರ್ಯಾಚರಣೆ ಗೊಳಿಸಲಾಗುವುದು. ಈ ವಿಶೇಷ ಹೆಚ್ಚುವರಿ ಸಾರಿಗೆಗಳ ಸದುಪಯೋಗ ಪಡೆದುಕೊಳ್ಳುವಂತೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ಯಲ್ಲಾಪುರ ಪಟ್ಟಣದ ಕಾಳಮ್ಮ ದೇವಸ್ಥಾನದಲ್ಲಿ ನವರಾತ್ರಿ ನಿಮಿತ್ತ ಮಂಗಳವಾರ ಶ್ರೀಕಾಳಮ್ಮದೇವಿಗೆ ವಿವಿಧ ತರಕಾರಿಗಳಿಂದ ಅಲಂಕಾರ ಮಾಡಿದ್ದು ಭಕ್ತರ ಗಮನ ಸೆಳೆಯುವಂತಿತ್ತು.

ನ್ಯಾಯಬದ್ಧ ಪರಿಹಾರ ಒದಗಿಸಲು ಕ್ರಮ

ಕೊಂಕಣ ರೈಲ್ವೆ, ನೌಕಾನೆಲೆಯ ನಿರಾಶ್ರಿತರ ಅಹವಾಲು ಸ್ವೀಕಾರ| ಸಂಸದ ಕಾಗೇರಿ ಭರವಸೆ

ಕಾರವಾರ: ಕೊಂಕಣ ರೈಲ್ವೆ ಮತ್ತು ನೌಕಾನೆಲೆ (ಸೀಬರ್ಡ್) ಯೋಜನೆಗೆ ಭೂ ಸ್ವಾಧಿನದ ಬಳಿಕ ಪರಿಹಾರ ಸಿಗದೇ ಇರುವ ನಿರಾಶ್ರಿತರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚಿಸಿ ನಿರಾಶ್ರಿತರಿಗೆ ನ್ಯಾಯಬದ್ಧ ಪರಿಹಾರ ಒದಗಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಭರವಸೆ ನೀಡಿದರು.

ಮಂಗಳವಾರ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಆಯೋಜಿಸಿದ್ದ ಕೊಂಕಣ ರೈಲ್ವೆ ಮತ್ತು ನೌಕಾನೆಲೆಯ ನಿರಾಶ್ರಿತರ ಕುಂದು ಕೊರತೆಗಳ ಅಹವಾಲು ಸ್ವೀಕಾರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯ ಜನತೆ ಮಹತ್ವಾಕಾಂಕ್ಷೆ ಯೋಜನೆಗಳಿಗೆ ತಮ್ಮ ಜಮೀನುಗಳನ್ನು ನೀಡುವ ಮೂಲಕ ದೇಶದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿದ್ದಾರೆ. ಆದರೆ ನಿರಾಶ್ರಿತರಾದ ಜಿಲ್ಲೆಯ ಜನತೆಗೆ ಸೂಕ್ತ ಪರಿಹಾರ ಸಿಗದೇ ಸಮಸ್ಯೆ ಅನುಭವಿಸುತ್ತಿರುವುದರಿಂದ ಅವರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಜನರ ಕುಂದುಕೊರತೆಗಳನ್ನು ಬಗೆಹರಿಸಲು ಪ್ರಯತ್ನಿಸಬೇಕಾಗಿರುವುದು ಜನಪ್ರತಿನಿಧಿಗಳ ಜವಾಬ್ದಾರಿ ಯಾಗಿದೆ ಆ ನಿಟ್ಟಿನಲ್ಲಿ ಜನರ ಕುಂದುಕೊರತೆ ಅಹವಾಲು ಸ್ವೀಕಾರ ಮಾಡಿ, ಸಲ್ಲಿಕೆಯಾಗುವ ಅರ್ಜಿಗಳ ಪಟ್ಟಿ ಮಾಡಿ ಸಂಬಂಧಪಟ್ಟವರ ಗಮನಕ್ಕೆ ತಂದು ಸಮಸ್ಯೆಗಳನ್ನು ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು. ಭೂ ಸ್ವಾಧೀನ ಪಡೆದ ಭೂಮಿಯ ಪರಿಹಾರ ಪ್ರಕರಣಗಳು ಬೇರೆ ಬೇರೆ ಹಂತದಲ್ಲಿದ್ದು, ಅವುಗಳನ್ನು ಶೀಘ್ರದಲ್ಲಿಯೇ ಬಗೆಹರಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗುವುದು ಎಂದರು. ಜಿಲ್ಲಾಧಿಕಾರಿ ನ್ಯಾಯಾಲಯ ಮತ್ತು ಉಪ ವಿಭಾಗಾಧಿಕಾರಿ ನ್ಯಾಯಾಲಯದಲ್ಲಿರುವ ಭೂ ಸ್ವಾಧೀನಕ್ಕೆ ಸಂಬಂಧಿಸಿದ ಪ್ರಕರಣಗಳನ್ನು ಶೀಘ್ರದಲ್ಲಿಯೇ ವಿಲೇವಾರಿ ಮಾಡಲು ನಿರ್ದೇಶನ ನೀಡಲಾಗುವುದು ಎಂದರು.

ನೆಲ್ಲೂರು-ಕಂಚಿನಬೈಲು ಗ್ರಾಮಸ್ಥರು ಮಾತನಾಡಿ ಭೂ ಸ್ವಾಧೀನಕ್ಕಾಗಿ ಕಾಯ್ದಿರಿಸಿದ ಭೂಮಿಗೆ 5 ವರ್ಷಗಳ ಹಿಂದೆಯೇ ಒಪ್ಪಿಗೆ ಪತ್ರ ಪಡೆದು ಇಲ್ಲಿಯವರೆಗೆ ಪರಿಹಾರವು ನೀಡದೇ ಹಾಗೂ ಜಮೀನಲ್ಲಿ ಕೃಷಿ ಸಾಗುವಳಿ ಮಾಡಲು ನೌಕಾನೆಲೆಯ ಅಧಿಕಾರಿಗಳು ಬೀಡುತ್ತಿಲ್ಲ ಎಂದರು.

ಸೀಬರ್ಡ್ ನಿರಾಶ್ರಿತರಾದವರಿಗೆ ಪರ್ಯಾಯ ಭೂಮಿ ಕಲ್ಪಿಸುವ ಸಂಬಂಧ ಅಂಕೋಲಾ ತಾಲೂಕಿನ ಸಿರಗುಂಜಿಯಲ್ಲಿ ಭೂಮಿಯನ್ನು ಕಾಯ್ದಿರಿಸಿದ್ದು, ಇಲ್ಲಿವರೆಗೆ ರೈತರಿಗೆ ಭೂಮಿ ಹಸ್ತಾಂತರ ಮಾಡಿಲ್ಲ. ರೈತರಿಗೆ ಭೂಮಿ ಹಸ್ತಾಂತರವಾದಲ್ಲಿ ಅನುಕೂಲವಾಗಲಿದೆ ಎಂದು ಸ್ಥಳೀಯರು ಸಂಸದರ ಗಮನಕ್ಕೆ ತಂದರು. ಈ ಬಗ್ಗೆ ನೌಕಾನೆಲೆಯ ಅಧಿಕಾರಿಗಳೊಂದಿಗೆ ಚರ್ಚಿಸಿ ನೆಲ್ಲೂರು-ಕಂಚಿನಬೈಲ್ ಹಾಗೂ ಸಿರುಗುಂಜಿ ಸಮಸ್ಯೆ ಬಗೆಹರಿಸಲು ಪ್ರಯತ್ನಿಸಲಾಗುವುದು ಎಂದು ಕಾಗೇರಿ ಹೇಳಿದರು.

ನಿರಾಶ್ರಿತರ ಒಕ್ಕೂಟದ ಅಧ್ಯಕ್ಷ ಸುಭಾಷ್ ನಾಯ್ಕ ಮಾತನಾಡಿ ನ್ಯಾಯಾಲಯ ಮತ್ತು ಜಿಲ್ಲಾಧಿಕಾರಿ ನ್ಯಾಯಾಲಯದಲ್ಲಿ ಭೂ ಸ್ವಾಧೀನಕ್ಕೆ ಸಂಬಂಧಿಸಿದಂತೆ ಕೆಲವೊಂದು ಪ್ರಕರಣಗಳು ಇತ್ಯರ್ಥವಾದರೂ ಪರಿಹಾರ ನೀಡುತ್ತಿಲ್ಲ ಎಂದು ಸಂಸದರ ಗಮನಕ್ಕೆ ತಂದರು.

ಅಸ್ನೋಟಿ ಗ್ರಾಮ ಪಂಚಾಯತ ಅಧ್ಯಕ್ಷ ಸಂಜಯ ಸಾಳುಂಕೆ ಮಾತನಾಡಿ ಕೊಂಕಣ ರೈಲ್ವೆ ನಿರಾಶ್ರಿತರಿಗೆ ರೈಲ್ವೆ ಇಲಾಖೆಯ ಬೇರೆ ಬೇರೆ ಅಧಿಸೂಚನೆಯಿಂದಾಗಿ ಪರಿಹಾರ ಕೋರಿ ಅರ್ಜಿ ಸಲ್ಲಿಸಿದ ಕೆಲವೊಂದು ಅರ್ಜಿಗಳು ತಿರಸ್ಕೃತವಾಗಿದ್ದು, ಒಂದೇ ಅಧಿಸೂಚನೆಯಲ್ಲಿ ಹೊರಡಿಸಿದ್ದಲ್ಲಿ ಅನುಕೂಲವಾಗಲಿದೆ ಎಂದರು.

ಕಡವಾಡ ಗ್ರಾಮದ ಸುಭಾಷ್ ಮಾತನಾಡಿ ಕಡವಾಡ ಮತ್ತು ಶಿರವಾಡ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕೊಂಕಣ ರೈಲ್ವೆ ಮಾರ್ಗ ಇರುವುದರಿಂದ ಕೊಂಕಣ ರೈಲ್ವೆ ಯಾವುದೇ ಅಭಿವೃದ್ಧಿ ಕಾರ್ಯ ಮಾಡಿಲ್ಲ ಹಾಗೂ ಸಿಎಸ್‌ಆರ್ ಅನುದಾನದಲ್ಲಿ ಅಭಿವೃದ್ಧಿ ಕೈಗೊಳ್ಳುವಂತೆ ಮನವಿ ಮಾಡಿದರು ಹಾಗೂ ನೌಕಾನೆಲೆಯು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಜೊತೆ ಈ ಹಿಂದೆ ಒಪ್ಪಂದ ಮಾಡಿಕೊಂಡು ಸ್ಥಳೀಯ ಯುವಕರಿಗೆ ತರಬೇತಿ ನೀಡಲಾಗುತ್ತಿತ್ತು ಆದರೆ ಈಗ ಒಪ್ಪಂದ ರದ್ದಾಗಿದ್ದು ಪುನಃ ನೌಕಾನೆಲೆಯು ಒಪ್ಪಂದ ಮಾಡಿಕೊಂಡು ಸ್ಥಳೀಯ ಯುವಕರಿಗೆ ತರಬೇತಿ ನೀಡಲು ಸೂಚಿಸುವಂತೆ ಸಂಸದರಲ್ಲಿ ಮನವಿ ಮಾಡಿದರು.

ಬಳಿಕ ಮಾತನಾಡಿದ ಸಂಸದ ಕಾಗೇರಿ ಜಿಲ್ಲೆಯ ಜನರ ಸಮಸ್ಯೆಗಳಿಗೆ ನಿರಂತರ ಸ್ಪಂದಿಸುವ ಕಾರ್ಯ ಮಾಡಲಾಗುತ್ತಿದ್ದು, ಅಧಿಕಾರಿಗಳ ಜೊತೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳುವುದರ ಜೊತೆಗೆ ಕೇಂದ್ರ ಸರ್ಕಾರದಿಂದ ಪರಿಹಾರ ಬಿಡುಗಡೆ ಮಾಡಿಸಲು ಪ್ರಯತ್ನಿಸಲಾಗುವುದು ಎಂದರು.

ಸ್ಥಳೀಯ ಪತ್ರಿಕೆಗಳಲ್ಲೂ ಜಾಹೀರಾತು ನೀಡಿ

ವಕೀಲ ನಾಗರಾಜ ನಾಯಕ ಮಾತನಾಡಿ, ನೌಕಾನೆಲೆಯಲ್ಲಿ ನಿರಾಶ್ರಿತರಿಗೆ ನಿರಾಶ್ರಿತ ಪ್ರಮಾಣ ಪತ್ರದ ಆಧಾರದ ಮೇಲೆ ಎಷ್ಟು ಜನರಿಗೆ ಉದ್ಯೋಗ ನೀಡಲಾಗಿದೆ ಎಂಬುದರ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆಯಬೇಕು. ನೌಕಾನೆಲೆಯಲ್ಲಿ ಕಾರ್ಯನಿರ್ವಹಿಸುವವರು ಹೊರ ರಾಜ್ಯದವರಾಗಿದ್ದು, ಸ್ಥಳೀಯರಿಗೆ ಉದ್ಯೋಗದಲ್ಲಿ ಅವಕಾಶ ನೀಡುತ್ತಿಲ್ಲ. ನೌಕಾನೆಲೆಯಲ್ಲಿನ ಹುದ್ದೆಗಳ ಭರ್ತಿ ಸಂಬಂಧ ಹೊರಡಿಸುವ ಅಧಿಸೂಚನೆಗಳನ್ನು ಕೇವಲ ಹಿಂದಿ ಮತ್ತು ಇಂಗ್ಲಿಷ್ ಪತ್ರಿಕೆಗಳಿಗೆ ನೀಡದೇ ಸ್ಥಳೀಯ ಪತ್ರಿಕೆಗಳಲ್ಲೂ ಜಾಹೀರಾತು ನೀಡುವಂತಾಗಬೇಕು. ಪರೀಕ್ಷೆಗಳನ್ನು ಮುಂಬಯಿ ಮತ್ತು ಪುಣೆಯಲ್ಲಿ ನಡೆಸಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಪರೀಕ್ಷೆಗಳನ್ನು ಕಾರವಾರದಲ್ಲಿ ನಡೆಸುವಂತೆ ಮತ್ತು ಪರೀಕ್ಷೆಗಳು ಕನ್ನಡದಲ್ಲಿ ನಡೆಸುವಂತಾಗಬೇಕು ಎಂದರು.ಇದಕ್ಕೆ ಪ್ರತಿಕ್ರಿಯಿಸಿದ ಸಂಸದ ಕಾಗೇರಿ, ಸೀಬರ್ಡ್ ನೌಕಾನೆಲೆಯಲ್ಲಿ ಸ್ಥಳೀಯ ನಿರಾಶ್ರಿತರಿಗೆ ನಿರಾಶ್ರಿತ ಪ್ರಮಾಣ ಪತ್ರದ ಆಧಾರದ ಮೇಲೆ ಎಷ್ಟು ಜನರಿಗೆ ಉದ್ಯೋಗದಲ್ಲಿ ಅವಕಾಶ ನೀಡಲಾಗಿದೆ ಎಂಬುದರ ಬಗ್ಗೆ ಅಧಿಕಾರಿಗಳಿಂದ ಅಂಕಿ ಅಂಶ ಪಡೆಯಲಾಗುವುದು. ಇಲ್ಲೇ ಪರೀಕ್ಷಾ ಕೇಂದ್ರ ಮತ್ತು ಕನ್ನಡದಲ್ಲಿ ಪರೀಕ್ಷೆ ನಡೆಸುವುದರ ಬಗ್ಗೆ ಪರಿಶೀಲಿಸಲಾಗುವುದು ಎಂದರು.

ವನ್ಯಜೀವಿ ಸಪ್ತಾಹ ಸಮಾರೋಪ

ಜೋಯಿಡಾ: ತಾಲೂಕಿನ ಗುಂದ ಅರಣ್ಯ ಇಲಾಖೆ ವ್ಯಾಪ್ತಿಯ ಶ್ರೀ ಕ್ಷೇತ್ರ ಉಳವಿಯಲ್ಲಿ ಕಾಳಿ ಹುಲಿ ಸಂರಕ್ಷಿತ ಪ್ರದೇಶದ ವತಿಯಿಂದ ನಡೆಸಲಾಗುತ್ತಿರುವ 70 ನೇ ವನ್ಯಜೀವಿ ಸಪ್ತಾಹದ ಸಮಾರೋಪ ಸಮಾರಂಭವನ್ನು ದಾಂಡೇಲಿ ಸಹಾಯಕ ಅರಣ್ಯ ಸಂರಕ್ಷಣಾ ಅಧಿಕಾರಿ ಎಮ್ ಎಸ್ ಕಳ್ಳಿಮಠ ಉದ್ಘಾಟಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವನ್ಯಜೀವಿ ಸಪ್ತಾಹದ ಮುಖ್ಯ ಉದ್ದೇಶ ಅರಣ್ಯ ಮತ್ತು ವನ್ಯಜೀವಿಗಳನ್ನು ಉಳಿಸುವುದಾಗಿದೆ, ಅರಣ್ಯ ಅತಿಕ್ರಮಣ ಮಾಡುವುದರಿಂದ ಪ್ರಾಣಿಗಳು ನಾಡಿಗೆ ಬರುತ್ತಿವೆ, ಅರಣ್ಯ ಅತಿಕ್ರಮಣ ನಿಲ್ಲಬೇಕು ಜನರು ಅರಣ್ಯ ಇಲಾಕೆ ಜೊತೆ ಸೇರಿ ಅರಣ್ಯ ಬೆಳೆಸಲು ಸಹಕಾರ ನೀಡಬೇಕು ಎಂದರು.

ಉಳವಿ ಗ್ರಾಮ ಪಂಚಾಯತ ಅಧ್ಯಕ್ಷ ಮಂಜುನಾಥ ಮೋಕಾಶಿ ಮಾತನಾಡಿ, ಕಾಡು ಇರುವುದರಿಂದಲೇ ಮಳೆ ಉತ್ತಮವಾಗಿ ಆಗುತ್ತಿದೆ, ಜನರಿಗೆ ಮೂಲಭೂತ ಸೌಕರ್ಯ ಒದಗಿಸುವಲ್ಲಿ ಅರಣ್ಯ ಇಲಾಖೆ ಅಡ್ಡಿ ಮಾಡಬಾರದು. ಪರಿಸರ ನಾಶ ಮಾಡುವ ಹಾಗೂ ಮರಗಳನ್ನು ಕಡಿಯುವ ಜನರಿಗೆ ಅರಣ್ಯ ಇಲಾಖೆ ಶಿಕ್ಷೆ ನೀಡಬೇಕು. ಅರಣ್ಯ ಇಲಾಕೆ ಸಿಬ್ಬಂದಿಯ ಜೊತೆಗೆ ನಾವು ಅರಣ್ಯ ಉಳಿಸಲು ಕೆಲಸ ಮಾಡಬೇಕಾಗಿದೆ ಎಂದರು.

ಉಳವಿ ಪ್ರಧಾನ ಅರ್ಚಕ ಶಂಕರಯ್ಯ ಕಲ್ಮಠ ಮಾತನಾಡಿ, ಪಶು ಪಕ್ಷಿ ಪ್ರಾಣಿಗಳ ಜೊತೆಗೆ ಕಾಡನ್ನು ಉಳಿಸುವ ಕೆಲಸ ನಾವು ಮಾಡಬೇಕಾಗಿದೆ, ಹಿಂದಿನಿಂದಲೂ ನಾವು ಗಿಡಮರಗಳನ್ನು ಪೂಜಿಸುತ್ತಾ ಬಂದಿದ್ದೇವೆ. ಪರಿಸರ ಇದ್ದರೆ ಮಾತ್ರ ಮನುಷ್ಯ ಬದುಕಲು ಸಾಧ್ಯ. ಎಲ್ಲರೂ ಗಿಡಗಳನ್ನು ನೆಡುವ ಮೂಲಕ ಅರಣ್ಯ ಬೆಳೆಸೋಣ ಎಂದರು.

ನಂದಿಗದ್ದಾ ಗ್ರಾ.ಪಂ. ಅಧ್ಯಕ್ಷ ಅರುಣ ದೇಸಾಯಿ ಮಾತನಾಡಿ, ಕಾಡಿನ ಬದುಕುವ ಜನರಿಗೆ ಅರಣ್ಯದ ಕಾನೂನಿನ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ಮಾಡಬೇಕು. ಪ್ಲಾಸ್ಟಿಕ್ ಮುಕ್ತ ಪರಿಸರ ಮಾಡಲು ಎಲ್ಲರೂ ಕೈ ಜೋಡಿಸಬೇಕು ಎಂದರು.

ಡಿ.ಆರ್.ಎಫ್ ಓ ಶರತ ಐಹೊಳೆ ಪ್ರಾಸ್ತಾವಿಕವಾಗಿ ಮಾತನಾಡಿ, ಕಾಳಿ ಹುಲಿ ಸಂರಕ್ಷಿತ ಪ್ರದೇಶ ನಡೆದು ಬಂದ ದಾರಿ ಮತ್ತು ಭಾರತ ಮತ್ತು ಕರ್ನಾಟಕದಲ್ಲಿನ ಹುಲಿ ಮತ್ತು ಆನೆಗಳ ಬಗ್ಗೆ ಮಾಹಿತಿ ನೀಡಿದರು. ಈ ಮೊದಲು ಉಳವಿ ವೀರಭದ್ರ ದೇವಸ್ಥಾನದಿಂದ ಉಳವಿ ಚೆನ್ನಬಸವಣ್ಣನ ದೇವಸ್ಥಾನದ ವರೆಗೆ ವನ್ಯಜೀವಿ ಸಪ್ತಾಹದ ಸಮಾರೋಪ ಸಮಾರಂಭದ ಜಾಥಾ ಕಾರ್ಯಕ್ರಮ ನಡೆಯಿತು.

ಈ ಸಂದರ್ಭದಲ್ಲಿ ಉಳವಿ ಗ್ರಾ.ಪಂ ಅಧ್ಯಕ್ಷ ಮಂಜುನಾಥ ಮೋಕಾಶಿ, ನಂದಿಗದ್ದಾ ಗ್ರಾಮ ಪಂಚಾಯತ ಅಧ್ಯಕ್ಷ ಅರುಣ ದೇಸಾಯಿ,ಹಿರಿಯರಾದ ಗೋಪಾಲ ಭಟ್ಟ ಶಿವಪುರ, ಗಜಾನನ ದೇವಳಿ, ಅಬುಬಕರ ಶೇಖ್ , ಗುಂದ ವಲಯ ಅರಣ್ಯಾಧಿಕಾರಿ ನೀಲಕಂಠ ದೇಸಾಯಿ ಇದ್ದರು.

ಅರಣ್ಯ, ಕಂದಾಯ ಇಲಾಖೆ ಸಮನ್ವಯತೆ ಕಾಪಾಡಬೇಕು: ಸಚಿವ ಕೃಷ್ಣ ಬೈರೇಗೌಡ

ಕಾರವಾರ: ಕಂದಾಯ ಇಲಾಖೆ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳು ಪರಸ್ಪರ ಸಮನ್ವಯದಿಂದ ಕಾರ್ಯ ನಿರ್ವಹಿಸಿ ಸಾರ್ವಜನಿಕರಿಗೆ ಸೌಲಭ್ಯಗಳನ್ನು ಮಂಜೂರು ಮಾಡುವಂತೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಸೂಚನೆ ನೀಡಿದರು.

ಅವರು ಮಂಗಳವಾರ, ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ನಡೆದ, ಜಿಲ್ಲೆಯ ಕಂದಾಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಜಿಲ್ಲೆಯಲ್ಲಿ ಪೋಡಿ ಮುಕ್ತ ಅಭಿಯಾನ ಮತ್ತು ಪೌತಿ ಖಾತೆ ಆಂದೋಲನದ ಮೂಲಕ ಜಮೀನುಗಳ ಖಾತೆಗಳನ್ನು ಸಂಪೂರ್ಣ ವಿವಾದ ರಹಿತವಾಗಿ ವಾರಿಸುದಾರರಿಗೆ ದೊರಕಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗುವಂತೆ ತಿಳಿಸಿದ ಅವರು, ಕಂದಾಯ ಇಲಾಖೆ ವ್ಯಾಪ್ತಿಯ ಎಲ್ಲಾ ಕಚೇರಿಗಳಲ್ಲಿ ಇ-ಆಫೀಸ್ ತಂತ್ರಾಶವನ್ನು ಕಡ್ಡಾಯವಾಗಿ ಅಳವಡಿಸಿ ಆ ಮೂಲಕವೇ ಎಲ್ಲಾ ಕಡತಗಳ ನಿರ್ವಹಣೆ ಮಾಡುವಂತೆ ತಿಳಿಸಿದರು.

ಜಮೀನು ಮತ್ತು ಆಸ್ತಿಗಳ ನೊಂದಣಿ ಸಮಯದಲ್ಲಿ ಕಡಿಮೆ ಮುದ್ರಾಂಕ ನೀಡಿ ನೊಂದಾಯಿಸಿರುವವರನ್ನು ಗುರುತಿಸಿ, ಅವರಿಂದ ವ್ಯತ್ಯಾಸದ ಮೊತ್ತವನ್ನು ವಸೂಲಿ ಮಾಡುವಂತೆ ಸೂಚನೆ ನೀಡಿದರು. ಹಳಿಯಾಳ ಮತ್ತು ಮುಂಡಗೋಡು ಕಂದಾಯ ಗ್ರಾಮಗಳ ಸಾರ್ವಜನಿಕರಿಗೆ ಡಿಜಿಟಲ್ ಹಕ್ಕುಪತ್ರಗಳನ್ನು ವಿತರಿಸುವಂತೆ ನಿರ್ದೇಶನ ನೀಡಿದರು.

ಜಿಲ್ಲೆಯಲ್ಲಿ ಆರ್.ಟಿ.ಸಿ ಗಳಿಗೆ ಆಧಾರ್ ಜೋಡಣೆ ಮಾಡುವ ಆಧಾರ್ ಸೀಡಿಂಗ್ ಕಾರ್ಯವನ್ನು ಶೀಘ್ರದಲ್ಲಿ ಮುಕ್ತಾಯಗೊಳಿಸುವಂತೆ ಸೂಚಿಸಿದ ಸಚಿವರು, ಸರ್ಕಾರಿ ಜಾಗದ ಸಂರಕ್ಷಣೆಗಾಗಿ ರೂಪಿಸಿರುವ ಲ್ಯಾಂಡ್ ಬೀಟ್ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವಂತೆ ಮತ್ತು ಬಗರ್ ಹುಕುಂ ನಡಿಯಲ್ಲಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಆದಷ್ಟು ಶೀಘ್ರದಲ್ಲಿ ವಿಲೇವಾರಿ ಮಾಡುವಂತೆ ಸೂಚಿಸಿದರು.

ಸಿಎಂ ರಾಜೀನಾಮೆಗೆ ಕೆ.ಬಿ ಕೋಳಿವಾಡ ಆಗ್ರಹ ವಿಚಾರವಾಗಿ, ಭಾರತ ದೇಶದಲ್ಲಿ ಸಂವಿಧಾನದಿಂದ ನಮಗೆಲ್ಲ ವಾಕ್ ಸ್ವಾತಂತ್ರ್ಯ ಬಂದಿದೆ. ಅವರ ಅವರ ಅಭಿಪ್ರಾಯ ವ್ಯಕ್ತಪಡಿಸಲು ಅವರು ಸ್ವಾತಂತ್ರ್ಯವಾಗಿದ್ದಾರೆ. ನನ್ನ ಅಭಿಪ್ರಾಯ ಸಿದ್ದರಾಮಯ್ಯ ಸಿಎಂ ಆಗಿ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಸಿದ್ದರಾಮಯ್ಯ ನವರೆ ಮುಖ್ಯಮಂತ್ರಿ ಆಗಿ ಮುಂದುವರೆಯಬೇಕು ಎಂದು ಸ್ಪಷ್ಟಪಡಿಸಿದರು.

ಇದೇ ವೇಳೆ ವಿಧಾನಸಭಾ ಚುನಾವಣೆಯ ವಿಷಯವಾಗಿ ಮಾತನಾಡಿದ ಸಚಿವರು, ಹರಿಯಾಣದಲ್ಲಿ ಬಹಳಷ್ಟು ಕಡೆ 500 ರಿಂದ 1000 ಮತಗಳ ಅಂತರದಲ್ಲಿ ನಮ್ಮ ಅಭ್ಯರ್ಥಿ ಸೋತಿದ್ದಾರೆ. ಬಹಳ ಕಡೆ ಕಡಿಮೆ ಅಂತರದ ಕೈ ಅಭ್ಯರ್ಥಿಯ ಸೋಲಿನಿಂದ ಬಿಜೆಪಿ ಬಹುಮತ ಪಡೆದುಕೊಂಡಿದೆ. ಆದರೆ ಜಮ್ಮು ಕಾಶ್ಮೀರ ದಲ್ಲಿ ಕಾಂಗ್ರೆಸ್ ಗೆ ಬಹುಮತ ಸಿಕ್ಕಿದೆ.

ಜಮ್ಮು ಕಾಶ್ಮೀರ ಗೆಲುವು ಕಾಂಗ್ರೆಸ್ ಹೋರಾಟಕ್ಕೆ ಸಿಕ್ಕ ಜಯ. ಅದರೊಂದಿಗೆ ಹರಿಯಾಣದಲ್ಲೂ ಗೆಲ್ಲುತ್ತೇವೆ ಎಂಬ ಬಹಳ ನೀರಿಕ್ಷೆ ಇತ್ತು. ಹರಿಯಾಣ ಫಲಿತಾಂಶದಿಂದ ನಮಗೆ ಆಶ್ಚರ್ಯ ಆಗಿದೆ. ಕೆಲವೆ ಕ್ಷೇತ್ರಗಳ ಸೋಲಿನಿಂದ ಬಹುಮತ ಪಡೆದುಕೊಳ್ಳುವಲ್ಲಿ ನಾವು ವಿಫಲ ಆಗಿದ್ದೆವೆ. ಎಣಿಕೆ ಆರಂಭದಲ್ಲಿ ಬಹುಮತದ ನಿರಿಕ್ಷೆ ಇತ್ತು ಆದರೆ ಸಮಯ ಕಳೆದಂತೆ ಬಹುಮತದ ನಿರೀಕ್ಷೆ ಹುಸಿಯಾಗಿದೆ. ಜನರ ತೀರ್ಪನ್ನು ನಾವು ಒಪ್ಪಿಕೊಳ್ಳುತ್ತೆವೆಎಂದರು.

ವೃತ್ತಿಪರ ವಿದ್ಯೆಯ ಅವಶ್ಯಕತೆ ಇದೆ: ಮಾರುತಿ ಗುರೂಜಿ

ಹೊನ್ನಾವರ: ಇಂದು ವೃತ್ತಿಪರವಾದ ವಿದ್ಯೆಯ ಅವಶ್ಯಕತೆ ಇದೆ. ಕೇವಲ ಅಂಕಗಳಿಕೆಯ ಮುಖ್ಯವಲ್ಲ. ನಮ್ಮಲ್ಲಿರುವ ಕೌಶಲ್ಯ, ವಿಶೇಷ ಚಿಂತನೆಗಳು ಹೊರಬಂದಾಗ ಮಾತ್ರ ಉದ್ಯೋಗ ಸೃಷ್ಟಿ ಆಗುತ್ತದೆ ಎಂದು ಬಂಗಾರಮಕ್ಕಿಯ ಧರ್ಮಾಧಿಕಾರಿ ಶ್ರೀ ಮಾರುತಿ ಗುರೂಜಿ ನುಡಿದರು.

ಅವರು ತಾಲೂಕಿನ ಖರ್ವಾ ಗ್ರಾ.ಪಂ. ವ್ಯಾಪ್ತಿಯ ಅಜ್ಜೋಡ್ಲುನಲ್ಲಿ ಸ್ಪಂದನ ಸೇವಾ ಟ್ರಸ್ಟ್ ಹಡಿನಬಾಳ ಮತ್ತು ಮಂಗಳೂರು ರಿಫೈನರಿ ಮತ್ತು ಪೆಟ್ರೋಕೆಮಿಕಲ್ಸ್ ಲಿಮಿಟೆಡ್, ಒ.ಎನ್.ಜಿ.ಸಿ ಇವರ ಆಶ್ರಯದಲ್ಲಿ ಗ್ರಾಮೀಣ ವಸತಿಸಹಿತ ಕೌಶಲ್ಯಾಭಿವೃದ್ಧಿ ಕೇಂದ್ರದ ಉದ್ಘಾಟನೆ ನೆರವೇರಿಸಿ ಆಶೀರ್ವಚನ ನೀಡಿದರು.

ಕೌಶಲ್ಯಗಳಿಗೆ ಉತ್ತೇಜನ ಸಿಕ್ಕರೆ ಆ ಮನುಷ್ಯ ಸಮಾಜದಲ್ಲಿ ಉತ್ತಮ ಜೀವನ ಸಾಗಿಸಬಲ್ಲ. ಶಿಕ್ಷಕರಾವರು ವಿದ್ಯಾರ್ಥಿಯ ಕೌಶಲ್ಯಗಳನ್ನು ಗುರುತಿಸಬೇಕು. ಆಗ ಮಾತ್ರ ಆ ಕ್ಷೇತ್ರದಲ್ಲಿ ಮುಂದುವರಿಯಲು ಸಾಧ್ಯವಾಗುತ್ತದೆ. ಶಿಕ್ಷಣ ಪಡೆದ ನಂತರ ಉದ್ಯೋಗ ಅವಲಂಭನೆ ಪಡೆಯಬಯಸುತ್ತಾರೆ. ಆದರೆ ತಕ್ಕನಾದ ಉದ್ಯೋಗ ಲಭಿಸುವುದಿಲ್ಲ. ಅನಿವಾರ್ಯತೆಗಾಗಿ ಇನ್ನೊಂದು ಕಡೆ ಹೋಗಬೇಕಾದ ಸ್ಥಿತಿ ಬರುತ್ತದೆ. ಆಗ ಸಜ್ಜನರ ಸಹವಾಸ ಸಿಗದಿದ್ದಲ್ಲಿ ಅವರೆ ಸಮಾಜಘಾತುಕರಾಗುತ್ತಾರೆ. ಇದು ಇಂದಿನ ವಾಸ್ತವ ಸ್ಥಿತಿ. ಅದಕ್ಕಾಗಿ ಜೀವನ ನಿರ್ವಹಣೆಗೆ ಇಂತಹ ಕೌಶಲ್ಯ ಕೇಂದ್ರಗಳು ಪ್ರಮುಖ ಪಾತ್ರವಹಿಸುತ್ತದೆ. ಸರ್ಕಾರ ಅನೇಕ ಯೋಜನೆ ರೂಪಿಸಿದೆ. ಗಣಪತಿ ಹೆಗಡೆಯವರು ಸ್ಪಂದನ ಕೇಂದ್ರದ ಮೂಲಕ ಇಂತಹ ಕೌಶಲ್ಯ ಕೇಂದ್ರ ಆರಂಭಿಸುವ ಮೂಲಕ ಸಮಾಜಮುಖಿಯಾಗಿ ಸೇವೆ ಸಲ್ಲಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶಾಲೆಯಲ್ಲಿ ಕಲಿಯುವ ಶಿಕ್ಷಣಕ್ಕಿಂತ ಜೀವನ ಶಿಕ್ಷಣ, ಕೌಶಾಲ್ಯಾಭಿವೃದ್ಧಿ ಬಹಳ ಮುಖ್ಯ. ಕಲಿತ ಸರ್ಟಿಫಿಕೇಟ್, ಪದಕ, ಪ್ರಶಸ್ತಿ ಪತ್ರ ಅದು ಜೀವನದಲ್ಲಿ ಕಾರ್ಯನಿರ್ವಹಿಸುತ್ತದೆ ಎನ್ನಲಾಗದು.

-ಶ್ರೀ ಮಾರುತಿ ಗುರೂಜಿ, ಬಂಗಾರಮಕ್ಕಿಯ ಧರ್ಮಾಧಿಕಾರಿ

ಸಭಾ ಕಾರ್ಯಕ್ರಮ ಉದ್ಘಾಟಿಸಿದ ಎಮ್ ಆರ್ ಪಿಎಲ್,ಒಎನ್ ಜಿಸಿ ಅಧಿಕಾರಿ ಪ್ರದೀಪ್ ಕುಮಾರ್ ಮಾತನಾಡಿ, ಸ್ಪಂದನ ಸಂಸ್ಥೆಯ ಗಣಪತಿ ಹೆಗಡೆಯವರು ವಸತಿ ಸಹಿತ ಸುಸಜ್ಜಿತ ಕೌಶಲ್ಯ ಕೇಂದ್ರ ನಿರ್ಮಿಸುವ ಮೂಲಕ ಸಾಧನೆ ಮಾಡಿದ್ದಾರೆ.ಇದಕ್ಕೆ ಶ್ರೀ ಮಾರುತಿ ಗೂರುಜಿಯವರು ಬೆನ್ನೆಲುಬಾಗಿ ಆಶೀರ್ವದಿಸಿದ್ದಾರೆ. ಕೇಂದ್ರ ಸರ್ಕಾರದ ಅಧಿನಕ್ಕೊಳಪಟ್ಟ ಕಂಪನಿಗಳು ಸಿಎಸ್ ಆರ್ ಫಂಡ್ ನ್ನು ಸಮಾಜದ ಸ್ವಾಸ್ತ್ಯ ಮೇಲ್ಪಂಕ್ತಿಯಲ್ಲಿಡುವ ಸಾಮಾಜಿಕ ಕಾರ್ಯಕ್ಕೆ ವಿನಿಯೋಗಿಸಬೇಕೆಂಬ ನಿಯಮವಿದೆ. ಆ ಪ್ರಕಾರವಾಗಿ ಇಂತಹ ಕೌಶಲ ಕೇಂದ್ರದ ಉತ್ತಮ ಉದ್ದೇಶಕ್ಕೆ ಬಳಕೆಯಾಗಿರುವುದು ಖುಷಿಯಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸ್ಪಂದನ ಸೇವಾ ಟ್ರಸ್ಟ್ ಮಾರ್ಗದರ್ಶಕ ನಿರ್ದೇಶಕ ಲಕ್ಷ್ಮಣ ಮಾವಿನಕಾಯಿ ಮಾತನಾಡಿ, ಇಲ್ಲಿನ ಕೌಶಲ್ಯ ಕೇಂದ್ರ, ಜಿಲ್ಲೆಗೆ ಇದು ಕಳಸಪ್ರಾಯವಾಗಿದೆ. ತಾಲೂಕಿನ ವಿಶೇಷ ಚೇತನರು ಈ ಕೌಶಲ್ಯ ಕೇಂದ್ರದ ಪ್ರಯೋಜನ ಪಡೆದು ಸ್ವಾವಲಂಭನೆಯ ಬದುಕು ಕಟ್ಟಿಕೊಳ್ಳುವಂತಾಗಲಿ ಎಂದು ಶುಭಹಾರೈಸಿದರು. ಸ್ಪಂದನ ಸಂಸ್ಥೆಯ ಮುಖ್ಯಸ್ಥ ಗಣಪತಿ ಹೆಗಡೆ, ಸುಧಾ ದಂಪತಿ ಸನ್ಮಾನಿಸಲಾಯಿತು.

ಕನಕದಾಸ ಶಿಕ್ಷಣ ಸಮಿತಿ ಡಾ.ವಸಂತ ಅಗಸಿಮನೆ ಅಂಜುಮನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮತ್ತು ಮ್ಯಾನೇಜ್‌ಮೆಂಟ್, ಭಟ್ಕಳ ಎಚ್.ಒ.ಡಿ ಡಾ. ಚಿದಾನಂದ ಜಿ. ನಾಯ್ಕ ಉಪಸ್ಥಿತರಿದ್ದರು.

ಶಿಗ್ಗಾವಿಗೆ 100 ಕೋಟಿ ರು. ವಿಶೇಷ ಅನುದಾನ: ಶಿವಾನಂದ ಪಾಟೀಲ್

ಶಿಗ್ಗಾವಿ: ಸರ್ಕಾರ ಶಿಗ್ಗಾವಿ ತಾಲೂಕಿಗೆ ನೂರು ಕೋಟಿ ರು. ವಿಶೇಷ ಅನುದಾನ ಮಂಜೂರು ಮಾಡಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ.

ಜನಸ್ಪಂದನ ಸಭೆಯಲ್ಲಿ ನಾಗರಿಕ ಸೌಲಭ್ಯ ಕೊರತೆ ದೂರುಗಳು ಅಧಿಕವಾಗಿದ್ದು, ಪರಿಹಾರ ಕ್ರಮಗಳನ್ನು ಕೈಗೊಳ್ಳಲು ವಿಶೇಷ ಅನುದಾನ ಬಿಡುಗಡೆ ಮಾಡಬೇಕು ಎಂಬ ಮನವಿಗೆ ಸ್ಪಂದಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೂರು ಕೋಟಿ ರು. ಮಂಜೂರು ಮಾಡಿದ್ದಾರೆ ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ. ಜನಸ್ಪಂದನ ಸಭೆಯಲ್ಲಿ ಸಾರ್ವಜನಿಕರಿಂದ ಸ್ವೀಕರಿಸಿದ ಅಹವಾಲುಗಳನ್ನು ಪರಿಶೀಲಿಸಿ ತಕ್ಷಣ ಕ್ರಮ ಕೈಗೊಳ್ಳಲು ಸೂಚನೆ ನೀಡಲಾಗಿದ್ದು, ಈಗಾಗಲೇ ಅಧಿಕಾರಿಗಳು ಕಾರ್ಯಪ್ರವೃತ್ತರಾಗಿದ್ದಾರೆ. ಗ್ರಾಮಸ್ಥರ ಬೇಡಿಕೆಯಂತೆ ಶಿಗ್ಗಾವಿ ತಾಲೂಕಿನ ಬಿಸಲಹಳ್ಳಿ ಗ್ರಾಮಕ್ಕೆ ಕೆಎಸ್‌ಆರ್ಟಿಸಿ ಬಸ್ ನಿಲುಗಡೆ ಸೌಕರ್ಯ ಕಲ್ಪಿಸಲಾಗಿದೆ. ಹಾನಗಲ್ ಮತ್ತು ಹುಬ್ಬಳ್ಳಿ ಎರಡೂ ಘಟಕಗಳ ಬಸ್ಸಳಿಗೆ ನಿಲುಗಡೆ ಕಲ್ಪಿಸಬೇಕು ಎಂದು ವಿದ್ಯಾರ್ಥಿಗಳು ಮನವಿ ಮಾಡಿದ್ದರು. ಈಗ ಹಾನಗಲ್ ಘಟಕದ ಬಸ್ಸಳಿಗೆ ನಿಲುಗಡೆ ಸೌಲಭ್ಯ ಕಲ್ಪಿಸಲಾಗಿದೆ ಎಂದರು.

ಮದ್ಯಕ್ಕೆ ಸಂಬಂಧಿಸಿದಂತೆ ನಾಲ್ಕು ತಂಡ ರಚನೆ ಮಾಡಿ ಅಬಕಾರಿ ದಾಳಿ ಆರಂಭಿಸಿದ್ದು, 13 ಪ್ರಕರಣ ದಾಖಲಿಸಿಕೊಂಡು 30 ಸಾವಿರ ಲೀಟರ್ ಮದ್ಯ ವಶಪಡಿಸಿಕೊಂಡಿದ್ದಾರೆ. ಜನಸ್ಪಂದನ ಸಭೆಯಲ್ಲಿ ಕೇಳಿಬಂದ ದೂರುಗಳ ಹಿನ್ನೆಲೆಯಲ್ಲಿ ಸಮಾಜದ ಸ್ವಾಸ್ಥ್ಯಕ್ಕೆ ಧಕ್ಕೆ ತರುವಂಥ ಚಟುವಟಿಕೆಗಳಿಗೆ ಕಡಿವಾಣ ಹಾಕಬೇಕು ಎಂದು ಈಗಾಗಲೇ ಅಧಿಕಾರಿಗಳಿಗೆ ಸ್ಪಷ್ಟ ನಿರ್ದೇಶನ ನೀಡಲಾಗಿದೆ. ಪುನಃ ಅಕ್ರಮ ಚಟುವಟಿಕೆಗಳು ನಡೆಯುತ್ತಿರುವ ದೂರುಗಳು ಬಂದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಲಾಗುವುದು ಎಂದು ಸಚಿವರು ತಿಳಿಸಿದ್ದಾರೆ.

ಕ್ರಿಶ್ಚಿಯನ್ ಮಿಷನರಿಗಳ ವಿರುದ್ಧ ಪ್ರಮೋದ ಮುತಾಲಿಕ್ ಆಕ್ರೋಶ

ಧಾರವಾಡ: ಸೇವೆಯ ನೆಪದಲ್ಲಿ ಕ್ರಿಶ್ಚಿಯನ್ ಮಿಷನರಿಗಳು ಹಿಂದೂ ಸಂಪ್ರದಾಯಕ್ಕೆ ಅಪಮಾನ ಮಾಡುತ್ತಿವೆ ಎಂದು ಶ್ರೀರಾಮ ಸೇನೆ ಮುಖ್ಯಸ್ಥ ಪ್ರಮೋದ ಮುತಾಲಿಕ್ ಆಕ್ರೋಶ ವ್ಯಕ್ತಪಡಿಸಿದರು.

ಧಾರವಾಡದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಸರಾ ಹಬ್ಬಕ್ಕೆ ಸರಕಾರ ಅಧಿಕೃತ ರಜೆ ಘೋಷಣೆ ಮಾಡಿದ್ದು, ಈ ಕುರಿತು ಸರಕಾರ ಗಂಭೀರವಾಗಿ ಪರಿಗಣಿಸಬೇಕು ಎಂದು ಆಗ್ರಹಿಸಿದರು. ದಸರಾ ರಜೆಯ ಆದೇಶ ಉಲ್ಲಂಘಿಸುವ ಯಾವ ಯಾವ ಸಂಸ್ಥೆಗಳ ಶಾಲೆಗಳು ಇವೆಯೋ ಅವುಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ನವೀಕರಣಗೊಳ್ಳದ ಲೇವಾದೇವಿ ಗಿರವಿ ಸಂಸ್ಥೆಗಳ ಪರವಾನಗಿ ರದ್ದು

ಹಾವೇರಿ: ಪರವಾನಗಿ ಪಡೆದ ಲೇವಾದೇವಿಗಾರರು, ಗಿರವಿದಾರರು, ಹಣಕಾಸು ಸಂಸ್ಥೆಗಳು ಪ್ರತಿ ಐದು ವರ್ಷಕ್ಕೊಮ್ಮೆ ನವೀಕರಣಗೊಳಿಸುವುದು ಕಡ್ಡಾಯವಾಗಿದೆ. ಜಿಲ್ಲೆಯ ಕೆಲವು ಸಂಸ್ಥೆಗಳು ದಿನಾಂಕ 31-03-2024ರೊಳಗಾಗಿ ನವೀಕರಿಸದೇ ಇರುವ ಸಂಸ್ಥೆಗಳ ಪರವಾನಿಗೆ ರದ್ದುಪಡಿ ಸಲಾಗುವುದು ಎಂದು ಲೇವಾದೇವಿಗಾರರ ನಿಬಂಧಕರು ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು ತಿಳಿಸಿದ್ದಾರೆ.

ಜಿಲ್ಲೆಯ ಏಳು ಸಂಸ್ಥೆಗಳು ನವೀಕರಿಸಕೊಳ್ಳದ ಕಾರಣ ಭದ್ರತಾ ಠೇವಣ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಅವರ ಪರವಾನಿಗೆ ರದ್ದುಪಡಿಸಲಾಗುವುದು ಎಂದು ಸವಣೂರ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಮೂಲಕ ಸಂಬಂಧಪಟ್ಟ ಸಂಸ್ಥೆಗಳ ಮಾಲೀಕರ ಗಮನಕ್ಕೆ ತರಲಾಗಿದೆ. ಈ ಕೆಳಕಂಡ ಸಂಸ್ಥೆಯವರು 15 ದಿನದೊಳಗಾಗಿ ತಮ್ಮ ಆಕ್ಷೇಪಣೆ ಏನಾದರೂ ಇದ್ದಲ್ಲಿ ಸಲ್ಲಿಸಬೇಕು. ತಪ್ಪಿದಲ್ಲಿ ಈ ಸಂಸ್ಥೆಗಳನ್ನು ರದ್ದುಪಡಿಸಲಾಗುವುದು. ಸವಣೂರಿನ ಬಾಲಾಜಿ ಫೈನಾನ್ಸ್ ಕಾರ್ಪೋರೇಷನ್, ಶ್ರೀಮಹಾಗಣಪತಿ ಪಾನ್ ಬ್ರೋರ್ಸ್, ಇಚ್ಚಂಗಿ ಶತತಾರ ಫೈನಾನ್ಸ್, ಶಿಗ್ಗಾಂವಿಯ ಅಕ್ಷಯ ಫೈನಾನ್ಸ್, ಶ್ರೀ ವೀರಭದ್ರೇಶ್ವರ ಫೈನಾನ್ಸ್, ಜೆ.ಎಸ್.ಎಸ್.ಸಾಯಿ ಲಾಲಾಜಿ ಫೈನಾನ್ಸ್, ಬಂಕಾಪುರದ ಆದಿಶಕ್ತಿ ಫೈನಾನ್ಸ್, ಭಾಂದವ್ಯ ಫೈನಾನ್ಸ್ ಕಾರ್ಪೋರೇಷನ್, ಶಿಗ್ಗಾಂವ ತಾಲೂಕು ತಡಸ ಪ್ರಗತಿ ಫೈನಾನ್ಸ್ ಕಾರ್ಪೋರೇಷನ್, ಬಂಕಾಪುರದ ಶಿವಸಾಯಿ ಫೈನಾಸ್ ಕಾರ್ಪೋರೇಷನ್ ಹಾಗೂ ಹಾನಗಲ್‌ನ ಗಾಯಿತ್ರಿ ಫೈನಾನ್ಸ್ ಆಗಿದೆ. ಹೆಚ್ಚಿನ ಮಾಹಿತಿಗಾಗಿ ಕೂಡಲೇ ಲೇವಾದೇವಿಗಾರರ ನಿಬಂಧಕರು ಹಾಗೂ ಸಹಕಾರ ಸಂಘಗಳ ಉಪನಿಬಂಧಕರ ಕಚೇರಿ, ಹಾವೇರಿ ಈ ವಿಳಾಸದಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಮಾಚಾರ ಸಣ್ಣದಲ್ಲ

ಕೃಷಿ ಭಾಗ್ಯ ಯೋಜನೆಗೆ ಅರ್ಜಿ ಆಹ್ವಾನ

ಧಾರವಾಡ: ಪ್ರಸಕ್ತ ಸಾಲಿನಲ್ಲಿ ಕೃಷಿ ಭಾಗ್ಯ ಯೋಜನೆಯಡಿ ಕ್ಷೇತ್ರ ಬದು ನಿರ್ಮಾಣ, ಕೃಷಿ ಹೊಂಡ, ಪಾಲಿಥೀನ್ ಹೊದಿಕೆ, ಡೀಸೆಲ್, ಪೆಟ್ರೋಲ್ ಪಂಪಸೆಟ್, ಲಘು ನೀರಾವರಿ ಹಾಗೂ ತಂತಿ ಬೇಲಿ ಘಟಕಗಳನ್ನು ಅಳವಡಿಸಿಕೊಳ್ಳಲು ಇಚ್ಛಿಸುವ ಅರ್ಹ ರೈತರಿಗೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಸೂಕ್ತ ದಾಖಲಾತಿಗಳೊಂದಿಗೆ ಅಕ್ಟೋಬರ್ 20, 2024 ರೊಳಗಾಗಿ ರೈತ ಸಂಪರ್ಕ ಕೇಂದ್ರಕ್ಕೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಛೇರಿಯನ್ನು ಸಂಪರ್ಕಿಸಬಹುದು ಎಂದು ಕೃಷಿ ಇಲಾಖೆಯ ಸಹಾಯಕ ಕೃಷಿನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಜಿಲ್ಲಾ ಮಟ್ಟದ ಕಾರ್ಯಗಾರ

ಧಾರವಾಡ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕಾರ್ಮಿಕ ಇಲಾಖೆ, ಕಾರ್ಖಾನೆಗಳು, ಬಾಯ್ಲರುಗಳು ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ಉದ್ಯೋಗಿಗಳ ರಾಜ್ಯ ವಿಮಾ ನಿಗಮ, ಉದ್ಯೋಗಿಗಳ ಭವಿಷ್ಯ ನಿಧಿ ಸಂಸ್ಥೆ, ಧಾರವಾಡ ಜಿಲ್ಲೆ ಧಾರವಾಡ ಗ್ರೋತ್ ಸೆಂಟರ್ ಇಂಡಸ್ಟ್ರೀಸ್ ಅಸೋಸಿಯೇಷನ್ ಇವರ ಸಂಯುಕ್ತಾಶ್ರಯದಲ್ಲಿ ಸಾರ್ವಜನಿಕರು, ಉದ್ಯೋಗದಾತರು ಹಾಗೂ ಕಾರ್ಮಿಕ ಸಂಘಟನೆಗಳ ಪದಾಧಿಕಾರಿಗಳಿಗೆ ಅನುಷ್ಠಾನಗೊಳಿಸಲಾಗುತ್ತಿರುವ ಯೋಜನೆ, ಕಾನೂನುಗಳ ಅರಿವು ಹಾಗೂ ಅಭಿಪ್ರಾಯ ಸಂಗ್ರಹ ಸಂಬಂಧಿತ ಜಿಲ್ಲಾ ಮಟ್ಟದ ಕಾರ್ಯಾಗಾರವನ್ನು ಅಕ್ಟೋಬರ್ 9, 2024 ರಂದು ಮಧ್ಯಾಹ್ನ 2 ಗಂಟೆಗೆ ಬೇಲೂರು ಇಂಡಸ್ಟ್ರೀಯಲ್ ಏರಿಯಾದ ಸಿಡಾಕ್ ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಕಾರ್ಯದರ್ಶಿಗಳಾದ ಪರಶುರಾಮ್ ದೊಡ್ಡಮನಿ ಅವರು ಕಾರ್ಯಕ್ರಮದ ಉದ್ಘಾಟಿಸುವರು. ಧಾರವಾಡದ ಬೆಲೂರಿನ ಗ್ರೋತ್ ಸೆಂಟರ್ ಇಂಡಸ್ಟ್ರೀಸ್ ಅಸೋಸಿಯೇಷನ್‌ನ ಅಧ್ಯಕ್ಷ ಶ್ರೀಕಾಂತ ತಿಟೆ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಕಾರ್ಯಕ್ರಮದಲ್ಲಿ ಹುಬ್ಬಳ್ಳಿ ವಲಯದ ಕಾರ್ಖಾನೆಗಳ ಜಂಟಿ ನಿರ್ದೇಶಕ ರವೀಂದ್ರನಾಥ್ ರಾಥೋಡ್, ಧಾರವಾಡ ವಿಭಾಗದ ಸಹಾಯಕ ಕಾರ್ಮಿಕ ಆಯುಕ್ತೆ ಶ್ವೇತಾ ಎಸ್., ಎಂಪ್ಲಾಯೀಸ್ ಪ್ರೊವಿಡೆಂಟ್ ಫಂಡ್ ರೀಜನಲ್ ಕಮಿಷನರ್ ರಮೀಜ್ ಮೆಹೆರೆ, ಧಾರವಾಡದ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ರವೀಂದ್ರ ಪಿ ದ್ಯಾಬೇರಿ, ಇಎಸ್‌ಐಸಿನ ಸಹಾಯಕ ನಿರ್ದೇಶಕ ರಾಜಾ ಕೆ. ಹಟಗಾರ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಇಂದು ಲೋಕಾಯುಕ್ತ ಅಹವಾಲು ಸ್ವೀಕಾರ

ಧಾರವಾಡ: ಕರ್ನಾಟಕ ಲೋಕಾಯುಕ್ತ, ಪೊಲೀಸ್ ಅಧಿಕಾರಿಗಳು ಸಾರ್ವಜನಿಕ ಕುಂದು ಕೊರತೆ ಸಭೆಯನ್ನು ಕುಂದಗೋಳದಲ್ಲಿ ಅಕ್ಟೋಬರ್ 10 ರಂದು ಬೆಳಗ್ಗೆ 11ರಿಂದ ಮಧ್ಯಾಹ್ನ 2 ಗಂಟೆಯವರೆಗೆ ನಡೆಸಲಿದ್ದಾರೆ ಎಂದು ಕರ್ನಾಟಕ ಲೋಕಾಯುಕ್ತ ಧಾರವಾಡ ಪ್ರಭಾರ ಪೊಲೀಸ್ ಅಧೀಕ್ಷಕರು ತಿಳಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿರುವ ಅವರು, ಅಕ್ಟೋಬರ್ 10 ರಂದು ಕುಂದಗೋಳ ತಾಲ್ಲೂಕು ಪಂಚಾಯತ್ ಸಭಾಭವನದಲ್ಲಿ ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಸಾರ್ವಜನಿಕರ ಅಹವಾಲುಗಳನ್ನು ಸ್ವೀಕರಿಸಲಾಗುತ್ತದೆ, ಸಾರ್ವಜನಿಕರು ತಮ್ಮ ದೂರುಗಳಿದ್ದಲ್ಲಿ ಸಲ್ಲಿಸಬಹುದು ಎಂದು ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧೀಕ್ಷಕ (ಪ್ರಭಾರ) ಹನುಮಂತರಾಯ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿರ್ಲಕ್ಷ್ಯಕ್ಕೆ ಒಳಗಾದ ಆರ್ಟ್ ಗ್ಯಾಲರಿ

ಉದ್ಘಾಟನೆಗೊಂಡು ಕೆಲವೇ ವರ್ಷಗಳಲ್ಲಿ ಪಾಳು ಬಿದ್ದ ಕಟ್ಟಡ | ಕಲಾವಿದರಿಗೂ ಅವಮಾನ

ಮಾಳಿಂಗರಾಯ ಪೂಜಾರ

ಗದಗ: ಜಿಲ್ಲೆಯು ಚಿತ್ರಕಲಾ ಕ್ಷೇತ್ರದಲ್ಲಿ ಅದ್ವಿತೀಯ ಕಾರ್ಯ ಮಾಡಿದೆ ಮುರಿಗೆಪ್ಪ ಚಟ್ಟಿ ಅವರನ್ನು ಆಧುನಿಕ ರವಿವರ್ಮ ಎಂದೇ ಕರೆಯಲಾಗುತ್ತಿದೆ. ಅವರ ಸ್ಮರಣಾರ್ಥ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನಿರ್ಮಿಸಿರುವ ಮುರಿಗೆಪ್ಪ ಚಟ್ಟಿ ಆರ್ಟ್ ಗ್ಯಾಲರಿ ಈಗ ದಿವ್ಯ ನಿರ್ಲಕ್ಷಕ್ಕೆ ಒಳಗಾಗಿದ್ದು, ಇದ್ದೂ ಇಲ್ಲದಂತಾಗಿದೆ.

ಕನ್ನಡ ನಾಡಿಗೆ ಸಾಹಿತ್ಯ, ಸಂಗೀತ, ಕಲೆ ರಂಗದಲ್ಲಿ ಅಪೂರ್ವ ಕೊಡುಗೆ ನೀಡಿರುವ ಗದಗ ಜಿಲ್ಲೆಯ ಇತಿಹಾಸ ಭವ್ಯವಾಗಿದ್ದು, ಪರಂಪರೆ ದಿವ್ಯವಾಗಿದೆ. ಆದರೆ ಇಲಾಖೆಯ ನಿರ್ಲಕ್ಷ್ಯದಿಂದ ಯಾವ ಉದ್ದೇಶಕ್ಕಾಗಿ ನಿರ್ಮಿಸಲಾಗಿದೆಯೋ? ಆದರದೀಗ ಪಾಳು ಬಿದ್ದಿರುವ ಕಲಾವಿದರಿಗೆ ಅಸಮಾಧಾನಕ್ಕೆ ಕಾರಣವಾಗಿದೆ.

ಅನೇಕ ವರ್ಷಗಳ ನಿರಂತರ ಪ್ರಯತ್ನ, ಫಲವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನಗರದ ಪರಿಸರ ಲೇಔಟ್ ನಲ್ಲಿ ಸುಮಾರು 50 ಲಕ್ಷ ರು. ಅನುದಾನದಲ್ಲಿ ಮಾದರಿಯಾಗಿರುವ ಗದುಗಿನ ಹೆಸರಾಂತ ಕಲಾವಿದ ಮುರಿಗೆಪ್ಪ ಚಟ್ಟಿ ಆರ್ಟ್ ಗ್ಯಾಲರಿನಲ್ಲಿ ನಿರ್ಮಿಸಿ 2017 ರಲ್ಲಿ ಉದ್ಘಾಟನೆ ಮಾಡಲಾಗಿತ್ತು. ನಂತರ ನಿರ್ವಹಣೆ ಕೊರತೆಯಿಂದ ಹಾಗೂ ನಂತರದ ದಿನಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜನಪ್ರತಿನಿಧಿಗಳು ನಿರ್ಲಕ್ಷ್ಯ ವಹಿಸಿದ ಹಿನ್ನೆಲೆಯಲ್ಲಿ ಹಾಳುಕೊಂಪೆಯಾಗಿದ್ದು, ಚಿತ್ರ ಕಲಾವಿದರ ಅಸಮಾಧಾನಕ್ಕೆ ಕಾರಣವಾಗಿದೆ. ಗದುಗಿನ ಹೆಸರಾಂತ ಕಲಾವಿದ ಮುರಿಗೆಪ್ಪ ಚಟ್ಟಿ ಅವರ ಹೆಸರಿನಲ್ಲಿ ನಿರ್ಮಿಸಿ ಆರ್ಟ್ ಗ್ಯಾಲರಿನಲ್ಲಿ ಪಾಳು ಬಿದ್ದಿರುವುದು ಅವರಿಗೆ ಅಗೌರವವಾಗಿದೆ.

ಗದಗ ನಗರದ ಪರಿಸರ ಲೇಔಟ್ ನಲ್ಲಿ ನಿರ್ಮಿಸಿರುವ ಮುರಿಗೆಪ್ಪ ಚಟ್ಟಿ ಆರ್ಟ್ ಗ್ಯಾಲರಿ ಕಟ್ಟಡ ಬಳಸದೆ ಪಾಳು ಬಿದ್ದಿರುವುದು.

ಉದ್ಘಾಟನೆಗೆ ಸೀಮಿತ: ಖ್ಯಾತ ಹೆಸರಾಂತ ಕಲಾವಿದರ ಹೆಸರಿನಲ್ಲಿ ಈ ಕಟ್ಟಡವನ್ನು ನಿರ್ಮಿಸಿ ಸರ್ಕಾರದಿಂದ ಸಾಕಷ್ಟು ಅನುದಾನ ತಂದು ಹೀಗೆ ಪಾಳು ಬಿಳಿಸಿದರೆ ಹೇಗೆ ಕೇವಲ ಉದ್ಘಾಟನೆ ಮಾತ್ರ ಈ ಕಟ್ಟಡ ನಿರ್ಮಾಣ ಮಾಡಲಾಗಿದೆಯೇ ಈ ಕಟ್ಟಡದಲ್ಲಿ ಶೌಚಾಲಯ, ಆಸನ, ಕುಡಿಯುವ ನೀರು, ಆವರಣದಲ್ಲಿ ಬೆಳಕಿನ ವ್ಯವಸ್ಥೆ ಹಾಗೂ ಗೋಡೆಯ ಮೇಲೆ ಚಿತ್ರಗಳು ಸೇರಿದಂತೆ ಇತರೆ ಮೂಲ ಸೌಲಭ್ಯ ಕಲ್ಪಿಸಿ ಸುಸಜ್ಜಿತವಾದ ಕಟ್ಟಡ ನಿರ್ಮಿಸಿ ಈ ಆರ್ಟ್ ಗ್ಯಾಲರಿಯನ್ನು ಉದ್ಘಾಟಿಸಲಾಯಿತು. ಅನಂತರವೂ ಸ್ವಲ್ಪ ಚಿತ್ರಕಲಾವಿದರ ಸಂಘಕ್ಕೆ ನೀಡಲಾಗಿತ್ತು ಆದರೆ ಅವರು ಸರಿಯಾಗಿ ಸೌಲಭ್ಯ ಕಲ್ಪಿಸಿಲ್ಲ ಹಾಗೂ ಕಟ್ಟಡದ ಗೋಡೆ ಎಲ್ಲೆಂದರಲ್ಲಿ ಬಿರುಕು ಬಿಟ್ಟಿದೆ ಎನ್ನುವ ಕಾರಣವನ್ನು ಹೇಳಿ ಚಿತ್ರ ಕಲಾವಿದರು ಬಿಟ್ಟಿದ್ದಾರೆ ಎನ್ನಲಾಗುತ್ತಿದೆ.

ಆದರೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಚಿತ್ರಕಲಾ ಸಂಘದವರು ಸರಿಯಾಗಿ ನಿರ್ವಹಣೆ ಮಾಡದೆ ಹಿನ್ನೆಲೆ ನಮ್ಮ ಸುಪರ್ದಿಗೆ ಪಡೆದುಕೊಂಡಿದ್ದೇವೆ ಎನ್ನುತ್ತಿದ್ದಾರೆ.

ಯಾವ ಉದ್ದೇಶಕ್ಕಾಗಿ ಈ ಕಟ್ಟಡವನ್ನು ನಿರ್ಮಿಸಲಾಗಿದೆ ಎನ್ನುವುದನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಮರೆತಿದ್ದು, ಕಳೆದ ನಾಲ್ಕೈದು ವರ್ಷಗಳಿಂದ ಈವರೆಗೆ ಬಾಗಿಲು ಮುಚ್ಚಿದೆ. ಈ ಕಟ್ಟಡ ನಿರ್ಮಾಣಕ್ಕೆ ಆದಾಗಿನಿಂದ ಕಳಪೆ ಕಾಮಗಾರಿಯಾಗಿದೆ ಎನ್ನುವ ಆರೋಪಗಳು ಕೇಳಿ ಬರುತ್ತಿದ್ದವು ಉದ್ಘಾಟನೆಯಾಗಿ ಸ್ವಲ್ಪ ದಿನದಲ್ಲಿ ಗೋಡೆಗಳು ಅಲ್ಲಿ ಅಲ್ಲಿ ಬಿರುಕು ಬಿಟ್ಟಿತ್ತು ಎನ್ನುವ ಆರೋಪ ಕೇಳಿ ಬಂದಿತ್ತು.

ರಾತ್ರಿ ವೇಳೆ ಆವರಣದಲ್ಲಿ ಅನೈತಿಕೆ ಚಟುವಟಿಕೆಗಳು ನಡೆಯುತ್ತಿವೆ. ಆರ್ಟ ಗ್ಯಾಲರಿ ಆವರಣ ಹಾಗೂ ಸುತ್ತಮುತ್ತಲೂ ಮುಳ್ಳು ಕಂಠಿ ಬೆಳೆದಿವೆ. ಇದರಿಂದ ಭವನದ ಇಡೀ ಆವರಣ ಹಾಳಾಗಿದೆ. ಭವನ ಹಾಳಾಗಿ ಹೋಗಿದೆ. ಇದನ್ನು ಬಳಕೆ ಮಾಡಿಕೊಳ್ಳದೆ ಇರುವದರಿಂದ ಹಾಗೂ ಪಾಳು ಬಿದ್ದರು ಇದು ನಮಗೇನು ಸಂಬಂಧ ಇಲ್ಲ ಎನ್ನುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜನಪ್ರತಿನಿಧಿಗಳು ಮೌನ ವಹಿಸಿದ್ದಾರೆ.

ಈ ಬಗ್ಗೆ ಅನೇಕ ಕನ್ನಡ ಪರ ಸಂಘಟನೆಗಳು, ಚಿತ್ರ ಕಲಾವಿದರು ಮತ್ತು ದೃಶ್ಯ ಕಲಾವಿದರ ಸಂಘದವರು ಈಗಾಗಲೇ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಹಲವು ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಅಸಹಾಯಕತೆ ವ್ಯಕ್ತಪಡಿಸಿದರು.

> **ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕಲಾವಿದರ ನಿಷ್ಕಾಳಜಿಯಿಂದ ಸುಸಜ್ಜಿತ ಕಟ್ಟಡ ಪಾಳು ಬಿದ್ದಿದ್ದು, ಸರಕಾರ ಕೂಡಲೇ ಈ ಕುರಿತು ಕ್ರಮ ಕೈಗೊಳ್ಳಬೇಕು.**
> –ವಿಜಯ ಕಿರೆಸೂರು, ಚಿತ್ರ ಕಲಾವಿದರು

> **ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನಿರ್ಮಿಸಿರುವ ಮುರಿಗೆಪ್ಪ ಚಟ್ಟಿ ಆರ್ಟ್ ಗ್ಯಾಲರಿ ಕಟ್ಟಡ ದುರಸ್ತಿ ಕಾರ್ಯ ಮಾಡಲು ಕ್ರಮ ಕೈಗೊಳ್ಳಲಾಗುವುದು ಹಾಗೂ ಕಟ್ಟಡ ಬಳಕೆ ಮಾಡಲು ವಿವಿಧ ಕಾರ್ಯಕ್ರಮ ಮಾಡಲು ಕ್ರಮ ಕೈಗೊಳ್ಳಲಾಗುವುದು.**
> –ವೀರಯ್ಯ ಹಿರೇಮಠ, ಸಹಾಯಕ ನಿರ್ದೇಶಕ.ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಅನೈತಿಕ ತಾಣ

ಚಿತ್ರ ಕಲಾವಿದರಿಗೆ ಅನುಕೂಲಕ್ಕೆ ಬಳಕೆಯಾಗಬೇಕಿದ್ದ ಭವನ, ಇದೀಗ ಪುಂಡಪೋಕರಿಗಳ ದುರ್ಬಳಕೆಗೆ ಕಾರಣವಾಗಿದೆ. ಆವರಣದೊಳಗೆ ಹೆಜ್ಜೆ ಇಟ್ಟರೇ ಯಾವುದೋ ಹಾಳುಕೊಂಪೆಗೆ ಬಂದಂತೆ ಭಾಸವಾಗುತ್ತದೆ. ಎಲ್ಲೆಂದರಲ್ಲಿ ಬಿದ್ದಿರುವ ಬೀಡಿ, ಸಿಗರೇಟು, ಮದ್ಯದ ಬಾಟಲಿ, ದುರ್ವಾಸನೆ, ಗಿಡಗಂಟಿಗಳು ಬಂದವರನ್ನು ಸ್ವಾಗತಿಸುತ್ತಿವೆ. ಹೇಳುವವರು ಕೇಳುವವರು ಇಲ್ಲದಂತಾಗಿದ್ದು, ಇದರಿಂದ ಇಷ್ಟು ವರ್ಷಗಳ ಕಾಲ ಪಾಳು ಬಿದ್ದಿದೆ.

ಶ್ರೀಕ್ಷೇತ್ರ ನವಗ್ರಹ ತೀರ್ಥದಲ್ಲಿ ನವರಾತ್ರಿಯ ವೈಭವ

ಹುಬ್ಬಳ್ಳಿ: ಪರಮ ಪೂಜ್ಯ ಆಚಾರ್ಯ ಶ್ರೀ 108 ಗುಣಧರನಂದಿ ಮಹಾರಾಜರ ಮಾರ್ಗದರ್ಶನದಲ್ಲಿ, ಆರ್ಯಿಕಾ ಸಂಘ ಉಪಸ್ಥಿತಿಯಲ್ಲಿ, ಸ್ವಸ್ತಿಶ್ರೀ ಧರ್ಮಸೇನ ಭಟ್ಟಾರಕರ ನಿರ್ದೇಶನದಲ್ಲಿ ವರೂರು ನವಗ್ರತೀರ್ಥದಲ್ಲಿ ಲೋಕಕಲ್ಯಾಣ ಭಾವನೆಯಿಂದ ನವರಾತ್ರಿಯ ಸಂದರ್ಭದಲ್ಲಿ ವಿವಿಧ ಹವನ, ಶ್ರೀ ಜಿನರ ಆರಾಧನೆ, ವಿಶೇಷ ಪೂಜೆ, ಅಭಿಷೇಕ, ಮಾತೆ ಪದ್ಮಾವತಿ ಅಮ್ಮನವರ ವಿಶೇಷ ಅಲಂಕಾರ, ಷೋಡಶೋಪಚಾರ ಪೂಜೆಗಳು ವೈಭವದಿಂದ ನಡೆಯುತ್ತಿದ್ದು, ಜನರು ಶ್ರದ್ಧೆ ಭಕ್ತಿಗಳಿಂದ ಭಾಗವಹಿಸುತ್ತಿದ್ದಾರೆ.

ನವದಿನಗಳ ಸಂಭ್ರಮಕ್ಕೆ ಹುಬ್ಬಳ್ಳಿ ಜೈನ ಸಮಾಜ ಅಧ್ಯಕ್ಷ ರಾಜೇಂದ್ರ ಬೀಳಗಿ,ಉಪಾಧ್ಯಕ್ಷ ವಿಮಲ್ ತಾಳಿಕೋಟಿ, ಜೈನ ಬೋರ್ಡಿಂಗ್ ಅಧ್ಯಕ್ಷ ವಿದ್ಯಾಧರ ಪಾಟೀಲ ಬಸ್ತಿ ಪರಿವಾರ ದೇವೇಂದ್ರ ಕಾಗಿನವರು ಧ್ವಜಾರೋಹಣ ನೆರವೇರಿಸಿ ಚಾಲನೆ ನೀಡಿದರು.

ಇಸ್ರೇಲ್ ದೇಶಭಕ್ತಿ ಎಲ್ಲರಿಗೂ ಮಾದರಿ

ಧಾರವಾಡ: ಭಯೋತ್ಪಾದನೆ ವಿಷಯದಲ್ಲಿ ಇಸ್ರೇಲ್ ದೇಶಭಕ್ತಿ ಎಲ್ಲರಿಗೂ ಮಾದರಿ ಎಂದು ಶ್ರೀರಾಮ ಸೇನೆ ಮುಖ್ಯಸ್ಥ ಪ್ರಮೋದ ಮುತಾಲಿಕ ತಿಳಿಸಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀರಾಮ ಸೇನೆ ಹಾಗೂ ಭಾರತ ದೇಶದ ಪ್ರತಿಯೊಬ್ಬ ಪ್ರಜೆಯೂ ಇಸ್ರೇಲ್ ಬೆಂಬಲಕ್ಕೆ ಇದ್ದೇವೆ. ಭಯೋತ್ಪಾದಕ ಚಟುವಟಿಕೆ ವಿರುದ್ಧ ಈ ಕುರಿತು ಒಗಟ್ಟಾಗಿರಬೇಕು ಭಯೋತ್ಪಾದಕ ಚಟುವಟಿಕೆ ಮಟ್ಟ ಹಾಕಬೇಕೆಂದು ತಿಳಿಸಿದರು. ಶ್ರೀರಾಮ ಸೇನೆ ರಾಜ್ಯಾಧ್ಯಕ್ಷ ಗಂಗಾಧರ ಕುಲಕರ್ಣಿ, ಧಾರವಾಡ ಜಿಲ್ಲಾಧ್ಯಕ್ಷ ಅಣ್ಣಪ್ಪ ದಿವಟಗಿ, ಸಂಘಟನಾ ಕಾರ್ಯದರ್ಶಿ ಮುಂಜುನಾಥ ಕಾಟರ್ಕ, ತಾಲೂಕು ಅಧ್ಯಕ್ಷ ಮೈಲಾರ ಗುಡ್ಡಪ್ಪನವರ, ಮಹಾಲಿಂಗ ಅಗಳಿ, ಸೋಮಶೇಖರ ಸೇರಿದಂತೆ ಹಲವರು ಇದ್ದರು.

ಜಿಲ್ಲೆಯಾದ್ಯಂತ 60 ದಿನ ತಂಬಾಕು ಮುಕ್ತ ಯುವ ಅಭಿಯಾನ

ಧಾರವಾಡ: ಚಿಕ್ಕ ಮಕ್ಕಳು, ವಿದ್ಯಾರ್ಥಿಗಳು ಯುವಕರು ತಂಬಾಕು ಉತ್ಪನ್ನಗಳಿಗೆ, ಬೀಡಿ ಸಿಗರೇಟ ಸೇವನೆಗೆ ಅಂಟಿಕೊಳ್ಳದಂತೆ ನಗರಗಳಲ್ಲಿ, ಗ್ರಾಮಗಳಲ್ಲಿ ಹೆಚ್ಚಿನ ಅರಿವು ಜಾಗೃತಿ ಕಾರ್ಯಕ್ರಮ ಶಿಕ್ಷಣ ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳು ಜಂಟಿಯಾಗಿ ಹಮ್ಮಿಕೊಳ್ಳುವಂತೆ ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಜಿಲ್ಲಾ ಸಮನ್ವಯ ಸಮಿತಿ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ತಂಬಾಕು ಮುಕ್ತ ಯುವ ಅಭಿಯಾನವನ್ನು ಜಿಲ್ಲೆಯಾದ್ಯಂತ 60 ದಿನಗಳವರೆಗೆ ಆಚರಿಸಲಾಗುವುದು. 160 ಶಾಲೆ ಹಾಗೂ 20 ಗ್ರಾಮಗಳನ್ನು ಸಂಪೂರ್ಣ ತಂಬಾಕು ಮುಕ್ತಗೊಳಿಸುವ ಗುರಿ ಹೊಂದಲಾಗಿದ್ದು, ವಿವಿಧ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗುವುದು ಎಂದರು.

ಇಂದಿನ ದಿನಗಳಲ್ಲಿ ಯುವ ಸಮೂಹ ಹೆಚ್ಚು ತಂಬಾಕು ಸೇವನೆ, ಬೀಡಿ, ಸಿಗರೇಟು, ಗುಟ್ಕಾ ಚಟಗಳಿಗೆ ಅಂಟಿಕೊಳ್ಳುತ್ತಿದ್ದು, ಗ್ರಾಮ ಸಭೆಗಳಲ್ಲಿ, ಪಾಲಕರ ಸಭೆಯಲ್ಲಿ, ಆಶಾ ಅಂಗನವಾಡಿ ಕಾರ್ಯಕರ್ತೆಯರು, ಸಂಘ ಸಂಸ್ಥೆಗಳ ಸಹಯೋಗದಲ್ಲಿ, ಆರೋಗ್ಯ ಹಾಗೂ ಶಿಕ್ಷಣ ಇಲಾಖೆ ಅಧಿಕಾರಿಗಳು ವಿಶೇಷ ಅಭಿಯಾನ ಹಮ್ಮಿಕೊಳ್ಳುವಂತೆ ಜಿಲ್ಲಾಧಿಕಾರಿಗಳು ತಿಳಿಸಿದರು.

ಜಿಲ್ಲೆಯ ಎಲ್ಲ ಶಾಲೆ ಕಾಲೇಜುಗಳ ತಂಬಾಕು ಮುಕ್ತ ಶಾಲೆಯೆಂದು ಘೋಷಿಸಿದ ಬಗ್ಗೆ ಕಡ್ಡಾಯವಾಗಿ ಫಲಕ ಅಳವಡಿಸಬೇಕು. 20 ತಂಬಾಕು ಮುಕ್ತ ಗ್ರಾಮಗಳನ್ನಾಗಿಸುವ ನಿಟ್ಟಿನಲ್ಲಿ ಗ್ರಾಮದ ಹಿರಿಯರು, ಶಾಲಾ-ಕಾಲೇಜು ವಿದ್ಯಾರ್ಥಿಗಳ ಪಾಲಕರೊಂದಿಗೆ ಮಹಿಳಾ ಮಕ್ಕಳ ಇಲಾಖೆ, ಆಶಾ ಅಂಗನವಾಡಿ ಕಾರ್ಯಕರ್ತೆಯರು, ಶಿಕ್ಷಣ ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳು ಸಭೆ ನಡೆಸಿ ಸರಿಯಾದ ರೀತಿಯಲ್ಲಿ ಅನುಷ್ಠಾನಗೊಳಿಸಬೇಕೆಂದು ತಿಳಿಸಿದರು. ಜಿಲ್ಲೆಯಾದ್ಯಂತ ತನಿಖಾ ದಾಳಿಗಳನ್ನು ಹೆಚ್ಚಿಸಬೇಕು. ತಂಬಾಕು ಮುಕ್ತ ಬಾರ್ ರೆಸ್ಟೋರೆಂಟ್, ನೋ ಸ್ಮೋಕಿಂಗ್ ಜೋನ್ ಕುರಿತಂತೆ ಅಬಕಾರಿ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು. ಸಾರ್ವಜನಿಕರು ರಸ್ತೆ ಬೀದಿಗಳಲ್ಲಿ ಮಾರುಕಟ್ಟೆ ಸ್ಥಳಗಳಲ್ಲಿ ಸಿಗರೇಟು, ಬೀಡಿ ಸೇವನೆ ಮಾಡದಂತೆ ಎಲ್ಲೆಡೆ ಫಲಕ ಕರಪತ್ರ ಲಗತ್ತಿಸಬೇಕೆಂದು ಜಿಲ್ಲಾಧಿಕಾರಿಗಳು ತಿಳಿಸಿದರು. ಹಿಂದುಳಿದ ವರ್ಗಗಳ, ಪರಿಶಿಷ್ಟ ಜಾತಿ ಪಂಗಡಗಳ ಹಾಸ್ಟೆಲ್‌ಗಳಲ್ಲಿ ಹೆಚ್ಚಿನ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಸೂಚಿಸಿದರು. ರಾಜ್ಯ ಸರಕಾರವು ಹುಕ್ಕಾ ಬಾರ್ ನಿರ್ಬಂಧಗೊಳಿಸಿದೆ. ಕೆಲವೆಡೆ ಅನಧಿಕೃತವಾಗಿ ಕಂಡು ಬಂದ ಮಾಹಿತಿ ಆರೋಗ್ಯ ಅಧಿಕಾರಿ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದರು. ಅಬಕಾರಿ ಇಲಾಖೆ, ಪೊಲೀಸ್ ಅಧಿಕಾರಿ ಸಹಕಾರದೊಂದಿಗೆ ಆರೋಗ್ಯ ಇಲಾಖೆ ಜಂಟಿಯಾಗಿ ದಾಳಿ ನಡೆಸಿ ಪ್ರಕರಣ ದಾಖಲಿಸುವಂತೆ ಸೂಚಿಸಲಾಯಿತು.

ತಂಬಾಕು ಉತ್ಪನ್ನಗಳ ಮಾರಾಟ ಮಾಡುವ ಅಂಗಡಿ ಮಾಲಿಕರು ಕಡ್ಡಾಯವಾಗಿ ಮಹಾನಗರ ಪಾಲಿಕೆಯಿಂದ ರೂ. 500 ಭರಿಸಿ ಅನುಮತಿ ಪಡೆಯ ತಕ್ಕದ್ದು, ಇದರ ಬಗ್ಗೆ ಪಾಲಿಕೆ ಅಧಿಕಾರಿಗಳು, ವ್ಯಾಪಾರಸ್ಥರು ಜೊತೆ ಆರೋಗ್ಯ ಅಧಿಕಾರಿಗಳು ಸಭೆಯೊಂದರನ್ನು ನಡೆಸಿ ಹೆಚ್ಚಿನ ಜಾಗೃತಿ ಮೂಡಿಸತಕ್ಕದ್ದು ಎಂದರು.

ಬಾಲಕಾರ್ಮಿಕರನ್ನು ಕೆಲಸಕ್ಕೆ ನಿಯೋಜಿಸುವ ಬಾರ್ ರೆಸ್ಟೋರೆಂಟಗಳ ವಿರುದ್ಧ ಪ್ರಕರಣ ದಾಖಲಿಸಿ, ಪರವಾನಿಗೆ ರದ್ದುಗೊಳಿಸಲು ಕ್ರಮಕೈಗೊಳ್ಳುವಂತೆ ಅಬಕಾರಿ ಆಯುಕ್ತರಿಗೆ ಸೂಚನೆ ಕೊಡಲಾಗಿದೆ ಎಂದು ಡಿಸಿ ಹೇಳಿದರು. ಧಾರವಾಡ ಜಿಲ್ಲೆಯನ್ನು ರೇಬಿಸ್ ಮುಕ್ತ ನಗರವನ್ನಾಗಿಸಲು ಸಂಬಂಧಿಸಿದ ಅಧಿಕಾರಿಗಳು ಶ್ರಮಿಸಲಿಯೆಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ತಿಳಿಸಿದರು. ಜಿಲ್ಲಾಧಿಕಾರಿಗಳ ಸಭಾಂಗಣ ದಲ್ಲಿಂದು ರಾಷ್ಟ್ರೀಯ ರೇಬಿಸ್ ನಿಯಂತ್ರಣ ಕಾರ್ಯಕ್ರಮದ ಜಿಲ್ಲಾ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಾ ಜಿಲ್ಲೆಯಲ್ಲಿ ಕಳೆದೆರಡು ವರ್ಷಗಳಿಂದ ನಾಯಿ ಕಡಿತದಿಂದ ಯಾವುದೇ ರೇಬಿಸ್ ಸಾವು ಆಗಿಲ್ಲವಾದರು ನಾಯಿ ಕಡಿತ ಹಾಗೂ ಲಸಿಕೆ ಹಾಕಿಸುವಂತೆ ಅಧಿಕಾರಿಗಳು ಹೆಚ್ಚಿನ ಪ್ರಚಾರ, ಜಾಗೃತಿ ಆಂದೋಲನ ಹಮ್ಮಿಕೊಳ್ಳಬೇಕೆಂದರು.

ಜಿಲ್ಲೆಯಲ್ಲಿ ಪ್ರಸಕ್ತ ವರ್ಷದಲ್ಲಿ ಈ ವರೆಗೆ 3,046 ನಾಯಿಕಡಿತ ಪ್ರಕರಣಗಳು ದಾಖಲಾಗಿದೆ. ಹೆಚ್ಚಿನ ಲಸಿಕೆ ಕಾರ್ಯಕ್ರಮ ಹಮ್ಮಿಕೊಳ್ಳುವಂತೆ ಜಿಲ್ಲಾಧಿಕಾರಿಗಳು ತಿಳಿಸಿದರು. ಸಭೆಯಲ್ಲಿ ಜಿಲ್ಲಾ ಆರೋಗ್ಯಾಧಿಕಾರಿ ಡಾ. ಶಶಿ ಪಾಟೀಲ, ಆರ್ ಸಿ ಎಚ್ ಅಧಿಕಾರಿ ಡಾ. ಸುಜಾತಾ ಹಸವಿಮಠ, ಜಿಲ್ಲಾ ಸಮೀಕ್ಷಣಾಧಿಕಾರಿ ಡಾ. ಪರಶುರಾಮ ಎಸ್.ಕೆ., ಪಶುಸಂಗೋಪನೆ ಉಪ ನಿರ್ದೇಶಕ ಡಾ.ರವಿ ಸಾಲಿಗೌಡರ, ಅಬಕಾರಿ ಆಯುಕ್ತ ರಮೇಶ ಕುಮಾರ. ಎಚ್ ಸೇರಿದಂತೆ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

ಜೀವ ವೈವಿಧ್ಯತೆ ತಾಣ ಉಳಿಸಬೇಕಿದೆ

ಸಮಕಾಲೀನ ಬಿಕ್ಕಟ್ಟಿನ ಸಂದರ್ಭದಲ್ಲಿ ಗಾಂಧಿ ಚಿಂತನೆ ವಿಚಾರ ಸಂಕಿರಣದಲ್ಲಿ ಪರಿಸರವಾದಿ ಹೆಬ್ಬೀಕರ್ ಅಭಿಪ್ರಾಯ

ಧಾರವಾಡ: ಕರ್ನಾಟಕದ ಪಶ್ಚಿಮ ಘಟ್ಟಗಳು ವೈಶಿಷ್ಟ್ಯವಾದ ಜೀವ ವೈವಿಧ್ಯತೆಯನ್ನು ಹೊಂದಿದ್ದು, ಪರಿಸರವನ್ನು ಸಂರಕ್ಷಿಸಲು ಎಲ್ಲರೂ ಮುಂದಾಗಬೇಕು ಎಂದು ಚಿತ್ರನಟ, ಪರಿಸರವಾದಿ ಸುರೇಶ ಹೆಬ್ಬೀಕರ್ ಅಭಿಪ್ರಾಯಪಟ್ಟರು.

ಕರ್ನಾಟಕ ವಿಶ್ವವಿದ್ಯಾಲಯದ ಗಾಂಧೀ ಅಧ್ಯಯನ ವಿಭಾಗ ಮತ್ತು ಕವಿವಿ ಎನ್‌ಎಸ್‌ಎಸ್ ಕೋಶದ, ಧಾರವಾಡ ಪರಿಸರಕ್ಕಾಗಿ ನಾವು ಸಂಘಟನೆ ಸಹಯೋಗದಲ್ಲಿ, ಕವಿವಿ ಸೆನೆಟ್ ಸಭಾಂಗಣದಲ್ಲಿ ಆಯೋಜಿಸಿದ ಸಮಕಾಲೀನ ಬಿಕ್ಕಟ್ಟಿನ ಸಂದರ್ಭದಲ್ಲಿ ಗಾಂಧಿ ಚಿಂತನೆ ಎಂಬ ವಿಷಯದ ಕುರಿತು ರಾಜ್ಯ ಮಟ್ಟದ್ ವಿಚಾರ ಸಂಕಿರಣದ ಪ್ರಸಕ್ತ ಪರಿಸರದ ಬಿಕ್ಕಟುಗಳು ಗಾಂಧೀಜಿ ಅವರ ಸಮಕಾಲೀನ ದೃಷ್ಟಿಕೋನ ಎಂಬ ವಿಷಯದ ಕುರಿತು ತಾಂತ್ರಿಕ ಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಣೆಬೆನ್ನೂರಿನಿಂದ ಬೆಳಗಾವಿ ಮೂಲಕ ಹರಡಿರುವ ಪಶ್ಚಿಮ ಘಟ್ಟಗಳ ಕುರುಚಲು ಕಾಡು ಜಲ ಮೂಲ್ ಮತ್ತು ಅನೇಕ ಔಷಧೀಯ ಸಸ್ಯ ಮತ್ತು ಹುಲ್ಲುಗಾವಲು ಪ್ರದೇಶ, ಜೀವ ವೈವಿಧ್ಯತೆಗೆ ಹೆಸರುವಾಸಿಯಾಗಿದೆ ಎಂದರು.

ಮಾನವ ಅಪರಿಮಿತ ಆಸೆಗಳಿಂದ ಹೆಚ್ಚುತ್ತಿರುವ ಕೈಗಾರಿಕೆಗಳಿಂದ ಪರಿಸರದ ಮೇಲೆ ಅಗಾಧ ಪ್ರಮಾಣದಲ್ಲಿ ಪರಿಣಾಮ ಬೀರುತ್ತದೆ. ಅಭಿವೃದ್ಧಿ ಹೆಸರಿನಲ್ಲಿ ಪರಿಸರ ನಾಶ ಅಲ್ಲ. ಸಮರ್ಪಕವಾದ ಯೋಜನೆ ಮೂಲಕ ಸರಕಾರಗಳು ಜೀವ ಸಂಕುಲವನ್ನು ಕಾಪಾಡುವ ಹೊಣೆ ಇಂದಿನ ಯುವ ಸಮುದಾಯದ ಮೇಲೆ ಇದೆ ಎಂದರು. ಯುದ್ಧಗಳು ಕೂಡ ಪರಿಸರದ ಮೇಲೆ ತೀವ್ರವಾದ ಪ್ರಭಾವ ಬೀರುತ್ತದೆ. ಬ್ರಿಟಿಷರು ತಮ್ಮ ಕಾಲಘಟ್ಟದಲ್ಲೇ ಪಶ್ಚಿಮ ಘಟ್ಟಗಳ ನಾಶಕ್ಕೆ ಮುಂದಾಗಿದ್ದರು ಎಂದು ತಿಳಿಸಿದರು.

ಕಪ್ಪತಗುಡ್ಡದ ನಂದೀವೇರಿ ಸಂಸ್ಥಾನಮಠದ ಮಠದ ಶ್ರೀ ಶಿವಕುಮಾರ ಸ್ವಾಮೀಜಿ ಮಾತನಾಡಿ, 2009 ರಲ್ಲಿ ಕಪ್ಪತಗುಡ್ಡದಲ್ಲಿ ಗಣಿಗಾರಿಕೆ ತಡೆಯುವಲ್ಲಿ ಅಲ್ಲಿನ ಸ್ಥಳೀಯ ಜನರ ಜೊತೆಗೆ ಕೂಡಿ ಯಶಸ್ಸು ಕಂಡಿದ್ದು, ಇಂದು ಕಪ್ಪತಗುಡ್ಡ ಒಂದು ಸಂರಕ್ಷಿತ ಅರಣ್ಯಪ್ರದೇಶವಾಗಿದೆ. ಅನೇಕ ವಿವಿಧ ರೀತಿಯ ಔಷಧೀಯ ಸಸ್ಯಗಳನ್ನು ಒಳಗೊಂಡಿದೆ. ಇಂದಿನ ಯುವ ಸಮುದಾಯಕ್ಕೆ ಪರಿಸರ ಮತ್ತು ಜೀವವೈವಿಧ್ಯತೆ ಕುರಿತು ಅರಿವು ಮೂಡಿಸಬೇಕಾದ ಕಾರ್ಯ ಆಗಬೇಕು. ಊರು ಕಟ್ಟುವ ಕೆಲಸ ಆಗಬೇಕು. ಯುವಶಕ್ತಿಯ ಚಳುವಳಿ ಮೂಲಕ ಮನುಕುಲದ ಒಳಿತಿಗಾಗಿ ಎಲ್ಲರೂ ಕೂಡಿಕೊಂಡು ಪರಿಸರ ಜೀವ ವೈವಿಧ್ಯತೆಯನ್ನು ಕಾಪಾಡುವ ಕೆಲಸ ಮಾಡುವ ಅವಶ್ಯಕತೆ ಇದೆ ಎಂದರು.

ಕಾರ್ಯಕ್ರಮವನ್ನು ಕವಿವಿ ಪ್ರಭಾರ ಕುಲಪತಿ ಬಿ.ಎಮ್ .ಪಾಟೀಲ ಉದ್ಘಾಟಿಸಿ ಮಾತನಾಡಿ, ಪ್ರಸ್ತುತ ಹವಾಮಾನ ಬದಲಾವಣೆ ಆಗುತ್ತಿರುವ ಸಂದರ್ಭದಲ್ಲಿ ಸ್ಥಿರವಾದ ಹವಾಮಾನವನ್ನು ಕಾಪಾಡಲು ಪರಿಸರದ ರಕ್ಷಣೆ ಅಗತ್ಯವಾಗಿದೆ ಎಂದ ಅವರು ಇಂದಿನ ಯುವಕರ ಪರಿಸರವನ್ನು ಸಂರಕ್ಷಿಸುವ ಉಳಿಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ಪರಿಸರ ತಜ್ಞ ಹರ್ಷವರ್ಧನ ಶೀಲವಂತ ಮಾತನಾಡಿ, ಇಕೊ ವಿಲೇಜ್ ನ ಸಹಯೋಗದಲ್ಲಿ ಇಕೊ ಎಜ್ಯುಕೇಶನ್ ಪಾರ್ಕ್ ಮೂಲಕ ವಿದ್ಯಾರ್ಥಿಗಳಿಗೆ ಮತ್ತು ಯುವ ಸಮುದಾಯಕ್ಕೆ ಪರಿಸರದ ಮಹತ್ವವನ್ನು ತಿಳಿಸುವ ಪ್ರಕ್ರಿಯೆಯನ್ನು ಇಕೊ ವಿಲೇಜ್ ನಿಂದ ಮಾಡಲಾಗುತ್ತಿದೆ. ಇಂದು ಪ್ಲಾಸ್ಟಿಕ್ ಬಳಕೆ ನಿಯಂತ್ರಣ ಅಗತ್ಯವಿದೆ. ಅಳಿವಿನ ಅಂಚಿನಲ್ಲಿರುವ ಜೀವವೈವಿಧ್ಯತೆಯನ್ನು ಸಂರಕ್ಷಿಸುವುದು ಅಗತ್ಯವಾಗಿದೆ ಎಂದ ಅವರು ಇಂದು ವಿದ್ಯಾರ್ಥಿಗಳಿಗೆ ಮತ್ತು ಯುವ ಸಮುದಾಯಕ್ಕೆ ಪರಿಸರ ಸಂರಕ್ಷಣೆ ಮಾಡುವಲ್ಲಿನ ಮಾರ್ಗದರ್ಶನ ನೀಡುವುದು ಸೂಕ್ತವಾಗಿದೆ ಎಂದರು.

ಬೆಂಗಳೂರಿನ ಐಸೆಕ್ ಸಂಸ್ಥೆಯ ಪ್ರಾಧ್ಯಾಪಕ ಪ್ರೊ. ಗೋಪಾಲ ಕಡೆಕೋಡಿ ಮಾತನಾಡಿ, ಮಹಾತ್ಮ ಗಾಂಧೀಯವರ ತತ್ವಗಳಲ್ಲಿ ಪರಿಸರ ಕಾಳಜಿಯನ್ನು ಕಾಣುತ್ತವೆ. ಗಾಂಧಿಯವರು ಪರಿಸರದ ಉಳಿವಿಗಾಗಿ ಅನೇಕ ಕ್ರಮಗಳನ್ನು ಆಗಿನ ಸಮಯದಲ್ಲಿ ಚಳುವಳಿ ಮೂಲಕ್ ಕೈಗೊಂಡಿದ್ದರು ಎಂದರು.

ಗಾಂಧೀಜಿ ಜನ್ಮದಿನಾರಣೆಯ ಅಂಗವಾಗಿ ಆಯೋಜಿಸಿದ ಅಂತರ ಕಾಲೇಜು ಸಿದ್ದ ಭಾಷಣ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನು ಪೂರ್ವಿ.ಜೆ, ದ್ವೀತಿಯ ಪೂಜಾ ಚವ್ಹಾಣ, ಶಿವಾನಂದ ತೇಗೂರ ಮತ್ತು ಮೂರನೇ ಬಹುಮಾನ ವಿಜೇತ ಅರ್ಚನಾ ವೆಂಕಟೇಶ ಪಡೆದರು. ಕಾರ್ಯಕ್ರಮದಲ್ಲಿ ಡಾ.ಶಿವಾನಂದ ಶೆಟ್ಟರ, ಬಾಲಚಂದ್ರ, ಜಾಬಶೆಟ್ಟಿ, ಡಾ. ಎಂ.ಬಿ.ದಳಪತಿ, ಡಾ.ಎಸ್.ಬಿ.ಬಶೆಟ್ಟಿ, ಗಂಗಯ್ಯ ಗುಡ್ಡದಮಠ ಸೇರಿದಂತೆ ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಪ್ರಾಧ್ಯಾಪಕರು ವಿಚಾರ ಸಂಕಿರಣದಲ್ಲಿ ಹಾಜರಿದ್ದರು.

ಕ್ರೀಯಾಶೀಲ ಅಧ್ಯಯನದಿಂದ ಯಶಸ್ಸು ಸಾಧ್ಯ

ಗಜೇಂದ್ರಗಢ: ವಿದ್ಯಾರ್ಥಿಗಳ ಯಶಸ್ಸಿನಲ್ಲಿ ಪೋಷಕರ ಪಾತ್ರ ಪ್ರಾಮುಖ್ಯವಾದದ್ದು, ಈ ನಿಟ್ಟಿನಲ್ಲಿ ಕ್ರೀಯಾಶೀಲತೆ ಜತೆಗೆ ಏಕಾಗ್ರತಾ ಮನೋಭಾವನೆಯಿಂದ ಅಧ್ಯಯನ ಮಾಡಿ ಶಿಕ್ಷಣ ಪಡೆದಾಗ ಮಾತ್ರ ಬದುಕಿನಲ್ಲಿ ಯಶಸ್ಸು ಲಭಿಸಲು ಸಾಧ್ಯ ಎಂದು ಎಸ್‌ಎಸ್ ಕೆ ಪಂಚ ಟ್ರಸ್ಟ್ ಕಮೀಟಿ ಅಧ್ಯಕ್ಷ ವಿಶ್ವನಾಥಸಾ ಮೇಘರಾಜ ಹೇಳಿದರು.

ಸ್ಥಳೀಯ ಶ್ರೀ ಜಗದಂಬಾ ದೇಗುಲ ಸಮೂದಾಯ ಭವನದಲ್ಲಿ ಎಸ್‌ಎಸ್‌ಕೆ ಹಿತರಕ್ಷಣಾ ಸಮಿತಿ ವತಿಯಿಂದ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೀಡುವ 15ನೇ ವರ್ಷದ ಪ್ರತಿಭಾ ಪುರಸ್ಕಾರ ವಿತರಿಸಿ ಮಾತನಾಡಿ, ಆರ್ಥಿಕ, ಸಾಮಾಜಿಕ, ಶೈಕ್ಷಣಕವಾಗಿ ಹಿಂದುಳಿದ ಎಸ್‌ಎಸ್‌ಕೆ ಸಮಾಜ ಭಾಂಧವರು ಶೈಕ್ಷಣಿಕವಾಗಿ ಪ್ರಭಲರಾಗಲು ಮುಂದಾಗಬೇಕಾಗಿದೆ. ಪಾಲಕರು ಮಕ್ಕಳನ್ನು ವಿದ್ಯಾವಂತರನ್ನಾಗಿಸಿ ಸಮಾಜದಲ್ಲಿ ಉತ್ತಮ ಪ್ರಜೆಯಾಗಿ ಹೊರಹೊಮ್ಮಿಸಿ ಸಮುದಾಯದ ಕೀರ್ತಿ ಹೆಚ್ಚಿಸಿ ಎಂದ ಅವರು ಎಸ್‌ಎಸ್‌ಕೆ ಸಮಾಜ ಭಾಂದವರು ತಮ್ಮ ದೈನಂದಿನ ವ್ಯವಹಾರ ಜತೆಗೆ ಮಕ್ಕಳ ವಿದ್ಯಾಬ್ಯಾಸದ ಕಡೆಗೆ ಗಮನಹರಿಸಿ, ವಿದ್ಯೆಯಿಂದ ಮಾತ್ರ ಒಳ್ಳೆಯ ನಾಗರಿಕರಾಗಲು ಸಾಧ್ಯ.

ಶೈಕ್ಷಣಿಕ ಪ್ರಗತಿಯಲ್ಲಿ ಸಮಾಜ ಅಭಿವೃದ್ಧಿ ಅಡಗಿದೆ ಎಂಬುದರಿತು ಮಕ್ಕಳನ್ನು ಅಂಗಡಿಯಲ್ಲಿ ದುಡಿಮೆಗೆ ಹಚ್ಚದೇ ವಿದ್ಯಾಭ್ಯಾಸಕ್ಕಾಗಿ ಶಾಲೆಗೆ ಕಳಿಸಲು ಪಾಲಕರು ಮುಂದಾಗಬೇಕು ಎಂದರು.

ಇದೇ ಸಂದರ್ಭದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಬಳಿಕ ಎಸ್‌ಎಸ್‌ಕೆ ಮಿತ್ರ ಮಂಡಳಿ ವತಿಯಿಂದ ಸಮಾಜದ ಯುವಕರಿಗೆ ಲವ್ ಜಿಹಾದ್ ತಡೆಗಟ್ಟುವ ಕುರಿತು ಧರ್ಮ ಜಾಗೃತಿ ಪ್ರಮಾಣ ವಚನ ಬೋಧಿಸಲಾಯಿತು.

ಸುಭಾಸ ರಾಯಬಾಗಿ ಅಧ್ಯಕ್ಷತೆ ವಹಿಸಿದ್ದರು. ಜಮುನಾಬಾಯಿ ಖೋಡೆ, ಸುರೇಶ ರಂಗ್ರೇಜಿ, ಬಾಲಚಂದ್ರಸಾ ರಾಯಬಾಗಿ, ಭಾಸ್ಕರಸಾ ಶಿಂಗ್ರಿ, ಲಕ್ಷ್ಮಣಸಾ ರಂಗ್ರೇಜಿ, ಗಣೇಶ ರಾಯಬಾಗಿ, ಮೋಹನಸಾ ಶಿಂಗ್ರಿ, ನಾಗೇಶ ಶಿಂಗ್ರಿ, ಜಯಶ್ರೀಬಾಯಿ ರಂಗ್ರೇಜಿ, ರಾಘವೇಂದ್ರ ರಂಗ್ರೇಜಿ, ರಾಕೇಶ ಪವಾರ, ಸರಸ್ವತಿಬಾಯಿ ಶಿಂಗ್ರಿ, ಶಾರದಾಬಾಯಿ ರಾಯಬಾಗಿ ಸೇರಿದಂತೆ ಇನ್ನಿತರರು ಇದ್ದರು.

ನರೇಗಾ; ಬೇಡಿಕೆ ಸಂಗ್ರಹಣೆ ಅಭಿಯಾನ

ಗಜೇಂದ್ರಗಢ: ನರೇಗಾ ಯೋಜನೆಯ 2025-26ನೇ ಸಾಲಿನ ಕಾರ್ಮಿಕ ಆಯವ್ಯಯ ಹಾಗೂ ಕ್ರಿಯಾಯೋಜನೆ ತಯಾರಿಸಲು ಬೇಡಿಕೆ ಸಂಗ್ರಹಣೆ ಅಭಿಯಾನ ಹಮ್ಮಿಕೊಳ್ಳಲಾಗಿದ್ದು, ವೈಯಕ್ತಿ ಕಾಮಗಾರಿಗಳ ಬೇಡಿಕೆ ಸಲ್ಲಿಸಬೇಕು ಎಂದು ತಾಪಂ ಐಇಸಿ ಸಂಯೋಜಕ ಮಂಜುನಾಥ ಹಳ್ಳದ ತಿಳಿಸಿದರು.

ತಾಲೂಕಿನ ನಿಡಗುಂದಿ ಗ್ರಾಮ ಪಂಚಾಯತಿಯಲ್ಲಿ ವೈಯಕ್ತಿಕ ಕಾಮಗಾರಿಗಳ ವಿತರಣಾ ಅಭಿಯಾನ ಹಾಗೂ ಉದ್ಯೋಗ ಖಾತರಿ ನಡಿಗೆ ಸಬಲತೆಯೆಡೆಗೆ ಹಾಗೂ ಮನೆ ಮನೆಗೆ ಭೇಟಿ ಅಭಿಯಾನ ಉದ್ದೇಶಿಸಿ ಮಾತನಾಡಿದ ಅವರು, ನರೇಗಾ ಯೋಜನೆಯಲ್ಲಿ ಸಮುದಾಯ ಕಾಮಗಾರಿಯ ಜೊತೆ ವೈಯಕ್ತಿಕ ಕಾಮಗಾರಿಗಳಾದ ತೋಟಗಾರಿಕೆ ಬೆಳೆಯಾದ ಪೇರಲ, ಹಿಪ್ಪುನೇರಳೆ, ಡ್ರ್ಯಾಗನ್, ಗುಲಾಬಿ, ಮಲ್ಲಿಗೆ, ಪಪ್ಪಾಯಿ, ನಿಂಬೆ, ಸೀತಾಫಲ, ಮಾವು, ಅಪ್ಪೋಟಾ, ಸೀಬೆ, ದಾಳಳಿಂಬೆ, ಬಾಳೆ, ತೆಂಗು, ದ್ರಾಕ್ಷಿ, ವೀಳೆದೆಲೆ, ನೆಲ್ಲಿ, ಹುಣಸೆ, ಕರೀಬೇವು, ನುಗ್ಗೆ, ಕೃಷಿ ಇಲಾಖೆಯಿಂದ ಕೃಷಿಹೊಂಡ, ರೈತರ ಹೊಲದಲ್ಲಿ ಇಂಗು ಗುಂಡಿ ನಿರ್ಮಾಣ, ಕೋಳಿಶೆಡ್, ಬಚ್ಚಲು ಗುಂಡಿ, ಕುರಿ/ಮೇಕೆ ಶೆಡ್ ಹಾಗೂ ರೇಷ್ಮೆ, ಅರಣ್ಯ ಸೇರಿದಂತೆ ಅನುಷ್ಠಾನ ಇಲಾಖೆಯಡಿ ಇತರೆ ಕಾಮಗಾರಿಗಳನ್ನು ಮಾಡಿಕೊಳ್ಳಲು ಅವಕಾಶವಿದೆ. ರೈತರು ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ನರೇಗಾ ಯೋಜನೆಯಡಿ ವೈಯಕ್ತಿಕ ಕಾಮಗಾರಿಗಳ ಬೇಡಿಕೆ ಸಲ್ಲಿಸಲು ಬಹಳ ಹೆಸರನ್ನು ನೋಂದಾಯಿಸಲು (ಬೇಡಿಕೆ)ಯನ್ನು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಆನ್‌ಲೈನ್ ಮೂಲಕ ಬೇಡಿಕೆ ಸಲ್ಲಿಸಬಹುದು ಎಂದರು. ಗ್ರಾಪಂ ಸದಸ್ಯ ಬಾಬುಸಾಬ ಮುಲ್ಲಾ ಮಾತನಾಡಿದರು. ಗ್ರಾಪಂ ಸದಸ್ಯರಾದ ಅಂದಪ್ಪ ಚಲವಾದಿ, ಫಕ್ಕೀರಪ್ಪ ಕುಕನೂರು, ಬಿಎಫ್‌ಟಿ ಚಂದ್ರಕಾಂತ ಲಮಾಣಿ, ಗ್ರಾಮ ಕಾಯಕ ಮಿತ್ರ ಗಂಗವ್ವ ಗಡಾದ, ಗ್ರಾಪಂ ಸಿಬ್ಬಂದಿ ಇದ್ದರು.

ಸಮಾಚಾರ ಸಣ್ಣದಲ್ಲ

ಜಾತಿ ನಿಂದನೆ: ಅರ್ಚಕನ ಸೆರೆ

ತುಮಕೂರು: ದೇವಸ್ಥಾನದ ಹುಂಡಿ ಮುಟ್ಟಿದ್ದ ದೇಗುಲದ ಭದ್ರತಾ ಸಿಬ್ಬಂದಿಯ ಜಾತಿನಿಂದನೆ ಮಾಡಿದ ಆರೋಪದ ಮೇರೆಗೆ ದೇವಸ್ಥಾನದ ಅರ್ಚಕರೊಬ್ಬರ ಬಂಧನವಾಗಿದೆ. ತುಮಕೂರು ಜಿಲ್ಲೆ ಕುಣಿಗಲ್ ಠಾಣಾ ವ್ಯಾಪ್ತಿಯ ಬೆಟ್ಟದ ರಂಗ ಸ್ವಾಮಿ ದೇವಸ್ಥಾನ ದಲ್ಲಿ ಈ ಘಟನೆ ನಡೆದಿದೆ. ಅರ್ಚಕ ರಾಕೇಶ್ ವಿರುದ್ಧ ದೇಗುಲದ ಭದ್ರತಾ ಸಿಬ್ಬಂದಿ ಪಾರ್ಥರಾಜು ಎಂಬುವವರು ದೂರು ನೀಡಿದ್ದರು. ಪರಿಶಿಷ್ಟರ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಅಡಿ ಕುಣಿಗಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅದೇ ದಿನ ಮಧ್ಯಾಹ್ನ ರಾಕೇಶ್ ಕೋಲಿನಿಂದ ತನ್ನ ಮೇಲೆ ಹಲ್ಲೆ ಮಾಡಿದ್ದಾರೆ ಎಂದು ಭದ್ರತಾ ಸಿಬ್ಬಂದಿ ದೂರಿನಲ್ಲಿ ತಿಳಿಸಿದ್ದಾರೆ. ಭದ್ರತಾ ಸಿಬ್ಬಂದಿಗೆ ಹೊಡೆಯುತ್ತಿದ್ದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಇಲ್ಲಿ ನೀನು ಕುಳಿತುಕೊಳ್ಳುವಂತಿಲ್ಲ. ಇದು ಸರಕಾರದ ದೇವಾಲಯ. ಇಲ್ಲಿಂದ ಹೋಗು ಎಂದು ಅರ್ಚಕ ಹೇಳಿರುವುದು ವೀಡಿಯೋದಲ್ಲಿ ಸೆರೆಯಾಗಿದೆ. ಈ ಆಧಾರದ ಮೇಲೆ ಅರ್ಚಕನನ್ನು ಕುಣಿಗಲ್ ಪೊಲೀಸರು ಬಂಧಿಸಿದ್ದಾರೆ.

ಪ್ರತಿಪಕ್ಷಕ್ಕೂ ಬಿಸಿತುಪ್ಪವಾದ ಜಾತಿ ಗಣತಿ

ಒಪ್ಪಿದರೆ ಮೇಲ್ಜಾತಿಗಳ ವಿರೋಧ ಕಟ್ಟಿಕೊಳ್ಳಬೇಕಾದ ಆತಂಕ | ಲಿಂಗಾಯತರನ್ನು ಎದುರು ಹಾಕಿಕೊಳ್ಳಲು ಬಿಜೆಪಿ ಸಿದ್ಧವಿಲ್ಲ

ಬೆಂಗಳೂರು: ಜಾತಿ ಗಣತಿ ಜಾರಿಗೆ ಆಡಳಿತ ಪಕ್ಷ ಕಾಂಗ್ರೆಸ್‌ನಲ್ಲಿರುವ ಗೊಂದಲ, ಆಂತಕಕ್ಕಿಂತ ಹೆಚ್ಚಾಗಿ ಪ್ರತಿಪಕ್ಷಗಳಲ್ಲಿಯೂ ಇದ್ದು, ಇದನ್ನು ಒಪ್ಪಬೇಕೇ? ಒಪ್ಪಬಾರದೇ ಎನ್ನುವ ಗೊಂದಲದಲ್ಲಿ ನಾಯಕರಿದ್ದಾರೆ.

ಕಾಂತಾರಾಜು ಅವರು ಸಿದ್ಧಪಡಿಸಿದ್ದ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಗಣತಿಗೆ ಒಕ್ಕಲಿಗ, ಲಿಂಗಾಯತ ಸಮುದಾಯಗಳ ಪ್ರಬಲ ವಿರೋಧವಿದೆ. ಈ ಕಾರಣಕ್ಕಾಗಿಯೇ ಅಧಿಕಾರದಲ್ಲಿದ್ದ ಸಮಯದಲ್ಲಿ ಬಿಜೆಪಿ, ಜೆಡಿಎಸ್ ಎರಡೂ ಪಕ್ಷಗಳು ಈ ವರದಿಯನ್ನು ಸಂಪುಟಕ್ಕೆ ತರಲಿಲ್ಲ. ಆದರೀಗ ಸಿದ್ದರಾಮಯ್ಯ ಅವರು ಜಾತಿ ಗಣತಿಯನ್ನು ಸಂಪುಟ ಸಭೆಯಲ್ಲಿ ಮಂಡಿಸಿ, ಜಾರಿಗೊಳಿಸುವ ಲೆಕ್ಕಾಚಾರದಲ್ಲಿದ್ದಾರೆ.

ಪಕ್ಷದ ಹೈಕಮಾಂಡ್ ಸಲಹೆಯಂತೆ ಜಾತಿ ಗಣತಿ ಮಂಡಿಸುವ ಲೆಕ್ಕಾಚಾರದಲ್ಲಿ ಸಿದ್ದರಾಮಯ್ಯ ಅವರಿದ್ದರೂ, ಸಚಿವ ಸಂಪುಟದಲ್ಲಿಯೇ ಇರುವ ಲಿಂಗಾಯತ, ಒಕ್ಕಲಿಗ ಸಮುದಾಯದವರು ಒಪ್ಪಿಗೆ ನೀಡಿಲ್ಲ. ಆದರೆ ಅಹಿಂದ ಸಮುದಾಯದ ನಾಯಕರು ಈ ವರದಿಯನ್ನು ಮಂಡಿಸಬೇಕು ಎನ್ನುವ ಪಟ್ಟನ್ನು ಹಿಡಿದಿದ್ದಾರೆ. ಆದ್ದರಿಂದ ಜಾತಿ ಗಣತಿಯನ್ನು ಜಾರಿಗೊಳಿಸುವ ಬಗ್ಗೆ ಆಡಳಿತ ಪಕ್ಷದಲ್ಲಿ ಗೊಂದಲವಿದೆ.

ಆದರೀಗ ಈ ವರದಿಯ ಜಾರಿಗೆ ಸರಕಾರ ಮುಂದಾದರೆ ಒಪ್ಪಬೇಕೋ ? ವಿರೋಧಿಸಬೇಕೋ ಎನ್ನುವ ಗೊಂದಲದಲ್ಲಿ ಬಿಜೆಪಿ-ಜೆಡಿಎಸ್ ಸಿಲುಕಿವೆ ಎನ್ನುವ ಮಾತುಗಳು ಕೇಳಿಬರುತ್ತಿದೆ. ಬಿಜೆಪಿಗೆ ಲಿಂಗಾಯತ ಹಾಗೂ ಜೆಡಿಎಸ್‌ಗೆ ಒಕ್ಕಲಿಗ ಸಮುದಾಯದ ಮತಗಳೇ ನಿರ್ಣಾಯಕ. ಈ ಎರಡು ಸಮುದಾಯಗಳು ಜಾತಿ ಗಣತಿಯನ್ನು ವಿರೋಧಿಸುತ್ತಿವೆ. ಆದರೆ ಇದಕ್ಕೆ ಪ್ರತಿಯಾಗಿ ಅಹಿಂದ ಸಮುದಾಯಗಳು ಜಾತಿ ಗಣತಿ ಮಂಡನೆಗೆ ಆಗ್ರಹಿಸುತ್ತಿವೆ. ಆದ್ದರಿಂದ ಈ ವಿಷಯದಲ್ಲಿ ಯಾವುದೇ ತೀರ್ಮಾನ ಕೈಗೊಂಡರೂ ಪಕ್ಷಕ್ಕೆ ಹೊಡೆತ ಬೀಳುತ್ತದೆ ಎನ್ನುವ ಆತಂಕದಲ್ಲಿ ಪ್ರತಿಪಕ್ಷಗಳಿವೆ.

ಕಾಂಗ್ರೆಸ್‌ನಲ್ಲಿ ಯಾವುದೇ ಗೊಂದಲವಿಲ್ಲ: ಪ್ರಿಯಾಂಕ್

ಜಾತಿ ಗಣತಿ ಮಂಡಿಸುವ ವಿಷಯದಲ್ಲಿ ಕಾಂಗ್ರೆಸ್‌ನಲ್ಲಿ ಯಾವುದೇ ಗೊಂದಲವಿಲ್ಲ ಎಂದು ಸಚಿವ ಪ್ರಿಯಾಂಕ್ ಖರ್ಗೆ ಸ್ಪಷ್ಟಪಡಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಾತಿ ಗಣತಿ ವಿಚಾರವಾಗಿ ಪಕ್ಷದಲ್ಲಿ ಗೊಂದಲವಿಲ್ಲ. ವರದಿಯಲ್ಲಿ ಏನಿದೆಯೆಂದು ಯಾರೂ ನೋಡಿಲ್ಲ. ಸುಮ್ಮನೆ ಊಹಾಪೋಹ ಸರಿಯಲ್ಲ ಎಂದು ಅಭಿಪ್ರಾಯಪಟ್ಟರು. ರಹಸ್ಯ ಸಭೆಯ ಬಗ್ಗೆ ಪ್ರತಿಕ್ರಿಯಿಸಿ ಮುಂಚೆಯಿಂದಲೂ ನಾವೆಲ್ಲಾ ಭೇಟಿಯಾಗು ತ್ತಿದ್ದೆವು. ಈಗ ಮಾಧ್ಯಮದವರು ವಿಷಯ ತಗೋತಿದ್ದೀರಿ. ನಾನು ಹೋಗಿ ಖರ್ಗೆ ಅವರನ್ನು ಭೇಟಿ ಮಾಡಿದರೆ ಅದಕ್ಕೊಂದು ಹೇಳುತ್ತೀರಾ. ವರಿಷ್ಠರನ್ನು ಭೇಟಿ ಮಾಡಿದರೆ ತಪ್ಪೇನಿದೆ? ವಾರಕ್ಕೆ ಒಂದು ಸಲ ನಾನು ಗೃಹ ಸಚಿವ ಪರಮೇಶ್ವರ ಅವರ ಮನೇಲಿ ಇರುತ್ತೇನೆ. ನಮ್ಮ ಮನೆ ಹಿಂದೆಯೇ ಅವರ ಮನೆ ಇದೆ. ಸಹಜವಾಗಿ ಭೇಟಿ ಮಾಡುತ್ತೀವೆ ಎಂದು ಸತೀಶ್ ಜಾರಕಿಹೊಳಿ ಹೇಳಿದ್ದಾರೆ. ದಿನೇಶ್ ಗುಂಡೂರಾವ್ ಅವರನ್ನು ನಾನು ಭೇಟಿ ಮಾಡ್ತೀನಿ. ಈ ಸಲ ಹೆಚ್ಚು ಫೋಕಸ್ ಮಾಡ್ತಿದ್ದೀರಿ ಅಷ್ಟೇ ಎಂದು ಹೇಳಿದರು.

ಪ್ರತಿಪಕ್ಷಗಳಿಗೆ ಸಮಸ್ಯೆ: ಗೃಹ ಸಚಿವ ಡಾ.ಜಿ.ಪರಮೇಶ್ವರ

ಇದೇ ವಿಷಯವಾಗಿ ಮಾತನಾಡಿರುವ ಗೃಹ ಸಚಿವ ಡಾ.ಜಿ.ಪರಮೇಶ್ವರ, ಜಾತಿ ಜನಗಣತಿ ವರದಿಯನ್ನು ಶೀತಲೀಕರಣದಲ್ಲಿಟ್ಟಿದ್ದಾರೆ ಎಂದು ಪ್ರತಿಪಕ್ಷದ ನಾಯಕರು ಟೀಕೆ ಮಾಡಿದರು. ಈಗ ವರದಿಯ ಕುರಿತು ಚರ್ಚಿಸಲು ಮುಂದಾಗುತ್ತಿದ್ದಂತೆ ಅವರಿಗೆ ನುಂಗಲಾರದ ಬಿಸಿ ತುಪ್ಪವಾಗುತ್ತಿದ್ದು, ಗದ್ದಲ ಎಬ್ಬಿಸುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ರಾಜ್ಯದಲ್ಲಿ ಪರಿಶಿಷ್ಟರು, ಹಿಂದುಳಿದ ವರ್ಗ, ಅಲ್ಪಸಂಖ್ಯಾತರು ಹೆಚ್ಚಿದ್ದಾರೆ ಎಂದು ಎಲ್ಲರಿಗೂ ಗೊತ್ತಿದೆ. ಅದರ ಆಧಾರದ ಮೇಲೆ ಮುಂದಿನ ದಿನಗಳಲ್ಲಿ ಕಾರ್ಯಕ್ರಮಗಳನ್ನು ರೂಪಿಸಬೇಕಿದೆ. ಅದಕ್ಕಾಗಿ ಸಂಪುಟದಲ್ಲಿ ವರದಿಯನ್ನು ಚರ್ಚಿಸಲು ನಿರ್ಧರಿಸಲಾಗಿದೆ. ಇದೇ ತಿಂಗಳ 18ರಂದು ನಡೆಯಲಿರುವ ಸಭೆಯಲ್ಲಿ ವರದಿ ಚರ್ಚೆಯಾಗಲಿದೆ ಎಂದು ಹೇಳಿದರು.

ಸಿಎಂ ಸ್ಥಾನ ಕಳಕೊಳ್ಳುವ ಭೀತಿಯಿಂದ ಜಾತಿಗಣತಿಯ ಬ್ರಹ್ಮಾಸ್ತ್ರ: ವಿಜಯೇಂದ್ರ

ಕೈ ಮುಖಂಡರ ವಿರೋಧದ ನಡುವೆ ಜಾತಿಗಣತಿ ಮಂಡನೆ

ಬೆಂಗಳೂರು: ಮುಖ್ಯಮಂತ್ರಿ ಸ್ಥಾನದಲ್ಲಿ ಬಹಳ ದಿನ ಉಳಿಯಲು ಸಾಧ್ಯವಿಲ್ಲ ಎಂದು ಸಿದ್ದರಾಮಯ್ಯನವರಿಗೆ ಮನವರಿಕೆ ಆಗಿರುವುದರಿಂದ ಜಾತಿಗಣತಿಯ ಬ್ರಹ್ಮಾಸ್ತ್ರ ಪ್ರಯೋಗಿಸಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಮಲ್ಲೇಶ್ವರದ ಬಿಜೆಪಿ ಕಾರ್ಯಾಲಯ ದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಿದ್ದರಾಮಯ್ಯ ಅವರು ಅಪರಾಧಿ ಸ್ಥಾನದಲ್ಲಿದ್ದು, ಬಹಳ ದಿನ ಈ ಭಂಡತನ ನಡೆಯದು ಎಂದು ಅವರಿಗೆ ಗೊತ್ತಾಗಿದೆ. ಹೀಗಾಗಿ ಭೀತಿಯಿಂದ ಜಾತಿಯ ಬ್ರಹ್ಮಾಸ್ತ್ರ ಚಲಾವಣೆ ಮಾಡುವ ಪ್ರಯತ್ನದಲ್ಲಿದ್ದಾರೆ ಎಂದರು.

ರಾಜ್ಯ ಸರಕಾರಕ್ಕೆ ಜಾತಿ ಗಣತಿ ಮಾಡಲು ಅವಕಾಶ ಇದೆಯೇ ಎಂಬುದು ಮೊದಲ ಯಕ್ಷ ಪ್ರಶ್ನೆ. ಐದು ವರ್ಷ ಮುಖ್ಯಮಂತ್ರಿ ಯಾಗಿದ್ದಾಗ 165 ಕೋಟಿ ರು. ಖರ್ಚು ಮಾಡಿ ಈ ವರದಿ ತಯಾರಿಸಲಾಗಿದೆ. ಅದರ ಲೋಪದೋಷದ ಕುರಿತು ಅವರ ಪಕ್ಷದ ಹಿರಿಯರೇ ಮಾತನಾಡುತ್ತಿದ್ದಾರೆ. ಸಿಎಂ ಸ್ಥಾನ ಕಳಕೊಳ್ಳುವ ಆತಂಕವೇ ? ಯಾಕೆ ಆತುರಾತುರವಾಗಿ ಇದನ್ನು ಅನುಷ್ಠಾನಕ್ಕೆ ತರಲು ಪ್ರಯತ್ನ ಮಾಡುತ್ತಿದ್ದೀರಿ ಎಂದು ಪ್ರಶ್ನಿಸಿದರು.

ಜಾತಿ ಗಣತಿ ತರಾತುರಿಯಲ್ಲಿ ಕ್ಯಾಬಿನೆಟ್ ನಲ್ಲಿ ಮಂಡಿಸಲು ಮುಂದಾಗಿದ್ದಾರೆ. ಈ ವರದಿ ಅವೈಜ್ಞಾನಿಕವಾಗಿದೆ ಎಂದು ಹಲವಾರು ಬಾರಿ ಕಾಂಗ್ರೆಸ್ ಮುಖಂಡರೇ ಹೇಳಿದ್ದಾರೆ. ಹಿಂದುಳಿದ ಸಮಾಜ, ಪರಿಶಿಷ್ಟ ಜಾತಿ, ಪಂಗಡಗಳು, ಎಲ್ಲ ಸಮುದಾಯಗಳಿಗೆ ಆರ್ಥಿಕ, ಶೈಕ್ಷಣಿಕ, ಸಾಮಾಜಿಕವಾಗಿ ಶಕ್ತಿ ಕೊಡಬೇಕು. ಅವರನ್ನು ಮುಂಚೂಣಿಯಲ್ಲಿ ತರಬೇಕೆಂಬುದು ಬಿಜೆಪಿ ನಿಲುವು. ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ದೇಶದ, ರಾಜ್ಯದ ಸೌಲಭ್ಯ ಸಿಗಬೇಕೆಂಬ ಆಶಯವುಳ್ಳ ಅಂತ್ಯೋದಯದ ಪರಿಕಲ್ಪನೆಯ ಮೂಲ ಉದ್ದೇಶ ಬಿಜೆಪಿ ಹೊಂದಿದೆ ಎಂದರು.

ಸಮುದಾಯ ಗಳಿಗೆ ನ್ಯಾಯ ಸಿಗಬೇಕೆಂಬ ಬದ್ಧತೆ ಬಿಜೆಪಿಗೆ ಇದೆ. ಅದರ ಬಗ್ಗೆ ಗೊಂದಲ ಬೇಡ. ಆದರೆ, ಇದನ್ನು ರಾಜಕೀಯ ದಾಳವಾಗಿ ಬಳಸಿ ತಮ್ಮ ಕುರ್ಚಿ ಉಳಿಸಿಕೊಳ್ಳಲು ಹೊರಟಿದ್ದಾರೆ. ಇದು ಖಂಡಿತ ಸಾಧ್ಯವಾಗುವುದಿಲ್ಲ. ಇದರ ಹಿಂದೆ ರಾಜಕೀಯ ಷಡ್ಯಂತ್ರ, ಕುತಂತ್ರ ಇರುವುದಾಗಿ ಕಾಂಗ್ರೆಸ್ಸಿನವರೇ ಹೇಳುತ್ತಿದ್ದಾರೆ.

-ಬಿ.ವೈ.ವಿಜಯೇಂದ್ರ
ಬಿಜೆಪಿ ರಾಜ್ಯಾಧ್ಯಕ್ಷ

ಬಿಜೆಪಿಗೆ ಹರಿವಾಣ, ಅಬ್ದುಲ್ಲಾ ಮತ್ತೆ ಸುಲ್ತಾನ

← ಮೊದಲಪುಟದಿಂದ

ಸೈನಿ ಮತ್ತೊಮ್ಮೆ ಸಿಎಂ: 90 ಸದಸ್ಯಬಲದ ಹರಿಯಾಣ ವಿಧಾನಸಭೆಯಲ್ಲಿ ಬಿಜೆಪಿ 48 ಸ್ಥಾನಗಳಲ್ಲಿ ಜಯ ಗಳಿಸಿದ್ದರೆ, ಕಾಂಗ್ರೆಸ್‌ಗೆ 37 ಸ್ಥಾನ ಲಭಿಸಿದೆ. ಇತರರು 9 ರಲ್ಲಿ ಗೆದ್ದಿದ್ದಾರೆ. ಸರಳ ಬಹುಮತಕ್ಕೆ 46 ಸ್ಥಾನಗಳು ಅಗತ್ಯವಿದ್ದು, ಗೆಲುವಿನ ಸೂತ್ರಧಾರ ನಯಾಬ್ ಸಿಂಗ್ ಸೈನಿ ಮತ್ತೊಮ್ಮೆ ಮುಖ್ಯಮಂತ್ರಿಯಾಗುವುದು ಖಚಿತವಾಗಿದೆ. ಬಿಜೆಪಿ ವರಿಷ್ಠರು ಸೈನಿ ಬಗ್ಗೆ ಒಲವು ಸೂಚಿಸಿದ್ದಾರೆ.

ಜಮ್ಮು-ಕಾಶ್ಮೀರದ 90 ಸ್ಥಾನಗಳಲ್ಲಿ ಎನ್‌ಸಿ ಮತ್ತು ಕಾಂಗ್ರೆಸ್ 49 ರಲ್ಲಿ ಗೆದ್ದು ಸರಕಾರ ರಚನೆಗೆ ಸಜ್ಜಾಗಿವೆ. ಸರಳ ಬಹುಮತಕ್ಕೆ ಮೂರು ಮತಗಳು ಕಡಿಮೆಯಾಗಿರುವುದರಿಂದ ಫರೂಖ್ ಪಕ್ಷ ಕಾಂಗ್ರೆಸ್ ಜೊತೆ ಸೇರಿ ಸಮ್ಮಿಶ್ರ ಸರಕಾರ ರಚಿಸಬೇಕಾಗಿದೆ. ರಾಜ್ಯದಲ್ಲಿ 370ನೇ ವಿಧಿ ಮರುಸ್ಥಾಪಿಸುವುದಾಗಿ ಪ್ರಚಾರ ನಡೆಸಿದ ನ್ಯಾಷನಲ್ ಕಾನ್ಫರೆನ್ಸ್ ಕಳೆದ ಬಾರಿಗಿಂತ 28 ಹೆಚ್ಚು ಸ್ಥಾನ ಗಳಿಸಿ ಎಲ್ಲ ಸಮೀಕ್ಷೆಗಳ ಲೆಕ್ಕಾಚಾರವನ್ನು ತಲೆಕೆಳಗಾಗಿಸಿದೆ. ತಮ್ಮ ಪುತ್ರ ಒಮರ್ ಅಬ್ದುಲ್ಲಾ ಅವರೇ ಮುಂದಿನ ಸಿಎಂ ಎಂದು ಫರೂಖ್ ಅಬ್ದುಲ್ಲಾ ಈಗಾಗಲೇ ಪ್ರಕಟಿಸಿದ್ದು, ಇದರಿಂದ ಮುಖ್ಯಮಂತ್ರಿ ಅಭ್ಯರ್ಥಿ ಸಮಸ್ಯೆ ಎದುರಾಗದು.

ಹರಿಯಾಣ-ಗೆದ್ದರೂ ಬಿಜೆಪಿಗೆ ಕಾಂಗ್ರೆಸ್‌ನಷ್ಟೇ ಮತ: ಹರಿಯಾಣದಲ್ಲಿ ಬಿಜೆಪಿ ಮೂರನೇ ಬಾರಿಗೆ ಅಧಿಕಾರಕ್ಕೆ ಮರಳಿದ್ದರೂ ಅದರ ಮತ ಗಳಿಕೆ ಕಾಂಗ್ರೆಸ್‌ನಷ್ಟೇ ಇರುವುದು ಗಮನಾರ್ಹ. ಕಳೆದ ಚುನಾವಣೆಯಲ್ಲಿ ಶೇ. 36.49 ರಷ್ಟು ಮತಗಳಿಸಿದ್ದ ಬಿಜೆಪಿ ಈ ಬಾರಿ ಅದನ್ನು ಶೆ. 39.89ಕ್ಕೆ ಹೆಚ್ಚಿಸಿಕೊಂಡಿದೆ. ಆದರೆ ಕಾಂಗ್ರೆಸ್ ತನ್ನ ಮತಗಳಿಕೆಯನ್ನು ಗಣನೀಯವಾಗಿ ಹೆಚ್ಚಿಸಿಕೊಳ್ಳುವ ಮೂಲಕ ಬಿಜೆಪಿಗೆ ಸಡ್ಡುಹೊಡೆದಿದೆ. ಕಳೆದ ಬಾರಿ ಶೇ. 28.08 ರಷ್ಟು ಮತ ಪಡೆದಿದ್ದ ಕೈ ಪಕ್ಷ ಈ ಬಾರಿ 39.09 ರಷ್ಟು ಬೆಂಬಲ ಗಿಟ್ಟಿಸಿದೆ. ಅಂದರೆ ಬಿಜೆಪಿ ಮತ್ತು ಕಾಂಗ್ರೆಸ್ ನಡುವಣ ಗೆಲುವಿನ ಅಂತರ ಶೇ.0.80 ರಷ್ಟು ಎಂಬುದನ್ನು ಗಮನಿಸಬೇಕು.

ಕಾಶ್ಮೀರದಲ್ಲಿ ಖಾತೆ ತೆರೆದ ಆಪ್: ಜಮ್ಮು-ಕಾಶ್ಮೀರ ವಿಧಾನಸಭೆ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷ (ಎಎಪಿ) ಮೊದಲ ಬಾರಿಗೆ ಖಾತೆ ತೆರೆದಿದೆ. ಮುಸ್ಲಿಂ ಪ್ರಾಬಲ್ಯದ ದೋಡಾ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿ ಮೆಹರಾಜ್ ಮಲಿಕ್ ಬಿಜೆಪಿಯ ಗಜಯ್ ಸಿಂಗ್ ರಾಣಾರನ್ನು ಸೋಲಿಸಿದ್ದಾರೆ. ಈ ಮೂಲಕ ದೆಹಲಿ, ಪಂಜಾಬ್, ಗೋವಾ, ಗುಜರಾತ್ ನಂತರ ಜಮ್ಮು-ಕಾಶ್ಮೀರದಲ್ಲಿಯೂ ಆಪ್‌ನ ಹೆಜ್ಜೆಗುರುತು ಮೂಡಿದಂತಾಗಿದೆ. 2014 ರ ಚುನಾವಣೆಯಲ್ಲಿ ಈ ಕ್ಷೇತ್ರದಲ್ಲಿ ಬಿಜೆಪಿ ಗೆದ್ದಿತ್ತು.

ಕಾಶ್ಮೀರ: ಸೋತರೂ ಮತಗಳಿಕೆ ಹೆಚ್ಚು

ಕಣಿವೆ ರಾಜ್ಯದಲ್ಲಿ ಅಧಿಕಾರ ಹಿಡಿಯಲು ವಿಫಲವಾದರೂ ಬಿಜೆಪಿ ಇತರ ಪಕ್ಷಗಳಿಗಿಂತ ಹೆಚ್ಚು ಮತ ಗಳಿಸಿರುವುದು ವಿಶೇಷ. ನ್ಯಾಷನಲ್ ಕಾನ್ಫರೆನ್ಸ್ ಶೇ.23.43 ರಷ್ಟು ಮತಗಳಿಸಿದ್ದರೆ, ಕಾಂಗ್ರೆಸ್ ಶೇ. 11.97 ಮತಗಳಿಗೆ ತೃಪ್ತಿಪಟ್ಟುಕೊಂಡಿದೆ. ಆದರೆ 2014ರಲ್ಲಿ ಶೇ.22 ರಷ್ಟು ಮತಗಳಿಸಿದ್ದ ಬಿಜೆಪಿ ಈ ಬಾರಿ 25.64 ರಷ್ಟು ಮತಗಳಿಸಿ ಇತರ ಪಕ್ಷಗಳನ್ನು ಹಿಂದಿಕ್ಕಿದೆ. ಎನ್‌ಸಿ ಮತ್ತು ಕಾಂಗ್ರೆಸ್‌ನ ಒಟ್ಟಾರೆ ಮತಗಳಿಗೆ ಶೇ.35 ರಷ್ಟಾಗಿದೆ. ಆದರೆ ಕಳೆದ ಬಾರಿ ಶೇ. 22 ರಷ್ಟು ಮತ ಪಡೆದಿದ್ದ ಮೆಹಬೂಬಾ ಮುಫ್ತಿ ನೇತೃತ್ವದ ಪಿಡಿಪಿ ಈಬಾರಿ ವಿಫಲವಾಗಿದ್ದು, ಕೇವಲ ಶೇ. 8.87 ರಷ್ಟು ಮತ ಗಳಿಸಿದೆ.

...ನಮ್ಮ ಶಾಸಕ; ಪ್ರದೀಪರಿಂದ ಅಭಿಯಾನ

← ಮೊದಲಪುಟದಿಂದ

ವೈಯಕ್ತಿಕವಾಗಿ ಸಾವಿರಾರು ಮಂದಿಗೆ ಸಹಾಯ: ಪ್ರದೀಪ್ ಈಶ್ವರ್ ಶಾಸಕರಾಗಿ ಆಯ್ಕೆಯಾಗುವ ಮೊದಲು ಚಿಕ್ಕಬಳ್ಳಾಪುರ ಭಾಗದಲ್ಲಿ ತಮ್ಮದೇ ಆದ ರೀತಿಯಲ್ಲಿ ಸಮಾಜಸೇವೆ ಯನ್ನು ಮಾಡಿಕೊಂಡು ಬಂದಿದ್ದರು. ಶಾಸಕರಾಗುತ್ತಿದ್ದಂತೆ ಹಲವು ವಿಭಿನ್ನ ಯೋಜನೆಗಳನ್ನು ಕೈಗೆತ್ತಿಕೊಂಡರು. ಸರಕಾರದಿಂದ ಬರಬೇಕಾಗಿರುವ ಯೋಜನೆಗಳೊಂದಿಗೆ ಕ್ಷೇತ್ರದ ಜನರಿಗೆ ಅನುಕೂಲವಾಗುವ ಹಲವಾರು ಯೋಜನೆಗಳನ್ನು ವೈಯಕ್ತಿಕ ನೆಲೆಗಟ್ಟಿನಲ್ಲಿ ಆರಂಭಿಸಿದ್ದಾರೆ. ಪ್ರಮುಖ ವಾಗಿ ತಮ್ಮ ಪೋಷಕರ ನೆನಪಲ್ಲಿ 'ಅಮ್ಮ' ಆಂಬ್ಯುಲೆನ್ ಸೇವೆ, ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ವರಮಹಾಲಕ್ಷ್ಮಿ ಹಬ್ಬಕ್ಕೆ ಇಡೀ ಕ್ಷೇತ್ರದ ಮಹಿಳೆಯರಿಗೆ ಸೀರೆಯ ಉಡುಗೊರೆ, ಅನಾಥ ಮಕ್ಕಳಿಗೆ ಒಂದು ಲಕ್ಷ ರು. ನೆರವು ಸೇರಿದಂತೆ ಹಲವು ರೀತಿಯಲ್ಲಿ ವೈಯುಕ್ತಿಕ ಯೋಜನೆಗಳನ್ನು ಹಾಕಿಕೊಂಡಿದ್ದಾರೆ.

ಅತ್ಯಾಚಾರ ದೂರು

← ಮೊದಲಪುಟದಿಂದ

2022ರ ಮಾರ್ಚ್-ಏಪ್ರಿಲ್‌ನಲ್ಲಿ ವಿನಯ್ ಕುಲಕರ್ಣಿ ಬೆಳಗಾವಿಗೆ ಹೋಗಿದ್ದಾಗ ನನ್ನನ್ನು ಅಲ್ಲಿನ ಸರ್ಕ್ಯೂಟ್ ಹೌಸ್‌ಗೆ ಬರಲು ಹೇಳಿದ್ದರು. ತುರ್ತು ಕೆಲಸ ಇರಬಹುದು ಎಂದು ನಾನು ಹಾವೇರಿಯಿಂದ ಬೆಳಗಾವಿಗೆ ಕಾರಿನಲ್ಲಿ ಪ್ರಯಾಣ ಮಾಡಿದ್ದೆ. ಬಳಿಕ ರಾತ್ರಿ ರೂಮ್‌ಗೆ ಕರೆಸಿಕೊಂಡು ನನ್ನನ್ನು ತಬ್ಬಿದ್ದರು ಎಂದು ದೂರಿದ್ದಾಳೆ.

ಅತ್ಯಾಚಾರ : ಬಳಿಕ ಈ ಕಿರುಕುಳ ಹೆಚ್ಚಾಗಿ 2022ರ ಆ.24 ರಂದು ತಮ್ಮನ್ನು ಕಾರಿನಲ್ಲಿ ಕರೆದೊಯ್ದು ದೇವನಹಳ್ಳಿ ಸಮೀಪ ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಅತ್ಯಾಚಾರ ನಡೆಸಿ ದಬ್ಬಾಳಿಕೆ ಮಾಡಿದ್ದರು ಎಂದು ಮಹಿಳೆ ದೂರು ನೀಡಿದ್ದಾರೆ. ಆದರೆ ಇದೊಂದು ಸುಳ್ಳು ದೂರು ಎಂದಿರುವ ವಿನಯ್, ಮಂಜುಳಾ, ಖಾಸಗಿ ಚಾನಲ್‌ನ ರಾಕೇಶ್ ಶೆಟ್ಟಿ ವಿರುದ್ಧ ದೂರು ದಾಖಲಿಸಿದ್ದಾರೆ.

ರೆಡ್ಡಿ ಕಾರು ವಶಕ್ಕೆ ಪಡೆದ ಪೊಲೀಸರು

ಗಂಗಾವತಿ: ಸಿಎಂ ಸಿದ್ದರಾಮಯ್ಯ ಅವರು ಇತ್ತೀಚೆಗೆ ಗಂಗಾವತಿ ಮಾರ್ಗವಾಗಿ ಬಳ್ಳಾರಿಗೆ ತೆರಳು ವಾಗ ಅವರ ಬೆಂಗಾವಲು ವಾಹನ ಗಳ ವಿರುದ್ಧ ದಿಕ್ಕಿಗೆ ಶಾಸಕ ಜನಾರ್ದನ ರೆಡ್ಡಿಯ ಕಾರುಗಳು ಸಾಗಿದ ಪ್ರಕರಣಕ್ಕೆ ಸಂಬಂಧಿಸಿ ದಂತೆ ಪೊಲೀಸರು ರೆಡ್ಡಿ ಅವರ 1 ಹಾಗೂ ಬೆಂಬಲಿಗರ 2 ಕಾರು ಗಳನ್ನು ಮಂಗಳವಾರ ವಶಕ್ಕೆ ಪಡೆದಿದ್ದಾರೆ. ಝೀರೊ ಟ್ರಾಫಿಕ್ ನಿಯಮ ಉಲ್ಲಂಘಿಸಿದ್ದರಿಂದ ಪೊಲೀಸರು ರೆಡ್ಡಿಯ ಮೂವರು ಕಾರು ಚಾಲ ಕರ ವಿರುದ್ಧ ಪ್ರಕರಣ ದಾಖಲಿಸಿ ದ್ದಾರೆ. ಆದರೆ ಎಫ್ ಐಆರ್‌ನಲ್ಲಿ ಯಾರ ಹೆಸರನ್ನೂ ಉಲ್ಲೇಖಿಸಿಲ್ಲ. ನಿಯಮ ಉಲ್ಲಂ ಘಿಸಿದ ವಾಹನ ಗಳನ್ನು ಇಲ್ಲಿನ ಸಂಚಾರ ಪೊಲೀಸ್ ಠಾಣೆಗೆ ತರಲಾಗಿದ್ದು ಪೊಲೀಸರು ಪಂಚನಾಮೆ ಮಾಡಿದರು.

ಘಟನೆ ಕುರಿತು ವಿಡಿಯೊ ಹೇಳಿಕೆ ನೀಡಿ ರುವ ಜನಾರ್ದನ ರೆಡ್ಡಿ ಬಳ್ಳಾರಿಯ ಮನೆಯಲ್ಲಿ ಅಂದು ಹೋಮ ಆಯೋಜಿಸಲಾ ಗಿತ್ತು. ತುರ್ತಾಗಿ ಆ ಕಾರ್ಯ ಕ್ರಮಕ್ಕೆ ಹೋಗಬೇಕಿದ್ದರೂ ಸಂಚಾರ ದಟ್ಟಣೆಯಲ್ಲಿಯೇ ಅರ್ಧಗಂಟೆ ಕಾದಿದ್ದೇನೆ. ಯಾರೇ ಸಿಎಂ ಆದರೂ ಜನರಿಗೆ ತೊಂದರೆ ಕೊಡಬಾರದು ಎಂದಿದ್ದಾರೆ.

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ,
ಆಣೆಕಟ್ಟು ವಿಭಾಗ, ಆಲಮಟ್ಟಿ. ತಾ: ಬ.ಬಾಗೇವಾಡಿ, ಜಿ: ವಿಜಯಪುರ.
ದೂರವಾಣಿ:08426-281027.ಇಮೇಲ್:dam_division@rediffmail.com
ಸಂಖ್ಯೆ/ಕೃ.ಭಾ.ಜ.ನಿ.ನಿ/ಆವಿಆ/ಶಾ.ಕೊ/2024-25/2135 ದಿನಾಂಕ:07.10.2024

ಶಾರ್ಟ್ ಟರ್ಮ್ ಕೊಟೇಶನ್

ಈ ವಿಭಾಗದ ಅಡಿಯಲ್ಲಿ ಬರುವ ಉರ್ದು ಶಾಲೆ ಹಾಗೂ ಕನ್ನಡ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ಅನುಕೂಲವಾಗಲು ಸ್ಮಾರ್ಟ್ ಬೋರ್ಡ್‌ಗಳ ಟಚ್‌ಸ್ಕ್ರಿನ್ ತಂತ್ರಜ್ಞಾನವನ್ನು ಬಳಸಿಕೊಂಡು ತರಗತಿಯನ್ನು ಸ್ಮಾರ್ಟ್ ಕ್ಲಾಸ್‌ರೂಮ್ ಆಗಿ ಪರಿವರ್ತಿಸಲು Intractive Smart Board Conchology ಅಳವಡಿಸಲು Registered Authorized Dealer/KPWD Contractor ರಿಂದ ದರ ಪಟ್ಟಿಗಳನ್ನು ಈ ಕಛೇರಿಗೆ ದಿನಾಂಕ: 14.10.2024ರ ಸಾಯಂಕಾಲ 17.00 ಘಂಟೆಯೊಳಗೆ ಸಲ್ಲಿಸಲು ಸೂಚಿಸಲಾಗಿದೆ.
ಸದರಿ ಕಾಮಗಾರಿಯ ಹೆಚ್ಚಿನ ಮಾಹಿತಿಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೃಭಾಜನಿನಿ, ಅಣೆಕಟ್ಟು ಉಪ ವಿಭಾಗ-2, ಆಲಮಟ್ಟಿ ಇವರ ಕಛೇರಿಯನ್ನು ಸಂಪರ್ಕಿಸಿ ಪಡೆದುಕೊಳ್ಳಬಹುದಾಗಿದೆ. ದರಪಟ್ಟಿ ಕವರಗಳ ಮೇಲೆ ಸ್ಪಷ್ಟವಾಗಿ ದರಪಟ್ಟಿ ಎಂದು ಮೊಹರಬಂದ ಹಾಕಿರಬೇಕು. ಯಾವುದೇ ದರಪಟ್ಟಿ ಸ್ವೀಕರಿಸುವ ಮತ್ತು ರದ್ದುಪಡಿಸುವ ಹಕ್ಕು ಈ ಕಛೇರಿಗೆ ಇರುತ್ತದೆ.
ಸಂಪರ್ಕಿಸುವ ಇ-ಮೇಲ್ ವಿಳಾಸ: 1) dam_division@rediffmail.Com
2) aeekbjnldsd2@gmail.com
ಸಂಪರ್ಕಿಸುವ ದೂರವಾಣಿ ಸಂಖ್ಯೆ: Kumaresh Hanchinal (AE): 9986788799.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ.
ವಾಸಾಸಂಇ/ವಿಜಯಪುರ/306/ಕೆಎಸ್‌ಎಂಸಿಎ/2024-25

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.
ನಂ:ಬೆಂಅಪ್ರಾ/ನಯೋಸ/CLU-132/1582/2024-25 ದಿನಾಂಕ:08.10.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ಕೈಗಾರಿಕೆ (ಹೈಟೆಕ್) ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀಮತಿ ಶಾಂತ	ದಕ್ಷಿಣ	ಬೇಗೂರು	ದೊಡ್ಡ ನಾಗಮಂಗಲ	78/1A	1-30	ಕೈಗಾರಿಕೆ (ಹೈಟೆಕ್) ವಲಯ	ವಸತಿ
					78/1B	1-29		
ಒಟ್ಟು						3-19		

ಷರಾ: ಅರ್ಜಿದಾರರು ಬೆಂಗಳೂರು ನಗರ, ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೊಡ್ಡನಾಗಮಂಗಲ ಗ್ರಾಮದ ಸರ್ವೆ 78/1ಎ ರಲ್ಲಿ 01ಎ 30ಗು ಮತ್ತು 78/1ಬಿ ರಲ್ಲಿ 01ಎ 29ಗು ಜಮೀನನ್ನು ಕೈಗಾರಿಕೆಗೆ ಬಳಸಲು ಸಾಧ್ಯವಿರುವುದಿಲ್ಲ. ಜಮೀನಿನ ಸುತ್ತಮುತ್ತ ವಾಸದ ಉದ್ದೇಶಕ್ಕಾಗಿ ಬೇಡಿಕೆ ಇದ್ದು, ಪ್ರಶ್ನಿತ ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ನಿವಾಸಿಗಳಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುತ್ತದೆ. ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಸಕ್ರಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಯೋಜನಾಬದ್ಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಯಾಗಿರುತ್ತದೆ ಮತ್ತು ಸದರಿ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಪ್ರಶ್ನಿತ ಜಮೀನುಗಳನ್ನು 'ಕೈಗಾರಿಕೆ (ಹೈಟೆಕ್) ವಲಯ' ದಿಂದ 'ವಸತಿ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಜಿಲ್ಲಾ ಶಸ್ತ್ರಚಿಕಿತ್ಸಕರ ಕಛೇರಿ, ಜಿಲ್ಲಾ ಆಸ್ಪತ್ರೆ,
ಬಿ.ಹೆಚ್.ರಸ್ತೆ, ತುಮಕೂರು-572101
ದೂರವಾಣಿ :0816-2257404, ಸ.ಆ.ಅ-2251250 ಇ-ಮೇಲ್-dstumkur@gmail.com
ಸಂಖ್ಯೆ:ಜಿಆತು/ಟ್ರಾಮಕೇರ್ ಸೆಂಟರ್/09/2024-25 ದಿನಾಂಕ: 30.09.2024

ನೇರ ಸಂದರ್ಶನ ಅಧಿಸೂಚನೆ

ವಿಷಯ: ಜಿಲ್ಲಾ ಆಸ್ಪತ್ರೆ ತುಮಕೂರು ಇಲ್ಲಿನ ಆವರಣದಲ್ಲಿರುವ ಟ್ರಾಮಾಕೇರ್ ಸೆಂಟರ್‌ಗೆ ಗುತ್ತಿಗೆ ಆಧಾರದ ಮೇಲೆ ವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಿಕೊಳ್ಳುವ ಬಗ್ಗೆ.
ಜಿಲ್ಲಾ ಆಸ್ಪತ್ರೆ ತುಮಕೂರು ಇಲ್ಲಿನ ಆವರಣದಲ್ಲಿರುವ ಟ್ರಾಮಾಕೇರ್ ಸೆಂಟರ್‌ಗೆ ಈ ಕೆಳಕಂಡಂತಿರುವ ವೈದ್ಯಾಧಿಕಾರಿಗಳ ಹುದ್ದೆಗಳಿಗೆ ನೇರ ಸಂದರ್ಶನವನ್ನು ದಿ:14.10.2024 ರಂದು ಬೆಳಿಗ್ಗೆ 11.00ಗಂಟೆಗೆ ಜಿಲ್ಲಾ ಆಸ್ಪತ್ರೆಯ ಸಭಾಂಗಣದಲ್ಲಿ ನೇರ ಸಂದರ್ಶನವನ್ನು ಏರ್ಪಡಿಸಿದ್ದು, ಆಸಕ್ತ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಯ ಎಲ್ಲಾ ಮೂಲ ದಾಖಲಾತಿಗಳು/ ಪ್ರಮಾಣ ಪತ್ರಗಳು ಹಾಗೂ ಹಾಗೂ ಒಂದು ಜೆರಾಕ್ಸ್ ಪ್ರತಿಗಳೊಂದಿಗೆ ನೇರ ಸಂದರ್ಶನಕ್ಕೆ ಹಾಜರಾಗಲು ಸೂಚಿಸಿದೆ.

ಕ್ರ.ಸಂ	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ
1	ರೇಡಿಯಾಲಜಿಸ್ಟ್	02
2	ಅರವಳಿಕೆ ತಜ್ಞರು	01
3	ಕೀಲು ಮತ್ತು ಮೂಳೆ ತಜ್ಞರು	02
4	ತುರ್ತು ಚಿಕಿತ್ಸಾ ವಿಭಾಗ ವೈದ್ಯಾಧಿಕಾರಿಗಳು	04

* ಹೆಚ್ಚಿನ ಮಾಹಿತಿ/ವಿವರಗಳನ್ನು ಆಸ್ಪತ್ರೆಯ ಆಡಳಿತ ಕಛೇರಿಯಲ್ಲಿ ಕಛೇರಿ ಅವಧಿಯಲ್ಲಿ ಪಡೆಯಬಹುದು.

ಸಹಿ/- ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ತುಮಕೂರು
DIPR/TUM/354/KSMCA/2024-25

ಲೋಕೋಪಯೋಗಿ ಇಲಾಖೆ ವಿಭಾಗ ಮಧುಗಿರಿ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ
ಸಂಖ್ಯೆಕಾಇಂ/ಲೋಇವಿ/ಮಧು:ಸಇಂ-2/ಟೆಂಡರ್/2024-25/1021 ದಿ: 05.10.2024

ಟೆಂಡರ್ ಪ್ರಕಟಣೆ ಸಂಖ್ಯೆ:16/2024-25
(ಕೆಪಿಪಿಪಿ ಪೋರ್ಟಲ್‌ಮೂಲಕ) ದ್ವಿ ಲಕೋಟೆ ಟೆಂಡರ್

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-3 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ರಲ್ಲಿ ಅರ್ಹ (ಸಿವಿಲ್) ಗುತ್ತಿಗೆದಾರ ರುಗಳಿಂದ ಲೋಕೋಪಯೋಗಿ ಇಲಾಖೆ, ಪಾವಗಡ ಉಪ ವಿಭಾಗ ವ್ಯಾಪ್ತಿಯಲ್ಲಿನ ಕಾಮಗಾರಿಗಳಿಗೆ ಟೆಂಡರ್‌ನ್ನು KPPP Portal ಮೂಲಕ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ https://kppp.karnataka.gov.in ಹಾಗೂ ಕೆಳ ಸಹಿದಾರರ ಕಛೇರಿ ಕೆಲಸ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂ: 08137- 283336.
ಟೆಂಡರ್‌ಗಿಟ್ಟ ಸರಿಸುಮಾರು ಮೊಬಲಗು ರೂ.66.11ಲಕ್ಷ ಗಳವರೆಗೆ. ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 20.10.2024 ಸಂಜೆ 4.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 21.10.2024ರ ಸಂಜೆ 4.15ಗಂಟೆಯ ನಂತರ. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 23.10.2024 ರ ಸಂಜೆ 4.15 ಗಂಟೆಯ ನಂತರ. ವಿಚಾರಣೆ : ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ : 18.10.2024 ಸಂಜೆ 4.00 ಗಂಟೆಗೆ ವರೆಗೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ.
DIPR/TUM/361/KSMCA/2024-25

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಅಧೀನಕ್ಕೆ ಒಳಪಟ್ಟಿದೆ)
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಕೃಭಾಜನಿನಿ, ಐಬಿಸಿ, ನಿಮಪೋ ವಿಭಾಗ, ರಾಂಪೂರ (ಪ.ಅ).
ದೂರವಾಣಿ ಸಂಖ್ಯೆ: 08488-224328, ಇ-ಮೇಲ್:kbjnleerampur@gmail.com.
ಸಂ:ಕೃಭಾಜನಿನಿ/ಐಬಿಸಿ/ನಿಮಪೋ/ವಿರಾಂ/ಪಿಬಿ-2/ಟೆಂಡರ್-ಹೊರಗುತ್ತಿಗೆ/2024-25/1168 ದಿನಾಂಕ:07.10.2024

ತಿದ್ದುಪಡಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಮಾತ್ರ)

ಉಲ್ಲೇಖ: ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: ಕೃಭಾಜನಿನಿ/ಐಬಿಸಿ/ನಿಮಪೋ/ವಿರಾಂ/ಪಿಬಿ-2/2024-25/1158 ದಿನಾಂಕ:04.10.2024
ಉಲ್ಲೇಖಿತ ಅಲ್ಪಾವಧಿ ಟೆಂಡರ್ ಅಧಿಸೂಚನೆಗೆ ಸಂಬಂಧಿಸಿದಂತೆ, ಕಾರ್ಯಪಾಲಕ ಅಭಿಯಂತರರು, ಕೃಭಾಜನಿನಿ ಐಬಿಸಿ ನಿಮಪೋ ವಿಭಾಗ, ರಾಂಪೂರ (ಪ.ಅ) ಇವರು ಹೊರಗುತ್ತಿಗೆ ನೌಕರರ ನಿಯೋಜನೆ ಸೇವೆ ಇಂಡೆಂಟ ಸಂ-SE0063 ರ ಬಿಡ್ ಡಾಕ್ಯುಮೆಂಟನಲ್ಲಿ ತಾಂತ್ರಿಕ ಕಾರಣಗಳಿಂದ ಈ ಕೆಳಕಂಡಂತೆ ತಿದ್ದುಪಡಿಯನ್ನು ಮಾಡಲಾಗಿದೆ.

ANNEXURE-H at Page No 33 of Bid Document	Printed as	Corrected as
Col 2 of Table	Service Fee as Lumpsum per Manpower / Personnel per month	Service Fee as Lumpsum per Manpower / Personnel per day
Col 3 of Table	Contract period (in months) 12	Contract period (in days) 365
Note (4)	The service fee has to be quoted in terms of whole Rupee (Not in paise from Rs. 1/- (minimum) to Rs. 2198/- (maximum) in col 2 (per person per month) (Service fee includes GST)	The service fee has to be quoted in terms of whole Rupee (Not in paise from Rs. 1/- (minimum) to Rs. 72/- (maximum) in col 2 (per person per day) (Service fee includes GST)
Note(9)	ಕಾಲಂ (2) ರಲ್ಲಿ ರೂ. 1/- (ಕನಿಷ್ಟ) ದಿಂದ ರೂ. 2198/- (ಗರಿಷ್ಟ) ರವರೆಗೆ ಮಾತ್ರ ಸರ್ವಿಸ್ ಚಾರ್ಜ (ಪೂರ್ಣ ರೂಪಾಯಿಗಳಲ್ಲಿ) ಕೋಟ್ ಮಾಡಬೇಕು. ಪೈಸೆಗಳಲ್ಲಿ ಅಥವಾ ಶೇಕಡಾದಲ್ಲಿ ನಮೂದಿಸಿದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು (Service fee includes GST)	ಕಾಲಂ (2) ರಲ್ಲಿ ರೂ. 1/- (ಕನಿಷ್ಟ) ದಿಂದ ರೂ. 72/- (ಗರಿಷ್ಟ) ರವರೆಗೆ ಮಾತ್ರ ಸರ್ವಿಸ್ ಚಾರ್ಜ (ಪೂರ್ಣ ರೂಪಾಯಿಗಳಲ್ಲಿ) ಕೋಟ್ ಮಾಡಬೇಕು. ಪೈಸೆಗಳಲ್ಲಿ ಅಥವಾ ಶೇಕಡಾದಲ್ಲಿ ನಮೂದಿಸಿದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು (Service fee includes GST)

ಇನ್ನುಳಿದಂತೆ ಯಾವುದೇ ಬದಲಾವಣೆಗಳಿರುವುದಿಲ್ಲ. ಹೆಚ್ಚಿನ ವಿವರಗಳಿಗಾಗಿ 'kttp:www.kppp.karnataka.gov.in ಅಂತರ್ಜಾಲದಲ್ಲಿ ತಾಂತ್ರಿಕ ವಿವರಗಳನ್ನು ಪಡೆಯಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಐಬಿಸಿ ನಿಮಪೋ ವಿಭಾಗ, ರಾಂಪೂರ (ಪಿಎ)
ವಾಸಾಸಂಇ/ವಿಜಯಪುರ/304/ಕೆಎಸ್‌ಎಂಸಿಎ/2024-25

ನಗರಸಭಾ ಕಾರ್ಯಾಲಯ, ಹರಿಹರ-577601
ಫೋ:08192-244266 ka.harihar.cmc@gmail.com
ನಂ.ನಸಹ/ತಾಂತ್ರಿಕ/ಸಿಆರ್- 02/2024-25 ದಿನಾಂಕ: 05-10-2024

ಟೆಂಡರ್ ಪ್ರಕಟಣೆ

2022-23ನೇ ಸಾಲಿನ 15ನೇ ಹಣಕಾಸು ಅನುದಾನದಡಿ ಒಟ್ಟು06 ಪ್ಯಾಕೇಜ್ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾವರದರ್ಶಕತೆ ಆದೇಶ-1999-2000ರ Act 2000ರ ನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ-1 & 2ರ ನಿಯಮದನ್ವಯ ಈ ಕೆಳಗಿನಂತೆ ಇಂಡೆಂಟ್ ನಂಬರ್ ನೀಡಲಾದ ಕಾಮಗಾರಿಗಳನ್ನು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು ಇಚ್ಛೆಯುಳ್ಳ ಗುತ್ತಿಗೆದಾರರು ಈ ಕೆಳಗಿನ ಕಾಮಗಾರಿಗಳಿಗೆ ತಮ್ಮ ದರಗಳನ್ನು KPP ಪೋರ್ಟಲ್ ಮುಖಾಂತರ ಸಲ್ಲಿಸಲು ಕೋರಿದೆ. ಗುತ್ತಿಗೆದಾರರು ತಮಗೆ ಅನ್ವಯಿಸುವ ಟೆಂಡರ್ ದಾಖಲೆಗಳನ್ನು https://kppp.karnataka.gov.inವೆಬ್‌ಸೈಟ್ ಮೂಲಕ ಪಡೆದುಕೊಂಡು ಭರ್ತಿ ಮಾಡಿದ ಟೆಂಡರ್‌ಗಳನ್ನು e-procurement ವೆಬ್‌ಸೈಟ್ ಮೂಲಕ ಸಲ್ಲಿಸಬಹುದು ಹಾಗೂ ಹೆಚ್ಚಿನ ವಮಾಹಿತಿಯುನ್ನು ತಾಂತ್ರಿಕ ಶಾಖೆ ನಗರಸಭೆ, ಹರಿಹರ ಇವರಿಂದ ಪಡೆಯಬಹುದಾಗಿದೆ.
1 ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ದಿನಾಂಕ: 19-10-2024 ರಂದು ಸಾಯಂಕಾಲ 05-30 ಗಂಟೆಯವರೆಗೆ
2 ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ ದಿನಾಂಕ: 21-10-2024 ರಂದು ಬೆಳಿಗ್ಗೆ 11-00 ಗಂಟೆಗೆ
ಪ್ಯಾಕೇಜ್ ಸಂಖ್ಯೆ:-Package 01 ಇಂಡೆಂಟ್ ನಂಬರ್:- DMA/2024-25/OW/WORK_INDENT 30075 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ):-17.70
ಪ್ಯಾಕೇಜ್ ಸಂಖ್ಯೆ:-Package 02 ಇಂಡೆಂಟ್ ನಂಬರ್:- DMA/2024-25/OW/WORK_INDENT 30087 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ):-17.80
ಪ್ಯಾಕೇಜ್ ಸಂಖ್ಯೆ:-Package 03 ಇಂಡೆಂಟ್ ನಂಬರ್:- DMA/2024-25/OW/WORK_INDENT 30098 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ):-16.80
ಪ್ಯಾಕೇಜ್ ಸಂಖ್ಯೆ:-Package 04 ಇಂಡೆಂಟ್ ನಂಬರ್:- DMA/2024-25/OW/WORK_INDENT 30101 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ):-20.00
ಪ್ಯಾಕೇಜ್ ಸಂಖ್ಯೆ:-Package 05 ಇಂಡೆಂಟ್ ನಂಬರ್:-DMA/2024-25/OW/WORK_INDENT 30120 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ):-15.90
ಪ್ಯಾಕೇಜ್ ಸಂಖ್ಯೆ:-Package 06 ಇಂಡೆಂಟ್ ನಂಬರ್:-DMA/2024-25/OW/WORK_INDENT 30112 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ):-16.80

ಸಹಿ/- ಅಧ್ಯಕ್ಷರು ನಗರಸಭೆ ಹರಿಹರ
ಸಹಿ/-ಪೌರಾಯುಕ್ತರು, ನಗರಸಭೆ, ಹರಿಹರ.
ವಾಸಾಇ/ಡಿವಿಜಿ/401/ಕೆಎಸ್‌ಎಂಸಿಎ/2024-25

ನಗರಸಭಾ ಕಾರ್ಯಾಲಯ, ಚಳ್ಳಕೆರೆ.(ಚಿತ್ರದುರ್ಗ ಜಿಲ್ಲೆ)
ಫೋ ನಂ. 08195-250958 ka.challakere.cmc@gmail.com
ಸಂಖ್ಯೆ: ಚ.ನ/ತಾಂತ್ರಿಕ/2024-25 ಎಸ್.ಎಫ್.ಸಿ, ನ.ನಿ/ಟೆಂಡರ್-01/ಸಿ.ಆರ್ 02/ 2024-25 ದಿನಾಂಕ: 05/10/2024

ಟೆಂಡರ್ ಪ್ರಕಟಣೆ

ಚಳ್ಳಕೆರೆ ನಗರಸಭಾ ವ್ಯಾಪ್ತಿಯಲ್ಲಿ 2024-25ನೇ ಸಾಲಿನ ಎಸ್.ಎಫ್.ಸಿ ಬಂಡವಾಳ ಸೃಜನೆಗಾಗಿ ಅನುದಾನದಲ್ಲಿ, 2022-23ನೇ ಸಾಲಿನ ನಗರಸಭಾ ಶೇ 7.25 ಅನುದಾನದಲ್ಲಿ, 2023-24 ನೇ ಸಾಲಿನ ನಗರಸಭಾ ಟಿ.ಎಸ್.ಪಿ ಅನುದಾನ ಮತ್ತು 2024-25ನೇ ಸಾಲಿನ ನಗರಸಭಾ ನಿಧಿ ಅನುದಾನದಡಿಯಲ್ಲಿ ಮಂಜೂರಾಗಿರುವ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸುವುದಕ್ಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮ 1999 ಮತ್ತು ನಿಯಮಾವಳಿ-2000, ಹಾಗೂ ಆರ್ಥಿಕ ಇಲಾಖೆಯ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ KW-1/KW-2/KC-8 ರಂತೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಏಜೆನ್ಸಿದಾರರು/ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ನಲ್ಲಿ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಿಸಲಾಗಿರುತ್ತದೆ ಹಾಗೂ ದಿನಾಂಕ: 25/10/2024 ರ ಸಂಜೆ 4.30 ಗಂಟೆವರೆಗೆ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ನಲ್ಲಿ ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದಾಗಿರುತ್ತದೆ.
www.challakerecity.mrc.gov.in ಮತ್ತು https://kppp.karnataka.gov.in ಹಾಗೂ ಕಛೇರಿಯ ಸೂಚನಾ ಫಲಕದಲ್ಲಿ ಹಾಕಲಾಗಿರುರುತ್ತದೆ. ಮತ್ತು ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯಲ್ಲಿ ಪಡೆಯಬಹುದು.
INDENT NUMBER:- (1) DMA/2024-25/RD/WORK_INDENT25677/CALL-2 ESTIMATED AMOUNT(in lakhs):-27.16 (2) DMA/2024-25/OW/WORK_INDENT15209/CALL-3 ESTIMATED AMOUNT(in lakhs):-12.17 (3) DMA/2024-25/WS/WORK_INDENT26263/ CALL-2 ESTIMATED AMOUNT(in lakhs):-35.00 (4) DMA/2024-25/OW/WORK_INDENT30373 ESTIMATED AMOUNT(in lakhs):-2.20 (5) DMA/2024-25/OW/WORK_INDENT30393 ESTIMATED AMOUNT(in lakhs):-6.80 (6) DMA/2024-25/OW/WORK_INDENT30395 ESTIMATED AMOUNT(in lakhs):-4.60

RO.No.301:DIPR/CTA/KSMCA/2024-25
ಸಹಿ/- ಪೌರಾಯುಕ್ತರು, ನಗರಸಭೆ, ಚಳ್ಳಕೆರೆ

ಟ್ವೀಟೂ-ಖಾರಾ

ಬಿ.ಎಲ್. ಸಂತೋಷ್, ಬಿಜೆಪಿ ನಾಯಕ

ಎಲ್ಲ ಕ್ಷೇತ್ರಗಳ ಯುವಜನರಿಗೆ ಮೋದಿ ಮಂತ್ರ : ಯಾವುದೇ ಪರಿಸ್ಥಿತಿಗೂ ಎದೆಗುಂದದೆ ಅವಿಶ್ರಾಂತವಾಗಿ ಕೆಲಸ ಮಾಡಿ.ಸಹಜವಾಗಿ ಗೆಲುವು ನಿಮ್ಮದಾಗುತ್ತದೆ. ಯಾವುದೇ ಡ್ರಾಮಾ ಬೇಡ.. ಸುಳ್ಳು ಭರವಸೆ ಬೇಡ...ರಾಜಕೀಯ ತಂತ್ರಗಾರಿಕೆ ಬೇಡ...ಕಠಿಣ ಪರಿಶ್ರಮವೊಂದೇ ಗೆಲುವಿಗೆ ದಾರಿ.

ವಿನ್, ಬೆಂಗಳೂರು

ಸ್ಥಳೀಯ (ಕರ್ನಾಟಕ) ಬಿಜೆಪಿ ನಾಯಕರು ಮೊದಲು ಈ ಮಂತ್ರದಿಂದ ಸರಿಯಾದ ಪಾಠ ಕಲಿತು ಅನುಷ್ಠಾನ ಗೊಳಿಸಲಿ.

ಸಮಾಚಾರ ಸಣ್ಣದಲ್ಲ

ಮಮ್ತಾಜ್ ಅಲಿ ಪ್ರಕರಣ:ಮೂವರ ಸೆರೆ

ಮಂಗಳೂರು: ಮಾಜಿ ಶಾಸಕ ಮೊಯಿದ್ದಿನ್ ಬಾವಾ ಸಹೋದರ, ಉದ್ಯಮಿ ಮಮ್ತಾಜ್ ಅಲಿ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಂಗಳೂರು ಸಿಸಿಬಿ

ಪೊಲೀಸರು ಮೂವರು ಆರೋಪಿಗಳನ್ನು ಮಂಗಳವಾರ (ಅ.08) ಬಂಧಿಸಿದ್ದಾರೆ. ಪ್ರಕರಣದ ಎ1 ಆರೋಪಿಯಾಗಿರುವ ಆಯಿಷಾ ಅಲಿಯಾಸ್ ರೆಹಮರ್, ಆಕೆಯ ಪತಿ ಪ್ರಕರಣ ಎ5 ಆರೋಪಿ ಶೊಯೆಬ್ ಮತ್ತು ಸಿರಾಜ್ ನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಅಲಿ ನಾಪತ್ತೆಯಾದ ಬಳಿಕ ಆರೋಪಿ ರೆಹಮತ್ ಕೇರಳಕ್ಕೆ ಪರಾರಿಯಾಗಿದ್ದರು ಎನ್ನಲಾಗಿತ್ತು. ಇದೀಗ ಬಂಟ್ವಾಳದ ಕಲ್ಲಡ್ಕ ಬಳಿ ರೆಹಮತ್ ನನ್ನು ಪೊಲೀಸರು ಬಂಧಿಸಿದ್ದಾರೆ. ಪ್ರಕರಣ ಪ್ರಮುಖ ಮಾಸ್ಟರ್ ಮೈಂಡ್ ಎ2 ಆರೋಪಿ ಅಬ್ದುಲ್ ಸತ್ತಾರ್ ಗಾಗಿ ಪೊಲೀಸರು ಕಾರ್ಯಾಚರಣೆ ಆರಂಭಿಸಿದ್ದಾರೆ. ಆರೋಪಿಗಳು ಮಮ್ತಾಜ್ ಆಲಿ ಅವರನ್ನು ಹಣಕ್ಕಾಗಿ ಬ್ಲ್ಯಾಕ್ ಮೇಲ್ ಮಾಡಿದ್ದರು ಎನ್ನಲಾಗಿದೆ. ಮಮ್ತಾಜ್ ಅವರನ್ನು ಹನಿಟ್ರ್ಯಾಪ್ ಮಾಡಿ ಹಣಕ್ಕಾಗಿ ಬೇಡಿಕೆ ಇಟ್ಟಿದ್ದರು. ಘಟನೆಗೆ ಸಂಬಂಧಿಸಿದಂತೆ ಆರು ಜನರ ಮೇಲೆ ಕಾವೂರು ಠಾಣೆಯಲ್ಲಿ ಎಫ್ಐಆರ್ ದಾಖಲಾಗಿತ್ತು.

ಈಜಲು ತೆರಳಿದ್ದ ಮೂವರು ಸಾವು

ವಿಜಯನಗರ: ಕೂಡ್ಲಿಗಿ ತಾಲೂಕಿನ ಕಾನಾಹೊಸಹಳ್ಳಿ ಸಮೀಪ ಕುಮತಿ ಗ್ರಾಮದಲ್ಲಿ ಈಜಲು ತೆರಳಿದ್ದ ಮೂವರು ಮಕ್ಕಳು ನೀರಿನಲ್ಲಿ ಮುಳುಗಿ ದಾರುಣವಾಗಿ ಸಾವನ್ನಪ್ಪಿರುವ ಘಟನೆ ಅ.8ರ ಮಂಗಳವಾರ ಸಂಜೆ ನಡೆದಿದೆ. ಸಾಗರ್ (14), ಗುರು (14), ವಿನಯ್ (11) ಮೃತ ದುರ್ದೈವಿಗಳು. ಕಾನಾ ಹೊಸಹಳ್ಳಿ ಸುತ್ತಮುತ್ತಲಿನ ಗ್ರಾಮಗಳಲ್ಲಿ ಕಳೆದ 1 ವಾರದಿಂದ ಸತತವಾಗಿ ಸುರಿದ ಮಳೆಯಿಂದಾಗಿ ಹಳ್ಳ-ಕೊಳ್ಳಗಳು ತುಂಬಿ ಹರಿಯುತ್ತದೆ. ಕುಮತಿ ಗ್ರಾಮದ ಪಕ್ಕದ ಹಳ್ಳದಲ್ಲಿ ನೀರು ಬಂದಿದ್ದು, ದಸರಾ ರಜೆಯಿದ್ದ ಕಾರಣ 3 ಬಾಲಕರು ಈಜಾಡಲು ತೆರಳಿದ್ದು, ನೀರಿನಲ್ಲಿ ಮುಳುಗಿ ಸಾವಿಗೀಡಾಗಿದ್ದಾರೆ. ಪೋಷಕರ ಆಕ್ರಂದನ ಮುಗಿಲು ಮುಟ್ಟಿದ್ದು, ಘಟನಾ ಸ್ಥಳಕ್ಕೆ ವಿಜಯನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹರಿಬಾಬು ಹಾಗೂ ಡಿವೈಎಸ್‌ಪಿ., ಮಲ್ಲೇಶಪ್ಪ ಮಲ್ಲಾಪುರ, ಸಿಪಿಐ ದೊಡ್ಡಣ್ಣ ಹಾಗೂ ಪಿಎಸ್ಐ ಸಿದ್ದರಾಮ ಬಿದರಾಣಿ ಭೇಟಿ ನೀಡಿದ್ದಾರೆ.

ಗಲಭೆ: ದೂರು ನೀಡಿದ್ದ ಪಿಎಸ್‌ಐ ಸಸ್ಪೆಂಡ್

ಮಂಡ್ಯ: ಇಡೀ ರಾಜ್ಯಾದ್ಯಂತ ಭಾರಿ ಸದ್ದುಮಾಡಿದ್ದ ಮಂಡ್ಯದ ನಾಗಮಂಗಲ ಗಲಭೆ ಪ್ರಕರಣಕ್ಕೆ ಈಗ ಭಾರಿ ತಿರುವು ಸಿಕ್ಕಿದೆ. ಗಲಭೆ ಬಗ್ಗೆ ದೂರು ನೀಡಿದ್ದ

ಪೊಲೀಸ್ ಅಧಿಕಾರಿಯನ್ನೇ ಅಮಾನತುಗೊಳಿಸ ಲಾಗಿದೆ. ಕೋಮುಗಲಭೆ ಬಳಿಕ ದೂರು ನೀಡಿದ್ದ ಇಲ್ಲಿನ ಟೌನ್ ಠಾಣೆಯ ಪಿಎಸ್ಐ ಬಿ.ಜೆ.ರವಿ ಅವರನ್ನು ಅಮಾನತು ಮಾಡಿ ಮಂಡ್ಯ ಎಸ್ಪಿ ಮಲ್ಲಿಕಾರ್ಜುನ್ ಬಾಲದಂಡಿ ಆದೇಶಿಸಿದ್ದಾರೆ. ಗಣೇಶ ವಿಸರ್ಜನೆ ಮಾಡುತ್ತಿದ್ದವರ ಪ್ರಚೋದನೆಯಿಂದ ಗಲಭೆ ಸೃಷ್ಟಿ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿತ್ತು ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿದ್ದಾರೆಂದು ಪಿಎಸ್ಐ ರವಿ ಅವರನ್ನು ಅಮಾನತು ಮಾಡಲಾಗಿದೆ. ಅಲ್ಲದೇ ಪಿಎಸ್ಐ ಜೊತೆಗೆ ಠಾಣೆಗೆ ಗುಪ್ತ ಮಾಹಿತಿ ಸಂಗ್ರಹ ಪೇದೆ ರಮೇಶ್ ಅವರನ್ನೂ ಅಮಾನತು ಮಾಡಲಾಗಿದೆ.

ಜಗನ್ಮೋಹನ ಅರಮನೆಯಲ್ಲಿ ಆಯೋಜಿಸಿದ್ದ ಡಾ. ಎಚ್.ಎಸ್ ಶಿವಪ್ರಕಾಶ್ ಅಭಿಮತ

ಸಮಷ್ಟಿ ಕವಿಗೋಷ್ಠಿಗಳು ಸಾಮರಸ್ಯ ಕಲ್ಪಿಸುವ ವೇದಿಕೆ

ಮೈಸೂರು: ಸಮಷ್ಟಿ ಕವಿಗೋಷ್ಠಿಯು ಭಾವೈಕ್ಯತೆಯ ಸಾಮರಸ್ಯ ಕಲ್ಪಿಸುವ ವೇದಿಕೆಯಾಗಿದೆ ಎಂದು ಹಿರಿಯ ಸಾಹಿತಿ ಡಾ.ಎಚ್.ಎಸ್.ಶಿವಪ್ರಕಾಶ್ ಹೇಳಿದರು.

ದಸರಾ ಮಹೋತ್ಸವದ ಅಂಗವಾಗಿ ದಸರಾ ಕವಿಗೋಷ್ಠಿ ಉಪಸಮಿತಿ ವತಿಯಿಂದ ನಗರದ ಜಗನ್ಮೋಹನ ಅರಮನೆಯಲ್ಲಿ ಆಯೋಜಿಸಲಾಗಿದ್ದ ಸಮಷ್ಟಿ ಕವಿಗೋಷ್ಠಿಯನ್ನು ಉದ್ಘಾಟಿಸಿ ಅವರು ಮಾತನಾಡಿ, ಈ ಬಾರಿ ಪ್ರಪ್ರಥಮವಾಗಿ ಸಮಷ್ಟಿ ಬಹುಭಾಷ ಕವಿಗೋಷ್ಠಿಯನ್ನು ಆಯೋಜಿಸಿರುವುದು ಬಹಳ ಸಂತೋಷವಾಗಿದೆ. ಕಾವ್ಯಕ್ಕೆ ಭಾಷೆ ಒಂದು ಮಾಧ್ಯಮವಷ್ಟೆ. ಸಂವೇದನೆ ಎಂಬುದು ಎಲ್ಲಾ ಭಾಷೆಗಳಲ್ಲಿಯೂ ಸಮಾನ. ಬಹುಭಾಷೆಯ ಈ ಸಮ್ಮಿಲನ ಉದ್ಯಾನವನದಲ್ಲಿ ಅಲಂಕರಿಸಿದ ಬಗೆಬಗೆಯ ಹೂಗಳಿದ್ದಂತೆ ಎಂದು ವರ್ಣಿಸಿದರು.

ಕವಿಗೋಷ್ಠಿಯಲ್ಲಿ ಅಕ್ಷತಾರಾಜ್ ಪೆರ್ಲ ಅವರು ತುಳು ಭಾಷೆಯಲ್ಲಿ, ಕವಿಗಳಾದ ಇಂದಿರನ್ ರಾಜೇಂದ್ರನ್ ಅವರು ತಮಿಳಿನಲ್ಲಿ ಹೆಂಡತಿಗೊಟದು ಪ್ರೇಮಪತ್ರ' ಎಂಬ ಕವನ, ಡಾ. ಋಷಿಕೇಶ್ ಅವರು ಒಡಿಯಾ ಭಾಷೆಯಲ್ಲಿ ವಿಸರ್ಜನೆ' ಎಂಬ ಕಾವ್ಯ ವಾಚನವನ್ನು, ಆಂಗ್ಲ ಭಾಷೆಯಲ್ಲಿ ಕನಸು ನಾಗತಿಹಳ್ಳಿ ಅವರು ತನ್ನ 6 ವರ್ಷದ ಮಗಳ ಕುರಿತು ಲೀಲಾ-ಜಾಲ' ಶೀರ್ಷಿಕೆಯಡಿ ಕವನವನ್ನು ಪ್ರಸ್ತುತಪಡಿಸಿದರು.

ಕಾರ್ಯಕ್ರಮದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಕಾರ್ಯದರ್ಶಿ ಶಿವಸ್ವಾಮಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಿ.ಜೆ.ವಿಜಯ್ ಕುಮಾರ್, ಕವಿಗೋಷ್ಠಿ ಉಪಸಮಿತಿ ಕಾರ್ಯಾಧ್ಯಕ್ಷೆ ಪ್ರೊ.ಎನ್.ಕೆ.ಲೋಲಾಕ್ಷಿ, ಉಪ ವಿಶೇಷಾಧಿಕಾರಿ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಕಾರ್ಯದರ್ಶಿ ಸಿ.ಕೃಷ್ಣ, ಅಧಿಕಾರೇತರ ಸಮಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಮತ್ತಿತರರು ಹಾಜರಿದ್ದರು.

15ಕ್ಕೂ ಹೆಚ್ಚು ಬಹುಭಾಷ ಕವಿಗಳಿಂದ ಕವನ ವಾಚನ

ಕಮಲ ಎಂ.ಆರ್ ಅವರು ಕನ್ನಡ ಭಾಷೆಯಲ್ಲಿ ನನ್ನದೇ ನಿಘಂಟು' ಎಂಬ ಕಾವ್ಯ ವಾಚನವನ್ನು, ಕಿರಣ್ ಕುಮಾರ್ ಎನ್ ಅವರು ಮಣಿಪುರಿ ಭಾಷೆಯಲ್ಲಿ ಸ್ನೇಹಿತನಿಗೆ ಒಂದು ಪತ್ರ' ಎಂಬ ಕಾವ್ಯ ವಾಚನ, ಜೊಸ್ಸಿ ಎಡ್ವಿನ್ ಪಿಂಟೋ ಅವರು ಕೊಂಕಣಿ ಭಾಷೆಯಲ್ಲಿ ನನ್ನೂರು' ಎಂಬ ಕಾವ್ಯ ವಾಚನವನ್ನು, ಡಾ.ದೀಪಕ್ ಭಟ್ ಅವರು ಸಂಸ್ಕೃತ ಭಾಷೆಯಲ್ಲಿ ಮೈಸೂರಿನ ಕುರಿತು ಸ್ವಾಗತ ಗೀತೆಯನ್ನು, ಡಾ. ನೀಲಿಮಾ ಗುಂಡಿ ಅವರು ಮರಾಠಿ ಭಾಷೆಯಲ್ಲಿ ಓ ಭೂಮಿ' ಎಂಬ ಶೀರ್ಷಿಕೆಯ ಕಾವ್ಯ ವಾಚನವನ್ನು, ಮನಮೋಹನ್ ಸಿಂಗ್ ಅವರು ಡೋಗ್ರಿ ಭಾಷೆಯಲ್ಲಿ ನನ್ನ ಹುಡುಗಿಯೇ ಕೇಳು' ಎಂಬ ಕವಿತೆಯನ್ನು, ಹಾಗೂ ಮಧುಸ್ ಪೂವಯ್ಯ ಅವರು ಕೊಡವ ಭಾಷೆಯ ವರವ ಪ್ರಿಯ' ಎಂಬ ವಾಚನ, ಸೇರಿದಂತೆ 15 ಕ್ಕೂ ಹೆಚ್ಚು ಬಹುಭಾಷ ಕವಿಗಳು ಕವನವನ್ನು ಪ್ರಸ್ತುತ ಪಡಿಸಿದರು.

ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ನಡೆದ ದಸರಾ ಸಮಷ್ಟಿ ಕವಿಗೋಷ್ಠಿಯನ್ನು ಹಿರಿಯ ಸಾಹಿತಿ ಡಾ.ಎಚ್.ಎಸ್.ಶಿವಪ್ರಕಾಶ್ ಉದ್ಘಾಟಿಸಿದರು.

> ಪ್ರಸ್ತುತ ದಿನಮಾನಗಳಲ್ಲಿ ಭಾಷೆ ಮತ್ತು ಭಾವೈಕ್ಯತೆಯ ಸಾಮರಸ್ಯ ಅಗತ್ಯವಿದ್ದು, ಇಂತಹ ಕಾರ್ಯಕ್ರಮಗಳಿಂದ ಸಾಮರಸ್ಯ ಸಾಧಿಸಬಹುದು. ಇಷ್ಟು ವರ್ಷದಲ್ಲಿ ನಡೆದ ದಸರಾ ಕವಿಗೋಷ್ಠಿಯಲ್ಲಿ ಈ ವರ್ಷದ ಸಮಷ್ಟಿ ಕವಿಗೋಷ್ಠಿ ಮಾದರಿಯಾಗಿದೆ. ಮುಂಬರುವ ದಸರಾ ಕವಿಗೋಷ್ಠಿಗೆ ಮೈಸೂರಿನಲ್ಲಿ ಜಾಗತಿಕವಾಗಿ ವ್ಯಾಪಕವಾಗಿ ಈ ಕವಿಗೋಷ್ಠಿ ನಡೆಯಬೇಕು.
> -**ಡಾ.ಎಚ್.ಎಸ್.ಶಿವಪ್ರಕಾಶ್,** ಹಿರಿಯ ಸಾಹಿತಿ

ಎಲ್ಲಿ ಭಾಷೆ ಕೆಡುವುದೋ ಅಲ್ಲಿ ಬದುಕೂ ಕೆಡುತ್ತದೆ ..!

ಮುಖ್ಯ ಅತಿಥಿ ಸಾಹಿತಿ ಜ.ನಾ. ತೇಜಶ್ರೀ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಅಭಿವ್ಯಕ್ತಿ ಸ್ವಾತಂತ್ರಕ್ಕೆ ತೊಡಕು ಉಂಟಾಗುತ್ತಿದೆ. ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ಹೆಚ್ಚಾಗುತ್ತಿದೆ. ಯಾವ ಭಾಷೆ ನಮ್ಮ ಮನಸ್ಸುಗಳನ್ನು ಬೆಸೆಯಿತೋ ಅದೇ ಭಾಷೆ ನಮ್ಮ ಮನಸ್ಸಿನ ಸುತ್ತ ಗೋಡೆಗಳನ್ನು ನಿರ್ಮಿಸಿದೆ. ಇದು ಈ ಕಾಲದ ದುರಂತ. ಎಲ್ಲಿ ಭಾಷೆ ಕೆಡುತ್ತದೋ ಅಲ್ಲಿ ಬದುಕು ಕೆಡುತ್ತದೆ ಎಂದು ಅಭಿಪ್ರಾಯಿಸಿದರು.

ಕಗ್ಗಲೀಪುರದ ರಾಮಚಂದ್ರರೆಡ್ಡಿ ಹಸುವಿಗೆ ಪ್ರಥಮ ಸ್ಥಾನ

ಹಾಲು ಕರೆಯುವ ಸ್ಪರ್ಧೆ: 42ಲೀ.ಹಾಲು ಕೊಟ್ಟ ಹಸು

ಜೆ.ಕೆ. ಮೈದಾನದಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ಹಾಲು ಕರೆಯುವ ಸ್ಪರ್ಧೆಯಲ್ಲಿ ಆನೇಕಲ್ ಮೂಲದ ಹಸುವೊಂದು ಬರೋಬ್ಬರಿ 40.84 ಲೀಟರ್ ಹಾಲು ಕರೆದು ಪ್ರಥಮ ಸ್ಥಾನ ಪಡೆದುಕೊಂಡಿತು.

ಮೈಸೂರು: ದಸರಾ ಉತ್ಸವ ಅಂಗವಾಗಿ ಪಶುಪಾಲನ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ ನಗರದ ಜೆ.ಕೆ. ಮೈದಾನದಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ಹಾಲು ಕರೆಯುವ ಸ್ಪರ್ಧೆಯಲ್ಲಿ ಆನೇಕಲ್ ಮೂಲದ ಹಸುವೊಂದು ಬರೋಬ್ಬರಿ 42.840 ಲೀಟರ್ ಹಾಲು ಹಿಂಡಿ ಪ್ರಥಮ ಸ್ಥಾನ ಪಡೆದುಕೊಂಡಿತು.

ಸ್ಪರ್ಧೆಯಲ್ಲಿ ವಿವಿಧ ಭಾಗಗಳಿಂದ 8 ಹಸುಗಳು ಭಾಗವಹಿಸಿದ್ದು, ಬೆಳಗ್ಗೆ ಮತ್ತು ಸಂಜೆ ಎರಡು ಸಮಯದಲ್ಲಿ ಹಿಂಡಿದ ಒಟ್ಟು ಹಾಲಿನ ಪ್ರಮಾಣದಲ್ಲಿ ಹೆಚ್ಚು ಹಾಲು ನೀಡಿದ ಹಸುವಿಗೆ ಬಹುಮಾನ ನೀಡಲಾಯಿತು. ಆನೇಕಲ್ ತಾಲೂಕಿನ ಕಗ್ಗಲೀಪುರದ ರಾಮಚಂದ್ರರೆಡ್ಡಿ ಅವರ ಹಸು ಬೆಳಗ್ಗೆ 22.800 ಲೀ ಹಾಗೂ ಸಂಜೆ 20.040 ಲೀ ಹಾಲು ಹಿಂಡಿದ್ದು ಒಟ್ಟು 42.840 ಲೀ ಹಾಲು ನೀಡಿ ಮೊದಲ ಸ್ಥಾನ ಪಡೆದುಕೊಂಡಿತು. ಹಾಗೆಯೇ ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲೂಕಿನ ಹಿರಿಸಾವೆ ಬಳಿಯ ತೋಟಿ ಗ್ರಾಮದ ಬಾಬು ಅವರ ಹಸು ಬೆಳಗ್ಗೆ 22.560 ಲೀ ಹಾಗೂ ಸಂಜೆ 19.740 ಲೀ ನೀಡಿದ್ದು, ಒಟ್ಟು 42.300 ಲೀ ಹಾಲು ಹಿಂಡಿ 2ನೇ ಸ್ಥಾನ ಪಡೆದುಕೊಂಡಿತು.

ಹಾಗೆಯೇ ಆನೇಕಲ್ ತಾಲೂಕಿನ ದೊಮ್ಮಸಂದ್ರದ ಅಜಯ್ ಪಿ. ರೆಡ್ಡಿ ಅವರ ಹಸು ಬೆಳಗ್ಗೆ 21.610 ಲೀ, ಸಂಜೆ 19.690 ಲೀ ನೀಡಿದ್ದು ಒಟ್ಟು 41.51 ಲೀ ಹಾಲು ಹಿಂಡುವ ಮೂಲಕ 3ನೇ ಸ್ಥಾನ ಪಡೆದುಕೊಂಡಿತು. ಎಚ್.ಡಿ. ಕೋಟೆ ತಾಲೂಕಿನ ಕಣಿಯನಹುಂಡಿ ಗ್ರಾಮದ ದೇವರಾಜ್ ಅವರ ಹಸು ಬೆಳಗ್ಗೆ 20.830 ಲೀ. ಹಾಗೂ 19.750 ಲೀ ಸೇರಿ ಒಟ್ಟು 40.580 ಲೀ ಹಾಲು ನೀಡಿ 4ನೇ ಸ್ಥಾನ ಪಡೆದುಕೊಂಡಿತು.

ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾವಣೆ ಚರ್ಚೆ ನಡೆದಿಲ್ಲ

ಸಿಎಂ ಬದಲಾವಣೆ ಪ್ರಶ್ನೆ ಉದ್ಭವಿಸದು

ಮೈಸೂರು: ಸಿಎಂ ಬದಲಾವಣೆ ಪ್ರಶ್ನೆಯೇ ಉದ್ಭವಿಸಿಲ್ಲ. ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ ಆಗಿ ಮುಂದುವರಿಯುತ್ತಾರೆ ಎಂದು ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು 5 ವರ್ಷ ಇರುತ್ತಾರೋ, 3 ವರ್ಷ ಇರುತ್ತಾರೋ ಅದು ನನಗೆ ಗೊತ್ತಿಲ್ಲ. ಅದನ್ನು ನೀವು ಹೈಕಮಾಂಡ್‌ಗೆ ಕೇಳಿ ಎಂದರು.

ಸಿಎಂ ಬದಲಾವಣೆ ಪ್ರಶ್ನೆಯೇ ಉದ್ಭವಿಸಿಲ್ಲ. ಅಂತಹ ಚರ್ಚೆಗಳೂ ನಡೆದಿಲ್ಲ. ಆದರೆ ವಿಪಕ್ಷಗಳು, ಮಾಧ್ಯಮಗಳಲ್ಲಷ್ಟೇ ಚರ್ಚೆ ಆಗುತ್ತಿದೆ. ಸಿದ್ದರಾಮಯ್ಯನವರೇ ನಮ್ಮ ಮುಖ್ಯಮಂತ್ರಿಯಾಗಿದ್ದು, ಅದರಲ್ಲಿ ಬೇರೆ ಯಾವುದೇ ಪ್ರಶ್ನೆಯೂ ಇಲ್ಲ. ನಾನು ಅವರ ಜತೆ ಸಚಿವನಾಗಿ ಕೆಲಸ ಮಾಡುತ್ತೇನೆ ಎಂದರು.

ಸಚಿವ ಮಹದೇವಪ್ಪ ಜತೆ ಭೇಟಿ ಕುರಿತು ಪ್ರತಿಕ್ರಿಯಿಸಿದ ಅವರು, ರಾಜಕಾರಣಿಗಳು ಸೇರಿದ ಮೇಲೆ ರಾಜಕಾರಣದ ಚರ್ಚೆ ಸಾಮಾನ್ಯ. ಇವತ್ತಿನ ಭೇಟಿಯಲ್ಲಿ ಮಹತ್ವದ ವಿಚಾರವೇನೂ ಇಲ್ಲ. ಡಿಕೆಶಿ ವಿಚಾರ ಮತ್ತೊಬ್ಬರ ವಿಚಾರ ನಾನೇನು ಹೇಳಲು ಸಾಧ್ಯವಿಲ್ಲ. ಉದ್ಯಮಿಗಳು ಸೇರಿದಾಗ ಬ್ಯುಸಿನೆಸ್ ಚರ್ಚೆ ಮಾಡುತ್ತಾರೆ. ಇಡೀ ದಿನ ಮೈಸೂರಿನಲ್ಲಿ ಇದ್ದು ದಸರಾ ನೋಡುತ್ತೇನೆ ಅಷ್ಟೇ. ಎಂದರು.

ಕುತೂಹಲಕ್ಕೆಡೆಯಾದ ಮೈಸೂರು ಭೇಟಿ

ಮುಡಾ ಹಗರಣ ವಿಚಾರದಿಂದಾಗಿ ಸಿಎಂ ಬದಲಾವಣೆ ಕುರಿತು ಚರ್ಚೆ ನಡೆಯುತ್ತಿರುವ ಹೊತ್ತಿನಲ್ಲೇ ಸಚಿವ ಸತೀಶ್ ಜಾರಕಿಹೊಳಿ ಅವರು ಮೈಸೂರಿಗೆ ಭೇಟಿ ನೀಡಿರುವುದು ತೀವ್ರ ಕುತೂಹಲ ಮೂಡಿಸಿದೆ.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಶಾಸಕರಾದ ಕೆ. ಹರೀಶ್‌ಗೌಡ, ಡಿ. ರವಿಶಂಕರ್, ಅನಿಲ್ ಚಿಕ್ಕಮಾದು, ಮುಡಾ ಅಧ್ಯಕ್ಷ ಮರೀಗೌಡ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಅವರೊಂದಿಗೆ ಚರ್ಚೆ ನಡೆಸಿರುವುದು ಕೂಡ ಸಾರ್ವಜನಿಕವಾಗಿ ಕುತೂಹಲ ಹೆಚ್ಚಾಗಲು ಕಾರಣವಾಗಿದೆ. ಮಂಗಳವಾರ ಬೆಳಗ್ಗೆ ಮೈಸೂರಿಗೆ ಆಗಮಿಸಿದ ಸಚಿವ ಸತೀಶ್ ಜಾರಕಿಹೊಳಿ ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಲೋಕೇಶ್ ಅವರ ನಗರದ ಸುಣ್ಣದಕೇರಿಯಲ್ಲಿರುವ ನಿವಾಸಕ್ಕೆ ತೆರಳಿ ಉಪಹಾರ ಸೇವಿಸಿದರು. ಈ ವೇಳೆ ಎಚ್.ಡಿ. ಕೋಟೆ ಶಾಸಕ ಅನಿಲ್ ಚಿಕ್ಕಮಾದು ತೆರಳಿ ಜಾರಕಿಹೊಳಿಯೊಂದಿಗೆ ಮಾತಕತೆ ನಡೆಸಿದರು.

73 ಚಿತ್ರಗಳು ಸ್ಪರ್ಧೆಯಲ್ಲಿ ಭಾಗಿ। ಸಚಿವರಿಂದ ವಿಜೇತರಿಗೆ ಬಹುಮಾನ ವಿತರಣೆ

ದಸರಾ ಚಲನ ಚಿತ್ರೋತ್ಸವ ಕಿರುಚಿತ್ರ ಸ್ಪರ್ಧೆ

ಮೈಸೂರು: ದಸರಾ ಚಲನ ಚಿತ್ರೋತ್ಸವ ಸಮಿತಿ ವತಿಯಿಂದ ಏರ್ಪಡಿಸಿದ್ದ ಕಿರುಚಿತ್ರ ಸ್ಪರ್ಧೆಯ ಬಹುಮಾನ ವಿತರಣೆ ಮಂಗಳವಾರ ಮಾಲ್ ಆಫ್ ಮೈಸೂರಿನ ಐನಾಕ್ಸ್ ಚಿತ್ರಮಂದಿರದಲ್ಲಿ ನಡೆಯಿತು.

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹಾದೇವಪ್ಪ ಹಾಗೂ ಸಚಿವ ಸತೀಶ್ ಜಾರಕಿಹೊಳಿ ಅವರು ವಿಜೇತ ಚಿತ್ರಗಳಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಈ ವೇಳೆ ದಸರಾ ಚಲನಚಿತ್ರೋತ್ಸವ ಸಮಿತಿ ಉಪ ವಿಶೇಷಾಧಿಕಾರಿ ಡಾ. ಬಸವರಾಜ್ ಮಾತನಾಡಿ, ಕಿರುಚಿತ್ರ ಸ್ಪರ್ಧೆಗೆ ಅರ್ಜಿ ಆಹ್ವಾನಿಸಿದ್ದು, 73 ಚಿತ್ರಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದವು. 4 ಜನರ ತೀರ್ಪುಗಾರರ ತಂಡ ಕಿರು ಚಿತ್ರಗಳನ್ನು ವೀಕ್ಷಿಸಿ ಆಯ್ಕೆ ಮಾಡಿತ್ತು. ಈ ಕಿರುಚಿತ್ರಗಳಿಗೆ ಬಹುಮಾನ ವಿತರಣೆ ಮಾಡಲಾಯಿತು ಎಂದರು.

ಕಾರ್ಯಕ್ರಮದಲ್ಲಿ ನಟ ಮಂಡ್ಯ ರಮೇಶ್, ವಿಧಾನ ಪರಿಷತ್ ಸದಸ್ಯರಾದ ಡಿ ತಿಮ್ಮಯ್ಯ, ದಸರಾ ಚಲನ ಚಿತ್ರೋತ್ಸವ ಸಮಿತಿಯ ಉಪಾಧ್ಯಕ್ಷರಾದ ಕಾಶಿನಾಥ್, ಬೃಂದ ಕೃಷ್ಣೇಗೌಡ, ರಮೇಶ್, ಸಯ್ಯದ್ ಅಬ್ರಹಾಂ, ತೀರ್ಪುಗಾರರಾದ ಪ್ರೊ ಸ್ವಪ್ನಾ, ಸಮಿತಿಯ ಕಾರ್ಯಾಧ್ಯಕ್ಷ ರಂಗೇಗೌಡ, ಸಮಿತಿ ಕಾರ್ಯದರ್ಶಿ ಹರೀಶ್ ಹಾಗೂ ಸಮಿತಿಯ ಸದಸ್ಯರುಗಳು ಉಪಸ್ಥಿತರಿದ್ದರು.

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹಾದೇವಪ್ಪ ಹಾಗೂ ಸಚಿವ ಸತೀಶ್ ಜಾರಹೊಳಿ ಅವರು ವಿಜೇತ ಚಿತ್ರಗಳಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಸ್ಪರ್ಧಾ ವಿಜೇತರು

ದಿಲೀಪ್ ಕುಮಾರ್ ನಿರ್ದೇಶನದ ಪೋಲಾರ್ (ಪ್ರಥಮ), ಅಭಿಜಿತ್ ಪುರೋಹಿತ್ ನಿರ್ದೇಶನದ ಲಕ್ಷ್ಮಿ (ದ್ವಿತೀಯ), ಎಸ್.ಪಿ. ಪವನ್ ನಿರ್ದೇಶಕನದ ಅನ್ವಾಂಟೆಡ್ ಕಿಡ್ (ತೃತೀಯ) ಸ್ಥಾನ ಪಡೆದರೆ, ಸ್ಟ್ಯಾನಿ ಜಾಯ್ಸನ್ ನಿರ್ದೇಶನದ ತ್ರಿಕಾಲಮ್ ಚಿತ್ರಕ್ಕೆ ಉತ್ತಮ ಸಂಕಲನಕಾರ ಹಾಗೂ ಕೃತಾರ್ಥ ಮಂಡೆಕುಟ್ಟಂಡ ನಿರ್ದೇಶನದ ವರ್ತಕಾಲಿ ಚಿತ್ರಕ್ಕೆ ಉತ್ತಮ ಛಾಯಾಗ್ರಾಹಕ ಪ್ರಶಸ್ತಿ ಲಭಿಸಿತು.

ಪ್ರಧಾನ ಮಂತ್ರಿ ನರೇಂದ್ರ ಮೋದಿಗೆ ಕೇಂದ್ರ ಸಚಿವ ವಿ.ಸೋಮಣ್ಣ ಮನವಿ

ತುಮಕೂರು ರೈಲು ನಿಲ್ದಾಣಕ್ಕೆ ಸಿದ್ದಗಂಗಾ ಶ್ರೀ ಹೆಸರಿಡಿ

ಬೆಂಗಳೂರು: ತುಮಕೂರು ರೈಲು ನಿಲ್ದಾಣಕ್ಕೆ ಸಿದ್ದಗಂಗಾ ಮಠದ ಡಾ.ಶಿವಕುಮಾರ ಸ್ವಾಮೀಜಿ ಅವರ ಹೆಸರು ನಾಮಕರಣ ಮಾಡುವಂತೆ ಪ್ರಧಾನಿ ನರೇಂದ್ರ ಮೋದಿಗೆ ಕೇಂದ್ರ ರೈಲ್ವೆ ಮತ್ತು ಜಲ ಶಕ್ತಿ ರಾಜ್ಯ ಖಾತೆ ಸಚಿವ ವಿ.ಸೋಮಣ್ಣ ಮನವಿ ಮಾಡಿದ್ದಾರೆ.

ದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಮಂಗಳವಾರ ಭೇಟಿ ಮಾಡಿದ ಸೋಮಣ್ಣ, 30 ನಿಮಿಷಗಳ ಕಾಲ ಚರ್ಚೆ ಮಾಡಿದ್ದಾರೆ. ಈ ಭೇಟಿಯ ಸಂದರ್ಭದಲ್ಲಿ ರಾಜ್ಯದ ಅಭಿವೃದ್ಧಿಯ ಬಗ್ಗೆ ಚರ್ಚಿಸಿದ್ದು, ಕಳೆದ ಮೂರು ತಿಂಗಳಲ್ಲಿ ರಾಜ್ಯದಲ್ಲಿ ರೈಲ್ವೆ ಅಭಿವೃದ್ಧಿಯ ಕುರಿತಾಗಿ ತೆಗೆದುಕೊಂಡ ಕ್ರಮಗಳ ಬಗ್ಗೆ ಪ್ರಧಾನಿಗೆ ವಿವರಿಸಿದ್ದಾರೆ.

ಬೆಂಗಳೂರು ಸಬ್ ಅರ್ಬನ್ ರೈಲ್ವೆ, ವರ್ತುಲ ರೈಲ್ವೆ ಇತ್ಯಾದಿಗಳ ಬಗ್ಗೆ ಎರಡು ಸುತ್ತಿನ ಸಭೆ ನಡೆಸಿರುವ ಬಗ್ಗೆ ವಿ.ಸೋಮಣ್ಣ ವಿವರಿಸಿದ್ದಾರೆ. ಕಳೆದ ಹತ್ತಾರು ವರ್ಷಗಳಿಂದ ನನೆಗುದಿಗೆ ಬಿದ್ದ ತುಮಕೂರು- ರಾಯದುರ್ಗ ರೈಲ್ವೆ ಮಾರ್ಗ ಭೂಸ್ವಾಧೀನ ಪ್ರಕ್ರಿಯೆಯನ್ನು ಕೇವಲ 3 ತಿಂಗಳ ಅವಧಿಯಲ್ಲಿ ಶೇ.90ಕ್ಕಿಂತಲೂ ಮಿಗಿಲಾಗಿ ಮುಗಿಸಿರುವ ಬಗ್ಗೆ ಮಾಹಿತಿ ನೀಡಿದ್ದಾರೆ.

ರೈಲ್ವೆ ಅಧಿಕಾರಿ ಮತ್ತು ಜಿಲ್ಲಾಡಳಿತದ ಉತ್ತಮ ಕಾರ್ಯವೈಖರಿಯ ಬಗ್ಗೆ ಪ್ರಧಾನಿಗಳು ಅತ್ಯಂತ ಹರ್ಷ ವ್ಯಕ್ತಪಡಿಸಿದ್ದಾರೆ. ಅಲ್ಲದೆ ಕಳೆದ 3 ತಿಂಗಳಲ್ಲಿ ರಾಜ್ಯದ ಬಹುತೇಕ ಎಲ್ಲಾ ಜಿಲ್ಲೆಯಲ್ಲಿ ಪ್ರವಾಸ ಮಾಡಿ ರೈಲ್ವೆ ಇಲಾಖೆಗೆ ಸಂಬಂಧಪಟ್ಟ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಕಾರ್ಯವೈಖರಿ ಪ್ರಧಾನಮಂತ್ರಿಗಳು ಶ್ಲಾಘಿಸಿದ್ದಾರೆ ಎಂದು ಸಚಿವ ಸೋಮಣ್ಣ ತಿಳಿಸಿದ್ದಾರೆ.

ದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಕೇಂದ್ರ ಸಚಿವ ವಿ.ಸೋಮಣ್ಣ, ಮಂಗಳವಾರ ಭೇಟಿ ಮಾಡಿದರು.

ವಿಶೇಷ ಅನುದಾನಕ್ಕೆ ಮನವಿ

ತುಮಕೂರು ಜಿಲ್ಲೆಯ ಅಭಿವೃದ್ಧಿಯ ಕುರಿತಾಗಿ ಕೆಲವು ವಿಶೇಷ ಪ್ರಸ್ತಾವನೆ ಪ್ರಧಾನಮಂತ್ರಿಗಳಿಗೆ ಮಂಡಿಸಿದ್ದು, ತಮ್ಮ ಲೋಕಸಭಾ ಕ್ಷೇತ್ರದ ಅಭಿವೃದ್ಧಿಗೆ ವಿಶೇಷ ಅನುದಾನ ನೀಡುವಂತೆ ಮನವಿ ಮಾಡಿದ್ದಾರೆ. ತುಮಕೂರು-ರಾಯದುರ್ಗ ಮತ್ತು ತುಮಕೂರು-ಚಿತ್ರದುರ್ಗ-ದಾವಣಗೆರೆ ರೈಲ್ವೆ ಮಾರ್ಗ ಜೂನ್ 2027ರಲ್ಲಿ ಲೋಕಾರ್ಪಣೆ ಮಾಡಲು ತುಮಕೂರಿಗೆ ಆಗಮಿಸುವಂತೆಯೂ ಮೋದಿ ಅವರಿಗೆ ಮನವಿ ಮಾಡಲಾಗಿದೆ ಎಂದು ಸೋಮಣ್ಣ ತಿಳಿಸಿದ್ದಾರೆ.

ಹೊಸಕೋಟೆ ಗ್ರಾಮದ ಉದ್ಯಮಿ ರಾಘವೇಂದ್ರ ರಾವ್ ನಿವಾಸದಲ್ಲಿ ಗುರುವಂದನೆ ಕಾರ್ಯಕ್ರಮ

ಮೂಲ ರಾಮದೇವರ ಪೂಜೆ ಕಣ್ತುಂಬಿಕೊಂಡ ಭಕ್ತರು

ಮೈಸೂರು: ನಂಜನಗೂಡು ತಾಲೂಕಿನ ಹೊಸಕೋಟೆ ಗ್ರಾಮದ ಉದ್ಯಮಿ ರಾಘವೇಂದ್ರ, ರಾವ್ ಅವರ ಮನೆಯಲ್ಲಿ ಗುರುವಂದನೆಯ ಮೂಲಕ ವಿಶೇಷ ಪೂಜಾ ಕಾರ್ಯಕ್ರಮ ಆಯೋಜನೆ ಮಾಡಲಾಗಿತ್ತು.

ಗುರುವಂದನಾ ಕಾರ್ಯಕ್ರಮದಲ್ಲಿ ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ, ಮಂತ್ರಾಲಯ ಶ್ರೀರಾಘವೇಂದ್ರ ಸ್ವಾಮಿಗಳವರ ಮಠದ ಪೀಠಾಧಿಪತಿ ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರು ಹಾಗೂ ಸುತ್ತೂರು ವೀರಸಿಂಹಾಸನ ಮಹಾಸಂಸ್ಥಾನ ಮಠದ ಪೀಠಾಧಿಪತಿಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಭಾಗಿಯಾಗಿದ್ದರು.

ಈ ವೇಳೆ ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರ ಅಮೃತ ಹಸ್ತದಿಂದ ಶ್ರೀ ಮೂಲ ರಾಮದೇವರ ಪೂಜೆಯು ಭಕ್ತಿಪೂರ್ವಕವಾಗಿ ನೆರವೇರಿತು. ತದನಂತರ ರಾಘವೇಂದ್ರ ರಾವ್ ಅವರು ಉಭಯ ಜಗದ್ಗುರುಗಳಿಗೆ ಕನಕಾಭಿಷೇಕ, ಪುಷ್ಪಾಭಿಷೇಕ ಹಾಗೂ ಪಾದ ಪೂಜೆಯನ್ನು ಶ್ರದ್ಧಾ ಭಕ್ತಿಯಿಂದ ನೆರವೇರಿಸಿದರು. ಕಾರ್ಯಕ್ರಮದಲ್ಲಿ ನೂರಾರು ಭಕ್ತರು ಉಪಸ್ಥಿತರಿದ್ದರು.



ನಂಜನಗೂಡು ತಾಲೂಕಿನ ಹೊಸಕೋಟೆ ಗ್ರಾಮದ ಉದ್ಯಮಿ ರಾಘವೇಂದ್ರ ರಾವ್ ಅವರ ಮನೆಯಲ್ಲಿ ನಡೆದ ವಿಶೇಷ ಪೂಜಾ ಕಾರ್ಯಕ್ರಮದಲ್ಲಿ ಶ್ರೀರಾಘವೇಂದ್ರ ಸ್ವಾಮಿ ಮಠದ ಪೀಠಾಧಿಪತಿ ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರು ಹಾಗೂ ಸುತ್ತೂರು ವೀರಸಿಂಹಾಸನ ಮಹಾಸಂಸ್ಥಾನ ಮಠದ ಪೀಠಾಧಿಪತಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಭಾಗವಹಿಸಿದ್ದರು.

ನಾಡಿನ ಸಮಸ್ತ ಜನತೆಗೂ ಒಳಿತಾಗಲಿ: ಮಂತ್ರಾಲಯ ಮಠದ ಪೀಠಾಧಿಪತಿ ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರು ಮಾತನಾಡಿ, ರಾಘವೇಂದ್ರ ರಾವ್ ಅವರಿಗೂ ಮಂತ್ರಾಲಯಕ್ಕೂ ಅವಿನ ಭಾವ ಸಂಬಂಧವಿದೆ, ಹೀಗಾಗಿ ಈ ಗುರುವಂದನ ಕಾರ್ಯಕ್ರಮಕ್ಕೆ ನಮ್ಮನ್ನು ಆಹ್ವಾನಿಸಿದ್ದು, ನಾವು ಮತ್ತು ಸುತ್ತೂರು ದೇಶಿಕೇಂದ್ರ ಸ್ವಾಮೀಜಿಗಳು ಭಾಗವಹಿಸಿದ್ದೇವೆ. ನಾಡಿನ ಸಮಸ್ತ ಜನತೆಗೂ ಒಳಿತಾಗಲಿ ಎಂದು ತಿಳಿಸಿದರು.

ಸಿಎಂ, ಪ್ರಿಯಾಂಕ್ ಖರ್ಗೆಗೆ ಪತ್ರ ಬರೆದ ದಿನೇಶ್ ಗೂಳಿಗೌಡ ಪತ್ರ

ಗ್ರಾಪಂ ಅಧ್ಯಯನಕ್ಕೆ ತಜ್ಞರ ಸಮಿತಿ ರಚಿಸಲು ಮನವಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

- **ನ್ಯಾಯಯುತ ಬೇಡಿಕೆ ಈಡೇರಿಕೆಗೆ ಮನವಿ**
- **ಸಂಘಟನೆಗಳ ಮುಖ್ಯಸ್ಥರ ಶೀಘ್ರ ಸಭೆ ಕರೆಯಲು ಒತ್ತಾಯ**

ಗ್ರಾಮ ಪಂಚಾಯತ್ ಸದಸ್ಯರು, ಅಧಿಕಾರಿಗಳು ಮತ್ತು ನೌಕರರ ಬೇಡಿಕೆ ಅಧ್ಯಯನ ಮಾಡಿ ಸರಕಾರಕ್ಕೆ ವರದಿ ಸಲ್ಲಿಸಲು ತಜ್ಞರ ತಂಡ ರಚಿಸಬೇಕು ಎಂದು

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆಗೆ ವಿಧಾನ ಪರಿಷತ್ ಸದಸ್ಯ ಶಾಸಕ ದಿನೇಶ್ ಗೂಳಿಗೌಡ ಮನವಿ ಮಾಡಿದ್ದಾರೆ.

ಪತ್ರದಲ್ಲೇನಿದೆ?: ಈ ಸಂಬಂಧ ಮನವಿ ಪತ್ರ ಬರೆದಿರುವ ದಿನೇಶ್ ಗೂಳಿಗೌಡ, ರಾಜ್ಯದಲ್ಲಿ 5961 ಗ್ರಾಪಂ ಗಳಿದ್ದು, ಲಕ್ಷಕ್ಕೂ ಅಧಿಕ ಪಂಚಾಯತ್ ಸದಸ್ಯರಿದ್ದಾರೆ. ಸ್ಥಳೀಯ ಸರಕಾರಗಳಾಗಿ ಯಶಸ್ವಿಯಾಗಬೇಕು ಎಂದರೆ, ಸರಕಾರಿ ಅಧಿಕಾರಿಗಳ ಜವಾಬ್ದಾರಿ ನಿಗದಿಯಾದಂತೆ ಪಿಡಿಒ ಹಾಗೂ ಇತರ ಅಧಿಕಾರಿಗಳ ಜವಾಬ್ದಾರಿ ನಕ್ಷೆ ಸಿದ್ಧ ಮಾಡಬೇಕು ಎಂಬುದು ಗ್ರಾಪಂ ಪ್ರತಿನಿಧಿಗಳ ಪ್ರಮುಖ ಬೇಡಿಕೆಯಾಗಿದೆ.

ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷ, ಸದಸ್ಯರನ್ನು ರಾಜ್ಯ ಶಿಷ್ಟಾಚಾರ ವ್ಯಾಪ್ತಿಗೆ ತರಬೇಕು. ಕೇರಳದಲ್ಲಿ ಗ್ರಾಪಂ ಸದಸ್ಯರ ಮಾಸಿಕ ಗೌರವಧನ 12 ಸಾವಿರ ರು. ಇದೆ. ಆದರೆ, ರಾಜ್ಯದಲ್ಲಿ ವೇತನ ಹಾಗೂ ಭತ್ಯೆ ಕಡಿಮೆಯಿದೆ. ಸಭಾ ಭತ್ಯೆ ಕನಿಷ್ಠ ಸಾವಿರ ರುಪಾಯಿಗೆ ಏರಿಸಬೇಕು. ಅಧ್ಯಕ್ಷರಿಗೆ 15 ಸಾವಿರ, ಉಪಾಧ್ಯಕ್ಷರಿಗೆ 12 ಸಾವಿರ ಹಾಗೂ ಸದಸ್ಯರಿಗೆ 10 ಸಾವಿರ ಮಾಸಿಕ ಗೌರವಧನ ನಿಗದಿ ಮಾಡಬೇಕು. ಆರೋಗ್ಯ ವಿಮೆ, ಉಚಿತ ಬಸ್ ಪಾಸ್ ಒದಗಿಸಬೇಕು ಎಂಬ ಬೇಡಿಕೆ ಇದೆ.

ಗ್ರಾಪಂ ಕೆಲಸದ ಹೊರೆ ಹೆಚ್ಚುತ್ತಿದ್ದು, ಸಿಬ್ಬಂದಿಗಳ (ಬಿಲ್ ಕಲೆಕ್ಟರ್, ಡಿಇಒ, ವಾಟರ್‌ಮ್ಯಾನ್, ಡಿ ದರ್ಜೆ ನೌಕರರು , ಸ್ವಚ್ಛತಾಗಾರರು) ಖಾಲಿಯಿರುವ ಹುದ್ದೆಗಳ ನೇಮಕಾತಿಗೆ ಜಿಪಂ ಗಳು ತಕ್ಷಣ ಪೂರ್ವಾನುಮತಿ ಕೊಡುವಂತಾಗಬೇಕು. ಖಾಲಿ ಇರುವ ಪಿಡಿಒ, ಕಾರ್ಯದರ್ಶಿ ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆ ತಕ್ಷಣ ತುಂಬಲು ಸರಕಾರ ಕ್ರಮ ವಹಿಸಬೇಕು. ಪಂಚಾಯತ್ ರಾಜ್ ಸಂಸ್ಥೆಗಳಿಗೆ ಪ್ರತ್ಯೇಕ ಲಾಂಛನ ಸಿದ್ಧ ಮಾಡಬೇಕು. ಪ್ರತಿ 6 ತಿಂಗಳಿಗೊಮ್ಮೆ ಗ್ರಾಮ ಸಭೆ/ವಾರ್ಡ್ ಸಭೆ ನಡೆಸುವಂತಾಗಬೇಕು. ವಿವಿಧ ಯೋಜನೆಗಳ ಅಭಿವೃದ್ಧಿ ಕಾರ್ಯಕ್ರಮ ಮತ್ತು ಫಲಾನುಭವಿ ಆಯ್ಕೆ ಮಾಡಿ, ಆನ್‌ಲೈನ್‌ನಲ್ಲಿ ವಸತಿ ರಹಿತರ ಪಟ್ಟಿ ಅಪ್‌ಲೋಡ್ ಮಾಡಿ, ಆದ್ಯತೆ ಮೇಲೆ ಮನೆಗಳ ಸೌಲಭ್ಯ ಕೊಡುವ ವ್ಯವಸ್ಥೆ ಜಾರಿ ಮಾಡಬೇಕು.

ಗ್ರಾಮ ಪಂಚಾಯತ್ ನೌಕರರಿಗೆ ಪಂಚಾಯತ್ ರಾಜ್ ಇಲಾಖೆಯಿಂದ ವೇತನ ಪಾವತಿಸಬೇಕು. ಇಎಸ್ಐ, ಪಿಎಫ್ ಜಾರಿ ಮಾಡಬೇಕು. ಕನಿಷ್ಠ 5 ಲಕ್ಷ ರು. ಆರೋಗ್ಯ ವಿಮೆ ನೀಡಬೇಕು. ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಿಂದ ಹಿಡಿದು ಸ್ವಚ್ಛತಾ ಸಿಬ್ಬಂದಿವರೆಗೆ ಎಲ್ಲರೂ ಧರಣಿಗೆ ಇಳಿದಿರುವುದರಿಂದ ಗ್ರಾಮೀಣ ಭಾಗಗಳಲ್ಲಿ ಸಾರ್ವಜನಿಕರ ಸೇವೆಗಳಲ್ಲಿ ವ್ಯತ್ಯಯ ಉಂಟಾಗುತ್ತಿದೆ. ಹಾಗಾಗಿ ಅವರ ನ್ಯಾಯಯುತ ಬೇಡಿಕೆ ಈಡೇರಿಸುವುದು ಸರಕಾರದ ಜವಾಬ್ದಾರಿಯಾಗಿದೆ. ಆರ್‌ಡಿಪಿಆರ್ ಕುಟುಂಬದ ವಿವಿಧ ಸಂಘಟನೆಗಳ ಮುಖ್ಯಸ್ಥರನ್ನು ಸಾಧ್ಯವಾದಷ್ಟು ಶೀಘ್ರವಾಗಿ ಆಹ್ವಾನಿಸಿ ಸಭೆ ನಡೆಸಿ ಅವರ ಬೇಡಿಕೆ ಪರಿಶೀಲನೆ ನಡೆಸಲು ತಜ್ಞರು, ಜನಪ್ರತಿನಿಧಿಗಳ ಹಾಗೂ ಪದಾಧಿಕಾರಿಗಳ ತಂಡ ರಚಿಸಬೇಕು ಎಂದು ಮನವಿ ಮಾಡಿದ್ದಾರೆ.

{**ಕೆ.ಎಸ್.ಈಶ್ವರಪ್ಪ**} ಮಾಜಿ ಡಿಸಿಎಂ

ಸಂಘಟನೆ ರಚಿಸುವ ಸಂಬಂಧ ಉತ್ತರ ಕರ್ನಾಟಕದ ಹಲವು ಪ್ರಮುಖ ನಾಯಕರ ಜೊತೆ ಚರ್ಚಿಸಿದ್ದೇವೆ. ಹಿಂದೆ ರಾಯಣ್ಣ ಬ್ರಿಗೇಡ್ ಮಾಡಿದಾಗ, ಸಾಕಷ್ಟು ಜನಬೆಂಬಲ ಸಿಕ್ಕಿತ್ತು. ಅದನ್ನು ಸಹಿಸದ ಬಿ.ಎಸ್ .ಯಡಿಯೂರಪ್ಪ ಅಂದಿನ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಶಾ ಅವರ ಬಳಿ ದೂರು ಹೇಳಿದರು. ಆಗ ಶಾ ಸೂಚನೆ ಮೇರೆಗೆ ಸಂಘಟನೆ ನಿಲ್ಲಿಸಿದೆ. ಅಂದು ನಾನು ನಿಲ್ಲಿಸಿ ತಪ್ಪುಮಾಡಿದೆ ಎಂದು ಈಗ ನನಗನಿಸುತ್ತಿದೆ.

ವಿಶ್ವವಾಣಿ

ಸಂಪಾದಕೀಯ

ಬಿಜೆಪಿ ಪಾಲಿಗಿದು ಬೇವು-ಬೆಲ್ಲ

ಒಂದಿಡೀ ದೇಶವು ಕಾತರಿಸಿ ಕಾಯುತ್ತಿದ್ದ ಜಮ್ಮು-ಕಾಶ್ಮೀರ ಮತ್ತು ಹರಿಯಾಣ ವಿಧಾನಸಭಾ ಚುನಾವಣೆಗಳ ಫಲಿತಾಂಶ ಹೊರಬಿದ್ದಿದೆ. ಬಿಜೆಪಿಯ ಪಾಲಿಗೆ ಜಮ್ಮು-ಕಾಶ್ಮೀರದ ಫಲಿತಾಂಶವು 'ಬೇವು' ಆಗಿಯೂ, ಹರಿಯಾಣದ ಫಲಿತಾಂಶವು 'ಬೆಲ್ಲ'ವಾಗಿಯೂ ಒದಗಿರುವುದು ಇಲ್ಲಿ ಗಮನಿಸಬೇಕಾದ ಸಂಗತಿ. ಈ ಮಿಶ್ರಫಲವು ಬಿಜೆಪಿಗೆ ಪುಟ್ಟದೊಂದು ಪಾಠವನ್ನೂ ಕಲಿಸಿದೆ. ಏಕೆಂದರೆ, ಜಮ್ಮು-ಕಾಶ್ಮೀರದಲ್ಲಿ ಶತಾಯಗತಾಯ ತನ್ನ ಹೆಜ್ಜೆಗುರುತು ಮೂಡಿಸುವುದು ಕೇಸರಿಪಕ್ಷದ ಮಹತ್ವಾಕಾಂಕ್ಷೆಯಾಗಿತ್ತು. ಆದರೆ, 'ಇಂಡಿಯ' ಮೈತ್ರಿಕೂಟದ ಸಹಭಾಗಿಗಳಾದ ನ್ಯಾಷನಲ್ ಕಾನ್ಫರೆನ್ಸ್ ಹಾಗೂ ಕಾಂಗ್ರೆಸ್ ಎಂಬ ಜೋಡೆತ್ತುಗಳ ಎದುರು ಕೇಸರಿ ಪಾಳಯ ಮಣಿಯಬೇಕಾಗಿ ಬಂತು. ಈ ರಾಜ್ಯದಲ್ಲಿ ಬಿಜೆಪಿಗೆ ಗೆಲುವು ದಕ್ಕಿದ್ದಿದ್ದರೆ ಅದು ನಿಜಕ್ಕೂ ಸಾಧನೆಯೇ ಆಗಿರುತ್ತಿತ್ತು. ಆದರೆ, ಅದಕ್ಕಾಗಿ ಕ್ರಮಿಸಬೇಕಾದ ಹಾದಿಯಿನ್ನೂ ಸಾಕಷ್ಟಿದೆ, ಜತೆಗೆ ಅದು ದುರ್ಗಮವಾಗಿದೆ ಎಂಬುದನ್ನು ಅಲ್ಲಿ ಹೊಮ್ಮಿರುವ ಫಲಿತಾಂಶ ಸಾಬೀತುಮಾಡಿದೆ. ಇನ್ನು ಹರಿಯಾಣದ ಕಡೆಗೆ ಹೊರಳುವುದಾದರೆ, ಇಲ್ಲಿ ಬಿಜೆಪಿಗೆ ಯಶಸ್ಸು ದಕ್ಕುವುದು ಕಷ್ಟ ಎಂದೇ ಕೆಲ ಸಮೀಕ್ಷೆಗಳು ಮುನ್ನುಡಿದಿದ್ದವು. ಕೆಲ ತಿಂಗಳ ಹಿಂದೆ ಇಲ್ಲಿನ ಮುಖ್ಯಮಂತ್ರಿಯನ್ನು ಬಿಜೆಪಿ ಹೈಕಮಾಂಡ್ ಬದಲಿಸಿದ್ದು, ಕೇಂದ್ರ ಸರಕಾರದ ವಿರುದ್ಧ ಇಲ್ಲಿನ ಕೃಷಿಕರಲ್ಲಿ ಮನೆಮಾಡಿದ್ದ ಅಸಮಾಧಾನ ಇವೇ ಮೊದಲಾದ ಅಂಶಗಳು ಬಿಜೆಪಿಗೆ ತಿರುಗುಬಾಣವಾಗಲಿವೆ ಎಂಬ ಗ್ರಹಿಕೆಯೇ ಬಹುತೇಕರಲ್ಲಿ ದಟ್ಟವಾಗಿತ್ತು. ಆದರೆ ಈ ಎಲ್ಲ ಸವಾಲುಗಳನ್ನೂ ಮೆಟ್ಟಿ ಬಿಜೆಪಿ ಸತತ ಮೂರನೆಯ ಬಾರಿಗೆ ಗದ್ದುಗೆಯನ್ನು ಅಪ್ಪಿದೆ. ವಿವಿಧ ಕಾರಣಗಳಿಗಾಗಿ ಕೇಂದ್ರದ ಮೋದಿ ಸರಕಾರದ ವಿರುದ್ಧ ಅತೃಪ್ತಿ- ಅಸಮಾಧಾನ-ಆರೋಪಗಳನ್ನು ಕಾರಿಕೊಳ್ಳುತ್ತಿದ್ದ ಒಲಿಂಪಿಯನ್ ಕುಸ್ತಿಪಟು ವಿನೇಶ್ ಫೋಗಟ್ ಅವರು ಹರಿಯಾಣದ ಜುಲಾನ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಗೆಲುವು ಸಾಧಿಸಿರುವುದು ಕೂಡ ಮತ್ತೊಂದು ಗಮನಾರ್ಹ ಅಂಶವೆನ್ನಬೇಕು. ಒಂದು ಕಾಲಕ್ಕೆ 'ಕಾಂಗ್ರೆಸ್-ಮುಕ್ತ ಭಾರತ'ದ ಮಂತ್ರ ಜಪಿಸುತ್ತಿದ್ದ ಬಿಜೆಪಿಗೆ, ಕರ್ನಾಟಕ ಮತ್ತು ತೆಲಂಗಾಣ ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್‌ಗೆ ದಕ್ಕಿದ ಗೆಲುವು ತಕ್ಕ ಉತ್ತರವನ್ನೇ ನೀಡಿತ್ತು. ಜಮ್ಮು-ಕಾಶ್ಮೀರದ ಫಲಿತಾಂಶ ಈ ಯಾದಿಗೆ ಮತ್ತೊಂದು ಸೇರ್ಪಡೆ ಎನ್ನಲಡ್ಡಿಯಿಲ್ಲ.

ಸೊಂಪಾದಕೀಯ

ಬೈಗುಳವೋ ಬೌಗುಳವೋ?

'ಮಾತು ಮನೆ ಕೆಡಿಸಿತು, ತೂತು ಒಲೆ ಕೆಡಿಸಿತು' ಅನ್ನೋ ಮಾತು ಎಲ್ಲರಿಗೂ ಗೊತ್ತು. ಮಾತು ಅನ್ನೋದು ಅದೆಷ್ಟು ಮನೆ, ಮನಸ್ಸುಗಳನ್ನು ಕೆಡಿಸಿದ್ದರೂ ಜನ ಮಾತಾಡುವ ಮುನ್ನ ಎಚ್ಚರಿಕೆ ವಹಿಸೋ ಪ್ರಜ್ಞೆ ಇನ್ನೂ ನಮ್ಮ ಸಮಾಜದಲ್ಲಿ ಕಾಣುತ್ತಿಲ್ಲ. ಅದರಲ್ಲೂ ರಾಜಕೀಯ ವಲಯದಲ್ಲಿ ವಿವಿಧ ಪಕ್ಷಗಳ ನಾಯಕರ ಅರಚಾಟ, ಕೆಸರೆರಚಾಟ ನೋಡಿದರೆ ಮಾತಿನ ಮೇಲೇ ಜುಗುಪ್ಸೆ ಬರೋದು ಖಂಡಿತ. ಇತ್ತೀಚೆಗಂತೂ ಈ ಬೆಳವಣಿಗೆ ತೀರಾ ಅಸಹ್ಯ ಮಟ್ಟಕ್ಕೆ ಹೋಗುತ್ತಿದೆ. ಇನ್ನೊಬ್ಬರ ಬಗ್ಗೆ ಮಾತಾಡುವಾಗ ಹೆಚ್ಚು ಕಮ್ಮಿ ಮಾತಾಡಿದ್ರೆ, ಅವರು ಮಾನನಷ್ಟ ಮೊಕದ್ದಮೆ ಹಾಕಬಹುದು ಅನ್ನೋ ಭಯ ಕೂಡಾ ಇತ್ತೀಚೆಗೆ ಇದ್ದಂತಿಲ್ಲ. ಯಾಕಂದ್ರೆ, ಇಲ್ಲಿ ಇನ್ನೊಬ್ಬರಿಂದ ಬೈಗುಳ ಕೇಳಿದವನು ಕೂಡ ಮತ್ತೊಬ್ಬರ ಮೇಲೆ ಮಾತುಗಳ ಬಾಣ ಪ್ರಯೋಗ ಮಾಡಿದವನೇ. ಹಾಗಾಗಿ ಅವನು ಕೇಸು ಹಾಕುವ ಮಟ್ಟಕ್ಕೆ ಹೋಗಲಾರ ಅನ್ನೋ ಭಂಡ ನಂಬಿಕೆ. ಆದರೆ ಸಾರ್ವಜನಿಕ ವೇದಿಕೆಗಳಲ್ಲಿ ಸೋ ಕಾಲ್ಡ್ ದೊಡ್ಡ ನಾಯಕರು ಇನ್ನೊಂದು ಪಕ್ಷದವರ ಬಗ್ಗೆ ತೀರಾ ಕೀಳು ಪದಗಳನ್ನು ಬಳಸುತ್ತಿರೋದು ಮಾತ್ರ ನಾಗರಿಕ ಸಮಾಜಕ್ಕೆ ಸವಾಲು ಹಾಕುವಂತಿದೆ. ಮಗ್ಗದಲ್ಲಿ ನೇಕಾರರು ಬಟ್ಟೆ ನೇಯುವುದು ಕಷ್ಟದ ಕೆಲಸ ಅಂತ ಎಲ್ಲರಿಗೂ ಗೊತ್ತು. ಆದರೆ ನಮ್ಮ ನೇತಾರರಿಗೆ ಬೈಗುಳಗಳ ಮೂಲಕ ಕಗ್ಗವನ್ನೇ ಸೃಷ್ಟಿ ಮಾಡೋದು ಮಾತ್ರ ತೀರಾ ಸುಲಭ ಆಗಿಬಿಟ್ಟಿದೆ. ಒಂದು ಲೆಕ್ಕದಲ್ಲಿ ಇವರು ಸಭ್ಯತೆಯ ಎಲ್ಲೆ ಮೀರಿ ಮಾತಾಡೋದು ನೋಡಿದ್ರೆ, ಇನ್ನೊಬ್ಬರ ಬಗ್ಗೆ ಇವರು ಆಡೋ ಬೈಗುಳದ ಮಾತುಗಳು ನಿಜಕ್ಕೂ ಬೈಗುಳಗಳೋ ಇಲ್ಲ ಬೌಗುಳಗಳೋ ಅನ್ನೋ ಅನುಮಾನ ಮೂಡುತ್ತದೆ. ಹಾಗಂತ ಯಾವುದೋ ಪಕ್ಷದ ತಳಮಟ್ಟದ ಕಾರ್ಯಕರ್ತ ಈ ಮಾತುಗಳನ್ನು ಆಡುತ್ತಿಲ್ಲ. ಬದಲಾಗಿ ಶಾಸಕ, ರಾಜ್ಯ ಮಂತ್ರಿ, ಕೇಂದ್ರ ಮಂತ್ರಿ ಸ್ಥಾನದಲ್ಲಿರುವ ದೊಡ್ಡವರು ಅನ್ನಿಸಿಕೊಂಡವರೇ ಈ ರೀತಿ ಓಪನ್ ಆಗಿ ಸಾರ್ವಜನಿಕರ ಮುಂದೆ ತಮ್ಮ ನಾಲಿಗೆ ಹರಿಬಿಡುತ್ತಿರೋದು ನೋಡಿದ್ರೆ, ಮಾತು ಕೇವಲ ಅವರ ಮನೆಯನ್ನಷ್ಟೇ ಅಲ್ಲ, ರಾಜಕಾರಣಿಗಳ ಅಖಾಡಗಳಾದ ಮೇಲ್ಮನೆ, ಕೆಳಮನೆಗಳನ್ನೂ ಕೆಡಿಸುತ್ತದೆ ಅನ್ನಿಸಿದರೆ ತಪ್ಪಿಲ್ಲ.

ಸಂಪಾದಕರ ಸದ್ಯಶೋಧನೆ

ಡೇಲ್ ಕಾರ್ನೇಗಿಯ ಮಹಾಕೃತಿ

ಜಗತ್ತಿನ ಯಾವುದೇ ಪುಸ್ತಕದ ಅಂಗಡಿಗೆ ಅಥವಾ ಗ್ರಂಥಾಲಯಕ್ಕೆ ಹೋದರೆ ಕಾಣಸಿಗುವ ಮತ್ತು ಇರಲೇಬೇಕಾದ ಒಂದು ಪುಸ್ತಕವೆಂದರೆ ಅದು ಡೇಲ್ ಕಾರ್ನೇಗಿ ಬರೆದ How to Win Friends and Influence People. ಪ್ರಾಯಶಃ ಎಲ್ಲರ ಖಾಸಗಿ ಸಂಗ್ರಹದಲ್ಲೂ ಕಾಣಸಿಗುವ ಕೃತಿಯಿದು. ಕೆಲವು ವರ್ಷಗಳ ಹಿಂದೆ, 'ರೀಡರ್ಸ್ ಡೈಜೆಸ್ಟ್' ಮಾಸಿಕ ಏರ್ಪಡಿಸಿದ ಜಾಗತಿಕ ಸಮೀಕ್ಷೆಯಲ್ಲಿ, ಶೇ.18ರಷ್ಟು ಓದುಗರು ತಾವು ಈ ಕೃತಿಯಿಂದಲೇ ಪುಸ್ತಕ ಓದುವುದನ್ನು ಆರಂಭಿಸಿದ್ದಾಗಿ ಹೇಳಿದ್ದರು. ಈ ಪುಸ್ತಕ ಎಷ್ಟು ಮಾರಾಟವಾಗಿದೆಯೋ ಯಾರಿಗೂ ಗೊತ್ತಿಲ್ಲ. ಕಾರಣ ಎಲ್ಲ ದೇಶಗಳಲ್ಲೂ ಇದರ ನಕಲಿ ಆವೃತ್ತಿಗಳು ಭಾರಿ ಸಂಖ್ಯೆಯಲ್ಲಿ ಮಾರಾಟವಾಗಿದ್ದರಿಂದ ನಿಖರವಾದ ಲೆಕ್ಕ ಸಿಗುವುದಿಲ್ಲ. ಕೆಲವರು ಐದು ಕೋಟಿ ಅಂತಾರೆ, ಇನ್ನು ಕೆಲವರು ಹತ್ತು ಕೋಟಿ ಅಂತಾರೆ. ಆದರೆ ಐದು ಕೋಟಿಗಿಂತ ಕಡಿಮೆ ಪ್ರತಿಗಳು ಮಾರಾಟವಾಗಿರಲಿಕ್ಕಿಲ್ಲ. ಅಂದ ಹಾಗೆ ಈ ಪುಸ್ತಕ ಬಿಡುಗಡೆಯಾಗಿ 86 ವರ್ಷಗಳಾದವು. ಇಂದಿಗೂ ಪ್ರತಿ ವರ್ಷ ಈ ಕೃತಿಯ ಎರಡೂವರೆ ಲಕ್ಷ ಪ್ರತಿಗಳು ಮಾರಾಟವಾಗುತ್ತಿರುವುದು ಮಾತ್ರ ಅಚ್ಚರಿಯ ಸಂಗತಿಯೇ. ಈ ಅವಧಿಯಲ್ಲಿ ಐವತ್ತಕ್ಕೂ ಹೆಚ್ಚು ಪರಿಷ್ಕೃತ ಆವೃತ್ತಿಗಳಲ್ಲಿ ಬಿಡುಗಡೆಯಾಗಿರುವುದು ಒಂದು ದಾಖಲೆಯೇ. ಎಲ್ಲ ಕಾಲಕ್ಕೂ ಸಲ್ಲುವ ಈ ಪುಸ್ತಕ 2011ರಲ್ಲಿ, 'ಟೈಮ್' ಮ್ಯಾಗಜಿನ್‌ನ ಪ್ರಭಾವ ಬೀರಿದ 100 ಪುಸ್ತಕಗಳ ಪಟ್ಟಿಯಲ್ಲಿ ಹತ್ತೊಂಬತ್ತನೇ ಸ್ಥಾನವನ್ನು ಪಡೆದಿತ್ತು. 'ನ್ಯೂಯಾರ್ಕ್ ಪಬ್ಲಿಕ್ ಲೈಬ್ರರಿ' ನಡೆಸಿದ ಸಮೀಕ್ಷೆ ಪ್ರಕಾರ, ಇದು ಸರ್ವಕಾಲಕ್ಕೂ ಸಲ್ಲುವ (Top Check Outs Of All Time) ಪುಸ್ತಕ. ಕಾಲಕಾಲಕ್ಕೆ ಈ ಪುಸ್ತಕದ ಕೃತಿಸ್ವಾಮ್ಯ (ಕಾಪಿರೈಟ್) ವನ್ನು ಬೇರೆ ಬೇರೆ ಪ್ರಕಾಶಕರು ಪಡೆದುಕೊಂಡಾಗ ಮೂಲವನ್ನು ಪರಿಷ್ಕರಿಸಿದ್ದುಂಟು. ಈ ನೆಪದಲ್ಲಿ ಕೃತಿಯನ್ನು ಬೇಕಾಬಿಟ್ಟಿ ಎಡಿಟ್ ಮಾಡಿದ್ದೂ ಇದೆ. ಆದರೂ ಓದುಗರ ಮೇಲಾಗಲಿ, ಮಾರಾಟದ ಮೇಲಾಗಲಿ ಯಾವುದೇ ಪ್ರತಿಕೂಲ ಪರಿಣಾಮ ಬೀರಿಲ್ಲ. ಈ ಪುಸ್ತಕವನ್ನು ಬರೆದಾಗ ಡೇಲ್ ಕಾರ್ನೇಗಿಗೆ ನಲವತ್ತಾರು ವರ್ಷ. ಮೂಲತಃ ಆತ ವ್ಯಕ್ತಿತ್ವ ವಿಕಸನ ಶಿಬಿರಗಳನ್ನು ನಡೆಸುತ್ತಿದ್ದ. ಮಾನವೀಯ ಸಂಬಂಧ, ಸಾರ್ವಜನಿಕ ಭಾಷಣ, ಜನರನ್ನು ಆಕರ್ಷಿಸುವ ಕಲೆ, ಉತ್ತಮ ನಡೆಯನ್ನು ಬೆಳೆಸಿಕೊಳ್ಳುವ ರೀತಿ.. ಇವೇ ಮುಂತಾದ ವಿಷಯಗಳನ್ನೊಳಗೊಂಡ 14 ವಾರಗಳ ಕೋರ್ಸನ್ನು ನಡೆಸುತ್ತಿದ್ದ. ಆ ಸಮಯದಲ್ಲಿ 'ಸೈಮನ್ ಮತ್ತು ಶುಸ್ಟರ್' ಪ್ರಕಾಶನ ಸಂಸ್ಥೆಯ ಮುಖ್ಯಸ್ಥರು, 'ಈ ವಿಷಯಗಳನ್ನೇ ಆಧಾರವಾಗಿಟ್ಟುಕೊಂಡು ನೀವೇಕೆ ಒಂದು ಪುಸ್ತಕವನ್ನು ಬರೆಯಬಾರದು' ಎಂದು ಸೂಚಿಸಿದರು. ಆದರೆ ಏನೋ ಒಂದು ನೆಪ ಹೇಳಿ ಕಾರ್ನೇಗಿ ಮುಂದೂಡುತ್ತಲೇ ಇದ್ದ. ಅದಾದ ಬಳಿಕ ಪ್ರಕಾಶಕರು ಒಬ್ಬ ಸ್ಟೆನೋಗ್ರಾಫರ್ ಅನ್ನು ನೇಮಿಸಿ, ಕಾರ್ನೇಗಿ ತನ್ನ ಶಿಬಿರಗಳಲ್ಲಿ ಮಾತಾಡುವುದನ್ನು ದಾಖಲಿಸಿಕೊಂಡು ಪುಸ್ತಕ ರೂಪದಲ್ಲಿ ಬರೆದುಕೊಡುವಂತೆ ಹೇಳಿದರು. ಆ ದಿನಗಳಲ್ಲಿ ಮೊದಲ ಮುದ್ರಣದಲ್ಲಿ ಐದು ಸಾವಿರ ಪ್ರತಿಗಳನ್ನು ಅಚ್ಚುಹಾಕಲಾಗಿತ್ತು. ಅವೆಲ್ಲಾ ಕೆಲವೇ ದಿನಗಳಲ್ಲಿ ಮಾರಾಟವಾದವು. ಒಂದು ವರ್ಷದ ಅವಧಿಯಲ್ಲಿ, 17 ಆವೃತ್ತಿಗಳು ಮಾರಾಟವಾಗಿದ್ದು ಗಮನಾರ್ಹ. ಜಗತ್ತಿನ ಖ್ಯಾತನಾಮ ಸಾಹಿತಿಗಳು, ಪ್ರತಿಭಾನ್ವಿತರು, ಅಮೆರಿಕದ ಅಧ್ಯಕ್ಷರು, ಉದ್ದಿಮೆದಾರರು, ಕಾರ್ಪೊರೇಟ್ ಸಂಸ್ಥೆ ಮುಖ್ಯಸ್ಥರು, ಹಾಲಿವುಡ್ ನಟ-ನಟಿಯರು, ಕ್ರೀಡಾಪಟುಗಳು ಈ ಕೃತಿಯನ್ನು ಓದಿದ್ದಾಗಿ ಹೇಳಿರುವುದು ಇದರ ಲೋಕಮಾನ್ಯತೆಗೆ ಸಾಕ್ಷಿ. ಜಗತ್ತಿನ ಅತಿ ಶ್ರೀಮಂತ ವ್ಯಕ್ತಿಗಳಲ್ಲಿ ಒಬ್ಬರಾದ ವಾರೆನ್ ಬಫೆಟ್, ತಮ್ಮ ಇಪ್ಪತ್ತನೇ ವಯಸ್ಸಿನಲ್ಲೇ ಇದನ್ನು ಓದಿರುವುದಾಗಿ ಹೇಳಿದ್ದರು. ನಿಮ್ಮ ಮನಸ್ಸಿಗೆ ಬರುವ ಹತ್ತು ಪುಸ್ತಕಗಳು ಯಾವವು ಎಂಬ ಪ್ರಶ್ನೆಯನ್ನು ಮೈಕ್ರೋಸಾಫ್ಟ್ ಸಂಸ್ಥಾಪಕ ಬಿಲ್ ಗೇಟ್ಸ್ ಅವರಿಗೆ ಕೇಳಿದಾಗ ಅವರು ಹೇಳಿದ ಪುಸ್ತಕಗಳಲ್ಲಿ How to Win Friends and Influence People ಕೂಡ ಒಂದಾಗಿತ್ತು. ಡೇಲ್ ಕಾರ್ನೇಗಿ 25ಕ್ಕಿಂತ ಹೆಚ್ಚು ಕೃತಿಗಳನ್ನು ಬರೆದಿದ್ದರೂ, ನೆನಪಿರುವುದು ಅದೊಂದೇ.

ನಿತ್ಯಮಂತ್ರವಾಗಲಿ 'ಸ್ವಚ್ಛಮೇವ ಜಯತೆ'!

ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ
vveditoped@gmail.com

ನಮ್ಮ ಜೀವಜಗತ್ತಿನತ್ತ ಒಂದು ವಿಶಾಲ ಪಕ್ಷಿನೋಟವನ್ನು ಹರಿಸೋಣ. ಜೀವಜಗತ್ತಿನಲ್ಲಿ ಸಸ್ಯಗಳು ಸ್ವತಂತ್ರ ಜೀವಿಗಳು. ಅವು ಸೂರ್ಯನ ಉಪಸ್ಥಿತಿಯಲ್ಲಿ ತಮ್ಮ ಆಹಾರವನ್ನು ತಾವು ಸೃಜಿಸಿಕೊಳ್ಳುತ್ತವೆ. ಸಸ್ಯಗಳನ್ನು ಸಸ್ಯಾಹಾರಿ ಪ್ರಾಣಿಗಳು ತಿನ್ನುತ್ತವೆ. ಸಸ್ಯಾಹಾರಿ ಪ್ರಾಣಿಗಳನ್ನು ಮಾಂಸಾಹಾರಿ ಪ್ರಾಣಿಗಳು ತಿನ್ನುತ್ತವೆ. ಸಸ್ಯಗಳು, ಸಸ್ಯಾಹಾರಿ ಪ್ರಾಣಿಗಳು ಹಾಗೂ ಮಾಂಸಾಹಾರಿ ಪ್ರಾಣಿಗಳನ್ನು ಮನುಷ್ಯನು ತಿನ್ನುತ್ತಾನೆ. ಮನುಷ್ಯನನ್ನು ತಿನ್ನುವ ಜೀವಿಗಳು ಅವನ ದೇಹದ ಮೇಲೆ ವಾಸಿಸುತ್ತವೆ ಹಾಗೂ ದೇಹದ ಒಳಗೂ ವಾಸಿಸುತ್ತವೆ. ಇಂಥ ಜೀವಿಗಳನ್ನು 'ಪರೋಪಜೀವಿಗಳು' ಅಥವ 'ಪ್ಯಾರಾಸೈಟ್ಸ್' ಎಂದು ಕರೆಯುತ್ತೇವೆ.

ದೇಹದ ಒಳಗೆ ವಾಸಿಸುವ ಜೀವಿಗಳಲ್ಲಿ ಕರುಳು ಹುಳುಗಳು ಮುಖ್ಯವಾದವು. ಇವು ಮನುಷ್ಯನ ರಕ್ತವನ್ನು ಹೀರಿಕೊಂಡು ಬದುಕುತ್ತವೆ ಹಾಗೂ ತಮ್ಮ ಸಂತಾನವನ್ನು ವರ್ಧಿಸುತ್ತವೆ. ಇನ್ನು ಮನುಷ್ಯನ ದೇಹದ ಹೊರಗೆ ನೋಡಿದಾಗ, ಅವನ ರಕ್ತವನ್ನು ಕುಡಿದು ಬದುಕುವ ಪ್ರಾಣಿಗಳಲ್ಲಿ ಹೇನು, ತಿಗಣೆ ಮತ್ತು ಸೊಳ್ಳೆಗಳು ಮುಖ್ಯವಾದವು. ಆದರೆ ಇವೆಲ್ಲಕ್ಕಿಂತಲೂ ಭೀಕರವಾದದ್ದು 'ಸಾರ್ಕಾಪ್ಟಿಸ್ ಸ್ಕೇಬೈ' ಎನ್ನುವ ಜೀವಿ. ಇದು 'ಅರಾಕ್ನೀಡ' ಎಂಬ ಗುಂಪಿಗೆ ಸೇರಿದ, ಜೇಡರಹುಳುವನ್ನು ಹೋಲುವಂಥ ಪುಟ್ಟ ಪ್ರಾಣಿ. ಇದನ್ನು ನಾವು 'ನುಸಿ' ಎಂದೂ ಕರೆಯುತ್ತೇವೆ. ಇದು ನಮ್ಮ ಚರ್ಮದಡಿಯಲ್ಲಿ ಬೀಡುಬಿಟ್ಟು, ನಮ್ಮ ದೇಹದ ರಕ್ತ ಮಾಂಸಗಳನ್ನು ತಿನ್ನುತ್ತಾ, ತಾನು ಬೆಳೆಯುತ್ತಾ, ತನ್ನ ಸಂಸಾರವನ್ನು ಬೆಳೆಸಿಕೊಳ್ಳುತ್ತ ನಮ್ಮಲ್ಲಿ 'ಕಜ್ಜಿ' ಎಂಬ ಕಾಯಿಲೆಯನ್ನುಂಟುಮಾಡುತ್ತಾ, ನಮ್ಮ ಬಾಳನ್ನು ನರಕವನ್ನಾಗಿ ಮಾಡುತ್ತದೆ.

ಕಜ್ಜಿ ಒಂದು ಅನಾದಿ ಕಾಲದ ಕಾಯಿಲೆ. ಚರ್ಮದ ಕಾಯಿಲೆ. ಅಂಟು ಕಾಯಿಲೆ. ಕಜ್ಜಿಯು ಮನುಷ್ಯರಿಗೆ ಮಾತ್ರವಲ್ಲ ನಾಯಿ, ಬೆಕ್ಕು ಮುಂತಾದ ಪ್ರಾಣಿಗಳಿಗೂ ಬರುವಂಥ ಕಾಯಿಲೆ. ಮಾನವ ವೈದ್ಯಕೀಯ ಇತಿಹಾಸದಲ್ಲಿ ಕಜ್ಜಿ ಎನ್ನುವ ಕಾಯಿಲೆಯ ಮೊದಲ ದಾಖಲೆಯು ಈಜಿಪ್ಷಿಯನ್ ಸಂಸ್ಕೃತಿಯ ಕಾಲದಲ್ಲಿ ದೊರೆಯುತ್ತದೆ. ಕ್ರಿ.ಪೂ.1550ರ ಕಾಲದ 'ಈಬರ್ಸ್ ಪ್ಯಾಪಿರಸ್'ನಲ್ಲಿ ಕಜ್ಜಿಯ ವರ್ಣನೆಯು ದೊರೆಯುತ್ತದೆ.

ಕ್ರಿ.ಪೂ.6ನೆಯ ಶತಮಾನದಲ್ಲಿ ರಚನೆಯಾಗಿರಬಹುದಾದ ಹಳೆಯ ಒಡಂಬಡಿಕೆಯ 'ದಿ ಬುಕ್ ಆಫ್ ಲೆವಿಟಿಕಸ್'ನಲ್ಲಿ ಕಜ್ಜಿ ಮತ್ತು ಚರ್ಮವ್ಯಾಧಿಗಳ ವಿವರಣೆಯು ದೊರೆಯುತ್ತದೆ. ''ಒಬ್ಬ ವ್ಯಕ್ತಿಯ ತಲೆ ಅಥವಾ ಗಡ್ಡದಲ್ಲಿ ಕಜ್ಜಿ ಇದ್ದರೆ, ಚರ್ಮದಲ್ಲಿ ಆಳವಾಗಿ ಬೇರು ಬಿಟ್ಟಿದ್ದರೆ, ಅವನ ತಲೆಕೂದಲು ತೆಳ್ಳಗಾಗಿ ಹಳದಿ ಬಣ್ಣವನ್ನು ತಳೆದಿದ್ದರೆ ಅವನನ್ನು ಪಾದ್ರಿಯ ಬಳಿಗೆ ಕರೆತರಬೇಕು. ಪಾದ್ರಿಯು ಆ ವ್ಯಕ್ತಿಯನ್ನು ಏಳು ದಿನಗಳವರೆಗೆ ಕ್ವಾರಂಟೈನಿಗೆ ಒಳಪಡಿಸುತ್ತಾನೆ. ಆನಂತರವೂ ಅವನನ್ನು ಕಜ್ಜಿ ಕಾಡಿದರೆ, ಮತ್ತೆ 7 ದಿನಗಳ ಕಾಲ ಕ್ವಾರಂಟೈನಿಗೆ ಒಳಪಡಿಸುತ್ತಾನೆ. ತುರಿಕೆಯು ಪೂರ್ಣ ನಿಂತಿದ್ದರೆ ಮಾತ್ರ ಅವನನ್ನು 'ಪರಿಶುದ್ಧ' ಎಂದು ಪರಿಗಣಿಸಿ ಸಮಾಜದಲ್ಲಿ ಬೆರೆಯಲು ಅವಕಾಶವನ್ನು ಮಾಡಿಕೊಡುತ್ತಾನೆ'' ಎನ್ನುವ ವರ್ಣನೆಯ ಜತೆಯಲ್ಲಿ ''ಅವನು ಉಟ್ಟಂಥ ಉಡುಪುಗಳು ಹಸಿರು/ಹಳದಿ/ಕೆಂಪು ಬಣ್ಣದ ಕಲೆಗಳನ್ನು ಒಳಗೊಂಡಿದ್ದರೆ, ಆ ಬಟ್ಟೆಗಳನ್ನು ಏಳು ದಿನಗಳ ಕಾಲ ಪ್ರತ್ಯೇಕವಾಗಿ ಇರಿಸಬೇಕು ಇಲ್ಲವೇ ಸುಡಬೇಕು'' ಎನ್ನುವ ಅರ್ಥವತ್ತಾದ ವಿವರಣೆಯಿದೆ. ಅರಿಸ್ಟಾಟಲ್ ಸಹ ಕಜ್ಜಿಯ ನಿಖರ ಹಾಗೂ ವಿಸ್ತೃತ ವರ್ಣನೆಯನ್ನು ನೀಡಿದ್ದಾನೆ. ಚರ್ಮದ ಕೆಳಗೆ ಅವಿತಿರುವ 'ಹೇನುಗಳು' ಈ ಕಾಯಿಲೆಗೆ ಕಾರಣ ಎನ್ನುತ್ತಾನೆ. ಸೆಲ್ಸಸ್ (ಕ್ರಿ.ಪೂ.25-ಕ್ರಿ.ಶ.50) ತನ್ನ 'ಡಿ ಮೆಡಿಸಿನ' ಪುಸ್ತಕದಲ್ಲಿ ಕಜ್ಜಿಯ ವಿವರಣೆಯನ್ನು ನೀಡಿದ್ದಾನೆ. ಮಧ್ಯಯುಗದ ಯುರೋಪಿಯನ್ನರು ಕೆಟ್ಟಗಾಳಿಯಿಂದ ಹಾಗೂ ಅಸ್ವಚ್ಛತೆಯಿಂದ ಕಜ್ಜಿ ಬರುತ್ತದೆ ಎಂದು ನಂಬಿದ್ದರು. ಬಹಳಷ್ಟು ಜನರು ''ಪರೋಪಜೀವಿಗಳು ರೋಗಿಗಳ ಒಡಲಿನಲ್ಲಿಯೇ ಹುಟ್ಟುತ್ತವೆ'' ಎಂದು ಭಾವಿಸಿದ್ದರು. ಇದಕ್ಕೆ ಆಧಾರವಾಗಿ ಕೊಳೆಯುವ ಮಾಂಸದಲ್ಲಿ ಕಂಡುಬರುವ ಹುಳುಗಳನ್ನು ತೋರಿಸುತ್ತಿದ್ದರು.

1668ರಲ್ಲಿ ಇಟಲಿಯ ವೈದ್ಯ ಫ್ರಾನ್ಸಿಸ್ಕೋ ರೆಡಿ ಒಂದು ದಿಟ್ಟ ಸಂಶೋಧನೆಯನ್ನು ನಡೆಸಿದ. ಇವನು ಮಾಂಸವನ್ನು ಗಾಜಿನ ಸೀಸೆಯಲ್ಲಿಟ್ಟು, ನೊಣಗಳನ್ನು ಮಾಂಸದ ಸಂಪರ್ಕಕ್ಕೆ ಬರದಂತೆ ತಡೆದ. ಆಗ ಮಾಂಸ ಕೊಳೆತರೂ ಅದರಲ್ಲಿ ಹುಳುಗಳು ಕಂಡುಬರಲಿಲ್ಲ. ಹಾಗಾಗಿ ''ಅಜೀವದಿಂದ ಜೀವ ಹುಟ್ಟಲಾರದು'' ಎಂದ. ಈ ಪ್ರಯೋಗವನ್ನು ಅಂದಿನ ಜನ ಒಪ್ಪಲಿಲ್ಲ. ಇದೇ ಅವಧಿಯಲ್ಲಿ ರೆಡಿಯ ಶಿಷ್ಯನಾಗಿದ್ದ ಜಿಯೋವನ್ನಿ ಕಾಸಿಮೋ ಬೊನೊಮೊ 1687ರಲ್ಲಿ ರೆಡಿಗೆ ಒಂದು ಪತ್ರವನ್ನು ಬರೆದ. ''ಹೆಂಗಸರು ತಲೆಯಲ್ಲಿರುವ ಹೇನು ಕೂರೆಗಳನ್ನು ಹಿಡಿದು, ನೆಲದ ಮೇಲೆ ಹಾಕಿ ಹೆಬ್ಬೆರಳ ಉಗುರಿನಿಂದ ಒತ್ತಿ ಸಾಯಿಸುವ ಹಾಗೆ, ಇಲ್ಲಿ ಕೆಲವು ಮಹಿಳೆಯರು ಸೂಜಿಯಿಂದ ಕಜ್ಜಿಯ ಗುಳ್ಳೆಯನ್ನು ಒಡೆದು, ಅದರೊಳಗಿರುವ ನೀರು ಹೊರಬಂದ ಮೇಲೆ ಬೆಳ್ಳನೆಯ ವಸ್ತುವನ್ನು ಉಗುರಿನಿಂದ ಒತ್ತಿ ಸಾಯಿಸುವುದನ್ನು ನೋಡಿದೆ. ಕೂಡಲೆ ನಾನು ಕಜ್ಜಿಯಿದ್ದ ವ್ಯಕ್ತಿಯೊಬ್ಬನ ಕಜ್ಜಿಗುಳ್ಳೆಯನ್ನು ಒಡೆದು ಅದರೊಳಗಿದ್ದ ಬೆಳ್ಳನೆಯ ವಸ್ತುವನ್ನು ಹೊರತೆಗೆದು, ಅದನ್ನು ಸೂಕ್ಷ್ಮದರ್ಶಕದ ಅಡಿಯಲ್ಲಿಟ್ಟು ನೋಡಿದೆ! ಅದೊಂದು 'ಪುಟ್ಟ ಆಮೆ'ಯ ಹಾಗಿತ್ತು! ಬಿಳಿಯ ಬಣ್ಣಕ್ಕಿತ್ತು. ಬೆನ್ನು ತುಸು ಕಪ್ಪಗಿತ್ತು. ಸ್ಪಷ್ಟ ತಲೆಯನ್ನು ಹೊಂದಿದ್ದ ಆ ಜೀವಿಗೆ ಆರು ಕಾಲುಗಳಿದ್ದವು. ಅದರ ಮೂತಿಯ ಮೇಲೆ ಎರಡು ಕೊಂಬುಗಳಂಥವು ಇದ್ದವು...'' ಹೀಗೆ ಕಜ್ಜಿ ನುಸಿಯ ಸ್ಪಷ್ಟ ಚಿತ್ರವನ್ನು ಬೊನೊಮೊ ನೀಡಿದ.

ವಾಸ್ತವದಲ್ಲಿ ಬೊನೊಮೊ ನೋಡಿದ್ದು ಕಜ್ಜಿಯ ಮರಿಹುಳುವನ್ನು. ವಯಸ್ಕ ಕಜ್ಜಿ ನುಸಿಗೆ ಎಂಟು ಕಾಲುಗಳಿರುತ್ತವೆ. ನಂತರ ಬೊನೊಮೊ ಈ ನುಸಿಗಳಲ್ಲಿ ಗಂಡು-ಹೆಣ್ಣು ಇರುವ ಬಗ್ಗೆ, ಅವುಗಳ ನಡುವೆ ಲೈಂಗಿಕ ಸಂಪರ್ಕವು ನಡೆಯುವ ಬಗ್ಗೆ, ಅದರಿಂದ ರೂಪುಗೊಳ್ಳುವ ಮೊಟ್ಟೆಗಳ ಬಗ್ಗೆ, ಮೊಟ್ಟೆಗಳು ಒಡೆದು ಮರಿಹುಳುಗಳು ಬರುವ ಬಗ್ಗೆ ಪೂರ್ಣ ವಿವರಗಳನ್ನು ನೀಡಿದ. ಜಗತ್ತಿಗೆ ಮೊದಲ ಬಾರಿಗೆ ಕಜ್ಜಿಯ ಪೂರ್ಣ ವಿವರ ದೊರೆಯುವುದರ ಜತೆಯಲ್ಲಿ, ಒಂದು ರೋಗವನ್ನು ಒಂದು ಜೀವಿಯು ಉಂಟುಮಾಡಬಲ್ಲುದು ಎಂಬ ವಿವರಣೆಯು ಮೊದಲ ಬಾರಿಗೆ ದೊರೆಯಿತು. ಕಜ್ಜಿಯು ಮನುಷ್ಯರಿಗೆ ಮಾತ್ರವಲ್ಲ, ಪ್ರಾಣಿಗಳಿಗೂ ಬರುತ್ತದೆ. ವಿಜ್ಞಾನಿಗಳು ಕಜ್ಜಿ ನುಸಿಗಳ ಬಗ್ಗೆ ವಿಸ್ತೃತ ಅಧ್ಯಯನವನ್ನು ಮಾಡಿ, ವಿವಿಧ ಕಜ್ಜಿ ನುಸಿಗಳ ಬಗ್ಗೆ ಕರಾರುವಾಕ್ಕಾದ ಮಾಹಿತಿಯನ್ನು ನೀಡಿರುವರು. ಮನುಷ್ಯರಿಗೆ ಕಜ್ಜಿಯನ್ನುಂಟುಮಾಡುವ ನುಸಿಯನ್ನು 'ಸಾರ್ಕಾಪ್ಟಿಸ್ ಸ್ಕೇಬೈ' ಅಥವಾ 'ಸಾ. ಹೋಮಿನಿಸ್' ಎಂದು ಕರೆದರು. ಅದೇ ರೀತಿ, ನಾಯಿಯಲ್ಲಿ ಕಜ್ಜಿಯನ್ನುಂಟು ಮಾಡುವ ನುಸಿಯನ್ನು 'ಸಾರ್ಕಾಪ್ಟಿಸ್ ಸ್ಕೇಬೈ' ಅಥವಾ 'ಸಾ. ಕ್ಯಾನಿಸ್' ಎಂದು ನಾಮಕರಣವನ್ನು ಮಾಡಿದರು. ಹೀಗೆಯೇ ಬೆಕ್ಕು, ಹಂದಿ, ನರಿ, ತೋಳಗಳಲ್ಲಿ ಕಜ್ಜಿಯನ್ನುಂಟುಮಾಡುವ ಕಜ್ಜಿ ನುಸಿಗಳನ್ನು ಗುರುತಿಸಿರುವರು.

ಮನುಷ್ಯರ ಕಜ್ಜಿಯು ಅಂಟು ಕಾಯಿಲೆ. ಮನುಷ್ಯರಿಂದಲೇ ಮತ್ತೊಬ್ಬ ಮನುಷ್ಯರಿಗೆ ಹರಡುತ್ತದೆ. ಕಜ್ಜಿ ಬಂದಿರುವ ನಾಯಿಯು ಮನುಷ್ಯರ ಹತ್ತಿರ ಮಲಗಿದರೆ, ನಾಯಿ ಕಜ್ಜಿಯು ಮನುಷ್ಯರಿಗೆ ಅಂಟಿಕೊಳ್ಳುತ್ತದೆ. ಆದರೆ ನಾಯಿ ಕಜ್ಜಿಯು ನಾಯಿಗೇ ವಿಶೇಷವಾಗಿರುವ ಕಾಯಿಲೆ, ಮನುಷ್ಯರಿಗೆ ಅಂಟಿಕೊಂಡರೂ ಪೂರ್ಣ ರೂಪದಲ್ಲಿ ಬೆಳೆಯುವುದಿಲ್ಲ, ಹಾಗಾಗಿ ನಾಯಿ ಕಜ್ಜಿಯು ಸ್ವಯಂ ನಿಯಂತ್ರಣಕ್ಕೆ ಬರುತ್ತದೆ ಮತ್ತು ಅದನ್ನು ತ್ವರಿತವಾಗಿ ಗುಣಪಡಿಸಲು ಸಾಧ್ಯವಿದೆ. ಕಜ್ಜಿಯ ಪ್ರಮುಖ ಲಕ್ಷಣ ತುರಿಕೆ. ಈ ತುರಿಕೆಯು ತೀವ್ರ ಸ್ವರೂಪದಲ್ಲಿರುತ್ತದೆ. ಸಾಮಾನ್ಯವಾಗಿ ರಾತ್ರಿಯ ಹೊತ್ತಿನಲ್ಲಿ ತುರಿಕೆಯು ಹೆಚ್ಚು. ಎರಡನೆಯದು ಕೆಂಪುಬಣ್ಣದ ದದ್ದುಗಳು. ಅವು ಮೊಡವೆಯ ಹಾಗೆ ಉಬ್ಬಿಕೊಂಡಿರುತ್ತವೆ. ಕೆಲವು ಸಲ ಈ ದದ್ದುಗಳಲ್ಲಿ ನೀರು ತುಂಬಿರಬಹುದು ಅಥವಾ ಹುರುಪೆಗಳಿ ರಬಹುದು. ಮರಳಿನಲ್ಲಿ ನಾವು ನಡೆದುಕೊಂಡು ಹೋದರೆ, ಹೇಗೆ ನಮ್ಮ ನಡಿಗೆಯು ಗುರುತನ್ನು ಬಿಡುತ್ತದೆಯೋ, ಹಾಗೆಯೇ ಕಜ್ಜಿ ನುಸಿಯು ನಮ್ಮ ಚರ್ಮದ ಕೆಳಗೆ ಸುರಂಗವನ್ನು ಮಾಡಿಕೊಳ್ಳುತ್ತಾ ಹೋದ ಕಡೆಯಲ್ಲೆಲ್ಲ ಗುರುತನ್ನು ಬಿಡುತ್ತಾ ಹೋಗುತ್ತದೆ. ಚರ್ಮದ ಮೇಲೆ ಸೂಕ್ಷ್ಮ ರೂಪದ, ಅಲೆ ಅಲೆಯಾದ, ಬೂದು ಬಣ್ಣದ ಗೆರೆಗಳನ್ನು ಕಾಣಬಹುದು. ಇಂಥ ಗೆರೆಗಳು ನಮ್ಮ ಶರೀರದಲ್ಲಿ ಬಿಸಿ ಹೆಚ್ಚಿರುವ ಸ್ಥಳಗಳಲ್ಲಿ ಕಂಡುಬರುತ್ತವೆ. ಉದಾ: ಬೆರಳುಗಳ ನಡುವೆ, ಮಣಿಕಟ್ಟು, ಮೊಳಕೈ, ಕಂಕುಳು, ಜನನಾಂಗಗಳು, ಸೊಂಟ. ಈ ಸ್ಥಳಗಳಲ್ಲಿ ವಿಪರೀತ ತುರಿಕೆ ಕಂಡುಬರುತ್ತದೆ. ತಡೆಯಲಸಾಧ್ಯವಾದ ತುರಿಕೆಯಿಂದಾಗಿ ಅದನ್ನು ಕೆರೆಯುತ್ತೇವೆ. ಆಗ ನಮ್ಮ ಉಗುರಿನಿಂದ ಸಣ್ಣ ಪುಟ್ಟ ತರಚುಗಾಯಗಳಾಗುತ್ತವೆ. ಉಗುರಿನ ಕೊಳೆಯಲ್ಲಿರುವ ಬ್ಯಾಕ್ಟೀರಿಯಾದಿ ಸೋಂಕು ಜನಕಗಳು ಗಾಯದ ಮೂಲಕ ಒಳಪ್ರವೇಶಿಸಿ ಸೋಂಕನ್ನು, ಮತ್ತಷ್ಟು ನವೆಯನ್ನು ಉಂಟುಮಾಡುತ್ತವೆ. ಅದನ್ನು ಕೆರೆದಾಗ ಕೀವು ರಕ್ತ ಹೊರಹರಿಯುತ್ತದೆ.

ಪ್ರಾಣಿಗಳಲ್ಲೂ ತುರಿಕೆ ಕಂಡುಬರುತ್ತದೆ. ಅವು ತುರಿಕೆ ಬಂದ ಭಾಗವನ್ನು ಮರಕ್ಕೋ, ಲೈಟುಕಂಬಕ್ಕೋ ಉಜ್ಜುತ್ತವೆ ಇಲ್ಲವೇ ಬಾಯಿಂದ ನವೆಯನ್ನು ಶಮನಗೊಳಿಸಲು ಪ್ರಯತ್ನಿಸುತ್ತವೆ. ಇದು ತೀವ್ರವಾದಾಗ ಗಾಯಗಳಾಗುತ್ತವೆ. ಕೂದಲು ಉದುರುತ್ತದೆ. ಗಾಯಗಳಲ್ಲಿ ಕೀವು ಅಧಿಕವಾಗಿ ಹೆಪ್ಪಳಿಕೆಗಳು ಮೂಡುತ್ತವೆ. ತುರಿಕೆ ವಿಪರೀತವಾದಾಗ, ಈ ಪ್ರಾಣಿಗಳು ಒಂದು ಕಡೆ ನಿಲ್ಲದೆ ಚಡಪಡಿಸುತ್ತವೆ, ಎಲ್ಲೆಡೆ ಓಡಾಡುತ್ತಿರುತ್ತವೆ. ಕಜ್ಜಿಯಿಂದ ನರಳುವ ವ್ಯಕ್ತಿಯ ದೇಹದ ಭಾಗಗಳನ್ನು ಪರೀಕ್ಷಿಸುತ್ತಿರುವಂತೆಯೇ, ವೈದ್ಯರಿಗೆ ಸಮಸ್ಯೆ ಏನೆಂದು ಅರಿವಾಗುತ್ತದೆ. ಕೆಲವು ಸಲ ತುರಿಕೆ ಕಂಡುಬರುವ ಚರ್ಮ ವನ್ನು ಹೆರೆದು ಸೂಕ್ಷ್ಮದರ್ಶಕದಡಿಯಲ್ಲಿ ನೋಡಿದಾಗ, ನುಸಿಗಳು, ನುಸಿಗಳ ಮೊಟ್ಟೆಗಳು, ಮರಿಗಳು ಮತ್ತು ಮರಿಗಳ ಮಲವಿಸರ್ಜನೆ ಎಲ್ಲವೂ ಕಂಡುಬರುತ್ತವೆ. ಇದು ರೋಗನಿದಾನವನ್ನು ಖಚಿತಪಡಿಸುತ್ತದೆ.

ಮನುಷ್ಯರಲ್ಲಿ ಕಂಡುಬರುವ ಕಜ್ಜಿಯನ್ನು ಪರ್ಮಿಥ್ರಿಯನ್ ಶೇ.5 ಲೇಪನ, ಕ್ರೊಟಾಮೈಟಾನ್ ಲೇಪನ, ಗಂಧಕಯುಕ್ತ ಲೇಪನಗಳನ್ನು ಹಚ್ಚುವುದರ ಮೂಲಕ ಗುಣಪಡಿಸಬಹುದು. ಐವರಿಮೆಕ್ಟಿನ್ ಎಂಬ ಗುಳಿಗೆಯನ್ನು ನುಂಗಲು ನೀಡಬಹುದು. ನವೆಯನ್ನು ಕಡಿಮೆ ಮಾಡಲು ನವೆರೋಧಕ ಗುಳಿಗೆಗಳನ್ನು ಅಥವಾ ಅಲ್ಪಕಾಲಾವಧಿಯ ಸ್ಟೀರಾಯ್ಡುಗಳನ್ನು ಸೇವಿಸುವಂತೆ ಸೂಚಿಸಬಹುದು. ಪ್ರಾಣಿಗಳಲ್ಲಿ ಅಮಿಟ್ರಾಜ಼್, ಲೈಮ್ ಸಲ್ಫರ್, ಬೆಂಜಾಯಿಲ್ ಪೆರಾಕ್ಸೈಡ್, ಐವರಿಮೆಕ್ಟಿನ್, ಸೆಲಾಮೆಕ್ಟಿನ್ ಅಥವಾ ಮೋಕ್ಸಿಡೆಕ್ಟಿನ್ ಗುಳಿಗೆಗಳನ್ನು ನೀಡಬಹುದು. ಕಜ್ಜಿಯನ್ನು ಬಂದಮೇಲೆ ಗುಣಪಡಿಸುವುದಕ್ಕಿಂತ, ಬರದಂತೆ ಮುನ್ನೆಚ್ಚರಿಕೆಯನ್ನು ವಹಿಸುವುದು ಮುಖ್ಯ. ಕಜ್ಜಿಬಂದವರೊಡನೆ ನಿಕಟ ದೈಹಿಕ ಸಂಪರ್ಕವನ್ನು ನಡೆಸಿದರೆ ಅಥವಾ ಅವರು ಬಳಸಿದ ವಸ್ತುಗಳನ್ನು ಉಪಯೋಗಿಸಿದರೆ ನಮಗೂ ಕಜ್ಜಿಯು ಅಂಟಿಕೊಳ್ಳುತ್ತದೆ. ಸ್ವಚ್ಛತೆಯೊಂದೇ ಇದರ ನಿವಾರಣೆಗೆ ಮೂಲಮಂತ್ರ. ಪ್ರತಿಯೊಬ್ಬ ವ್ಯಕ್ತಿಯು ತನ್ನ ದೈಹಿಕ ಸ್ವಚ್ಛತೆಗೆ ಎಷ್ಟು ಗಮನವನ್ನು ಕೊಡುತ್ತಾನೋ, ಅಷ್ಟೇ ಗಮನವನ್ನು ತಾನು ಬಳಸುವ ಉಡುಪುಗಳು, ಹಾಸಿಗೆ, ದಿಂಬು, ಹೊದಿಕೆಗಳಿಗೂ ಕೊಡಬೇಕು. ಕಜ್ಜಿಯು ಅಂಟು ಜಾಡ್ಯವಾಗಿರುವ ಕಾರಣ, ಹೆಚ್ಚು ಜನರು ಒಂದೆಡೆ ವಾಸಿಸುವ ಸ್ಥಳಗಳಾದ ಶಾಲೆ, ಹಾಸ್ಟೆಲ್, ಜೈಲು, ಅನಾಥಾಲಯಗಳು ಮುಂತಾದ ಕಡೆ ಹೆಚ್ಚು ಕಂಡುಬರುತ್ತದೆ. ಹಾಗೆ ಕಂಡುಬಂದಾಗ, ಎಲ್ಲರಿಗೂ ಚಿಕಿತ್ಸೆಯನ್ನು ನೀಡುವುದರ ಜತೆಯಲ್ಲಿ ಅವರ ಹಾಸಿಗೆ, ದಿಂಬು, ಹೊದಿಕೆಗಳ ಜತೆಗೆ ಅವರು ವಾಸಿಸುವ ಕಟ್ಟಡವನ್ನೂ ಸ್ವಚ್ಛಗೊಳಿಸಬೇಕಾಗುತ್ತದೆ. ಸಾಕುನಾಯಿಯನ್ನು ಬೀದಿನಾಯಿಗಳ ಜತೆ ಬೆರೆಯಲು ಬಿಡಬಾರದು. ಸೆಲಾಮೆಕ್ಟಿನ್ ಮತ್ತು ಮೋಕ್ಸಿಡೆಕ್ಟಿನ್‌ಯುಕ್ತ ಶಾಂಪುಗಳಿಂದ ಸ್ನಾನವನ್ನು ಮಾಡಿಸುತ್ತಿದ್ದರೆ ಸಾಕು ನಾಯಿಗೆ ಕಜ್ಜಿ ಅಂಟಿಕೊಳ್ಳುವ ಸಾಧ್ಯತೆಯು ಕಡಿಮೆಯಿರುತ್ತದೆ.

ಕಜ್ಜಿ ಅನಾದಿ ಕಾಲದ ರೋಗ. ಇದು ವ್ಯಕ್ತಿಯ ಬದುಕನ್ನು ತೀರಾ ಅಸ್ತವ್ಯಸ್ತ ಮಾಡುತ್ತದೆ. ಸ್ವಚ್ಛತೆಯ ಮೂಲಕ ಇದನ್ನು ತಡೆಗಟ್ಟಬಹುದು. ಪ್ರಾಣಿಗಳಿಗೆ ಬರುವ ಕಜ್ಜಿಯನ್ನು ನಿಗದಿತ ಶಾಂಪುವನ್ನು ಬಳಸುವುದರ ಮೂಲಕ ನಿಗ್ರಹಿಸಲು ಸಾಧ್ಯ. ಹಾಗಾಗಿ ಕಜ್ಜಿಯ ನಿಯಂತ್ರಣಕ್ಕೆ 'ಸ್ವಚ್ಛಮೇವಜಯತೇ' ಎನ್ನುವುದೇ ಮೂಲಮಂತ್ರವಾಗುತ್ತದೆ.

ಓದುಗರ ಒಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಪರಿಸರವನ್ನು ಉಳಿಸೋಣ

ಅರಣ್ಯ ಇಲಾಖೆಯು ಸಾರ್ವಜನಿಕರ ಸಹಯೋಗದೊಂದಿಗೆ 70ನೇ ವನ್ಯಜೀವಿ ಸಪ್ತಾಹವನ್ನು ಇತ್ತೀಚೆಗಷ್ಟೇ ಆಚರಿಸಿದೆ. ವನ್ಯಜೀವಿಗಳ ಮತ್ತು ಅರಣ್ಯದ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸುವುದು ಈ ಆಚರಣೆಯ ಉದ್ದೇಶ. ಮನುಷ್ಯರನ್ನು ಕಾನೂನಿನಿಂದ ಬಿಗಿಮಾಡಬಹುದು, ಆದರೆ ವನ್ಯಜೀವಿಗಳನ್ನು? ಮನುಷ್ಯ ಮತ್ತು ವನ್ಯಪ್ರಾಣಿಗಳ ನಡುವಿನ ಸಂಘರ್ಷವು ದಿನೇದಿನೆ ಹೆಚ್ಚುತ್ತಿದೆ. ಮನುಷ್ಯನ ಅತಿಯಾದ ಸ್ವಾರ್ಥ ಮತ್ತು ಅಭಿವೃದ್ಧಿಯ ಹೆಸರಿನಲ್ಲಿ ಆತ ಮಾಡುತ್ತಿರುವ ಪರಿಸರ-ವಿರೋಧಿ ಚಟುವಟಿಕೆ ಇದಕ್ಕೆ ನೇರಕಾರಣ ಎನ್ನಲಡ್ಡಿಯಿಲ್ಲ.

ಮನುಷ್ಯ ಮೂಲತಃ ಪರಿಸರವನ್ನು ಮನೆಯಾಗಿ ಮಾಡಿಕೊಂಡು ಅರಣ್ಯದಲ್ಲಿ ವನ್ಯಜೀವಿಗಳ ಜತೆಗೆ ಇದ್ದವನು. ಆದರೆ ತನ್ನ ಅತಿಯಾದ ಬುದ್ಧಿವಂತಿಕೆಯಿಂದಾಗಿ ಮತ್ತು ವೈವಿಧ್ಯಮಯ ಕಲ್ಪನೆಯ ಬದುಕಿಗಾಗಿ ಕ್ರಮೇಣ ಹಳ್ಳಿವಾಸಿ-ನಗರವಾಸಿಯಾಗಿ ಬದುಕು ಸಾಗಿಸಲು ಆತ ಪ್ರಾರಂಭಿಸಿದ. ಅಂದರೆ, ಈ ಮನುಷ್ಯ ಕಾಡಿನಿಂದ ಹೊರಬಂದದ್ದು ಮತ್ತು ಇವತ್ತು ಕಾಡಿನೊಳಗೆ ಹೋಗುತ್ತಿರುವುದು ಈ ಎರಡೂ ವಿಲಾಸಿ ಬದುಕಿನೆಡೆಗಿನ ತನ್ನ ಆಕಾಂಕ್ಷೆಯಿಂದಾಗಿಯೇ. 'ಅರಣ್ಯ-ವನ್ಯಜೀವಿ-ಮನುಷ್ಯ' ಎಂಬುದು ಬದುಕಿಗಾಗಿ ಒಂದಕ್ಕೊಂದು ಅವಲಂಬಿತವಾದ ಕೊಂಡಿಯಾಗಿದೆ. ಈ ಭೂಮಿ, ಅರಣ್ಯ, ವನ್ಯಜೀವಿ ಯಾವುದು ಕೂಡ ತಮ್ಮ ಮಿತಿಯನ್ನು ಮೀರಿ ಅತಿರೇಕದ ವರ್ತನೆಯನ್ನು ತೋರಿಲ್ಲ. ಆದರೆ ಮನುಷ್ಯನ ದುರಾಸೆಯ ಫಲವಾಗಿ ನಾವೆಲ್ಲರೂ ಪರಿಸರದ ವ್ಯತಿರಿಕ್ತ ಪರಿಣಾಮವನ್ನು ಎದುರಿಸುವಂತಾಗಿದೆ.

ನಮಗೆ ಶೇ.33ರಷ್ಟು ಅರಣ್ಯ ಪ್ರದೇಶದ ಅವಶ್ಯಕತೆ ಇದೆ; ಆದರೆ ನಮ್ಮ ದೇಶವು ಪ್ರಸ್ತುತ ಶೇ.21.71ರಷ್ಟು ಮಾತ್ರವೇ ಅರಣ್ಯವನ್ನು ಹೊಂದಿದೆ (ಕರ್ನಾಟಕದಲ್ಲಿ ಶೇ.21.21ರಷ್ಟು). ಅರಣ್ಯವಿದ್ದರೆ ಮಾತ್ರವೇ ವನ್ಯಜೀವಿ ಸಂಪತ್ತು ಉಳಿಯುತ್ತದೆ, ವನ್ಯಜೀವಿ ಸಂಪತ್ತು ಇದ್ದರೆ ಮಾತ್ರವೇ ಮನುಷ್ಯ ಉಳಿಯಲು ಸಾಧ್ಯ ಎಂಬ ಸತ್ಯವನ್ನು ನಾವೆಲ್ಲರೂ ಅರಿಯಬೇಕಿದೆ. ಆದರೆ, ಪರಿಸರದ ಸ್ವಾಭಾವಿಕ ಕೊಂಡಿ ಕುಸಿಯುತ್ತಿದೆ. ಉದಾಹರಣೆಗೆ, ನಮ್ಮ ಪೂರ್ವಿಕರು ಒಂದು ಬೆಳೆ ಹಾಕಿದರೆ, ಅದರ ಪರಿಸರ ನಿರ್ವಹಣೆಯು ಸ್ವಾಭಾವಿಕವಾಗಿತ್ತು. ಪಶು-ಪ್ರಾಣಿಗಳ ಸಾವಯವ ಗೊಬ್ಬರ ಬಳಕೆಯಾಗುತ್ತಿದ್ದುದರಿಂದ ಭೂಮಿಗೆ ಯಾವುದೇ ಹಾನಿಯಾಗುತ್ತಿರಲಿಲ್ಲ, ಮುಂದೆ ಆ ಬೆಳೆಗೆ ಬರುವ ಕ್ರಿಮಿ-ಕೀಟವನ್ನು ಪಕ್ಷಿಗಳು ಸ್ವಾಭಾವಿಕವಾಗಿ ತಿನ್ನುತ್ತಿದ್ದುದರಿಂದ ಬೆಳೆಯ ರಕ್ಷಣೆ ಆಗುತ್ತಿತ್ತು, ಬೆಳೆಯ ಇಳುವರಿಗೆ ತೊಂದರೆಯಾಗುತ್ತಿರಲಿಲ್ಲ.

ಅರಣ್ಯವಿದ್ದರೆ ಮಳೆ, ಮಳೆಯಿದ್ದರೆ ಬೆಳೆ, ಬೆಳೆಯಿದ್ದರೆ ನಾವು-ನೀವು. ಹೀಗೆ ಪ್ರತಿ ಪ್ರಾಣಿ-ಪಕ್ಷಿಗಳಲ್ಲಿ ಮನುಷ್ಯ ಒಳಗೊಂಡ ಸರಪಳಿ ಇದೆ. ಆದರೆ ಇವತ್ತು ಎಲ್ಲವೂ ರಾಸಾಯನಿಕ ಔಷಧಿಗಳ ಮೇಲೆ ಅವಲಂಬಿತವಾಗಿರುವುದರಿಂದ ನಾವು ವಿನಾಶದ ಹಾದಿಯನ್ನು ತುಳಿಯುತ್ತಿದ್ದೇವೆ. ಇವತ್ತು ನಾವೆಲ್ಲರೂ ಕಾಣುತ್ತಿರುವ ಹಾಗೆ, ಪರಿಸರದ ವ್ಯತಿರಿಕ್ತ ಪರಿಣಾಮದಿಂದಾಗಿ ಅತಿಯಾದ ಮಳೆ, ಬರಗಾಲ, ಅರಣ್ಯ ನಾಶದಿಂದಾಗಿ ಗುಡ್ಡಕುಸಿತ, ಪ್ರವಾಹ ಸಂಭವಿಸುತ್ತಿದೆ. ಹಲವು ರೋಗಗಳು ಕಾಣಬರುತ್ತಿವೆ. ಅಷ್ಟೇಕೆ ಉಸಿರಾಡಲು ಶುದ್ಧಗಾಳಿಯಿಲ್ಲದೆ ತೊಂದರೆ ಅನುಭವಿಸುತ್ತಿದ್ದೇವೆ. ವನ್ಯಜೀವಿಗಳ ನೆಲೆಯನ್ನು ನಾವು ಅತಿಕ್ರಮಿಸಿರುವ ಕಾರಣ, ಅವು ಇವತ್ತು ನಮ್ಮ ಜಾಗಗಳಿಗೆ ನುಗ್ಗುತ್ತಿವೆ. ಈ ಸೂಕ್ಷ್ಮತೆಯನ್ನು ಅರಿತು ನಾವೆಲ್ಲರೂ ಅರಣ್ಯವನ್ನು ಉಳಿಸಿ ಬೆಳೆಸುವ ಮತ್ತು ವನ್ಯಜೀವಿಗಳನ್ನು ಸಂರಕ್ಷಿಸುವ ಸಂಕಲ್ಪವನ್ನು ಮಾಡಬೇಕಿದೆ.

ನಮ್ಮ ಅರಣ್ಯ ಇಲಾಖೆಯು ಕಾಡಿನ ರಕ್ಷಣೆ ಮತ್ತು ವನ್ಯಜೀವಿಗಳ ಸಂರಕ್ಷಣೆಗಾಗಿ ಹಲವು ಯೋಜನೆಗಳನ್ನು ರೂಪಿಸಿದೆ. ಇಲಾಖೆಯ ಸಿಬ್ಬಂದಿ ನಮ್ಮೆಲ್ಲರ ಹಿತಕಾಯಲು ಇನ್ನಿಲ್ಲದಂತೆ ಪರಿಶ್ರಮ ವಹಿಸುತ್ತಿದ್ದಾರೆ. ಸಾರ್ವಜನಿಕರು ಇದನ್ನು ಗಮನದಲ್ಲಿಟ್ಟುಕೊಂಡು ಅವರ ಕೆಲಸದಲ್ಲಿ ಸಹಕಾರ ಹಸ್ತ ನೀಡಬೇಕಿದೆ. ಇದು ನಮಗಾಗಿ ನಮ್ಮವರಿಗಾಗಿ ಮಾಡುತ್ತಿರುವ ಕೆಲಸ ಎಂಬುದನ್ನು ನಾವು ಅರಿಯಬೇಕಾಗಿದೆ.

- ಪ್ರವೀಣ್ ಸುಭಾಷ್ ಪಡನಾಡ

ಮಾನಹಾನಿ ಪ್ರಕರಣ ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣವೇ?

ನ್ಯೂನ ಕಾನೂನು

ತಿಮ್ಮಣ್ಣ ಭಾಗ್ವತ್
vveditoped@gmail.com

ಮಾನಹಾನಿ ಖಟ್ಲೆ ಸಾಕಷ್ಟು ಸಲ ಕೇಳಿಬರುವ ವಿಷಯ. 'ಮಾನಹಾನಿ ಕೇಸ್ ಹಾಕುತ್ತೇನೆ' ಎಂದು ರೋಫ್ ಹಾಕಿಸಿಕೊಳ್ಳುವುದು ಮತ್ತು ಮಾನಹಾನಿ ಕೇಸುಗಳನ್ನು ಎದುರಿಸುವುದು ಪತ್ರಕರ್ತರು/ಮಾಧ್ಯಮದವರಿಗೆ ಬಹುಶಃ ದಿನನಿತ್ಯದ ವ್ಯವಹಾರ. ಕೆಲವು ರಾಜಕಾರಣಿಗಳಂತೂ ಮತಬೇಟೆಯ ಆರ್ಭಟದ, ಮಿತಿಬಿಟ್ಟ ಭಾಷಣಗಳಲ್ಲಿ ಮಾನಹಾನಿಯನ್ನು ಮಾಡಿದರೂ 'ನಾನು ಹಾಗೆ ಹೇಳಿಲ್ಲ' ಎಂದು ಸಾಧಿಸಲು ಇನ್ನಿಲ್ಲದ ಸಾಹಸಪಡುತ್ತಾರೆ. ಇನ್ನು ಕೆಲವು 'ಮಾನವಂತರು' ಇದನ್ನು ತಮ್ಮ ವಿರುದ್ಧ ಬರುವ ಟೀಕೆಗಳನ್ನು ಮುಚ್ಚಿಹಾಕಲು ಅಥವಾ ಟೀಕಾಕಾರರ ಬಾಯಿ ಮುಚ್ಚಿಸಲು ಬೆದರಿಕೆ ಅಸ್ತ್ರವಾಗಿ ಬಳಸುತ್ತಾರೆ ಎಂಬ ಆರೋಪವಿದೆ.

- **ಏನಿದು ಮಾನಹಾನಿ?**

'ಸಂಭಾವಿತಸ್ಯ ಚಾಕೀರ್ತಿರ್ಮರಣಾದತಿರಿಚ್ಯತೇ' (ಭಗವದ್ಗೀತೆ ಅಧ್ಯಾಯ 2, ಶ್ಲೋಕ 34)- ಮಾನವಂತರಿಗೆ ಮಾನಹಾನಿಯು ಮರಣಕ್ಕಿಂತಲೂ ಹೆಚ್ಚಿನದು. ಮನುಸ್ಮೃತಿಯ ಪ್ರಕಾರ ರಾಜನು ನ್ಯಾಯನಿರ್ಣಯ ಮಾಡಬೇಕಾದ 18 ಬಗೆಯ ವ್ಯಾಜ್ಯಗಳಲ್ಲಿ ಅಪನಿಂದೆ (ವಾಚಿಕಾ) ಕೂಡ ಒಂದು. ಐರೋಪ್ಯ ದೇಶಗಳಲ್ಲಿ ಕೂಡ ಅಪನಿಂದೆ ಮತ್ತು ಅವಮಾನ (ಸ್ಲಾಂಡರ್ ಮತ್ತು ಲಿಬೆಲ್) ಶಿಕ್ಷಾರ್ಹವಾಗಿತ್ತು.

ಭಾರತದ ಸಂವಿಧಾನದ ಪೀಠಿಕೆಯು (preamble) ದೇಶದ ಪ್ರಜೆಗಳಿಗೆ ಘನತೆಯ ಭರವಸೆಯನ್ನು ನೀಡುತ್ತದೆ. 21ನೇ ವಿಧಿಯ ಅಡಿಯಲ್ಲಿ ದತ್ತವಾದ ಜೀವಿಸುವ ಹಕ್ಕು ಕೇವಲ ಜೀವ ಉಳಿಸಿಕೊಳ್ಳುವ ಹಕ್ಕಲ್ಲ, ಘನತೆ ಮತ್ತು ಗೌರವದಿಂದ ಬದುಕುವ ಹಕ್ಕು ಎಂದು ಅನೇಕ ಪ್ರಕರಣಗಳಲ್ಲಿ ಸುಪ್ರೀಂ ಕೋರ್ಟ್ ಹೇಳಿದೆ (ಉದಾಹರಣೆಗೆ, ಮನೇಕಾ ಗಾಂಧಿ ವರ್ಸಸ್ ಭಾರತ ಸರಕಾರ ಪ್ರಕರಣ).

ಭಾರತೀಯ ನ್ಯಾಯ ಸಂಹಿತೆಯ 356ನೇ ಕಲಂ, (ಐಪಿಸಿ 499 ಮತ್ತು 500) ಮಾನಹಾನಿಯ ಕುರಿತು ವ್ಯಾಖ್ಯೆ ಮತ್ತು ಉದಾಹರಣೆಗಳ ಸಹಿತ ಸುದೀರ್ಘ ವಿವರಣೆಗಳನ್ನು ನೀಡುತ್ತದೆ. ಈ ಕಲಮಿನ ಪ್ರಕಾರ ಯಾವುದೇ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಯ ಘನತೆಗೆ ಧಕ್ಕೆ ತರುವ ಉದ್ದೇಶದಿಂದ ಅಥವಾ ಅಂಥ ಧಕ್ಕೆಯಾಗುವುದೆಂಬ ಅರಿವಿದ್ದರೂ ನಿಂದನೆಯ ಮಾತನ್ನಾಡಿದರೆ ಅಥವಾ ಬರವಣಿಗೆ, ಸಂಜ್ಞೆ, ಚಿತ್ರ ಅಥವಾ ದೃಶ್ಯ ಮಾಧ್ಯಮಗಳ ಮೂಲಕ ನಿಂದನೆಯನ್ನು ಮಾಡಿದರೆ ಅಥವಾ ಪ್ರಕಟಿಸಿದರೆ ಅಂಥ ವ್ಯಕ್ತಿಯು ಆ ಇನ್ನೊಬ್ಬನಿಗೆ ಮಾನಹಾನಿಯನ್ನು ಮಾಡಿದಂತಾಗುತ್ತದೆ. ಮಾನಹಾನಿಯನ್ನು ಮಾಡುವ ವ್ಯಕ್ತಿಗೆ ಎರಡು ವರ್ಷಗಳ ಕಾರಾಗೃಹ ಶಿಕ್ಷೆ ಅಥವಾ ದಂಡ ಅಥವಾ ಇವೆರಡನ್ನೂ ವಿಧಿಸಬಹುದು. ಇಂಥ ಮಾನಹಾನಿಯು ವ್ಯಕ್ತಿಗಳಿಗೆ, ಕಂಪನಿಗಳಿಗೆ ಅಥವಾ ಗುರುತಿಸಬಹುದಾದ ನಿರ್ದಿಷ್ಟ ಸಮುದಾಯಕ್ಕೆ ಕೂಡ ಅನ್ವಯಿಸುತ್ತದೆ.

ಆದರೆ ಅಂಥ ಆರೋಪಗಳು ನಿಜವಾಗಿದ್ದರೆ ಮತ್ತು ಸಾರ್ವಜನಿಕ ಹಿತಕ್ಕಾಗಿ ಅವನ್ನು ಪ್ರಕಟಿಸಬೇಕಾಗಿದ್ದರೆ ಅಥವಾ ಅಂಥ ಪ್ರಕಟಣೆ ಸರಕಾರಿ ಅಧಿಕಾರಿಗಳ ಸಾರ್ವಜನಿಕ ನಡವಳಿಕೆ ಕುರಿತಾಗಿದ್ದರೆ ಅಥವಾ ಯಾವುದೇ ಸಾರ್ವಜನಿಕ ಹಿತಾಸಕ್ತಿಯ ವಿಷಯದ ಬಗೆಗಿನ ವ್ಯಕ್ತಿಯೊಬ್ಬನ ನಡವಳಿಕೆ ಕುರಿತಾಗಿದ್ದರೆ ಅಥವಾ ಸಾರ್ವಜನಿಕ ಪ್ರದರ್ಶನವೊಂದರಲ್ಲಿನ ವ್ಯಕ್ತಿಯೊಬ್ಬನ ನಿರ್ವಹಣೆಯ ಕುರಿತಾಗಿದ್ದರೆ ಅಂಥ ಸಂದರ್ಭಗಳಲ್ಲಿ ಆಂಥ ಪ್ರಕಟಣೆಯನ್ನು ಮಾನಹಾನಿ ಎಂದು ಪರಿಗಣಿಸಲಾಗುವುದಿಲ್ಲ ಎಂಬುದಾಗಿ 10 ಅಪವಾದಗಳ ವಿವರಣೆಗಳಲ್ಲಿ ಸ್ಪಷ್ಟಪಡಿಸಲಾಗಿದೆ. ಬ್ರಿಟಿಷ್ ಕಾಯ್ದೆಯಲ್ಲಿ ಇರುವ ನಿಂದನೆ (ಸ್ಲಾಂಡರ್) ಮತ್ತು ಅವಮಾನ (ಲಿಬೆಲ್) ಎಂಬ ಪ್ರತ್ಯೇಕತೆಯನ್ನು ಭಾರತದ ಕಾನೂನಿನಲ್ಲಿ ಒದಗಿಸಿಲ್ಲ.

ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ (BNSS) 222ನೇ ಕಲಂ (CrPC 199) ಮಾನಹಾನಿ ಪ್ರಕರಣ ದಾಖಲಿಸುವಾಗ ಮ್ಯಾಜಿಸ್ಟ್ರೇಟ್ ಮತ್ತು ಸೆಷನ್ಸ್ ಕೋರ್ಟುಗಳಲ್ಲಿ ಪಾಲಿಸಬೇಕಾದ ನಿಯಮಗಳನ್ನು ವಿವರಿಸುತ್ತದೆ. ತನ್ನ ವಿರುದ್ಧ ಮಾಡಲಾದ ಮಾನಹಾನಿಕರ ಹೇಳಿಕೆ ಅಥವಾ ಪ್ರಕಟಣೆಗಳಿಂದ ಆದ ಹಾನಿಯ ಕುರಿತು ನ್ಯಾಯಾಲಯದಲ್ಲಿ ನಷ್ಟ ಪರಿಹಾರದ ಬಗ್ಗೆ ಮೊಕದ್ದಮೆ ಹೂಡಬಹುದು. ಹಾಗಾದರೆ ಪತ್ರಿಕೆಗಳಲ್ಲಿ ಅಥವಾ ದೃಶ್ಯ ಮಾಧ್ಯಮಗಳಲ್ಲಿ ಯಾರ ಬಗ್ಗೆಯೂ ಟೀಕೆ-ಟಿಪ್ಪಣಿ ಮಾಡುವಂತಿಲ್ಲವೇ? ಇದು ಸಂವಿಧಾನದತ್ತ ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣವಾಗುವುದಿಲ್ಲವೇ? ಎಂಬ ಪ್ರಶ್ನೆ ಸಹಜ.

ಭಾರತದ ಸಂವಿಧಾನದ 19(1)(ಎ) ವಿಧಿಯು ಎಲ್ಲಾ ನಾಗರಿಕರಿಗೆ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮೂಲಭೂತ ಹಕ್ಕನ್ನು ನೀಡಿದೆ. ಆದರೆ 19(2) ನೇ ವಿಧಿಯನ್ವಯ ಈ ಹಕ್ಕಿನ ಚಲಾವಣೆಯಿಂದ ಆಗಬಹುದಾದ ಮಾನಹಾನಿಯನ್ನು ತಡೆಯುವ ನಿಟ್ಟಿನಲ್ಲಿ ಸಮಂಜಸವಾದ ನಿರ್ಬಂಧ ವಿಧಿಸಬಹುದಾಗಿದೆ. ಸುಬ್ರಹ್ಮಣ್ಯ ಸ್ವಾಮಿ ವರ್ಸಸ್ ಭಾರತ ಸರಕಾರ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಐಪಿಸಿಯ 499 ಮತ್ತು 500ನೇ ಕಲಮುಗಳ ಸಾಂವಿಧಾನಿಕ ಸಿಂಧುತ್ವವನ್ನು ಎತ್ತಿ ಹಿಡಿದಿದೆ. 19(1) ಎ ವಿಧಿಯು ಒದಗಿಸಿದ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು 19(2)ರಲ್ಲಿನ ನಿರ್ಬಂಧಗಳಿಗೆ ಒಳಪಟ್ಟು ಇರುತ್ತದೆ ಮತ್ತು ಅಂಥ ನಿರ್ಬಂಧ ಸಮಂಜಸವಾಗಿದೆ. 21ನೇ ವಿಧಿಯನ್ವಯ ಇರುವ ಜೀವಿಸುವ ಹಕ್ಕು, ಘನತೆ ಮತ್ತು ಗೌರವದಿಂದ ಬದುಕುವ ಹಕ್ಕನ್ನು ಒಳಗೊಂಡಿರುತ್ತದೆ ಎಂದು ಅದು ಹೇಳಿದೆ.

ಕಾಯ್ದೆಗಳಲ್ಲಿ ಮಾನಹಾನಿಯ ಕುರಿತಾಗಿ ಇರುವ ಅನುವು, ಅಧಿಕಾರ ಮತ್ತು ಹಣಬಲ ಹೊಂದಿರುವ ವ್ಯಕ್ತಿಗಳು ತಮ್ಮ ವಿರುದ್ಧ ಬರಬಹುದಾದ ಟೀಕೆಗಳನ್ನು ಸುಮ್ಮನಾಗಿಸಲು ಬಳಸಬಹುದಾದ ಅಸ್ತ್ರವಾಗಿದೆ ಎಂಬ ಅಭಿಪ್ರಾಯವಿದೆ. ರಾಜಕಾರಣಿಗಳ ವಿರುದ್ಧ ಪತ್ರಕರ್ತರು ಮಾಡುವ ಟೀಕೆಗಳು, ಅವ್ಯವಹಾರಗಳ ಕುರಿತಾದ ತನಿಖಾ ವರದಿಗಳು, ದೊಡ್ಡ ಕಂಪನಿಗಳ ವ್ಯವಹಾರಗಳ ವಿಮರ್ಶಾತ್ಮಕ ವಿಶ್ಲೇಷಣೆ ಇವುಗಳನ್ನು ಹತ್ತಿಕ್ಕಲು ಕೆಲವುಸಲ ಮಾನಹಾನಿ ಪ್ರಕರಣದ ಮೂಲಕ ಕಾಯ್ದೆಯ ದುರುಪಯೋಗ ಮಾಡಲಾಗುತ್ತದೆ. ಪ್ರಕರಣಗಳ ಸತ್ಯಾಸತ್ಯತೆಯ ಪರಿಶೀಲನೆ ಮುಗಿಯುವವರೆಗಿನ ಪೊಲೀಸ್ ಹಾಗೂ ನ್ಯಾಯ ವ್ಯವಸ್ಥೆಯ ಅತಿ ಕ್ಲಿಷ್ಟವಾದ ಮತ್ತು ಅಮಾನವೀಯವೆನಿಸಬಹುದಾದ ಕಾರ್ಯವಿಧಾನ ಹಾಗೂ ನಿಯಮಗಳ ಪಾಲನೆಯೇ ನಕಲಿ ಪ್ರಕರಣಗಳಲ್ಲಿ ಆಪಾದಿತರಿಗೆ ಶಿಕ್ಷೆಯಾಗಿ ಪರಿಣಮಿಸುತ್ತವೆ. ಅಂತಿಮವಾಗಿ ಖುಲಾಸೆಗೊಂಡರೂ ಪ್ರಕರಣದಲ್ಲಿ ಸಿಲುಕಿ ಅನುಭವಿಸುವ ಕಿರುಕುಳ, ಖರ್ಚು ಮತ್ತು ಅಲೆದಾಡುವ ಯಾತನೆ ನಿಜಕ್ಕೂ ಶೋಚನೀಯ. ಈ ಕಾರಣಕ್ಕೆ ಐಪಿಸಿಯ 499ನೇ ಕಲಮನ್ನು ರದ್ದುಪಡಿಸಿ ಮಾನಹಾನಿಯನ್ನು ಕೇವಲ ಸಿವಿಲ್ ಪ್ರಕರಣದ ವ್ಯಾಪ್ತಿಗೆ ತರಬೇಕು ಎಂಬ ಅಭಿಪ್ರಾಯ ಬಹಳ ಹಿಂದಿನಿಂದ ಇದೆ. ಮಾನಹಾನಿಯನ್ನು ಕ್ರಿಮಿನಲ್ ಅಪರಾಧ ಎಂದು ಪರಿಗಣಿಸುವುದು ಅಂತಾರಾಷ್ಟ್ರೀಯ ನಿಯಮಗಳ ಉಲ್ಲಂಘನೆಯಾಗಿದೆ ಎಂದು ವಿಶ್ವಸಂಸ್ಥೆಯಂಥ ಅಂತಾರಾಷ್ಟ್ರೀಯ ಸಂಸ್ಥೆಗಳು ಅಭಿಪ್ರಾಯಪಟ್ಟಿವೆ. ಭಾರತದ ಕಾನೂನು ಆಯೋಗ ತನ್ನ 2014ರ ವರದಿಯಲ್ಲಿ 499ನೇ ಕಲಮನ್ನು ಹಿಂಪಡೆಯುವ ಅವಶ್ಯಕತೆಯನ್ನು ಗಮನಿಸಿ, ಮಾನಹಾನಿ ಕುರಿತು ಕ್ರಿಮಿನಲ್ ಮೊಕದ್ದಮೆ ಹೂಡಲು ಇರುವ ಅವಕಾಶ ಅಂತಾರಾಷ್ಟ್ರೀಯ ನಿಯಮಗಳ ಉಲ್ಲಂಘನೆಯಾಗುತ್ತದೆ ಎಂದು ಅಭಿಪ್ರಾಯಪಟ್ಟಿತ್ತು.

- **ವಿಜಯಕಾಂತ್ ವರ್ಸಸ್ ತಮಿಳುನಾಡು ಸರಕಾರ ಪ್ರಕರಣ**

ತಮಿಳುನಾಡಿನ ಮಾಜಿ ಮುಖ್ಯಮಂತ್ರಿಯೊಬ್ಬರ ವಿರುದ್ಧ ಮಾಡಿದ ಟೀಕೆಗಳ ವಿಷಯದ 14 ಎಫ್‌ಐಆರ್‌ಗಳನ್ನು ರದ್ದು ಮಾಡಿದ ಸರ್ವೋಚ್ಚ ನ್ಯಾಯಾಲಯವು ''ಪ್ರಜಾಪ್ರಭುತ್ವದ ಕತ್ತು ಹಿಸುಕಲು ನೀವು ಮಾನಹಾನಿಯ ಪ್ರಕರಣಗಳನ್ನು ಬಳಸಬಾರದು. ನೀವು ಸಾರ್ವಜನಿಕ ವ್ಯಕ್ತಿ ಮತ್ತು ನೀವು ಟೀಕೆಗಳನ್ನು ಎದುರಿಸಬೇಕು. ರಾಜಕೀಯ ಎದುರಾಳಿಗಳ ವಿರುದ್ಧ ಸರಕಾರಿ ಯಂತ್ರವನ್ನು ದುರುಪಯೋಗಪಡಿಸಿ ಮಾನಹಾನಿ ಖಟ್ಲೆಗಳನ್ನು ಹಾಕಬಾರದು'' ಎಂದು ಅಭಿಪ್ರಾಯಪಟ್ಟಿತು.

- **ಬೋನ್ನಾರ್ಡ್ ವರ್ಸಸ್ ಪೆರಿಮನ್ ಪ್ರಕರಣ**

1891ನೇ ಇಸವಿಯಷ್ಟು ಹಿಂದೆ ಇಂಗ್ಲೆಂಡ್‌ನಲ್ಲಿ ನಡೆದ ಈ ಐತಿಹಾಸಿಕ ಪ್ರಕರಣದಲ್ಲಿ ಚೀಫ್ ಜಸ್ಟೀಸ್ ಕಾಲ್ರಿಜ್ ನೀಡಿದ ಆದೇಶ ಈವರೆಗೂ ಮಾನಹಾನಿ ಪ್ರಕರಣಗಳಿಗೆ ಆಧಾರ ಮತ್ತು ಮಾರ್ಗದರ್ಶಿ ಸೂತ್ರವಾಗಿದೆ. ವಿಚಾರಣೆ ನಡೆದು ಮಾನಹಾನಿ ಆಗಿರುವುದು ನಿಜವೆಂದು ಸಾಬೀತಾಗುವವರೆಗೂ ವಿವಾದಿತ ಪ್ರಕಟಣೆ ಅಥವಾ ಪ್ರದರ್ಶನಕ್ಕೆ ತಡೆಯಾಜ್ಞೆ ನೀಡುವ ಮೂಲಕ ಅಭಿವ್ಯಕ್ತಿ ಸ್ವಾತಂತ್ರ್ಯದ ಅನಿಯಂತ್ರಿತ ಚಲಾವಣೆಯನ್ನು ನಿರ್ಬಂಧಿಸಬಾರದು. ವಾಕ್ ಸ್ವಾತಂತ್ರ್ಯವು ಪ್ರತಿಯೊಬ್ಬ ನಾಗರಿಕನಿಗೂ ಸಾರ್ವಜನಿಕ ಹಿತಾಸಕ್ತಿಗಾಗಿ ಇರುವ ಅಮೂಲ್ಯವಾದ ಹಕ್ಕು. ಅದ್ದರಿಂದ ತಡೆಯಾಜ್ಞೆ ನೀಡಲು ಇರುವ ಅಧಿಕಾರವನ್ನು ಕೋರ್ಟುಗಳು ಅತಿ ವಿರಳ ಸಂದರ್ಭಗಳಲ್ಲಿ ಮಾತ್ರ ವಿವೇಚನೆಯಿಂದ ಚಲಾಯಿಸಬೇಕು'' ಎಂಬುದು Bonnard Rule ಎಂದು ಪ್ರಸಿದ್ಧವಾಗಿದೆ. ಈ ತತ್ವವನ್ನು ಭಾರತದಲ್ಲೂ ಅನೇಕ ಪ್ರಕರಣಗಳಲ್ಲಿ ಅನುಸರಿಸಲಾಗುತ್ತಿದೆ. ಉದಾಹರಣೆಗೆ: ಶಶಿ ತರೂರ್ ವರ್ಸಸ್ ಅರ್ನಬ್ ಗೋಸ್ವಾಮಿ, ಟಾಟಾ ಸನ್ಸ್ ವರ್ಸಸ್ ಗ್ರೀನ್ ಪೀಸ್ ಇಂಡಿಯಾ, ಟೈಮ್ಸ್ ನೌ ನವಭಾರತ ವರ್ಸಸ್ ನರೇಶ ಬಲಿಯಾನ್, ನವೀನ್ ಜಿಂದಾಲ್ ವರ್ಸಸ್ ಝೀ ಮೀಡಿಯಾ ಪ್ರಕರಣಗಳು.

ಈ ನಿಯಮವು ಟೀಕಾಕಾರರ ಬಾಯಿ ಮುಚ್ಚಿಸುವ ಹುನ್ನಾರಗಳಿಂದ ರಕ್ಷಿಸುತ್ತದೆ. ದಾಖಲಾದ ಎಲ್ಲಾ ಪ್ರಕರಣಗಳಲ್ಲೂ ಕೋರ್ಟುಗಳು ಪ್ರಕಟಣೆ ಅಥವಾ ಪ್ರಸಾರಕ್ಕೆ ತಡೆಯಾಜ್ಞೆ ನೀಡಿದರೆ ಜನರು ಮತ್ತು ಮಾಧ್ಯಮದವರು ಲಂಚ, ಭ್ರಷ್ಟಾಚಾರ, ಕಳಪೆ ಕಾಮಗಾರಿ, ಅತ್ಯಾಚಾರ, ಸ್ವಜನ ಪಕ್ಷಪಾತ ಮುಂತಾದ ಸಾರ್ವಜನಿಕ ವಿಷಯಗಳ ಕುರಿತು ಚರ್ಚೆ ಮಾಡುವುದೇ ಅಪರಾಧವೆನಿಸುತ್ತದೆ.

- **ರಂಗರಾಜನ್ ವರ್ಸಸ್ ಜಗಜೀವನ್ ಪ್ರಕರಣ:**

ಜಾತಿ ಆಧರಿತ ಮೀಸಲಾತಿ ನೀತಿ, ಆರ್ಥಿಕ ಹಿಂದುಳಿಯುವಿಕೆಯ ಮಾನದಂಡ ಮುಂತಾದ ವಿಷಯಗಳನ್ನು ಕೇಂದ್ರೀಕರಿಸಿ ತಯಾರಿಸಿದ 'ಒರೆ ಒರು ಗ್ರಾಮಥಿಲೆ' ಎಂಬ ತಮಿಳು ಚಲನಚಿತ್ರದ ಪ್ರದರ್ಶನಕ್ಕೆ ಹೈಕೋರ್ಟು ನೀಡಿದ್ದ ತಡೆಯಾಜ್ಞೆಯನ್ನು ಸುಪ್ರೀಂ ಕೋರ್ಟು ತೆರವುಗೊಳಿಸಿತು. ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪಡೆದ ಚಿತ್ರವನ್ನು ನಿಷೇಧ ಮಾಡಿದ ತಮಿಳುನಾಡು ಸರಕಾರದ ಕ್ರಮಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಸುಪ್ರೀಂ ಕೋರ್ಟು, ವಿರೋಧಿ ಪ್ರದರ್ಶನ ಅಥವಾ ಹಿಂಸಾತ್ಮಕ ಪ್ರತಿಭಟನೆಗಳಿಗೆ ಹೆದರಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವುದು ಕಾನೂನಿನ ನಿಯಮದ ಉಲ್ಲಂಘನೆಯಾಗುತ್ತದೆ. 19(1)ಎ ವಿಧಿಯಲ್ಲಿರುವ ಹೇರಲಾಗುವ ನಿರ್ಬಂಧಗಳು ಅತಿ ಅವಶ್ಯಕತೆಗಳ ಆಧಾರದಲ್ಲಿ ಸಮರ್ಥನೀಯವಾಗಬೇಕೇ ಹೊರತು ಸುಲಭ ಪರಿಹಾರ, ಅನುಕೂಲ ಅಥವಾ ಅವಸರಕ್ಕಾಗಿ ಅಲ್ಲ. ಇತರರ ಭಾವನೆಗಳ ಕುರಿತು ಸಹಿಷ್ಣುತೆ ಇರಬೇಕು. ಅಸಹಿಷ್ಣುತೆ ಪ್ರಜಾಪ್ರಭುತ್ವಕ್ಕೆ ಅಪಾಯಕಾರಿ ಎಂಬೆಲ್ಲ ಅಭಿಪ್ರಾಯಗಳನ್ನು ದಾಖಲಿಸಿತು. ಇಂಥದೇ ಆದೇಶಗಳನ್ನು ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳು ವಿವಿಧ ಪ್ರಕರಣಗಳಲ್ಲಿ ನೀಡಿವೆ. ಉದಾಹರಣೆಗೆ: ಖುಷ್ವಂತ್ ಸಿಂಗ್ ವರ್ಸಸ್ ಮನೇಕಾ ಗಾಂಧಿ, ಬಾಳಾಸಾಹೇಬ್ ಠಾಕರೆ ವರ್ಸಸ್ ಮಹಾರಾಷ್ಟ್ರ ಸರಕಾರ.

- **ರಾಜೇಂದ್ರಕುಮಾರ್ ವರ್ಸಸ್ ಉತ್ತಮ್ ಮತ್ತು ಇತರರು**

(ಸುಪ್ರೀಂ ಕೋರ್ಟ್) ನೌಕರನ ಮೇಲಧಿಕಾರಿಗೆ ಅವನ ಕಾರ್ಯವಿಧಾನದ ಕುರಿತು ಹೇಳುವ ಮತ್ತು ವರದಿ ಮಾಡುವ ಅಧಿಕಾರವಿದೆ ಎಂದು ಪರಿಗಣಿಸಿತು ಮತ್ತು ಮೇಲಧಿಕಾರಿಯ ವಿರುದ್ಧದ ಪ್ರಕರಣವನ್ನು ರದ್ದು ಪಡಿಸಿತು.

ಸರಕಾರವನ್ನು ಟೀಕಿಸಿದ್ದಕ್ಕೆ ಪತ್ರಕರ್ತರ ವಿರುದ್ಧ ಪ್ರಕರಣ ದಾಖಲಿಸುವಂತಿಲ್ಲ (4 ಅಕ್ಟೋಬರ್, 2024)- ಸುಪ್ರೀಂ ಕೋರ್ಟ್- ಅಭಿಷೇಕ್ ಉಪಾಧ್ಯಾಯ ವರ್ಸಸ್ ಉತ್ತರ ಪ್ರದೇಶ ಸರಕಾರ.

ನ್ಯಾಯಾಲಯಗಳ ಒಟ್ಟಾರೆ ಅಭಿಪ್ರಾಯ ಮತ್ತು ಆದೇಶಗಳು ಮಾನಹಾನಿ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಸಮತೋಲನದ ಪರವಾಗಿವೆ. ಸಾಕ್ಷ್ಯಾಧಾರಗಳ ವಿಶ್ಲೇಷಣೆಯ ಆಧಾರದಲ್ಲಿ ಮಾನಹಾನಿಯ ನಿರ್ಣಯ ಆಗಬೇಕು ಮತ್ತು ವಿಚಾರಣಾಪೂರ್ವದ ತಡೆಯಾಜ್ಞೆಯನ್ನು ಅತಿ ವಿರಳ ಪ್ರಸಂಗಗಳಲ್ಲಿ ಮಾತ್ರ ನೀಡಬೇಕು ಎಂಬುದು ಹೆಚ್ಚಿನ ಪ್ರಕರಣಗಳಲ್ಲಿ ಕೋರ್ಟುಗಳ ಅಭಿಪ್ರಾಯ. ಮಾನಹಾನಿಗೆ ಕ್ರಿಮಿನಲ್ ಪ್ರಕರಣದ ಬದಲಾಗಿ ಸಿವಿಲ್ ವ್ಯಾಜ್ಯಗಳ ಮೂಲಕ ಪರಿಹಾರಕ್ಕೆ ಕೋರ್ಟುಗಳು ಹೆಚ್ಚಿನ ಒತ್ತು ನೀಡಿರುವುದು ಕಂಡುಬರುತ್ತದೆ.

(ಲೇಖಕರು ಕಾನೂನು ತಜ್ಞರು ಮತ್ತು ಕೆವಿಜಿ ಬ್ಯಾಂಕ್‌ನ ನಿವೃತ್ತ ಎಜಿಎಂ)

ಭಟ್ಟರ್ ಸ್ನ್ಯಾಕ್

• **ಕೃಷ್ಣಕುಮಾರ ಎ., ಕೋಲಾರ**

ಭಟ್ರೇ, ಸಂಸಾರದಲ್ಲಿ ಕಲಹವಾದಾಗ ಯಾರದೇ ತಪ್ಪು ಇದ್ದರೂ, ಎಲ್ಲರೂ ಹೆಂಡತಿ ಪರವೇ ವಹಿಸಲು ಏನು ಕಾರಣ?

– ಜಗಳ ಬಗೆಹರಿದ ನಂತರ ನೀನು ಊಟ, ತಿಂಡಿ ಮಾಡಿ ಹಾಕ್ತೀಯಾ?!

• **ರಾಮೇಗೌಡ ಎಂ.ಮಂಡ್ಯ**

ಭಟ್ರೇ, ದಸರಾ ಬಳಿಕ ಸಿಎಂ ರಾಜೀನಾಮೆ ಅಂತ ವಿಜಯೇಂದ್ರ ಹೇಳುತ್ತಿದ್ದಾರಲ್ಲ?

– ದಸರಾ ಮುಗಿದ ಬಳಿಕ, 'ದೀಪಾವಳಿ ನಂತರ ಸಿಎಂ ರಾಜೀನಾಮೆ' ಎನ್ನಬಹುದು!

• **ಬಸವರಾಜ ಮಾಲಿಪಾಟೀಲ, ಬೆಂಗಳೂರು**

ಭಟ್ರೇ, ಡಿಸೆಂಬರ್ ವೇಳೆಗೆ ಬಿಜೆಪಿ ಹಳೆ ಮಾದರಿಯಲ್ಲಿ ಗಟ್ಟಿಯಾಗುತ್ತದೆ ಎಂದು ಸೋಮಣ್ಣ ಹೇಳಿದ್ದಾರಲ್ಲ?

– ಅಂದ್ರೆ, ಬಿಜೆಪಿ ಅಷ್ಟು ಹಾಳಾಗಿದೆಯಾ?!

• **ಅಶೋಕ ಸಾಗರ, ಸಾಗರ**

ಭಟ್ರೇ, ಮದುವೆಯಾಗುವಾಗ ಹೆಂಡತಿಯಾಗುವವಳು ಜಗಳ, ಕಿರಿಕಿರಿ ಮಾಡುವ ಸ್ವಭಾವದವಳು ಅನ್ನೋದು ಗೊತ್ತಾಗುವುದಿಲ್ಲವಾ?

– ನೀರಿಗೆ ಹಾಕಿದ ನಂತರ ಬಣ್ಣ ಹೋಗುತ್ತೆ ಅಂತ ಬಟ್ಟೆ ವ್ಯಾಪಾರಿಗಳು ಹೇಳ್ತಾರಾ?!

• **ಉಮೇಶ್ ಎಂ.ಸಿರಾ, ರಾಮನಗರ**

ಭಟ್ರೇ, ಸಿದ್ದರಾಮಯ್ಯನವರೇ ಉತ್ತರ ಅಂತಾರಲ್ಲ?

– ಪ್ರಶ್ನೆ ಯಾರು ಅಂತ ಹೇಳಬಾರದೇ?!

• **ಚಂದ್ರಶೇಖರ ನಾಗೂರ್, (ಇಮೇಲ್ ಮೂಲಕ)**

ಭಟ್ರೇ, ನೀವು ಅಪ್ಪಟ ಭಾರತೀಯ ಅಂತಾರಲ್ಲ?

– ಹೂಂ.. ಮೊನ್ನೆ ಲಂಡನ್‌ಗೆ ಹೋದಾಗ ಬಾಳೆ ಎಲೆಯಲ್ಲೇ ಊಟ ಮಾಡಿದ್ದು!

• **ರಘುಪತಿ ಕಡಲ, (ಇಮೇಲ್ ಮೂಲಕ)**

ಭಟ್ರೇ, 'ಅ'ಕಾರಕ್ಕೂ, 'ಹ'ಕಾರಕ್ಕೂ ವ್ಯತ್ಯಾಸವಿಲ್ಲದೇ ಮಾತಾಡ್ತಾರಲ್ಲ?

– ಹನಿಸುತಿದೆ ಹೇಕೋ ಇಂದು.. ಎಂದು ಆಡಿದರೆ ಹೇನು ಹನಿಸಬಹುದು?!

• **ಶಿವಕುಮಾರ ಮಾರನಹಳ್ಳಿ, (ಇಮೇಲ್ ಮೂಲಕ)**

ಭಟ್ರೇ, ನನ್ನ ಟೀಕಾಕಾರರಿಗೆ ಒಂದು ಅರ್ಹತೆ ಬೇಕು ಎಂದು ನೀವು ಹೇಳಿದ್ದೀರಂತೆ?

– ವಾಪಸ್ ಕೊಟ್ಟರೆ ತಡೆದುಕೊಳ್ಳುವಷ್ಟಾದರೂ ಸಾಮರ್ಥ್ಯ ಇರಬೇಕಲ್ಲ?!

• **ಸದಾನಂದ ಶೇಟ್, ಹುಬ್ಬಳ್ಳಿ**

ಭಟ್ರೇ, ಪುಸ್ತಕ ಓದದೇ ಬುದ್ಧಿವಂತ ಅಂತ ಅನಿಸಿಕೊಳ್ಳಬಹುದಾ?

– ಕುಮಾರಸ್ವಾಮಿಯವರನ್ನು ನೋಡಿಯೂ ಈ ಪ್ರಶ್ನೆಯಾ?!

• **ರೂಪಾ ಗಣೇಶ, ಬೆಂಗಳೂರು**

ಭಟ್ರೇ, ಫೇಸ್‌ಬುಕ್‌ನಲ್ಲಿ ಘೋಷಿಸದೇ ವಿದೇಶ ಪ್ರವಾಸ ಹೋಗಬಹುದಾ?

– ಹೋಗಬಹುದು, ಆದರೆ ನೀವು ಗಗನಸಖಿ ಅಥವಾ ಪೈಲಟ್ ಆಗಿರಬೇಕು!

ನಾಡಹಬ್ಬದಲ್ಲೂ ದರ್ಬಾರ್ ಬೇಕೆ?

ಲೋಕಮತ

ಲೋಕೇಶ್ ಕಾಯರ್ಗ
vveditoped@gmail.com

ರಾಜ್ಯದ ನಾನಾ ಭಾಗಗಳಲ್ಲಿ ನವರಾತ್ರಿ ದಸರೆ ಸಂಭ್ರಮ ಕಳೆಗಟ್ಟಿದೆ. ಇತ್ತೀಚಿನ ವರ್ಷಗಳಲ್ಲಿ ನಾನಾ ಜಿಲ್ಲೆಗಳಲ್ಲಿ ದಸರೆ ಕಾರ್ಯಕ್ರಮಗಳು ನಡೆಯುತ್ತಿವೆ. ಮಡಿಕೇರಿ, ಮಂಗಳೂರು ದಸರಾ ವೈಭವವೂ ವರ್ಷದಿಂದ ವರ್ಷಕ್ಕೆ ಜನಾಕರ್ಷಣೆ ಹೆಚ್ಚಿಸಿಕೊಳ್ಳುತ್ತಿವೆ. ಆದರೆ ಇವೆಲ್ಲವನ್ನೂ ನವರಾತ್ರಿ ಹಬ್ಬದ ಆಚರಣೆಯಾಗಿ ಕಾಣಲಾಗುತ್ತಿದೆಯೇ ಹೊರತು ನಾಡಹಬ್ಬ ಎಂದು ನಾವು ಕರೆಯುವುದಿಲ್ಲ. ನಮ್ಮ ಪಾಲಿಗೆ ನಾಲ್ಕು ಶತಮಾನಗಳ ಇತಿಹಾಸವಿರುವ ಮೈಸೂರು ದಸರೆಯೇ ನಾಡಹಬ್ಬ. ಆದರೆ ಇದು ಇಡೀ ನಾಡಿನ ಹಬ್ಬವಾಗಿ ಉಳಿದಿದೆಯೇ ಎಂಬ ಪ್ರಶ್ನೆಗೆ ನಾವಿಂದು ಉತ್ತರ ಕಂಡುಕೊಳ್ಳಬೇಕಾಗಿದೆ. ಪ್ರತೀ ವರ್ಷದ ದಸರಾ ಕಾರ್ಯಕ್ರಮದ ಆಯೋಜನೆಯ ವೈಖರಿ ಗಮನಿಸಿದರೆ ನಾಡಹಬ್ಬದ ವ್ಯಾಪ್ತಿ ಕಿರಿದಾಗಿ ವಿಶ್ವವಿಖ್ಯಾತ ದಸರೆ, ಮೈಸೂರು ಹಬ್ಬದ ಮಟ್ಟಕ್ಕೆ ಇಳಿದಿದೆ ಎನ್ನುವ ಸಂಶಯ ಮೂಡುತ್ತದೆ.

ಎಂದಿನಂತೆ ಈ ಬಾರಿಯೂ ಮೈಸೂರು ದಸರಾ ಉದ್ಘಾಟನೆ ಸಮಾರಂಭದ ಬಗ್ಗೆ ಒಂದಷ್ಟು ಚರ್ಚೆ ನಡೆಯಿತು. ಆಮಂತ್ರಣ ಪತ್ರದಲ್ಲಿ ಉದ್ಘಾಟಕರಾಗಿ ಆಗಮಿಸಿದ್ದ ಹಂಪ ನಾಗರಾಜಯ್ಯ ಅವರ ಫೋಟೋ ಇರಲಿಲ್ಲವೆನ್ನುವುದು ಮೊದಲನೇ ಆಕ್ಷೇಪವಾಗಿತ್ತು. ಅವರ ಉದ್ಘಾಟನಾ ಭಾಷಣದ ಬಗ್ಗೆಯೂ ಒಂದಷ್ಟು ಚರ್ಚೆಗಳಾದವು. ಆದರೆ ಈ ಬಾರಿಯ ಉದ್ಘಾಟನಾ ಸಮಾರಂಭದಲ್ಲಿ ಎಲ್ಲರಿಗಿಂತ ಹೆಚ್ಚು ಪ್ರಚಾರ ಗಿಟ್ಟಿಸಿಕೊಂಡಿದ್ದು ಶಾಸಕ ಜಿ.ಟಿ. ದೇವೇಗೌಡರು. ದಸರೆಗೂ ಅವರ ಭಾಷಣಕ್ಕೂ ಸಂಬಂಧ ಇಲ್ಲದಿದ್ದರೂ ಇಂದಿನ ಪ್ರಚಲಿತ ರಾಜಕೀಯ ಸನ್ನಿವೇಶದಲ್ಲಿ ಅವರ ಮಾತುಗಳು ಹೆಚ್ಚಿನ ಟಿಆರ್‌ಪಿ ಪಡೆದಿದ್ದರಲ್ಲಿ ಅಚ್ಚರಿಯೇನೂ ಇಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಭಾಷಣದ ಮಧ್ಯೆ, ದಸರೆ ಅಧಿಕಾರಿಗಳ ಹಬ್ಬವಾಗದೇ ಜನರ ಹಬ್ಬವಾಗಬೇಕೆಂದು ಕರೆ ನೀಡಿದರು. ಇದು ಎಲ್ಲ ವರ್ಷವೂ ಕೇಳಿ ಬರುತ್ತಿರುವ ಮಾತು. ಮುಂದಿನ ದಸರೆಯಲ್ಲೂ ಈ ಮಾತು ಕೇಳಿ ಬರುವುದರಲ್ಲಿ ಅನುಮಾನವಿಲ್ಲ. ಆದರೆ ಅರಸೊತ್ತಿಗೆಯ ದರ್ಬಾರ್ ಬಿಟ್ಟು ನಾಡಹಬ್ಬವಾಗಿ ರೂಪಾಂತರಗೊಂಡ ದಸರೆಯಲ್ಲಿ ಯಾರ್‍ಯಾರೋ ದರ್ಬಾರು ನಡೆಸುತ್ತಲೇ ಇರುತ್ತಾರೆ. ರಾಜಪೋಷಾಕಿನ ಬದಲು ಆಧುನಿಕ ಧಿರಿಸು ತೊಟ್ಟ ಅಧಿಕಾರಿಗಳು, ಜನಪ್ರತಿನಿಧಿಗಳು, ಅವರ ಕುಟುಂಬಸ್ಥರು... ಹೀಗೆ ಪ್ರತೀವರ್ಷವೂ ದರ್ಬಾರ್ ಮುಂದುವರಿಯುತ್ತದೆ. ಈ ದರ್ಬಾರ್‌ನ ಮುಂದೆ ರಾಜವಂಶಸ್ಥರು ಅರಮನೆಗೆ ಸೀಮಿತವಾಗಿ ನಡೆಸುವ ಸಾಂಕೇತಿಕ ದರ್ಬಾರು ಏನೇನೂ ಅಲ್ಲ.

• **ದಸರೆಯಷ್ಟೇ ಅಲ್ಲ**

ಸರಕಾರದ ಪರಿಭಾಷೆಯ ಪ್ರಕಾರ ಮೈಸೂರು ದಸರೆ ನಾಡಹಬ್ಬ. ಸರಕಾರದ ಜಾಹೀರಾತುಗಳಲ್ಲೂ ನಾಡಹಬ್ಬ ದಸರೆ ಎಂದೇ ಉಲ್ಲೇಖಿಸಲಾಗುತ್ತದೆ. ಎಂದರೆ ಇದು ಇಡೀ ನಾಡಿನ ಹಬ್ಬವಾಗಬೇಕು. ವಿಶಾಲ ಕರ್ನಾಟಕದ ಉದ್ದಗಲಕ್ಕೂ ಹಬ್ಬದ ಸಂಭ್ರಮ ಕಾಣಿಸಬೇಕು. ಹಬ್ಬದ ನೆಪದಲ್ಲಿ ನಡೆಯುವ ನಾನಾ ಕಾರ್ಯಕ್ರಮಗಳಲ್ಲಿ ಚಾಮರಾಜನಗರದಿಂದ ಹಿಡಿದು ಬೀದರ್‌ವರೆಗಿನ ದಕ್ಷಿಣೋತ್ತರ ಕರ್ನಾಟಕದ ಜನತೆ ಒಟ್ಟು ಸೇರಬೇಕು. ನಾಡಿನ ಸಾಂಸ್ಕೃತಿಕ ಪ್ರತಿಭೆಗಳ ಅನಾವರಣಕ್ಕೆ, ಕ್ರೀಡಾ ಪ್ರತಿಭೆಗಳ ಪ್ರದರ್ಶನಕ್ಕೆ ದಸರೆ ವೇದಿಕೆಯಾಗಬೇಕು. ನಾಡಿನ ಮುಖ್ಯಮಂತ್ರಿ, ರಾಜ್ಯಪಾಲರು ಸೇರಿ ಸರಕಾರದ ವರಿಷ್ಠರೆಲ್ಲರೂ ಪಾಲ್ಗೊಳ್ಳುವ ಕಾರ್ಯಕ್ರಮಗಳಲ್ಲಿ ಈ ಪ್ರತಿಭೆಗಳು ಪ್ರಜ್ವಲಿಸಬೇಕು. ಈ ಮೂಲಕ ನಾಡಿನ ಪ್ರಜೆಗಳು ತಮ್ಮ ದರ್ಬಾರು ತೋರಿಸಬೇಕು. ಆದರೆ ಈಗ ದಸರೆ ಕಾರ್ಯಕ್ರಮಗಳಲ್ಲಿ ಪ್ರಜೆಗಳಿಗೆ ನೋಡುವುದಷ್ಟೇ ಕೆಲಸ.

ದಸರೆ ಆರಂಭವಾಗಲು ಒಂದೆರಡು ತಿಂಗಳಿರುವಾಗ ಸಿಎಂ ನೇತೃತ್ವದಲ್ಲಿ ದಸರಾ ಸಿದ್ಧತೆ ಸಭೆ ನಡೆಯುತ್ತದೆ. ಅನುದಾನ ಮತ್ತು ದಸರಾ ಉದ್ಘಾಟಕರ ಹೆಸರನ್ನು ಅಂತಿಮಗೊಳಿಸಿದರೆ ಅಲ್ಲಿಂದ ಮುಂದೆ ಅಧಿಕಾರಿಗಳದ್ದೇ ದರ್ಬಾರು. ಎಸ್.ಎಂ ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ ದಸರೆಗೆ ಎರಡು ಕೋಟಿ ರೂ. ಅನುದಾನ ಕೊಟ್ಟಾಗ ಎಲ್ಲರೂ ಹುಬ್ಬೇರಿಸಿದ್ದರು. ಮುಂದೆ ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾದಾಗ ದಸರಾ ಸಂದರ್ಭದಲ್ಲಿ ಮೈಸೂರಿಗೆ 100 ಕೋಟಿ ರೂ.ಗಳ ಅನುದಾನ ಘೋಷಿಸಿದ್ದರು. ಈ ವರ್ಷ ಬರೋಬ್ಬರಿ 40 ಕೋಟಿ ರೂ. ಅನುದಾನ ಘೋಷಿಸಲಾಗಿದೆ. ಆದರೆ ಎಷ್ಟೇ ಕೋಟಿಗಳು ಬಂದರೂ ಕೊನೆಯಲ್ಲಿ ಕೊರತೆಯ ಕೊರಗು ತಪ್ಪುವುದಿಲ್ಲ.

ಸಿಕ್ಕ ಅನುದಾನದಲ್ಲಿ ಅರ್ಧದಷ್ಟು ಮೊತ್ತ ಅನಪೇಕ್ಷಿತ ಆಡಂಬರಕ್ಕೆ ಖರ್ಚಾದರೆ, ಹೊರಗಿನ ಕಲಾವಿದರು, ಅತಿಥಿಗಳ ಸಂಭಾವನೆ, ವಾಸ್ತವ್ಯಕ್ಕೆ ಕೋಟಿಗಟ್ಟಲೆ ಹಣ ಹಣ ಸುರಿಯಲಾಗುತ್ತದೆ. ದಸರೆ ವೇದಿಕೆ ರಚನೆ, ಆನೆಗಳ ನಿರ್ವಹಣೆ, ಜಂಬೂ ಸವಾರಿ ಮೆರವಣಿಗೆ, ಗಣ್ಯರ ಆತಿಥ್ಯ, ಅರಮನೆಯ ಗೌರವ ಸಂಭಾವನೆ, ಅತಿಥಿ ಕಲಾವಿದರ ಸಂಭಾವನೆ, ದೀಪಾಲಂಕಾರ ಇತ್ಯಾದಿ ಬಾಬ್ತುಗಳಲ್ಲೇ ಕೋಟಿ ಲೆಕ್ಕಾಚಾರ ಮುಗಿದು ಹೋಗುತ್ತದೆ. ಲೆಕ್ಕಕ್ಕೆ ಸಿಗದ ಮೊತ್ತವನ್ನು ಇನ್ನಾವುದೋ ಬಾಬ್ತಿಗೆ ಜಮೆ ಮಾಡಿ ದಸರೆ ಪರಂಪರೆಗೆ ಮಂಗಳ ಹಾಡಲಾಗುತ್ತದೆ. ಪ್ರತೀ ವರ್ಷ ದಸರೆಯ ವೇಳೆಗೆ ಮೈಸೂರು ನಗರದ ರಸ್ತೆಗಳಿಗೆ ಒಂದಷ್ಟು ತೇಪೆ ಕಾರ್ಯ ನಡೆಯುತ್ತದೆ. ಆದರೆ ಇದೆಲ್ಲವೂ ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೀಮಿತ. ದಸರೆಯ 10 ದಿನಗಳಲ್ಲಿ ಏಳೆಂಟು ಕಿ.ಮೀ. ವ್ಯಾಪ್ತಿಯ ಮೈಸೂರು ನಗರವಷ್ಟೇ ಜಗಮಗಿಸುತ್ತದೆ. ವರ್ತುಲ ರಸ್ತೆಯಾಚೆಗಿನ ಮೈಸೂರು ಮತ್ತು ಇಲ್ಲಿನ ಕುಗ್ರಾಮಗಳು ಎಂದಿನಂತೆ ಕತ್ತಲಲ್ಲಿ ಮುಳುಗಿರುತ್ತವೆ.

• **ನಾಡು ಕಟ್ಟುವ ಹಬ್ಬ**

ರಾಜಪ್ರಭುತ್ವದ ಕಾಲದಿಂದಲೂ ಮೈಸೂರು ದಸರೆ ಜಾತಿ, ಧರ್ಮ,ಮತ,ಭಾಷೆ, ಪ್ರಾದೇಶಿಕತೆಯ ಗಡಿ ಮೀರಿದ ಹಬ್ಬವಾಗಿತ್ತು. ಮೈಸೂರು ದಸರೆ ಹೆಸರಿನಲ್ಲಿಯೇ ಅದು ನಾಡಹಬ್ಬವಾಗಿ ಆಚರಣೆಯಾಗುತ್ತಿತ್ತು. ಅರಸರ ಆಡಂಬರ, ವೈಭವ ಪ್ರದರ್ಶನ, ಅಥವಾ ಧಾರ್ಮಿಕ ವಿಧಿಗಳಿಗೆ ಸೀಮಿತವಾಗದೇ ಕ್ರೀಡೆ, ಕಲೆ, ಸಾಹಿತ್ಯ, ಸಂಸ್ಕೃತಿಗೆ ಉತ್ತೇಜನ ನೀಡುವ ಸಾಂಸ್ಕೃತಿಕ ಹಬ್ಬವಾಗಿಯೂ ಆಚರಣೆಯಾಗುತ್ತಿತ್ತು. ಆದರೆ ನಾಡಹಬ್ಬವೆಂದು ಕರೆದ ನಾವೇ ಈಗ ದಸರೆಯ ವ್ಯಾಪ್ತಿಯನ್ನು ಇಡೀ ನಾಡಿಗೆ ವಿಸ್ತರಿಸುವ ಬದಲು ಮೈಸೂರು ನಗರಕ್ಕೆ ಸೀಮಿತಗೊಳಿಸುತ್ತಿದ್ದೇವೆ. ನಾಡಹಬ್ಬದ ವೇದಿಕೆ ಬಳಸಿಕೊಂಡು ರಾಜ್ಯದ ಸಾಂಸ್ಕೃತಿಕ ಲೋಕವನ್ನು ಮತ್ತು ಕ್ರೀಡಾಲೋಕವನ್ನು ಕಟ್ಟುವ ಅದ್ಭುತ ಅವಕಾಶವನ್ನು ಕಳೆದುಕೊಳ್ಳುತ್ತಿದ್ದೇವೆ.

ರಾಜಾಶ್ರಯದಲ್ಲಿ ಆಚರಿಸುತ್ತಿದ್ದ ದಸರೆಯಲ್ಲಿ ಮಹಾರಾಜರ ದರ್ಬಾರ್ ಪ್ರಮುಖ ಆಕರ್ಷಣೆಯಾಗಿತ್ತು. ಮೈಸೂರು ರಾಜಪ್ರಭುತ್ವದ ಕೊನೆಯ ಅರಸರಾದ ಜಯಚಾಮರಾಜ ಒಡೆಯರ್ ಅವರು, ಪ್ರಜಾ ಸರಕಾರದ ಪ್ರತಿನಿಧಿಯಾದ ಬದಲಾದ ಬಳಿಕವೂ ಈ ಸಾಂಪ್ರದಾಯಿಕ ಉತ್ಸವವನ್ನು ಮುಂದುವರಿಸಬೇಕೆನ್ನುವುದು ಜನರ ಅಪೇಕ್ಷೆಯಾಗಿತ್ತು. ಸಾಕಷ್ಟು ಜಿಜ್ಞಾಸೆ, ಅಡೆತಡೆಗಳ ಬಳಿಕ ದಸರೆ ಈಗಿನ ರೂಪ ಪಡೆಯಿತು. ರಾಜವಂಶಸ್ಥರ ದರ್ಬಾರ್ ಸಾಂಪ್ರದಾಯಿಕ ಆಚರಣೆಗೆ ಸೀಮಿತವಾಯಿತು. ಚಾಮುಂಡೇಶ್ವರಿಯನ್ನು ಅಂಬಾರಿಯಲ್ಲಿ ಕೂರಿಸಿ ನಾವು ಮೈಸೂರು ಹಬ್ಬಕ್ಕೆ ನಾಡಹಬ್ಬದ ಪಟ್ಟ ಕಟ್ಟಿದೆವು. ದಸರಾ ಸಂಭ್ರಮವನ್ನು ಇಡೀ ನಾಡಿಗೆ ವಿಸ್ತರಿಸುವ ಕೆಲಸವೂ ನಡೆಯಿತು. ನಿಜಕ್ಕೂ ಇದೊಂದು ಅಪೂರ್ವ ಅವಕಾಶವಾಗಿತ್ತು. ಧಾರ್ಮಿಕ ಲೇಪನ ಮತ್ತು ಸಾಂಸ್ಕೃತಿಕ ಬಂಧದೊಂದಿಗೆ ಇಡೀ ರಾಜ್ಯದಲ್ಲಿ 10 ದಿನಗಳ ಕಾಲ ಹಬ್ಬ ಆಚರಿಸುವ, ಎಲ್ಲರನ್ನೂ ಒಟ್ಟು ಸೇರಿಸುವ ಕೆಲಸಕ್ಕೆ ಇದೊಂದು ಅದ್ಭುತ ವೇದಿಕೆಯಾಗಿತ್ತು. ಆರಂಭದಲ್ಲಿ ದಸರೆಯ ಯೋಚನೆ, ಯೋಜನೆ, ರೂಪುರೇಷೆಗಳೆಲ್ಲವೂ ಈ ಮಾದರಿಯಲ್ಲೇ ಇತ್ತು.

• **ಕುಂದಿದ ದಸರೆ ಬೆಳಕು**

ನೀವೇ ನೆನಪಿಸಿಕೊಳ್ಳಿ. ದಶಕಗಳ ಹಿಂದೆ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ನಡೆಯುತ್ತಿದ್ದ ದಸರಾ ಕ್ರೀಡಾಕೂಟ ಎಂದರೆ ಹಬ್ಬದ ಸಂಭ್ರಮವೇ ಮೇಳೈಸುತ್ತಿತ್ತು. ಇದರಲ್ಲಿ ಗೆಲ್ಲುವುದಕ್ಕಾಗಿಯೇ ಕ್ರೀಡಾಪಟುಗಳು ತಿಂಗಳುಗಟ್ಟಲೆ ಬೆವರು ಸುರಿಸುತ್ತಿದ್ದರು. ಮೈಸೂರಿನಲ್ಲಿ ನಡೆಯುತ್ತಿದ್ದ ಕ್ರೀಡಾಕೂಟದ ಅಂತಿಮ ಹಣಾಹಣಿ ರೋಚಕವಾಗಿರುತ್ತಿತ್ತು. ಕ್ರೀಡಾಕೂಟ ಮುಗಿದ ಬಳಿಕ ಮೈಸೂರನ್ನು ಸುತ್ತು ಹಾಕಿ ತಮ್ಮ ಜಿಲ್ಲೆಗಳಿಗೆ ಮರಳುತ್ತಿದ್ದ ಕ್ರೀಡಾಪಟುಗಳಿಗೆ ಇದೊಂದು ಅವಿಸ್ಮರಣೀಯ ಕ್ಷಣವಾಗಿ ನೆನಪಲ್ಲಿ ಉಳಿಯುತ್ತಿತ್ತು. ದಸರಾದ ಕುಸ್ತಿ ಸ್ಪರ್ಧೆಯಲ್ಲಿ ಸೆಣಸಲು ಇಡೀ ದೇಶದ ಕುಸ್ತಿ ಸ್ಪರ್ಧಿಗಳು ಹಾತೊರೆಯುತ್ತಿದ್ದರು. ಕಲೆ, ನೃತ್ಯ, ಸಾಹಿತ್ಯ ಮತ್ತಿತರ ಕ್ಷೇತ್ರದ ಉದಯೋನ್ಮುಖ ಪ್ರತಿಭೆಗಳು ಮೈಸೂರು ದಸರಾದ ಬೆಳಕಿನಲ್ಲಿ ಮಿಂಚಲು ಹಂಬಲಿಸುತ್ತಿದ್ದರು. ದಸರೆ ಎಂದರೆ ಜಂಬೂ ಸವಾರಿ, ಯುವಜನ ಮೇಳ, ಆಹಾರ ಮೇಳ, ಬೆಳಕಿನ ಚಿತ್ತಾರ ಅಷ್ಟೇ ಆಗಿರಲಿಲ್ಲ. ಈ ಸಂಭ್ರಮ ಮೈಸೂರಿಗಷ್ಟೇ ಸೀಮಿತವಾಗಿರಲಿಲ್ಲ.

ಇಂದು ದಸರೆಯ ಕ್ರೀಡಾಕೂಟಕ್ಕೆ ವಿಶೇಷ ಸಿದ್ಧತೆ ಬೇಕಿಲ್ಲ. ಕ್ರೀಡಾಕೂಟದ ದಿನ ಚಾಮುಂಡಿ ವಿಹಾರ ಮೈದಾನದಲ್ಲಿ ಒಂದರೆಡು ಟೆಂಟ್‌ಗಳನ್ನು ಹಾಕಿದರೆ ಮುಗಿಯಿತು. ಮೊದಲು ಕ್ರೀಡಾಪಟುಗಳಿಗೆ ಶೂ ಮೊದಲಾದ ಪರಿಕರ ನೀಡುವ ಸಂಪ್ರದಾಯವಿತ್ತು. ಈ ಅದಕ್ಕೂ ಕೊಕ್ಕೆ ಹಾಕಲಾಗಿದೆ. ಕೆಲವೊಂದು ಕ್ರೀಡೆಗಳನ್ನೂ ಕೈ ಬಿಡಲಾಗಿದೆ. ಈ ಹಿಂದೆ ದಸರಾ ಕ್ರೀಡಾಕೂಟದಲ್ಲಿ ಕಾಣುತ್ತಿದ್ದ ಪೈಪೋಟಿ,ಭಾಗವಹಿಸಲೇಬೇಕೆಂಬ ತುಡಿತ ಎರಡೂ ಕಾಣಿಸುತ್ತಿಲ್ಲ. ಕ್ರೀಡಾಪಟುಗಳಿಗೆ ನೀಡುತ್ತಿದ್ದ ಸಂಭಾವನೆಯಲ್ಲೂ ಹೆಚ್ಚೇನೂ ಏರಿಕೆಯಾಗಿಲ್ಲ. ಆದರೆ ಕ್ರೀಡಾಪಟುಗಳ ವಾಸ್ತವ್ಯದ ಹೆಸರಿನಲ್ಲಿ ಈಗಲೂ ಲಕ್ಷಾಂತರ ರೂ. ವ್ಯಯಿಸಲಾಗುತ್ತಿದೆ. ದಸರೆ ಮತ್ತು ಇತರೆ ಕ್ರೀಡಾಕೂಟಗಳಿಗೆ ಬರುವವರಿಗಾಗಿಯೇ ಕಾಯಂ ನೆಲೆಯಲ್ಲಿ ಕ್ರೀಡಾ ಹಾಸ್ಟೆಲ್‌ವೊಂದನ್ನು ಕಟ್ಟಿದ್ದರೆ ಪ್ರತೀ ವರ್ಷ ಲಕ್ಷಾಂತರ ರೂ. ವ್ಯಯಿಸುವ ಅಗತ್ಯ ಇರಲಿಲ್ಲ.

ಈಗ ದಸರೆಯ ವೇಳೆ ವೇದಿಕೆ ಏರಲು ಪ್ರತಿಭೆಯ ಜತೆ ಸಾಕಷ್ಟು ಪ್ರಭಾವವೂ ಬೇಕು. ಮೊದಲು ಸ್ಥಳೀಯ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿ ಗೆದ್ದ ತಂಡಗಳನ್ನು ದಸರೆಯ ಸಂದರ್ಭದಲ್ಲಿ ಕಾರ್ಯಕ್ರಮ ನೀಡಲು ಆಹ್ವಾನಿಸಲಾಗುತ್ತಿತ್ತು. ಯುವ ಸಂಭ್ರಮದಲ್ಲಿ ಭಾಗವಹಿಸುವ ಶಾಲಾ ಕಾಲೇಜು ತಂಡಗಳಿಗೆ ಅದೊಂದು ಜೀವಮಾನದ ಸಂಭ್ರಮವಾಗಿರುತ್ತಿತ್ತು. ಈಗ ಕೊನೆ ಕ್ಷಣದಲ್ಲೂ ತಂಡಗಳು ಸೇರ್ಪಡೆಯಾಗುತ್ತವೆ, ಹೊರಗುಳಿಯುತ್ತವೆ. ಮೈಸೂರು ವಿವಿ ಬಯಲು ಮಂದಿರದಲ್ಲಿ ನಡೆಯುವ 'ಯುವ ಸಂಭ್ರಮ'ದಲ್ಲಿ ಸಿನಿಮಾ ಹಾಡುಗಳ ಭರಾಟೆಯೇ ಹೆಚ್ಚು. ಇನ್ನು ಯುವ ದಸರಾದಲ್ಲಿ ಸಿನಿ ತಾರೆಯರು, ಬಾಲಿವುಡ್ ಗಾಯಕ, ಗಾಯಕಿಯರದ್ದೇ ಅಬ್ಬರ. ಹೊರಗಿನ ತಾರೆಯರನ್ನು ಕರೆ ತರುವುದೇ ಆಯಾ ವರ್ಷದ ದಸರಾ ಸಾಧನೆ ಎಂದು ಬಿಂಬಿಸಲಾಗುತ್ತಿದೆ. ಈ ವರ್ಷದಿಂದ ಈ ಕಾರ್ಯಕ್ರಮವನ್ನು ವೇದಿಕೆಯಿಂದ ಸಮೀಪದಿಂದ ವೀಕ್ಷಿಸಬೇಕಾದರೂ 8 ಸಾವಿರ ರೂ.ಗಳ ವಿಐಪಿ ಟಿಕೆಟ್ ಖರೀದಿಸಬೇಕು. ಇದುವರೆಗೆ ಉಚಿತ ಪ್ರವೇಶವಿದ್ದ ಕಾರ್ಯಕ್ರಮ ಈ ವರ್ಷದಿಂದ ಸ್ಥಳಾಂತರಗೊಂಡು ಹಣವಂತರ ಹತ್ತಿರಕ್ಕೆ ಸಾಗಿದೆ. 40 ಕೋಟಿ ರು. ಬರೋಬ್ಬರಿ ಅನುದಾನದ ಹೊರತಾಗಿಯೂ ಗೋಲ್ಡ್ ಪಾಸ್ ಮೊತ್ತವನ್ನು 5 ಸಾವಿರ ರೂ.ಗಳಿಂದ 6500 ರೂ.ಗಳಿಗೆ ಏರಿಸಲಾಗಿದೆ. ಪ್ರವಾಸಿಗರಿಗೆ ಸುಲಭದಲ್ಲಿ ದಸರೆ ಲೈಟಿಂಗ್ಸ್ ನೋಡಲು ಬಳಸಬಹುದಾಗಿದ್ದ ಡಬಲ್ ಡೆಕ್ಕರ್ ಬಸ್ ಟಿಕೆಟ್ ಶುಲ್ಕವನ್ನು 350ರೂ.ಗಳಿಂದ 500ರೂ. ಗಳಿಗೆ ಏರಿಸಲಾಗಿದೆ. ಮಹಾರಾಜರ ಕಾಲದಲ್ಲಿ ಮೈಸೂರಿಗೆ ಬಂದವರು ಉಳಿದುಕೊಳ್ಳುವುದಕ್ಕಾಗಿಯೇ ಉಚಿತ ಛತ್ರಗಳಿತ್ತು. ಈಗ ವಾಸ್ತವ್ಯದಿಂದ ಹಿಡಿದು ಜಂಬೂಸವಾರಿ, ಪಂಜಿನ ಕವಾಯತು ವೀಕ್ಷಣೆಯ ತನಕ ಎಲ್ಲವೂ ಪೇಯ್ಡ್ ಸರ್ವಿಸ್.

• **ವಾರ್ಷಿಕ ಆಚರಣೆಯಷ್ಟೇ ಅಲ್ಲ**

ನಾಡಹಬ್ಬವಾಗಿ ಬದಲಾದ ದಸರೆ ಕೇವಲ ವಾರ್ಷಿಕ ಆಚರಣೆಯಾಗಿ ಉಳಿಯಬಾರದು. ದಸರಾ ಕ್ರೀಡಾಕೂಟದ ಮಾದರಿಯಲ್ಲಿ ಈ ವೇದಿಕೆಯನ್ನು ಬಳಸಿಕೊಂಡು ನಾವು ವರ್ಷ ಪೂರ್ತಿ, ನಾಡಿನಾದ್ಯಂತ ಸಾಂಸ್ಕೃತಿಕ, ಸಾಹಿತ್ಯಿಕ ಸ್ಪರ್ಧೆಗಳನ್ನು ಏರ್ಪಡಿಸಲು ಸಾಧ್ಯವಿದೆ. ಹೋಬಳಿ ಮಟ್ಟದಲ್ಲಿ ಗೆದ್ದವರು ತಾಲ್ಲೂಕು ಮಟ್ಟಕ್ಕೆ, ಇಲ್ಲಿ ಗೆದ್ದವರು ಜಿಲ್ಲೆ, ವಿಭಾಗ ಮಟ್ಟದಲ್ಲಿ ಜಯಿಸಿ ದಸರೆಯ ವೇದಿಕೆಯಲ್ಲಿ ಲಕ್ಷಾಂತರ ಪ್ರೇಕ್ಷಕರ ಸಮ್ಮುಖದಲ್ಲಿ ತಮ್ಮ ಪ್ರತಿಭೆ ಪ್ರದರ್ಶಿಸಲು ಅವಕಾಶ ನೀಡಬಹುದು. ದಸರೆಯ ಹೆಸರಿನಲ್ಲಿ ವರ್ಷಪೂರ್ತಿ ಕಾರ್ಯಕ್ರಮ ಆಯೋಜಿಸುವ ಮೂಲಕ ನಮ್ಮ ಕಲೆ, ಸಂಸ್ಕೃತಿ, ಜನಪದ ಪರಂಪರೆಯನ್ನು ಉಳಿಸಿ ಮುಂದಿನ ಪೀಳಿಗೆಗೆ ದಾಟಿಸುವ ಕೆಲಸವನ್ನೂ ಮಾಡಬಹುದು. ಟಿವಿ ರಿಯಾಲಿಟಿ ಶೋಗಳಲ್ಲಿ ನೈಜತೆ ಕಳೆದುಕೊಳ್ಳುವ ಪ್ರತಿಭೆಗಳಿಗೆ ನಿಜವಾದ ವೇದಿಕೆಗಳಲ್ಲಿ ಬೆಳೆದು ಬೆಳಗಲು ಅವಕಾಶ ಮಾಡಿಕೊಡಬಹುದು. ಹಾಗೆಯೇ ನಮ್ಮ ದೇಶೀ ಕ್ರೀಡೆಗಳಿಗೆ ಉತ್ತೇಜನ ನೀಡಬಹುದು.

ಖಾಸಗಿ ಪ್ರಾಯೋಜಕರನ್ನು ಬಳಸಿಕೊಂಡು ಸರಕಾರದ ದುಡ್ಡಿಲ್ಲದೆಯೇ ಇದೆಲ್ಲವನ್ನೂ ಸಂಘಟಿಸಬಹುದು. ದಸರೆ ಸಮಿತಿಗಳು ಅಧಿಕಾರಿಗಳು ಮತ್ತು ರಾಜಕೀಯ ನಾಯಕರ ದರ್ಬಾರ್ ಕೇಂದ್ರಗಳಾಗದೇ, ನಾಡ ಹಬ್ಬದ ಕಾಯಂ ಆಚರಣೆಗೆ ಪರಿಣತರ ಸಮಿತಿ ರಚನೆಯಾಗಬೇಕು. ಈಗಾಗಲೇ ಕೇಳಿ ಬರುತ್ತಿರುವ ಪ್ರಾಧಿಕಾರದ ಕೂಗು ಇದಕ್ಕೆ ಪೂರಕವಾಗಬಹುದು. ಕೇಂದ್ರ ಸರಕಾರ ಗಣರಾಜ್ಯೋತ್ಸವವನ್ನು ಆಚರಿಸುವ ಮಾದರಿಯಲ್ಲಿಯೇ ನಾವು ದಸರೆ ಆಚರಿಸಬಹುದು. ದಸರಾ ವೇದಿಕೆಯನ್ನು ಅಲಂಕರಿಸಿದ ಪ್ರತಿಭೆಗಳಿಗೆ ವಿಜಯದಶಮಿ ದಿನ ಅರಮನೆ ಒಳಗೆ ಕುಳಿತು ಜಂಬೂಸವಾರಿಯನ್ನು ವೀಕ್ಷಿಸಲು ಅವಕಾಶ ಮಾಡಿಕೊಡಬಹುದು. ಈ ಬಾರಿಯ ದಸರೆ ಮುಗಿದ ಕೂಡಲೇ ಗ್ರಾಮ ಮಟ್ಟದಿಂದ ಆರಂಭವಾಗುವ ಸ್ಪರ್ಧೆ ಮುಂದಿನ ದಸರೆಯ ವೇಳೆಗೆ ಸಮಾಪ್ತಿಯಾಗುವ ರೀತಿಯಲ್ಲಿ ವರ್ಷ ಪೂರ್ತಿ ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಘಟಿಸಬೇಕು. ಇದಕ್ಕೆ ಬೇಕಿರುವುದು ದೂರದೃಷ್ಟಿ ಉಳ್ಳ ಒಂದಷ್ಟು ಪರಿಣತರ ತಂಡ. ದಸರೆ ನಿಜವಾದ ಅರ್ಥದಲ್ಲಿ ಇಡೀ ಕರುನಾಡಿನ ಹಬ್ಬವಾಗಲಿ ಎನ್ನುವುದು ಕನ್ನಡಿಗರೆಲ್ಲರ ಆಶಯ.



ನಾರದ ಸಂಚಾರ

ಕಲಹಪ್ರಿಯ
naadigru@gmail.com

ಎತ್ತಂಗಡಿಗೆ ಚೆಂದುಟಿ ಕಾರಣವಲ್ಲ!

ಇದು ತಮಿಳುನಾಡಿನಿಂದ ಬಂದಿರುವ ಬಿಸಿಬಿಸಿ ಸುದ್ದಿ. ಚೆನ್ನೈ ಮುನಿಸಿಪಲ್ ಕಾರ್ಪೊರೇಷನ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಎಸ್.ಬಿ.ಮಾಧವಿ ಎಂಬ ಮಹಿಳಾ ದಫೇದಾರ್ ಇದರ ಕೇಂದ್ರಬಿಂದು. ಇವರ ವರ್ಗಾವಣೆಯೇ ಈಗ ಸುದ್ದಿಗೆ ಗ್ರಾಸವಾಗಿರುವುದು. ಮಾಧವಿ ಅವರು ತುಟಿಗೆ ಮೆತ್ತಿಕೊಂಡಿದ್ದ ಲಿಪ್‌ಸ್ಟಿಕ್ ತೀರಾ ಢಾಳಾಗಿತ್ತಂತೆ. ಅದನ್ನು ಲಘುವಾಗಿಸುವಂತೆ ನೀಡಿದ ಆದೇಶವನ್ನು ಮಾಧವಿ ಧಿಕ್ಕರಿಸಿಬಿಟ್ಟರಂತೆ. ಈ ಚಿಕ್ಕ ಕಾರಣಕ್ಕಾಗಿ ಮಾಧವಿ ಅವರನ್ನು ಅವರಿದ್ದ ಜಾಗದಿಂದ ವರ್ಗಾಯಿಸಿಬಿಟ್ಟರಂತೆ- ಇದು ಸ್ವತಃ ಆ ಮಹಿಳಾ ದಫೇದಾರ್ ಅಲವತ್ತುಕೊಂಡಿರುವ ಪರಿ.

ಆದರೆ, ಈ ಕುರಿತು ಚೆನ್ನೈ ಮುನಿಸಿಪಲ್ ಕಾರ್ಪೊರೇಷನ್‌ನ ಮೇಯರ್ ಪ್ರಿಯಾ ರಾಜನ್ ಅವರು ಪ್ರತಿಕ್ರಿಯಿಸಿ, ''ಸಮಯಕ್ಕೆ ಸರಿಯಾಗಿ ಕಚೇರಿಗೆ ಬರುತ್ತಿಲ್ಲ ಮತ್ತು ಕೆಲಸದಲ್ಲಿ ವೃತ್ತಿಪರತೆಯನ್ನು ಮೆರೆಯುತ್ತಿಲ್ಲ ಎಂಬ ಕಾರಣಕ್ಕೆ ಆಕೆಯನ್ನು ವರ್ಗಾಯಿಸಲಾಗಿದೆಯೇ ವಿನಾ, ಇದಕ್ಕೂ ಆಕೆಯ ತುಟಿರಂಗಿಗೂ ಯಾವುದೇ ಸಂಬಂಧವಿಲ್ಲ'' ಎಂದು ಸ್ಪಷ್ಟೀಕರಣ ನೀಡಬೇಕಾಗಿ ಬಂತು. ಆದರೆ, ಇನ್ಫರ್ಮೆಂಟುಗಳು ತ್ರಿಲೋಕ ಸಂಚಾರಿ ನಾರದರಿಗೆ 'ಪಾಸ್ ಆನ್' ಮಾಡಿರುವ ಮಾಹಿತಿ ಬೇರೆಯೇ ಇದೆ. ಅದರ ಪ್ರಕಾರ– ಪಾಲಿಕೆಯ ಮೇಯರ್ ಪ್ರಿಯಾ ರಾಜನ್ ಹಾಗೂ ಉಪಮೇಯರ್ ಮಹೇಶ್ ಕುಮಾರ್ ನಡುವಿನ ಬದ್ಧದ್ವೇಷವೇ ಈ ವರ್ಗಾವಣೆಗೆ ಕಾರಣವಂತೆ. ಉಪಮೇಯರ್ ಅವರ ಕಚೇರಿಯವರು ದಫೇದಾರ್ ಮಾಧವಿ ಅವರನ್ನು ಒಬ್ಬ 'ಮಾಹಿತಿದಾರಳಾಗಿ' ಬಳಸಿಕೊಳ್ಳುತ್ತಿದ್ದರಂತೆ; ಇದು ಅರಿವಾಗುತ್ತಿದ್ದಂತೆ ಮೇಯರ್ ಅವರು ಮಾಧವಿ ಅವರ ಗೂಢಚಾರಿಕೆಯನ್ನು ಬಂದ್ ಮಾಡಲು ನಿರ್ಧರಿಸಿದರಂತೆ. ಅದರ ಫಲಶ್ರುತಿಯೇ ಈ ವರ್ಗಾವಣೆಯಂತೆ!

ವಾಸ್ತವ ಸಂಗತಿ ಏನು ಅಂತ ಗೊತ್ತಾಗಿದ್ದಕ್ಕೆ ಸರಿಯಾಯ್ತು. ಇಲ್ಲವಾಗಿದ್ದರೆ 'ಚೆಂದುಟಿಗಳು' ವಿನಾಕಾರಣ ಅಪವಾದ ಹೊತ್ತುಕೊಳ್ಳಬೇಕಾಗಿತ್ತು, ಅಲ್ಲವೇ?!!

ಏಟು ಎದುರೇಟು...?

ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು ರಾಯಚೂರು ಜಿಲ್ಲೆಗೆ ಆಗಮಿಸಿದ್ದ ಮುಖ್ಯಮಂತ್ರಿಗಳು ಬೆಂಗಳೂರಿಗೆ ಸುಸೂತ್ರವಾಗಿ ಮರಳುವಂತಾಗಲೆಂದು 'ಝೀರೋ ಟ್ರಾಫಿಕ್' ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು; ಇದರ ಪರಿಣಾಮವಾಗಿ ಗಂಗಾವತಿಯಲ್ಲಿ ಸೃಷ್ಟಿಯಾದ ಸಂಚಾರ ದಟ್ಟಣೆಯನ್ನು 'ಗಣಿರೆಡ್ಡಿ' ಖ್ಯಾತಿಯ ಬಿಜೆಪಿ ನಾಯಕ ಜನಾರ್ದನ ರೆಡ್ಡಿಯವರು ತಮ್ಮದೇ ಶೈಲಿಯಲ್ಲಿ ನಿವಾರಿಸಿಕೊಂಡ ಸುದ್ದಿಯನ್ನು ನೀವು ಈಗಾಗಲೇ ಓದಿದ್ದೀರಿ. ಅವರಿದ್ದ ಕಾರು ರಸ್ತೆಯ ಡಿವೈಡರ್ ಅನ್ನೂ ಜಂಪ್ ಮಾಡಿಕೊಂಡು ಏಕಮುಖ ಮಾರ್ಗದಲ್ಲಿ ಚಲಿಸಿದ ಘಟನೆಯಿದು! ''ಒಂದು ಕಾಲಕ್ಕೆ ತೊಡೆ ತಟ್ಟಿಕೊಂಡು ಬಳ್ಳಾರಿಗೆ ಪಾದಯಾತ್ರೆ ಬಂದಿದ್ದ ಸಿದ್ದರಾಮಯ್ಯನವರಿಗೆ ಸವಾಲು ಹಾಕಲೆಂದೇ ರೆಡ್ಡಿ ಸಾಹೇಬ್ರು ಹೀಗೆ ಕಾರನ್ನು ಜಂಪ್ ಮಾಡಿಸಿದರೇ?'' ಎಂಬುದು ತ್ರಿಲೋಕ ಸಂಚಾರಿ ನಾರದರ ಕಿಡಿಗೇಡಿ ಪ್ರಶ್ನೆ!



ನಾರಾಯಣ ನಾರಾಯಣ!

ಕಳೆದ 3 ವರ್ಷದಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿನ ರಸ್ತೆಗುಂಡಿಗಳನ್ನು ಮುಚ್ಚಲು 7,300 ಕೋಟಿ ರುಪಾಯಿ ಖರ್ಚಾಗಿದೆಯಂತೆ. ಹಾಗಂತ, ''7,300 ಕೋಟಿ ರುಪಾಯಿ ಗುಂಡಿಪಾಲು'' ಎನ್ನಲಾದೀತೇ? ಛೇ ಛೇ!!

ಬಿಜೆಪಿಯಲ್ಲೀಗ ಹೊಸ ಅಧ್ಯಕ್ಷನ ಹುಡುಕಾಟದ ಭರಾಟೆ



ಪ್ರಭು ಪ್ರವರ

ಪ್ರಭು ಚಾವ್ಲಾ
vveditoped@gmail.com

ಪ್ರಕೃತಿಯಲ್ಲಿ ನಿರ್ವಾತಕ್ಕೆ ಅವಕಾಶವಿಲ್ಲ ಮತ್ತು ನಿರ್ವಾತದಲ್ಲಿ ಗೊಂದಲಕ್ಕೆ ಅವಕಾಶವಿಲ್ಲ. ಆದರೆ, ಈಗ ಸೃಷ್ಟಿಯಾಗಿರುವ ಬಿಜೆಪಿಯ ಅಧ್ಯಕ್ಷ ಸ್ಥಾನವೆಂಬ ನಿರ್ವಾತವನ್ನು ತುಂಬುವ ಪ್ರಕ್ರಿಯೆಯಲ್ಲಿ ಸಾಕಷ್ಟು ಗೊಂದಲಗಳು ಹುಟ್ಟಿಕೊಂಡಿವೆ. 2024ರ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಯ ಗಳಿಕೆ 400 ಸ್ಥಾನಗಳ ಆಸುಪಾಸಿಗೂ ಬಾರದ ಹಿನ್ನೆಲೆಯಲ್ಲಿ ಹಾಗೂ ಪಕ್ಷವು ಸ್ವತಃ ಸರಳ ಬಹುಮತವನ್ನೂ ಪಡೆಯಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಹೊಸ ರಾಷ್ಟ್ರೀಯ ಅಧ್ಯಕ್ಷನ ಆಯ್ಕೆಯೆಂಬುದು ಗೊಂದಲದ ಗೂಡಾಗಿದೆ. ಜೆ.ಪಿ.ನಡ್ಡಾ ಅವಧಿ ಜೂನ್‌ನಲ್ಲೇ ಕೊನೆಯಾಗಿದೆ. ಆದರೆ, ಅವರಿಗೊಬ್ಬ ಬದಲಿ ನಾಯಕನನ್ನು ಹುಡುಕಲು ವರಿಷ್ಠರಿಗೆ ಇನ್ನೂ ಸಾಧ್ಯವಾಗದ ಕಾರಣ ಅವರೇ ಇನ್ನೂ ಹಾಟ್ ಸೀಟ್‌ನಲ್ಲಿ ಕುಳಿತಿದ್ದಾರೆ. ನಡ್ಡಾ ಈಗ ಪಕ್ಷದ ಮಧ್ಯಂತರ ಅಧ್ಯಕ್ಷನಷ್ಟೇ ಅಲ್ಲ, ಅವರು ಕೇಂದ್ರ ಸಚಿವರೂ ಹೌದು. ಆದರೆ, ಒಬ್ಬ ವ್ಯಕ್ತಿ ಎರಡು ಪ್ರಮುಖ ಹುದ್ದೆಗಳಲ್ಲಿ ಇರಬಾರದು ಎಂಬ ಪಕ್ಷದ ನಿಯಮದಿಂದಾಗಿ ಅವರನ್ನೀಗ ಬದಲಿಸಲೇಬೇಕಿದೆ. ಬಿಜೆಪಿಯಲ್ಲೀಗ ಮೊದಲಿನಂತೆ ಕಠಿಣ ನಿರ್ಧಾರಗಳನ್ನು ಸುಲಭವಾಗಿ ತೆಗೆದುಕೊಳ್ಳುವುದು ಪಕ್ಷದ ನಾಯಕತ್ವಕ್ಕೆ ಸಾಧ್ಯವಾಗುತ್ತಿಲ್ಲ ಎಂಬ ಅಭಿಪ್ರಾಯ ಸಾರ್ವಜನಿಕರಲ್ಲಿ ನಿಧಾನವಾಗಿ ಹರಳುಗಟ್ಟುತ್ತಿರುವುದನ್ನು ಸುಳ್ಳಾಗಿಸುವುದಕ್ಕಾದರೂ ಪಕ್ಷದ ಹೊಸ ರಾಷ್ಟ್ರೀಯ ಅಧ್ಯಕ್ಷನನ್ನು ತಾಪ್ತೋಪ್ ಹುಡುಕಲೇಬೇಕಿದೆ.

ಜಗತ್ತಿನ ಅತಿದೊಡ್ಡ ರಾಜಕೀಯ ಪಕ್ಷ ಬಿಜೆಪಿ. ಅದರಲ್ಲಿ ಸಂಸದರಿಗೆ ಕೊರತೆಯಿಲ್ಲ. ಸಾಕಷ್ಟು ಮುಖ್ಯಮಂತ್ರಿಗಳೂ ಇದ್ದಾರೆ. ಆದರೆ ಪ್ರತಿಭೆಗೆ ಕೊರತೆ ಕಾಣಿಸುತ್ತಿದೆ. ದೀರ್ಘಕಾಲದಿಂದ ಅಧಿಕಾರದಲ್ಲಿರುವುದರಿಂದ ಸಹಜವಾಗಿಯೇ ಬೇಕಾದಷ್ಟು ಯಶಸ್ವಿ ಆಡಳಿತಗಾರರು ಸೃಷ್ಟಿಯಾಗಿದ್ದಾರೆ. ಬಿಜೆಪಿ ವಿಪಕ್ಷವಾಗಿದ್ದಾಗ ಅದರಲ್ಲಿ ಒಬ್ಬ ಅಟಲ್‌ಗೆ ನಾಲ್ವರು ವಾಜಪೇಯಿಗಳಿದ್ದರು! ಅಥವಾ ಅವರ ಜಾಗ ತುಂಬುವುದಕ್ಕೆ ಇನ್ನೊಬ್ಬ ಆಡ್ವಾಣಿ ಇದ್ದರು. ಅವರಲ್ಲಿ ಯಾರಾದರೊಬ್ಬರು ಪಕ್ಷದ ಅಧ್ಯಕ್ಷರಾಗಿ ರಥವನ್ನು ಮುನ್ನಡೆಸುತ್ತಿದ್ದರು. ಈಗ 12ನೇ ಅಧ್ಯಕ್ಷನ ಆಯ್ಕೆಗೆ ಹುಡುಕಾಟ ನಡೆದಿರುವಾಗ ಅನೇಕ ಹೆಸರುಗಳು ಮುನ್ನೆಲೆಗೆ ಬರುತ್ತಿವೆ. ಆದರೆ ಯಾವ ಹೆಸರಿನ ಮೇಲೂ ಈವರೆಗೆ ಶಾಯಿ ಒಣಗಿಲ್ಲ.

• **ಶಿವರಾಜ್‌ಸಿಂಗ್ ಚೌಹಾಣ್**

13ನೇ ವರ್ಷದಲ್ಲೇ ಆರ್‌ಎಸ್‌ಎಸ್ ಸ್ವಯಂಸೇವಕನಾಗಿ ಸಾಮಾಜಿಕ ಜೀವನ ಆರಂಭಿಸಿದ ನಾಯಕ. 1972ರಿಂದ ಸಾರ್ವಜನಿಕ ಬದುಕಿನಲ್ಲಿದ್ದಾರೆ. ಅವರಿಗೀಗ 65 ವರ್ಷ. ಸದ್ಯಕ್ಕೆ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಎಲ್ಲರಿಗಿಂತ ಮುಂಚೂಣಿಯಲ್ಲಿರುವ ವ್ಯಕ್ತಿಯಂತೆ ತೋರುತ್ತಿದ್ದಾರೆ. ವಯಸ್ಸು, ಜಾತಿ, ವಿಶ್ವಾಸಾರ್ಹತೆ, ಅನುಭವ ಹಾಗೂ ಸ್ವೀಕಾರಾರ್ಹತೆ ಅವರ ಪ್ಲಸ್ ಪಾಯಿಂಟ್‌ಗಳು. ಈ ಕಾರಣಕ್ಕಾಗಿಯೇ ಅವರ ಹೆಸರು ಮುಂದಿದೆ. ಮೂರು ಬಾರಿ ಮುಖ್ಯಮಂತ್ರಿಯಾಗಿ ಯಶಸ್ವಿ ಆಡಳಿತ ನೀಡಿದ ನಾಯಕ. ಆರ್‌ಎಸ್‌ಎಸ್‌ನ ನೀಲಿಗಣ್ಣಿನ ಹುಡುಗ. ವಿರೋಧ ಪಕ್ಷಗಳಿಂದಲೂ ಅತ್ಯಂತ ಕಡಿಮೆ ದ್ವೇಷಿಸಿಕೊಳ್ಳುವ ಆಸಾಮಿ. ಮಧ್ಯಪ್ರದೇಶದಲ್ಲಿ ಇವರನ್ನು ಪ್ರೀತಿಯಿಂದ 'ಮಾಮಾ' ಎಂದು ಕರೆಯುತ್ತಾರೆ. ಜನಸಾಮಾನ್ಯರ ಕೈಗೆ ಸುಲಭವಾಗಿ ಸಿಗುತ್ತಾರೆ. ಎಲ್ಲರ ಜತೆಗೂ ಫ್ರೆಂಡ್ಲಿಯಾಗಿ ಇರುವ ಸರಳ ಮನುಷ್ಯ. ಅವರು ಜಾರಿಗೆ ತಂದ ಸೃಜನಶೀಲ ಜನಕಲ್ಯಾಣ ಯೋಜನೆಗಳು ಹಾಗೂ ಅಭಿವೃದ್ಧಿ ಯೋಜನೆಗಳು ರಾಜ್ಯದಲ್ಲಿ ಬಿಜೆಪಿಯನ್ನು ಸೋಲಿಸಲಾಗದ ಹಂತಕ್ಕೆ ಕೊಂಡೊಯ್ದಿವೆ. 'ಹಿಂದುತ್ವ' ಅವರ ಆಡಳಿತದ ಕೇಂದ್ರಬಿಂದುವಾಗಿತ್ತು. ಅದೇ ಅವರ ರಾಜಕಾರಣದ ಸಿದ್ಧಾಂತವೂ ಹೌದು. ಅಟಲ್ ಮತ್ತು ಆಡ್ವಾಣಿಯವರು ಬಹಳ ಹಿಂದೆಯೇ ಇವರನ್ನು ಭವಿಷ್ಯದ ನಾಯಕನೆಂದು ಗುರುತಿಸಿ 2005ರಲ್ಲಿ ಸಿಎಂ ಮತ್ತು ಕೇಂದ್ರ ಸಂಸದೀಯ ಮಂಡಳಿಯ ಸದಸ್ಯನನ್ನಾಗಿ ಮಾಡಿದ್ದರು. ಕೃಷಿಕರ ಕಲ್ಯಾಣಕ್ಕಾಗಿ ನಾನಾ ಯೋಜನೆಗಳನ್ನು ಜಾರಿಗೊಳಿಸಿದ ಖ್ಯಾತಿ ಇವರದು. ಹೀಗಾಗಿ ಗ್ರಾಮೀಣ ಭಾಗದಲ್ಲಿ ದೊಡ್ಡ ಪ್ರಮಾಣದ ಜನಬೆಂಬಲ ಹೊಂದಿದ್ದಾರೆ. ಆದರೆ, ಇವರು ಹೊಂದಿರುವ ಸ್ವತಂತ್ರ ವ್ಯಕ್ತಿತ್ವವೇ ಪಕ್ಷದಲ್ಲಿ ಮೇಲೆ ಬರುವುದಕ್ಕೆ ಕೆಲವೊಮ್ಮೆ ದೌರ್ಬಲ್ಯವಾಗಿ ಅಡ್ಡಿಬರುತ್ತದೆ.

• **ದೇವೇಂದ್ರ ಫಡ್ನವೀಸ್**

35 ವರ್ಷಗಳಿಂದ ಸಂಘ ಪರಿವಾರದ ಜತೆಗೆ ಗುರುತಿಸಿಕೊಂಡಿದ್ದಾರೆ. ಈಗ 54 ವರ್ಷ ವಯಸ್ಸು. ಮಹಾರಾಷ್ಟ್ರದ ನಾಗ್ಪುರದಿಂದ ಎಬಿವಿಪಿ ಮೂಲಕ ರಾಜಕೀಯ ಜೀವನ ಆರಂಭಿಸಿದ ಈ ನಾಯಕ ಈಗ ದೇಶದ ಅತ್ಯಂತ ಶ್ರೀಮಂತ ರಾಜ್ಯದಲ್ಲಿ ಬಿಜೆಪಿಯ ಅತಿದೊಡ್ಡ ಹೆಸರು. ಹೊಸ ಹೊಸ ಪ್ರತಿಭೆಗಳನ್ನು ಹುಡುಕುವುದಕ್ಕೆ ಖ್ಯಾತಿ ಪಡೆದಿರುವ ನರೇಂದ್ರ ಮೋದಿ ಮತ್ತು ಅಮಿತ್ ಶಾ ಜೋಡಿಯು 2014ರಲ್ಲಿ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಾಗ ಸಿಎಂ ಹುದ್ದೆಗೆ ಹುಡುಕಿದ್ದು ಆಗ 44 ವರ್ಷದವರಾಗಿದ್ದ ಈ ಬ್ರಾಹ್ಮಣ ನಾಯಕನನ್ನು. ಸಿಎಂ ಆದ ಭಾರತದ ಎರಡನೇ ಅತ್ಯಂತ ಕಿರಿಯ ವ್ಯಕ್ತಿ. ಇವರನ್ನು ಮುಖ್ಯಮಂತ್ರಿ ಮಾಡುವುದಕ್ಕೆ ಆಗಲೇ ಹಿರಿಯ ನಾಯಕರಾಗಿದ್ದ ನಿತಿನ್ ಗಡ್ಕರಿ ಮತ್ತು ಗೋಪಿನಾಥ್ ಮುಂಡೆಯನ್ನು ಮೋದಿ ಮತ್ತು ಅಮಿತ್ ಶಾ ಜೋಡಿ ಬದಿಗೆ ಸರಿಸಿತ್ತು. ಫಡ್ನವೀಸ್ ಮಹಾರಾಷ್ಟ್ರದ ಬಿಜೆಪಿಯ ಯಾವುದೇ ಸ್ಥಳೀಯ ಬಣಗಳ ಜತೆಗೆ ಗುರುತಿಸಿಕೊಳ್ಳದೆ ಪಕ್ಷದ ವರಿಷ್ಠರಿಗೆ ಹತ್ತಿರವಾಗಿರುವುದೇ ಬಿಜೆಪಿಯ ಹೊಸ ಅಧ್ಯಕ್ಷನ ಹುದ್ದೆಗೆ ಅವರನ್ನು ಮುಂಚೂಣಿ ಸ್ಪರ್ಧಾಳುವನ್ನಾಗಿ ಮಾಡಿದೆ. ಆದರೆ ಅವರಿಗೆ ಪಕ್ಷದಲ್ಲಿ ಯಾವುದೇ ರಾಷ್ಟ್ರೀಯ ಮಟ್ಟದ ಹೊಣೆಗಾರಿಕೆಯನ್ನು ನಿಭಾಯಿಸಿದ ಅನುಭವವಿಲ್ಲ. ಹಾಗೆಯೇ ಪಕ್ಷದ ರಾಷ್ಟ್ರೀಯ ನಾಯಕರ ಜತೆಗೆ ಸೀಮಿತ ಸಂಪರ್ಕ ಹೊಂದಿದ್ದಾರೆ. ಪಕ್ಷದ ಪರಮೋಚ್ಚ ಹುದ್ದೆಗೇರಲು ಮೋದಿ ಮತ್ತು ಶಾ ಜತೆಗೆ ಹೊಂದಿರುವ ಸಂಪರ್ಕವೊಂದೇ ಸಾಲದೆ ಹೋಗಬಹುದು.

• **ವಸುಂಧರಾ ರಾಜೇ**

71 ವರ್ಷದ, ರಾಜಮನೆತನದ, ರಾಜಸ್ಥಾನದ ಈ ನಾಯಕಿ ಸದ್ಯಕ್ಕೆ ಪಕ್ಷದಲ್ಲಿ ಹಿನ್ನಡೆ ಅನುಭವಿಸುತ್ತಿರುವಂತೆ ಕಾಣಿಸಬಹುದು. ಆದರೆ ಖಂಡಿತ ಸೋತು ಸ್ಪರ್ಧೆಯಿಂದ ದೂರವುಳಿದಿಲ್ಲ. ಮೂರನೇ ಬಾರಿ ರಾಜಸ್ಥಾನದ ಮುಖ್ಯಮಂತ್ರಿಯಾಗುವುದಕ್ಕೆ ಹೊರಟಾಗ ಪಕ್ಷದ ರಾಷ್ಟ್ರೀಯ ನಾಯಕರು ಅವರನ್ನು ಹಿಂದಕ್ಕೆಳೆದು ಕೂರಿಸಿದರು. ಈಗ ಅವರು ಬಿಜೆಪಿಯ ರಾಷ್ಟ್ರೀಯ ಉಪಾಧ್ಯಕ್ಷರಲ್ಲಿ ಒಬ್ಬರು. ಸಂಘ ಪರಿವಾರದ ಜತೆಗೆ ಬೇಕಾದಾಗ ಒಳ್ಳೆಯ ಸಂಬಂಧ, ಬೇಡದಿದ್ದಾಗ ದೂರದ ಸಂಬಂಧ ಹೊಂದುವ ವ್ಯಕ್ತಿ. ಆದರೂ ಅವರ ದಿವಂಗತ ತಾಯಿ ವಿಜಯರಾಜೇ ಬಿಟ್ಟುಹೋದ ಪರಂಪರೆಯಿಂದಾಗಿ ಆರ್‌ಎಸ್‌ಎಸ್ ನಾಯಕತ್ವವು ವಸುಂಧರಾ ಬಗ್ಗೆ ಒಳ್ಳೆಯ ಭಾವನೆಯನ್ನೇ ಹೊಂದಿದೆ. ವಸುಂಧರಾ ಸ್ವತಃ ಸಾಕಷ್ಟು ಮಹತ್ವದ ಹಾಗೂ ಸೂಕ್ಷ್ಮ ಹುದ್ದೆಗಳನ್ನು ಕೇಂದ್ರ, ರಾಜ್ಯ ಹಾಗೂ ಪಕ್ಷದ ಮಟ್ಟದಲ್ಲಿ ನಿಭಾಯಿಸಿದ ಅನುಭವ ಹೊಂದಿದ್ದಾರೆ. ಅದ್ಭುತವಾದ ಮಾತುಗಾರ್ತಿ. ದೇಶಾದ್ಯಂತ ಮುಖಪರಿಚಯ ಹೊಂದಿರುವ ನಾಯಕಿ. ಬಿಜೆಪಿಯೇನಾದರೂ ಮೊದಲ ಅಧ್ಯಕ್ಷೆಯನ್ನು ಹುಡುಕುತ್ತಿದ್ದರೆ ಹಿರಿತನ, ಅನುಭವ ಹಾಗೂ ಆಕರ್ಷಣೆಯ ಕಾರಣಕ್ಕೆ ವಸುಂಧರಾ ಆ ಹುದ್ದೆಗೆ ಬೇರೆಲ್ಲರಿಗಿಂತ ಸೂಕ್ತ ವ್ಯಕ್ತಿಯಾಗಿ ಹೊರಹೊಮ್ಮಬಹುದು. ಅವರ ದೌರ್ಬಲ್ಯವೇನೆಂದರೆ, ಪಕ್ಷದ ಕೇಡರ್ ಜತೆಗೆ ನೇರ ಸಂಪರ್ಕ ಹೊಂದಿರುವ ಯಾವುದೇ ರಾಷ್ಟ್ರೀಯ ಜವಾಬ್ದಾರಿಯನ್ನು ಈವರೆಗೆ ನಿಭಾಯಿಸಿಲ್ಲ. ಅದಕ್ಕಿಂತ ಹೆಚ್ಚಾಗಿ ಮೋದಿ-ಶಾ ಜತೆಗೆ ಯಾವಾಗಲೂ ಅಂತರ ಕಾಯ್ದುಕೊಂಡಿದ್ದಾರೆ. ಆದರೂ ಪಕ್ಷ ಅವರನ್ನು ಪೂರ್ತಿಯಾಗಿ ಕೈಬಿಟ್ಟಿಲ್ಲ.

• **ಧರ್ಮೇಂದ್ರ ಪ್ರಧಾನ್**

ಇನ್ನೊಬ್ಬ ಮಾಜಿ ವಿದ್ಯಾರ್ಥಿ ನಾಯಕ. ಎಬಿವಿಪಿಯಿಂದ ಸಾರ್ವಜನಿಕ ಜೀವನಕ್ಕೆ ಬಂದ 55 ವರ್ಷದ ಈ ಒಡಿಶಾ ಮೂಲದ ಸಂಸದ ಬಿಜೆಪಿಯ ಚತುರ ನಾಯಕರಲ್ಲಿ ಒಬ್ಬರು. ಸಂಘ ಮತ್ತು ಬಿಜೆಪಿಯಲ್ಲಿ ಒಡಿಶಾ ಹಾಗೂ ದೆಹಲಿಯ ವ್ಯವಹಾರಗಳಲ್ಲಿ ಪ್ರಮುಖ ಹುದ್ದೆಗಳನ್ನು ನಿಭಾಯಿಸಿದ್ದಾರೆ. ಇವರಲ್ಲಿ ಪಕ್ಷವು ಒಬ್ಬ ಭವಿಷ್ಯದ ರಾಷ್ಟ್ರೀಯ ನಾಯಕನನ್ನು ನೋಡುತ್ತಿದೆ. ಸೈದ್ಧಾಂತಿಕವಾಗಿಯೂ ಇವರೊಬ್ಬ ವಿಶ್ವಾಸಾರ್ಹ ನಾಯಕ. ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ಧರ್ಮೇಂದ್ರ ಪ್ರಧಾನ್ ಕರ್ನಾಟಕ, ಜಾರ್ಖಂಡ್, ಛತ್ತೀಸ್‌ಗಢ, ಬಿಹಾರ, ಉತ್ತರ ಪ್ರದೇಶ ಹಾಗೂ ಹರಿಯಾಣದ ವಿಧಾನಸಭೆ ಚುನಾವಣೆಗಳ ಹೊಣೆಯನ್ನು ಯಶಸ್ವಿಯಾಗಿ ನಿಭಾಯಿಸಿದ್ದಾರೆ. ಅಟಲ್-ಆಡ್ವಾಣಿ ಯುಗ ಮುಗಿದ ನಂತರ ನರೇಂದ್ರ ಮೋದಿಯವರು ಇವರನ್ನು ಪಕ್ಷದ ಹಾಗೂ ಸರಕಾರದ ವಿವಿಧ ಹುದ್ದೆಗಳಲ್ಲಿ ಸ್ಥಾಪಿಸಿ ಸಾಮರ್ಥ್ಯ ಪರೀಕ್ಷೆ ಮಾಡಿದ್ದಾರೆ. ಅವುಗಳ ಪೈಕಿ ಒಂದು ಪ್ರಮುಖ ಹುದ್ದೆಯೆಂದರೆ, ಇವರು ಸ್ವಾತಂತ್ರ್ಯಾನಂತರದ ಭಾರತದ ಅತ್ಯಂತ ಸುದೀರ್ಘ ಅವಧಿಯ ಪೆಟ್ರೋಲಿಯಂ ಮಂತ್ರಿ. ಸೂಕ್ಷ್ಮ ಹಾಗೂ ಕೌಶಲಪೂರ್ಣ ಆಡಳಿತಾತ್ಮಕ ನೈಪುಣ್ಯವನ್ನು ಹೊಂದಿರುವ ಇವರು ಪಕ್ಷದ ಪರಮೋಚ್ಚ ಹುದ್ದೆಗೆ ಸೂಕ್ತ ವ್ಯಕ್ತಿಯಾಗಿ ಕಾಣಿಸಬಹುದು. ಆದರೆ ಪಕ್ಷದಲ್ಲೇ ಇರುವ ವಿರೋಧಿಗಳು ಇವರಿಗೆ ರಾಷ್ಟ್ರಮಟ್ಟದ ನಾಯಕತ್ವದ ವ್ಯಕ್ತಿತ್ವ ಹಾಗೂ ದೇಶವ್ಯಾಪಿಯಾದ ಸ್ವೀಕಾರಾರ್ಹತೆ ಇಲ್ಲ ಎಂದು ವಾದಿಸುತ್ತಾರೆ.

• **ಭೂಪೇಂದ್ರ ಯಾದವ್**

55 ವರ್ಷದ ರಾಜಸ್ಥಾನ ಮೂಲದ ವಕೀಲ. ಆರ್‌ಎಸ್‌ಎಸ್ ನಿಯಂತ್ರಿತ ಬಿಜೆಪಿಯ ವಕೀಲರ ಪ್ರಕೋಷ್ಠದ ಕಾರ್ಯದರ್ಶಿಯಾಗಿ ರಾಜಕೀಯ ಜೀವನ ಆರಂಭಿಸಿದವರು. ಅಟಲ್-ಆಡ್ವಾಣಿ ಯುಗದಲ್ಲೇ ಭವಿಷ್ಯದ ರಾಷ್ಟ್ರೀಯ ನಾಯಕನಾಗಿ ಹೊರಹೊಮ್ಮಿದ್ದಾರೆ. 2010ರಲ್ಲಿ ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿಯಾಗಿ ಇವರನ್ನು ನಿತಿನ್ ಗಡ್ಕರಿ ಆಯ್ಕೆ ಮಾಡಿದ್ದರು. ನಂತರ ನಿರಂತರವಾಗಿ ಪಕ್ಷದ ವರಿಷ್ಠರು ಇವರಿಗೆ ಒಂದಲ್ಲಾ ಒಂದು ಪ್ರಮುಖ ಹುದ್ದೆ ನೀಡುತ್ತಲೇ ಬಂದಿದ್ದಾರೆ. ವಿವಾದಗಳಿಗೆ ಗುರಿಯಾಗದ ಭೂಪೇಂದ್ರ ಯಾದವ್ ವಿಶ್ವಾಸಕ್ಕೆ ಯೋಗ್ಯರು. 2014ರಲ್ಲಿ ಅಮಿತ್ ಶಾ ಬಿಜೆಪಿ ಅಧ್ಯಕ್ಷರಾಗಿ ಆಯ್ಕೆಯಾದಾಗ ತಮ್ಮ ಆಪ್ತ ತಂಡದಲ್ಲಿ ಇವರನ್ನು ಇರಿಸಿಕೊಂಡಿದ್ದರು. ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ರಾಜಸ್ಥಾನ, ಗುಜರಾತ್ ಹಾಗೂ ಛತ್ತೀಸ್‌ಗಢದ ಬಹುಚರ್ಚಿತ ವಿಧಾನಸಭೆ ಚುನಾವಣೆಗಳನ್ನು ನಿಭಾಯಿಸಿದ್ದಾರೆ. ಮಹಾರಾಷ್ಟ್ರದಲ್ಲಿ ಉದ್ಧವ್ ಠಾಕ್ರೆಯ ಸರಕಾರವನ್ನು ಬೀಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಸದಾ ತೆರೆಮರೆಯಲ್ಲೇ ಇರುವ ಈ ವ್ಯಕ್ತಿಯ ಪ್ರಾಮುಖ್ಯ ಎಲ್ಲರಿಗೂ ಅರ್ಥವಾಗಿದ್ದು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವರಾಗಿ ಇವರು ಕೆಲಸ ಮಾಡಿದ ರೀತಿಯಿಂದ. 'ವಿಕಸಿತ ಭಾರತ' ಅಜೆಂಡಾ ಕಾರಣದಿಂದ ಮೋದಿ ಸರಕಾರದಲ್ಲಿ ಇದು ಬಹಳ ಸೂಕ್ಷ್ಮವಾದ ಹಾಗೂ ಮಹತ್ವದ ಸಚಿವಾಲಯ. ಆದರೆ ಆರ್‌ಎಸ್‌ಎಸ್‌ನಲ್ಲಿರುವ ಒಂದು ಬಣವು ಇವರು ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷರಾಗುವಷ್ಟು ದೊಡ್ಡ ವಯಸ್ಸಿನ ವ್ಯಕ್ತಿಯಲ್ಲ ಎಂದು ಭಾವಿಸುತ್ತದೆ. ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳನ್ನು ನಿಭಾಯಿಸುವುದಕ್ಕೂ ಇವರದು ಸಣ್ಣ ವಯಸ್ಸು ಎಂಬುದು ಅವರ ಅಂಬೋಣ.



• **ಸುನೀಲ್ ಬನ್ಸಾಲ್**

ಪೂರ್ಣಾವಧಿ ಆರ್‌ಎಸ್‌ಎಸ್ ಪ್ರಚಾರಕ. ಈಗ ಡೆಪ್ಯುಟೇಶನ್ ಮೇಲೆ ಬಿಜೆಪಿಯ ಪ್ರಧಾನ ಕಾರ್ಯದರ್ಶಿಯಾಗಿದ್ದಾರೆ. 55 ವರ್ಷದ ಬನ್ಸಾಲ್‌ಗೆ ಇರುವ ಎಬಿವಿಪಿ ಹಿನ್ನೆಲೆ ಹಾಗೂ ಆರ್‌ಎಸ್‌ಎಸ್‌ನ ಅನುಭವಗಳು ಇವರನ್ನು ಅದ್ಭುತ ಟೀಂ ಲೀಡರ್ ಆಗಿ ತಯಾರು ಮಾಡಿವೆ. ಇವರ ಏಕಮೇವ ಸಿದ್ಧಾಂತವೆಂದರೆ ರಾಷ್ಟ್ರೀಯತೆ. 2010ರಿಂದ 2014ರವರೆಗೆ ಆರ್‌ಎಸ್‌ಎಸ್‌ನ 'ಯೂತ್ ಅಗೇನಸ್ಟ್ ಕರಪ್ಷನ್' ಆಂದೋಲವನ್ನು ಇವರೇ ಮುನ್ನಡೆಸಿದ್ದರು. ಆರ್‌ಎಸ್‌ಎಸ್‌ನ ಉಳಿಯಿಂದ ರೂಪುಗೊಂಡ ಪುತ್ಥಳಿಯಿದು. 2014ರಲ್ಲಿ ಬಿಜೆಪಿಯ ಚುನಾವಣಾ ಪ್ರಚಾರವನ್ನು ಅಮಿತ್ ಶಾ ಕೈಗೆತ್ತಿಕೊಂಡಾಗ ಬನ್ಸಾಲ್‌ರನ್ನು ಅವರು ಉತ್ತರ ಪ್ರದೇಶದ ಉಸ್ತುವಾರಿ ಮಾಡಿದ್ದರು. ಅವರ ಉಸ್ತುವಾರಿ ಅವಧಿಯಲ್ಲೇ ಉತ್ತರ ಪ್ರದೇಶದ ಲೋಕಸಭೆ ಹಾಗೂ ಬಳಿಕ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಅದ್ಭುತ ಬಹುಮತ ಗಳಿಸಿತ್ತು. ಈ ಬಾರಿ ಒಡಿಶಾದ ಚುನಾವಣೆಗೆ ಅವರೇ ಉಸ್ತುವಾರಿಯಾಗಿದ್ದರು. ಅಲ್ಲೂ ತಮ್ಮ ಕೈಚಳಕ ತೋರಿಸಿರುವ ಅವರು, ಒಡಿಶಾದಲ್ಲಿ ಮೊದಲ ಬಾರಿ ಬಿಜೆಪಿ ಸರಕಾರ ರಚನೆಯಾಗುವಂತೆ ನೋಡಿಕೊಂಡಿದ್ದಾರೆ. ಆದರೆ, ಪಕ್ಷದಲ್ಲಿರುವ ಒಂದು ಬಣವು ಬನ್ಸಾಲ್‌ಗೆ ರಾಷ್ಟ್ರೀಯ ರಾಜಕಾರಣದಲ್ಲಿ ಇನ್ನಷ್ಟು ಅನುಭವ ಬೇಕು ಮತ್ತು ಪಕ್ಷದ ರಾಜ್ಯ ಮಟ್ಟದ ರಾಜಕೀಯ ವ್ಯವಸ್ಥೆಯ ಪರಿಚಯ ಇನ್ನಷ್ಟು ಆಗಬೇಕು ಎಂದು ಭಾವಿಸುತ್ತದೆ.

ಆದರೆ ಬಿಜೆಪಿಯಲ್ಲಿ ನಿಮಗೆ ಏನು ಕಾಣಿಸುತ್ತದೆಯೋ ಅದೇ ಆಗಬೇಕು ಎಂದೇನಿಲ್ಲ. ಮೋದಿ ಮತ್ತು ಆರ್‌ಎಸ್‌ಎಸ್ ಇಬ್ಬರಿಗೂ ಎಲ್ಲದರ ಮೇಲೂ ವೀಟೋ ಪವರ್ ಇದೆ. ಇಂಥ ಪರಿಸ್ಥಿತಿ ಹಿಂದೆ ಯಾವತ್ತೂ ಯಾವ ರಾಜ್ಯದಲ್ಲೂ ಇರಲಿಲ್ಲ. ಹಳೆಯ ಬಿಜೆಪಿಯಲ್ಲಿ ರಾಷ್ಟ್ರೀಯ ಮತ್ತು ಪ್ರಾದೇಶಿಕ ಸತ್ರಪರ ಪಡೆಯೇ ಇತ್ತು. ಅವರಲ್ಲಿ ರಾಷ್ಟ್ರೀಯ ಅಧ್ಯಕ್ಷರಾಗುವ ಅರ್ಹತೆಯುಳ್ಳ ಅನೇಕರು ಇರುತ್ತಿದ್ದರು. ಆದರೆ ಈಗ ಅವರೆಲ್ಲ ಇತಿಹಾಸದ ಕಠಿಣ ಯುದ್ಧಗಳನ್ನು ಮುನ್ನಡೆಸಿ ವಿಶ್ರಾಂತಿಗೆ ಸರಿದಿರುವ ನಾಯಕರು. ಆರು ದಶಕಗಳ ಕಾಲ ಅವರು ಕಾಂಗ್ರೆಸ್ ಮತ್ತು ವಿಪಕ್ಷಗಳ ಜತೆಗೆ ಸೆಣಸಾಡಿ ಸುಸ್ತಾಗಿದ್ದಾರೆ. ಪಕ್ಷದಲ್ಲಿ ಭೈರೋನ್ ಸಿಂಗ್ ಶೆಖಾವತ್, ಪ್ರಮೋದ್ ಮಹಾಜನ್, ಕಲ್ಯಾಣ್ ಸಿಂಗ್, ಗೋಪಿನಾಥ್ ಮುಂಡೆ, ಅನಂತ ಕುಮಾರ್, ಸುಷ್ಮಾ ಸ್ವರಾಜ್‌ರಂಥ ಘಟಾನುಘಟಿಗಳು ಇದ್ದರು. ಬಿ.ಎಸ್ .ಯಡಿಯೂರಪ್ಪ ಈಗಲೂ ಇದ್ದಾರೆ.

ಮಂತ್ರಿಗಳಿಂದ ರಾಜೀನಾಮೆ ಪಡೆದು ಪಕ್ಷದ ಕೆಲಸದಲ್ಲಿ ನಿಯೋಜಿಸುವುದಕ್ಕೆ ಮೋದಿ ಪ್ರಸಿದ್ಧರು. ಹೀಗಾಗಿ ರಾಜನಾಥ್ ಸಿಂಗ್, ಗಡ್ಕರಿ ಅಥವಾ ಚೌಹಾಣ್‌ರನ್ನು ಅಥವಾ ಇನ್ನೂ ಕಡಿಮೆ ಪ್ರಸಿದ್ಧಿಯ ನಂಬಿಕಸ್ಥ ಸ್ವಯಂಸೇವಕರನ್ನು ರಾಷ್ಟ್ರೀಯ ಅಧ್ಯಕ್ಷರನ್ನಾಗಿ ಮಾಡಿದರೂ ಆಶ್ಚರ್ಯವಿಲ್ಲ. ಬಿಜೆಪಿ ಅಸ್ತಿತ್ವದಲ್ಲಿರುವ ಕಳೆದ 44 ವರ್ಷಗಳಲ್ಲಿ ಅಟಲ್ ಹಾಗೂ ಆಡ್ವಾಣಿ ಜೋಡಿ 15 ವರ್ಷ ಪಕ್ಷವನ್ನು ಮುನ್ನಡೆಸಿದೆ. ನಂತರ ಅಮಿತ್ ಶಾ ರಾಷ್ಟ್ರಮಟ್ಟದಲ್ಲಿ ಪಕ್ಷವನ್ನು ಮುನ್ನಡೆಸಿದ್ದಾರೆ. ಆರ್‌ಎಸ್‌ಎಸ್ ಇಲ್ಲದೆಯೂ ಬಿಜೆಪಿ ಬದುಕಬಹುದು ಎಂಬ ಯೋಚನೆ ನಡ್ಡಾಗೆ ದುಬಾರಿಯಾಗಿ ಪರಿಣಮಿಸಿದೆ. ಬಹುಶಃ ಮುಂದಿನ ಅಧ್ಯಕ್ಷರ ಆಯ್ಕೆಯಲ್ಲಿ ನಡ್ಡಾ ಅಭಿಪ್ರಾಯ ಸರಿಯೋ ಅಥವಾ ರಾಷ್ಟ್ರೀಯ ಸ್ವಯಂಸೇವಕ ಸಂಘವೇ ಈಗಲೂ ಮೋದಿ ಮತ್ತು ಅವರ ಬಿಜೆಪಿಯು ಹುಟ್ಟುಹಾಕಿರುವ ಹಿಂದುತ್ವದ ಅಲೆಗಳ ಮೇಲೆ ತೇಲುವ ಪಕ್ಷದ ಮಾತೃನೌಕೆಯೋ ಎಂಬುದು ತಿಳಿಯಬಹುದು.

(ಲೇಖಕರು ಹಿರಿಯ ಪತ್ರಕರ್ತರು)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 154

ದೇವೇಂದರ್ ಅತ್ರಿಗೆ 32 ಮತಗಳ ಗೆಲುವು

ಚಂಡೀಗಢ: 33 ಮತಗಳೇನಾದರೂ ಕಡಿಮೆ ಬಂದಿದ್ದರೆ ಬಿಜೆಪಿಯ ಅಭ್ಯರ್ಥಿ ದೇವೆಂದರ್ ಛಾಟರ್ ಅತ್ರಿ 'ಪರಾಜಿತ' ಎನಿಸಿಕೊಳ್ಳುತ್ತಿದ್ದರು. ಆದರೆ, ಹರಿಯಾಣದ ಉಛಾನಾ ಕಲಾನ್ ವಿಧಾನಸಭೆ ಕ್ಷೇತ್ರದಲ್ಲಿ ದೇವೆಂದರ್ ಛಾಟರ್ ಅತ್ರಿ 32 ಮತಗಳಷ್ಟು ಅಲ್ಪ ಅಂತರದಲ್ಲಿ ವಿಜಯಿಯಾಗಿದ್ದಾರೆ. ಮತ ಎಣಿಕೆ ಕೇಂದ್ರದಲ್ಲಿ ಎದೆಬಡಿತ ಹೆಚ್ಚಿಸುವಂತಹ ಕ್ಷಣಗಳನ್ನು ಕಳೆದು ಕೊನೆಗೂ ಗೆಲುವಿನ ನಗೆ ಬೀರಿದ್ದಾರೆ. ಅತ್ರಿ 48,968 ಮತಗಳನ್ನು ಪಡೆದಿದ್ದರೆ, ತುರುಸಿನ ಪೈಪೋಟಿ ನೀಡಿದ ಅತಿ ಸಮೀಪದ ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಬ್ರಿಜೇಂದ್ರ ಸಿಂಗ್ 48,936 ಮತ ಗಳಿಸಿದ್ದಾರೆ. ಕೇವಲ 32 ಮತಗಳಲ್ಲಿ ವಿಜಯ ಲಕ್ಷ್ಮಿ ಬಿಜೆಪಿಯ ಅತ್ರಿಗೆ ಒಲಿದಿದ್ದಾಳೆ.

ಮೋದಿ ಮಾತನ್ನು ನಂಬುವೆ: ಓಮರ್



ಶ್ರೀನಗರ: ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಜನರು ನಮ್ಮನ್ನು ಬೆಂಬಲಿಸಿದ್ದಾರೆ. ನಾವು ಈ ಮತಗಳಿಗೆ ಯೋಗ್ಯರು ಎಂಬುದನ್ನು ಸಾಬೀತುಪಡಿಸುವೆ ಎಂದು ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ಘೋಷಿತ ಮುಖ್ಯಮಂತ್ರಿ ಅಭ್ಯರ್ಥಿ ಒಮರ್ ಅಬ್ದುಲ್ಲಾ ಹೇಳಿದ್ದಾರೆ. ಕಳೆದ ಐದು ವರ್ಷಗಳಲ್ಲಿ ನ್ಯಾಷನಲ್ ಕಾನ್ಫರೆನ್ಸ್ ಪಕ್ಷವನ್ನು ಪೂರ್ಣವಾಗಿ ಮುಗಿಸಲು ನಮ್ಮ ವಿರೋಧಿಗಳು ಯತ್ನಿಸಿದ್ದಾರೆ. ರಾಜಕೀಯ ಪಕ್ಷಗಳು ಪ್ರಯತ್ನ ಮಾಡಿವೆ. ಆದರೆ, ನಮ್ಮನ್ನು ಮುಗಿಸಲು ಯತ್ನಿಸಿದವರು ಈಗ ಸೋಲುಂಡಿ ದ್ದಾರೆ ಎಂದು ಹೇಳಿದರು.

ಮೋದಿ ಮಾತು ನಂಬುವೆ: ಈ ಮೊದಲು ಪ್ರಧಾನಿ ನರೇಂದ್ರ ಮೋದಿ ಚುನಾವಣಾ ಪ್ರಚಾರ ವೇಳೆ ಜಮ್ಮು-ಕಾಶ್ಮೀರಕ್ಕೆ ರಾಜ್ಯ ಸ್ಥಾನ ಮಾನ ಮರುಸ್ಥಾಪಿಸುತ್ತೇವೆ ಎಂದು ಜನರೆದುರೇ ಹೇಳಿದ್ದಾರೆ. ನಾನು ಅವರ ಮಾತನ್ನು ನಂಬು ತ್ತೇನೆ. ಬಿಜೆಪಿ ಅಧಿಕಾರಕ್ಕೆ ಬಂದರಷ್ಟೇ ರಾಜ್ಯಸ್ಥಾನ ಮರುಸ್ಥಾಪನೆ ಎಂದು ಅವರು ಹೇಳಿಲ್ಲ. ಹೀಗಾಗಿ ಜಮ್ಮು-ಕಾಶ್ಮೀರಕ್ಕೆ ಮರಳಿ ರಾಜ್ಯದ ಸ್ಥಾನಮಾನ ನೀಡಲೇಬೇಕು ಎಂದು ಭಾವಿ ಮುಖ್ಯಮಂತ್ರಿ ಅಬ್ದುಲ್ಲಾ ಒತ್ತಾಯಿಸಿದರು.

ಹರಿಯಾಣದ ಫಲಿತಾಂಶ ಸ್ವೀಕರಿಸಲಾಗದು: ಜೈರಾಂ

ದೆಹಲಿ: ಹರಿಯಾಣ ವಿಧಾನಸಭೆ ಫಲಿತಾಂಶ ಅನಿರೀಕ್ಷಿತ-ಆಘಾತಕಾರಿ. ಈ ಫಲಿತಾಂಶವನ್ನು ಸ್ವೀಕರಿಸಲು ಸಾಧ್ಯವೇ ಇಲ್ಲ ಎಂದು ಕಾಂಗ್ರೆಸ್ ಪಕ್ಷ ಮಂಗಳವಾರ ಪ್ರತಿಕ್ರಿಯಿಸಿದೆ. ಹರಿಯಾಣ ವಿಧಾನಸಭೆ ಚುನಾವಣೆಯ ಮತ ಎಣಿಕೆ ಮಂಗಳವಾರ ಬೆಳಗ್ಗೆ ಆರಂಭಗೊಂಡಾಗ ಮೊದಲಿಗೆ ಕಾಂಗ್ರೆಸ್ ಪಕ್ಷವೇ 50ಕ್ಕೂ ಅಧಿಕ ಕ್ಷೇತ್ರಗಳಲ್ಲಿ ಮುನ್ನಡೆ ಯಲ್ಲಿತ್ತು. ಆನಂತರದಲ್ಲಿ ನಾಟಕೀಯ ಬದಲಾವಣೆ ಕಂಡುಬಂದಿತು. ಬಿಜೆಪಿ ದಿಢೀರ್ ಎಂಬಂತೆ ಮುನ್ನಡೆ ತೋರಿಸಲಾರಂಭಿಸಿತು. ಆನಂತರದಲ್ಲಿ ಚುನಾವಣಾ ಆಯೋಗ ನಿಧಾನಗತಿಯಲ್ಲಿ ಫಲಿತಾಂಶದ ಅಂಕಿ ಅಂಶ ನೀಡಲಾರಂಭಿಸಿತು. ಸ್ಪಷ್ಟ ಮಾಹಿತಿಯನ್ನೇ ನೀಡುತ್ತಿರಲಿಲ್ಲ ಎಂದು ಕಾಂಗ್ರೆಸ್ ಚುನಾವಣಾ ಆಯೋಗದ ವಿರುದ್ಧವೇ ಕಿಡಿಕಾರಿದೆ. ವಾಸ್ತವವಾಗಿ ಫಲಿತಾಂಶ ಏನಿತ್ತು ಎಂಬುದು ಜನತೆ ಗೊತ್ತಿದೆ. ಹರಿಯಾಣದಲ್ಲಿನ ಗೆಲುವನ್ನು ಕಾಂಗ್ರೆಸ್‌ನಿಂದ ಕಸಿದುಕೊಳ್ಳಲಾಗಿದೆ ಎಂದು ಕಾಂಗ್ರೆಸ್ ನಾಯಕ ಜೈರಾಂ ರಮೇಶ್ 'ಎಕ್ಸ್' ಖಾತೆಯಲ್ಲಿ ಖಂಡಿಸಿದ್ದಾರೆ. ಆದರೆ, ಚುನಾವಣಾ ಆಯೋಗ ಕಾಂಗ್ರೆಸ್ ಪಕ್ಷದ ಈ ಆರೋಪವನ್ನು ನಿರಾಕರಿಸಿದೆ.

ಇಂದು ಕಾಂಗ್ರೆಸ್ ಸಭೆ

ಚಂಡೀಗಢ: ಹರಿಯಾಣ ವಿಧಾನಸಭೆ ಚುನಾವಣೆ ಯಲ್ಲಿ ವಿಜೇತರಾದ ಪಕ್ಷದ ಅಭ್ಯರ್ಥಿಗಳ ತುರ್ತು ಸಭೆಯನ್ನು ಕಾಂಗ್ರೆಸ್ ಪಕ್ಷ ಬುಧವಾರ ಹಮ್ಮಿಕೊಂಡಿದೆ. ಚುನಾಯಿತರೆಲ್ಲಾ ತಪ್ಪದೇ ಸಭೆಗೆ ಹಾಜರಾಗಬೇಕು. ಕೆಲವು ಮಹತ್ವದ ವಿಷಯಗಳ ಬಗ್ಗೆ ಚರ್ಚಿಸಲು ಕಾಂಗ್ರೆಸ್ ಅಧ್ಯಕ್ಷರು ಮತ್ತು ಹಿರಿಯ ನಾಯಕರು ಸಭೆಯಲ್ಲಿ ಉಪಸ್ಥಿತರಿರು ವರು ಎಂದು ಕಾಂಗ್ರೆಸ್ ಮುಖಂಡ, ಸಂಸದರೂ ಆದ ರಣದೀಪ್ ಸುರ್ಜೇವಾಲಾ ತಿಳಿಸಿದ್ದಾರೆ.

ಕಾಶ್ಮೀರ: ಬಿಜೆಪಿಯದ್ದು ಸೋಲೋ-ಗೆಲುವೋ?

2014 » 25 ಬಿಜೆಪಿ ಗೆಲುವು | » 22.98% ಮತ ಗಳಿಕೆ ಪ್ರಮಾಣ

2024 » 29 ಬಿಜೆಪಿ ಗೆಲುವು | » 25.64% ಮತ ಗಳಿಕೆ ಪ್ರಮಾಣ

ಶ್ರೀನಗರ: ವಿಶ್ವದಲ್ಲೇ ಅತಿ ಎತ್ತರದ ಪ್ರದೇಶದಲ್ಲಿನ ರೈಲ್ವೆ ಸೇತುವೆ ನಿರ್ಮಾಣ, ಸುರಂಗ- ಹೆದ್ದಾರಿಗಳ ನಿರ್ಮಾಣ, ಕಲ್ಲೆಸೆಯುತ್ತಿದ್ದ ಕೈಗಳಿಗೆ ಕಂಪ್ಯೂಟರ್, ಪ್ರವಾಸೋದ್ಯಮದ ಪುನರುತ್ಥಾನ ಮೊದಲಾದ ಭರಪೂರ ಅಭಿವೃದ್ಧಿ ಯೋಜನೆಗಳ ಜಾರಿಯೊಂದಿಗೆ 'ನಯಾ ಕಾಶ್ಮೀರ' ಕನಸು ಹಂಚಿಕೊಂಡಿದ್ದ ಹಿನ್ನೆಲೆಯಲ್ಲಿ ಭಾರತೀಯ ಜನತಾ ಪಕ್ಷ(ಬಿಜೆಪಿ) ಜಮ್ಮು-ಕಾಶ್ಮೀರದ ವಿಧಾನಸಭಾ ಚುನಾವಣಾ ಫಲಿತಾಂಶದ ಬಗ್ಗೆ ಭಾರೀ ನಿರೀಕ್ಷೆ ಇಟ್ಟು ಕೊಂಡಿತ್ತು. ಆದರೆ, ಮಂಗಳವಾರ ಮತ ಎಣಿಕೆ ನಡೆದು ಫಲಿತಾಂಶ ಪ್ರಕಟವಾದಾಗ ಬಿಜೆಪಿಗೆ ನಿರಾಶೆಯಾಗಿದೆ. ಒಂದರ್ಥದಲ್ಲಿ ಸೋಲಾಗಿದ್ದರೆ, ಇನ್ನೊಂದರ್ಥದಲ್ಲಿ ಗೆಲುವಾಗಿದೆ.

ಜಮ್ಮು-ಕಾಶ್ಮೀರ ವಿಧಾನಸಭೆ ಚುನಾವಣೆ ಯಲ್ಲಿ ಎನ್‌ಸಿ ಪಕ್ಷ ಮತ್ತು ಕಾಂಗ್ರೆಸ್ ಮೈತ್ರಿಕೂಟ ಸ್ಪಷ್ಟ ಬಹು ಮತ ಪಡೆದು ಅಧಿಕಾ ರಕ್ಕೇರುತ್ತಿರುವುದನ್ನು ಎನ್‌ಸಿ ಪಕ್ಷದ ಬೆಂಬಲಿಗ ಮಹಿಳೆಯರು ಸಂಭ್ರಮಿಸಿದರು.

2014ರ ವಿಧಾನಸಭಾ ಚುನಾವಣೆ ಯಲ್ಲಿ ಬಿಜೆಪಿ 25 ಸ್ಥಾನಗಳನ್ನು ಗೆದ್ದು ಕೊಂಡಿತ್ತು. ಆಗ ಕಮಲ ಪಕ್ಷದ ಮತ ಗಳಿಕೆ ಪ್ರಮಾಣವೂ ಶೇ.22.98ರಷ್ಟಿತ್ತು. ಈಗ 2024ರಲ್ಲಿ ನಡೆದ ಚುನಾವಣೆಯಲ್ಲಿ ಬಿಜೆಪಿ 29 ಕ್ಷೇತ್ರಗಳಲ್ಲಿ ಜಯ ಸಾಧಿಸುವು ದರೊಂದಿಗೆ ಕಾಶ್ಮೀರ ವಿಧಾನಸಭೆಯಲ್ಲಿನ ತನ್ನ ಸದಸ್ಯ ಬಲವನ್ನು(4 ಸ್ಥಾನ) ಹೆಚ್ಚಿಸಿ ಕೊಂಡಿದೆ. ಮತ ಗಳಿಕೆ ಪ್ರಮಾಣದಲ್ಲೂ ಶೇ.2.66ರಷ್ಟು ವೃದ್ಧಿ ಕಂಡಿದೆ. ಈ ಬಾರಿ ಬಿಜೆಪಿ ಮತ ಗಳಿಕೆ ಪ್ರಮಾಣ ಶೇ.25.64ಕ್ಕೇರಿದೆ. ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಬಿಜೆಪಿ ಅಧ್ಯಕ್ಷ-ಆರೋಗ್ಯ ಸಚಿವ ಜಗತ್ ಪ್ರಕಾಶ್ ನಡ್ಡಾ ಮೊದಲಾದ ದಿಗ್ಗಜರು ಪ್ರಚಾರ ನಡೆಸಿದ್ದರಿಂದ ಹಿಂದೂ ಪ್ರಾಬಲ್ಯದ ಪ್ರದೇಶಗಳಲ್ಲಿಯೂ ಮತದಾನ ಪ್ರಮಾಣ ಈ ಬಾರಿ ಹೆಚ್ಚುವಂತೆ ಮಾಡಿದೆ. ಕ್ಷೇತ್ರಗಳ ಮರುವಿಂಗಡಣೆ, ಮೀಸಲು ಸ್ಥಾನಗಳ ನಿಗದಿ, ಬೇರೆ ರಾಜ್ಯಗಳಿಂದ ವಲಸೆ ಬಂದವರು, ವಾಲ್ಮೀಕಿ ಸಮುದಾಯದವರಿಗೆ ಮತದಾನಕ್ಕೆ ಅವಕಾಶ ಮಾಡಿಕೊಟ್ಟಿದ್ದು ಮೊದಲಾದ ಅಂಶಗಳು ಬಿಜೆಪಿ 4 ಸ್ಥಾನ ಹೆಚ್ಚು ಗಳಿಸಲು ಅವಕಾಶ ಮಾಡಿಕೊಟ್ಟಿವೆ.

ಕಣಿವೆ ಭಾಗದಲ್ಲಿ ಅರಳದ ಕಮಲ

ಸಂವಿಧಾನದ ವಿಧಿ 370 ರದ್ದು, ಜಮ್ಮು-ಕಾಶ್ಮೀರಕ್ಕಿದ್ದ ವಿಶೇಷ ಸ್ಥಾನಮಾನ ರದ್ದು, ಅಭಿವೃದ್ಧಿ ಮಂತ್ರ, 'ನಯಾ ಕಾಶ್ಮೀರ' ಕನಸು ಈ ಬಾರಿ ಬಿಜೆಪಿ ಪಾಲಿನ ಚುನಾವಣೆಯ ಪ್ರಮುಖ ಅಂಶಗಳಾಗಿದ್ದವು. ಮುಸ್ಲಿಂ ಪ್ರಾಬಲ್ಯವಿರುವ ಕಾಶ್ಮೀರ ಕಣಿವೆ ಭಾಗದಲ್ಲಿನ ಜನರ ಮನವೊಲಿಕೆ ಮಾಡುವಲ್ಲಿ ವಿಫಲವಾಗಿದ್ದೇ ಬಿಜೆಪಿ, ಬಹುಮತ ಗಳಿಸಲಾಗದೇ ಇರುವುದಕ್ಕೆ ಮುಖ್ಯ ಕಾರಣ. ಉಗ್ರರ ನಿಗ್ರಹ ಹೆಸರಲ್ಲಿ ಭಾರಿ ಪ್ರಮಾಣದಲ್ಲಿ ಸೇನೆ ನಿಯೋಜಿಸಿದ್ದು ಕೂಡ ಬಿಜೆಪಿ ಬಗ್ಗೆ ಕಣಿವೆ ಭಾಗದ ಜನ ಮುನಿಸಿಕೊಳ್ಳಲು ಕಾರಣ ಎಂದು ವಿಶ್ಲೇಷಿಸಲಾಗಿದೆ.

ಎನ್‌ಸಿ-ಕಾಂಗ್ರೆಸ್ ಮೈತ್ರಿ: ತಪ್ಪಿದ ಮತ ವಿಭಜನೆ

ಕಾಂಗ್ರೆಸ್ ಮತ್ತು ನ್ಯಾಷನಲ್ ಕಾನ್ಫರೆನ್ಸ್ ಪಕ್ಷಗಳು ಚುನಾವಣಾ ಪೂರ್ವ ಮೈತ್ರಿ ಮಾಡಿಕೊಂಡಿದ್ದರಿಂದ ಮತ ವಿಭಜನ ತಪ್ಪಿದೆ. ಪ್ರತಿ ಚುನಾವಣೆಯಲ್ಲೂ ಎರಡೂ ಪಕ್ಷಗಳ ಪ್ರತ್ಯೇಕ ಸ್ಪರ್ಧೆಯಿಂದ ಹಂಚಿ ಹೋಗುತ್ತಿದ್ದ ಮತಗಳು ಈ ಬಾರಿ ಒಟ್ಟುಗೂಡಿದ್ದರಿಂದ ಮೈತ್ರಿಗೆ ಜಯವಾಗಿದೆ, ಸಹಜವಾಗಿಯೇ ಬಿಜೆಪಿ ನಿರೀಕ್ಷಿಸಿದಷ್ಟು ಕ್ಷೇತ್ರಗಳಲ್ಲಿ ಗೆಲ್ಲಲಾಗದೇ ಹೋಗಿದೆ ಎಂದು ಹೇಳಲಾಗುತ್ತಿದೆ. ನಿರುದ್ಯೋಗ ಸಮಸ್ಯೆ, ಬಿಜೆಪಿ ಭರವಸೆಗಳು ವಾಸ್ತವದಿಂದ ದೂರವಾಗಿದ್ದು, ಕಾಂಗ್ರೆಸ್‌ನ ಭಾರತ್ ಜೋಡೊ ಕಾರ್ಯಕ್ರಮ, ರಾಹುಲ್ ಗಾಂಧಿ ಜನಪ್ರಿಯತೆ ಮೊದಲಾದ ಅಂಶಗಳು ಎನ್‌ಸಿ ಮತ್ತು ಕಾಂಗ್ರೆಸ್ ಗೆಲುವಿನ ಓಟಕ್ಕೆ ಶಕ್ತಿ ತುಂಬಿವೆ.

ಮತ ಗಳಿಕೆಯಲ್ಲಿ ಬಿಜೆಪಿ ಮೇಲುಗೈ: ಅತ್ಯಧಿಕ ಸ್ಥಾನ(42) ಗಳಿಸಿರುವ ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಪಕ್ಷ ಮತ ಗಳಿಕೆ ವಿಚಾರದಲ್ಲಿ ಮಾತ್ರ ಬಿಜೆಪಿಗಿಂತಲೂ ಕಳಪೆ ಸಾಧನೆ ಮಾಡಿದೆ. ಬಿಜೆಪಿ ಶೇ.25.64ರಷ್ಟು ಮತ ಗಳಿಸಿದ್ದರೆ, ಎನ್‌ಸಿ ಶೇ.23.43ರಷ್ಟು ಮತ ಗಳಿಸಲಷ್ಟೇ ಸಾಧ್ಯವಾಗಿದೆ. ಇತರರು ಮತ್ತು ಪಕ್ಷೇತರರ ಮತ ಗಳಿಕೆಯೂ (ಶೇ.24.83) ನ್ಯಾಷನಲ್ ಕಾನ್ಫರೆನ್ಸ್‌ಗಿಂತ ಅಧಿಕವಾಗಿದೆ.

ಕಾಶ್ಮೀರ: ಖಾತೆ ತೆರೆದ ಎಎಪಿ

ಶ್ರೀನಗರ: ಜಮ್ಮು-ಕಾಶ್ಮೀರ ವಿಧಾನಸಭೆ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷ (ಎಎಪಿ) ಮೊದಲ ಬಾರಿಗೆ ಖಾತೆ ತೆರೆದಿದೆ. 2024ರ ವಿಧಾನಸಭಾ ಚುನಾವಣೆಯಲ್ಲಿ ಎಎಪಿ, ದೋಡಾ ಕ್ಷೇತ್ರದಲ್ಲಿ ವಿಜಯ ಸಾಧಿಸಿದೆ. ದೆಹಲಿ, ಪಂಜಾಬ್, ಗೋವಾ, ಗುಜರಾತ್ ನಂತರ ಜಮ್ಮು-ಕಾಶ್ಮೀರದಲ್ಲಿಯೂ ಆಮ್ ಆದ್ಮಿ ಪಕ್ಷದ ಹೆಜ್ಜೆಗುರುತು ಮೂಡಿದಂತಾಗಿದೆ. ದೋಡಾ ಕ್ಷೇತ್ರದಲ್ಲಿ 'ಎಎಪಿ'ಯ ಅಭ್ಯರ್ಥಿ ಮೆಹರಾಜ್ ಮಲಿಕ್ 22,944 ಮತಗಳನ್ನು ಪಡೆದು ಗೆಲುವು ಸಾಧಿಸಿದ್ದಾರೆ. 18,174 ಮತ ಪಡೆದ ಬಿಜೆಪಿಯ ಗಜಯ್ ಸಿಂಗ್ ರಾಣಾ ಅವರನ್ನು 4770 ಮತಗಳ ಅಂತರದಿಂದ ಸೋಲಿಸಿದ್ದಾರೆ. ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಪಕ್ಷದ ಖಾಲಿದ್ ನಜೀಬ್ ಸುಹರ್ವರ್ದಿ 12,975 ಮತಗಳನ್ನು ಪಡೆದು 3ನೇ ಸ್ಥಾನದಲ್ಲಿದ್ದಾರೆ. ದೋಡಾ ಪ್ರದೇಶ ಮುಸ್ಲಿಂ ಪ್ರಾಬಲ್ಯ ಹೊಂದಿದ್ದರೆ, ದೋಡಾ ಪಶ್ಚಿಮ ಕ್ಷೇತ್ರದಲ್ಲಿ ಹಿಂದೂ ಪ್ರಾಬಲ್ಯವಿದೆ. 2014ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ದೋಡಾ ಕ್ಷೇತ್ರದಲ್ಲಿ ಗೆದ್ದಿತ್ತು.

ಬಿಜೆಪಿ ಅಧ್ಯಕ್ಷರಿಗೇ ಸೋಲು!



ಬಿಜೆಪಿ ಜಮ್ಮು-ಕಾಶ್ಮೀರ ಘಟಕದ ಮುಖಂಡ ರವೀಂದರ್ ರೈನಾ ಅವರಿಗೇ ಸೋಲಾಗಿದೆ. ನೌಶೇರಾ ಕ್ಷೇತ್ರದಲ್ಲಿ ಸ್ಪರ್ಧೆ ಮಾಡಿದ್ದ ರೈನಾ, ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ಸುರೀಂದರ್ ಚೌಧರಿ ವಿರುದ್ಧ 7 ಸಾವಿರ ಮತಗಳ ಅಂತರ ದಲ್ಲಿ ಸೋಲು ಕಂಡಿದ್ದಾರೆ.

ಹಿಂದೂ ಭಾಗದಲ್ಲೇ ಬಿಜೆಪಿ ಹಿನ್ನಡೆ: ಬಿಜೆಪಿ ಹಿಂದೂ ಸಮುದಾಯದವರ ಪ್ರಾಬಲ್ಯ ಹೆಚ್ಚಾಗಿದ್ದ ಜಮ್ಮು ಪ್ರದೇಶದ ಬಾನಿ ಮತ್ತು ರಾಂಬನ್ ಕ್ಷೇತ್ರ ಗಳಲ್ಲೇ ಸೋಲನುಭವಿಸಿದೆ. ಜಮ್ಮು ಮತ್ತು ಕಾಶ್ಮೀರದ ಬನಿ ವಿಧಾನಸಭಾ ಕ್ಷೇತ್ರದಿಂದ ಬಿಜೆಪಿ ಪಕ್ಷವು 18,672 ಮತಗಳಿಂದ ಸ್ವತಂತ್ರ ಅಭ್ಯರ್ಥಿಗೆ ಸೋತಿತು. ಆದರೆ, ರಾಂಬನ್ನಲ್ಲಿ ಬಿಜೆಪಿ 8,869 ಮತಗಳ ಅಂತರ ದಿಂದ ನ್ಯಾಷನಲ್ ಕಾನ್ಫರೆನ್ಸ್ ವಿರುದ್ಧ ಸೋತಿದೆ.

ಗೆಲುವು-ಸೋಲು

- ಓಮರ್ ಅಬ್ದುಲ್ಲಾ ಸ್ಪರ್ಧಿಸಿದ್ದ ಗಂಧೇರ್‌ಬಾಲ್ ಮತ್ತು ಬದಗಾಂವ್ ಎರಡೂ ಕ್ಷೇತ್ರಗಳಲ್ಲೂ ಜಯ
- ಭಯೋತ್ಪಾದನೆ ಹೆಚ್ಚಾಗಿದ್ದ ಕಿಶ್ತ್ವಾರ್ ಕ್ಷೇತ್ರದಲ್ಲಿ 500 ಮತಗಳ ಅಂತರದಿಂದ ಗೆಲುವು ಕಂಡ ಬಿಜೆಪಿ
- ಉಗ್ರರ ಗುಂಡೇಟಿನಿಂದ ತಂದೆ-ಚಿಕ್ಕಪ್ಪ ಇಬ್ಬರನ್ನೂ ಕಳೆದುಕೊಂಡಿದ್ದ ಶಾಗುನ್ ಪರಿವಾರ್ ಈಗ ಶಾಸಕಿ
- ಜಮ್ಮು-ಕಾಶ್ಮೀರದಲ್ಲಿ ಖಾತೆ ತೆರೆದ ಆಮ್ ಆದ್ಮಿ ಪಕ್ಷ, ದೋಡಾ ಕ್ಷೇತ್ರ ಮೆಹರಾಜ್ ಮಲ್ಲಿಕ್‌ಗೆ ಜಯ
- ಹಿಂದೂ ಪ್ರಾಬಲ್ಯವಿರುವ ಜಮ್ಮುವಿನ ಬಾನಿ ಮತ್ತು ರಾಂಬನ್ ಕ್ಷೇತ್ರಗಳಲ್ಲೇ ಸೋಲು ಕಂಡ ಕೇಸರಿ ಪಕ್ಷ

ಮುಫ್ತಿ ಪುತ್ರಿಗೆ ಸೋಲು

ಶ್ರೀನಗರ: ಬಿಜ್ಬೆಹರಾ ಕ್ಷೇತ್ರವನ್ನು ಮುಫ್ತಿ ಕುಟುಂಬದ ಭದ್ರಕೋಟೆ ಎಂದೇ ಗುರುತಿಸಲಾಗುತ್ತದೆ. ಮಾಜಿ ಮುಖ್ಯಮಂತ್ರಿ ಮೆಹಬೂಬಾ ಮುಫ್ತಿ ಕೂಡಾ 1996ರಲ್ಲಿ ಚುನಾವಣಾ ರಾಜಕೀಯಕ್ಕೆ ಇದೇ ಕ್ಷೇತ್ರದಿಂದ ಪಾದಾರ್ಪಣೆ ಮಾಡಿದ್ದರು. ಅಂತಹ ಭದ್ರಕೋಟೆಯಲ್ಲೇ ಮೆಹಬೂಬಾರ ಪುತ್ರಿ 37 ವರ್ಷದ ಇಲ್ತಿಜಾ ಮುಫ್ತಿ ಸೋಲುಂಡಿದ್ದಾರೆ.

2019ರಲ್ಲಿ ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ವಿಧಿ 370 ಅನ್ನು ರದ್ದುಗೊಳಿಸಿದಾಗ ಮಾಜಿ ಸಿಎಂಗಳಾದ ಫಾರೂಕ್ ಅಬ್ದುಲ್ಲಾ, ಓಮರ ಅಬ್ದುಲ್ಲಾ ಮತ್ತು ಮೆಹಬೂಬಾ ಮುಫ್ತಿಯನ್ನು ಗೃಹ ಬಂಧನದಲ್ಲಿರಿಸಿತ್ತು. ಆಗ ಇಲ್ತಿಜಾ ರಾಜಕೀಯ ಪ್ರವೇಶಿಸಿ ತಾಯಿ ಪರ ಹೋರಾಟ ನಡೆಸಿದ್ದರು. ಮೆಹಬೂಬಾ ಮುಫ್ತಿ ವಿಧಾನಸಭಾ ಚುನಾವಣೆಯಲ್ಲಿ ಈ ಬಾರಿ ಸ್ಪರ್ಧಿಸಲಿಲ್ಲ. ಬದಲಾಗಿ ಅವರ ಪುತ್ರಿ ಇಲ್ತಿಜಾ ದಕ್ಷಿಣ ಕಾಶ್ಮೀರದ ಬಿಜ್ಬೆಹರಾ ಕ್ಷೇತ್ರದಿಂದ ಚುನಾವಣಾ ಕಣಕ್ಕಿಳಿದಿದ್ದರು. ಮೊದಲ ಯತ್ನದಲ್ಲಿ ಅವರಿಗೆ ಸೋಲಾಗಿದೆ.

ಹರಿಯಾಣ: ಸಿಎಂ ಹುದ್ದೆಗಾಗಿ ಬಹಿರಂಗ ಕಿತ್ತಾಟ

ಕಾಂಗ್ರೆಸ್ ನಿರೀಕ್ಷೆ ಹುಸಿಯಾಗಿದ್ದೇಕೆ?



- ಭೂಪಿಂದರ್ ಸಿಂಗ್ ಹೂಡಾ-ಕುಮಾರಿ ಶೆಲ್ಜಾ ಭಿನ್ನಮತ
- ಆಮ್ ಆದ್ಮಿ ಪಕ್ಷ ಜತೆ ಮೈತ್ರಿ ಮಾಡಿಕೊಳ್ಳದೇ ಏಕಾಂಗಿ ಸ್ಪರ್ಧೆ
- ಆಡಳಿತ ವಿರೋಧಿ ಅಲೆಯ ಲಾಭ ಪಡೆಯದೇ ಇದ್ದುದು

ಚಂಡೀಗಢ: 'ಗೆಲುವಿನ ಬಗ್ಗೆ ಅತಿಯಾದ ವಿಶ್ವಾಸವೇ ಕಾಂಗ್ರೆಸ್ ಸೋಲಿಗೆ ಕಾರಣ. ಹರಿಯಾಣ ಚುನಾವಣೆ ಕಾಂಗ್ರೆಸ್ ಪಕ್ಷಕ್ಕೊಂದು ದೊಡ್ಡ ಪಾಠ ಕಲಿಸಿದೆ'.

ಹೀಗೆ ವಿಶ್ಲೇಷಣೆ ಮಾಡಿರುವುದು ಬೇರಾರೂ ಅಲ್ಲ, 'ಇಂಡಿಯ' ಒಕ್ಕೂಟದ ಮಿತ್ರ ಆಮ್ ಆದ್ಮಿ ಪಕ್ಷದ ಮುಖಂಡ ಅರವಿಂದ್ ಕೇಜ್ರಿವಾಲ್. ಚುನಾವಣಾ ಅಂಕಿ ಅಂಶಗಳು ಕೂಡಾ ಕೇಜ್ರಿವಾಲ್ ಅವರ ಮಾತನ್ನು ದೃಢಪಡಿಸುತ್ತಿವೆ.

'ಇನ್ನೇನು ಗೆದ್ದೇ ಬಿಟ್ಟೆವು. ಅಧಿಕಾರ ಹಿಡಿಯುವುದು ಖಚಿತ' ಎಂಬಂತಿದ್ದ ಹರಿಯಾಣ ವಿಧಾನಸಭೆ ಚುನಾವಣಾ ಫಲಿತಾಂಶ ಕೆಲವೇ ಗಂಟೆಗಳಲ್ಲಿ ತಿರುವು ಮುರುವು ಆಯಿತು. ಆರಂಭದಲ್ಲಿ ಕಂಡಿದ್ದ ಮುನ್ನಡೆ ಕಾಂಗ್ರೆಸ್ ಪಾಳಯ ಹಿರಿಹಿರಿ ಹಿಗ್ಗುವಂತೆ ಮಾಡಿತ್ತು. ಆದರೆ, ಕೊನೆಗೆ ಫಲಿತಾಂಶ ಬೇರೆಯದೇ ಬಂದಿತು.

90 ಸದಸ್ಯ ಬಲದ ಹರಿಯಾಣ ವಿಧಾನಸಭೆಗೆ ಒಂದೇ ಹಂತದಲ್ಲಿ ನಡೆದಿದ್ದ ಚುನಾವಣೆಯ ಮತ ಎಣಿಕೆ ಮಂಗಳವಾರ ಬೆಳಗ್ಗೆ ಆರಂಭಗೊಂಡಾಗ ಹೆಚ್ಚಿನ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಮುನ್ನಡೆ ಸಾಧಿಸಿತ್ತು. ಗಂಟೆಗಳು ಕಳೆದಂತೆ ಬಿಜೆಪಿ ಹೆಚ್ಚು ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿತು. ಮಧ್ಯಾಹ್ನದ ವೇಳೆಗೆ ಫಲಿತಾಂಶ ತಿರುವು ಮುರುವು ಆಯಿತು. ನಂತರದಲ್ಲಿ ಬಿಜೆಪಿ ಹ್ಯಾಟ್ರಿಕ್ ಗೆಲುವು ದಾಖಲಿಸಿತು. ಕಾಂಗ್ರೆಸ್ ಸರಕಾರವೇ ಖಚಿತ ಎಂದು ಭವಿಷ್ಯ ನುಡಿದಿದ್ದ ಮತದಾನೋತ್ತರ ಸಮೀಕ್ಷೆ ಗಳೆಲ್ಲಾ ಸುಳ್ಳಾದವು. ಹರಿಯಾಣದಲ್ಲಿ ಆಡಳಿತ ವಿರೋಧಿ ಅಲೆಯಿದೆ. ಸತತ 10 ವರ್ಷಗಳ ಬಿಜೆಪಿ ಆಡಳಿತ ಜನರಿಗೆ ಬೇಸರ ತಂದಿದೆ. ಮತದಾರರು ಬದಲಾವಣೆ ಬಯಸಿದ್ದಾರೆ. ಹಾಗಾಗಿ, ಈ ಬಾರಿ ಹರಿಯಾಣದಲ್ಲಿ ಕಾಂಗ್ರೆಸ್ ಪಕ್ಷವೇ ಗೆದ್ದು ಸರಕಾರ ರಚಿಸುತ್ತದೆ ಎಂಬ ದೊಡ್ಡ ನಿರೀಕ್ಷೆ ಒಡಮೂಡಿತ್ತು. ಅದೇ ಕಾರಣವಾಗಿ, ಕಾಂಗ್ರೆಸ್ ಕೂಡಾ 'ಇಂಡಿಯ' ಒಕ್ಕೂಟದ ಮಿತ್ರ 'ಆಮ್ ಆದ್ಮಿ ಪಕ್ಷ'(ಎಎಪಿ) ಕೇಳಿದ್ದ 10 ಕ್ಷೇತ್ರಗಳನ್ನು ಬಿಟ್ಟುಕೊಡಲೊಪ್ಪದೇ, 5 ಕ್ಷೇತ್ರವನ್ನಷ್ಟೇ ನೀಡುವುದಾಗಿ ಹೇಳಿತ್ತು. ಗೆಲುವಿನ ಬಗೆಗಿದ್ದ ಅತಿಯಾದ ವಿಶ್ವಾಸದಲ್ಲಿ ಕಾಂಗ್ರೆಸ್ ಏಕಾಂಗಿಯಾಗಿಯೇ ಸ್ಪರ್ಧೆ ನಡೆಸಿತು. ಕೈಗೆ ಎಟಕುವಷ್ಟು ಹತ್ತಿರದಲ್ಲೇ ಇದ್ದ ಅಧಿಕಾರವನ್ನು ದೂರ ಮಾಡಿಕೊಂಡಿತು.

ದೇಶದ ಶ್ರೀಮಂತ ಮಹಿಳೆ ಸಾವಿತ್ರಿ ಜಿಂದಾಲ್ ಗೆಲುವು

ಚಂಡೀಗಢ: ಹರಿಯಾಣದ ಹಿಸಾರ್ ವಿಧಾನಸಭಾ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿದ್ದ ದೇಶದ ಅತ್ಯಂತ ಸಿರಿವಂತ ಮಹಿಳೆ, ಹೆಸರಾಂತ ಉದ್ಯಮಿ ಸಾವಿತ್ರಿ ಜಿಂದಾಲ್ ಗೆಲುವು ಸಾಧಿಸಿದ್ದಾರೆ. ಕುರುಕ್ಷೇತ್ರ ಕ್ಷೇತ್ರದ ಬಿಜೆಪಿ ಸಂಸದ ನವೀನ್ ಜಿಂದಾಲ್ ಅವರ ತಾಯಿಯಾದ ಸಾವಿತ್ರಿ ಜಿಂದಾಲ್ ಸಮೀಪದ ಪ್ರತಿಸ್ಪರ್ಧಿ ಕಾಂಗ್ರೆಸ್‌ನ ರಾಮ್ ನಿವಾಸ್ ರಾಣಾ ವಿರುದ್ಧ 18,941 ಮತಗಳ ಅಂತರ ದಿಂದ ಗೆಲುವು ಸಾಧಿಸಿದ್ದಾರೆ ಎಂದು ಚುನಾವಣಾ ಆಯೋಗ ಮಂಗಳವಾರ ತಿಳಿಸಿದೆ. ಸಾವಿತ್ರಿ ಜಿಂದಾಲ್ 49,231 ಮತ ಪಡೆದರೆ, ರಾಮ್‌ನಿವಾಸ್ ರಾಣಾ 30,290 ಮತ ಗಳಿಸಿ ದರು. ಬಿಜೆಪಿ ಅಭ್ಯರ್ಥಿ, ಈವರೆಗೆ ಶಾಸಕ ರಾಗಿದ್ದ ಕಮಲ್ ಗುಪ್ತಾ 17,385 ಮತ ಪಡೆದು 3ನೇ ಸ್ಥಾನಕ್ಕಿಳಿ ದರು. ಸಾವಿತ್ರಿ ಜಿಂದಾಲ್ 2910 ಕೋಟಿ ಅಮೆರಿಕನ್ ಡಾಲರ್(2,44,353 ಕೋಟಿ ರು.) ಮೌಲ್ಯದ ಆಸ್ತಿ ಹೊಂದಿರುವ ಭಾರತದ ಅತಿಸಿರಿ ವಂತ ಮಹಿಳೆ ಎಂದು ಫೋರ್ಬ್ಸ್ ಇಂಡಿಯಾ ಈ ವರ್ಷ ಪಟ್ಟಿ ಮಾಡಿದೆ.

ಗೆದ್ದ ಪ್ರಮುಖರು

- ಪಕ್ಷೇತರರಾಗಿ ಸ್ಪರ್ಧೆ ಮಾಡಿದ್ದ ದೇಶದ ಸಿರಿವಂತ ಮಹಿಳೆ, ಉದ್ಯಮಿ ಸಾವಿತ್ರಿ ಜಿಂದಾಲ್ ಹಿಸ್ಸಾರ್ ಕ್ಷೇತ್ರದಿಂದ ವಿಜಯಿ
- ಒಲಿಂಪಿಕ್ಸ್‌ನಲ್ಲಿ ಪದಕ ವಂಚಿತರಾದರೂ ಕುಸ್ತಿ ಪಟು, ಕಾಂಗ್ರೆಸ್ ಅಭ್ಯರ್ಥಿ ವಿನೇಶ ಫೋಗಟ್‌ಗೆ ಜುಲಾನ್‌ನಲ್ಲಿ ಗೆಲುವು
- 200 ದಿನಗಳ ಹರಿಯಾಣ ಸಿಎಂ, ಬಿಜೆಪಿ ಮುಖಂಡ ನಯಾಬ್ ಸಿಂಗ್ ಸೈನಿ ಲಾಡ್ವಾ ಕ್ಷೇತ್ರದಿಂದ ವಿಜಯಿ

ಕಾಂಗ್ರೆಸ್ ಹಿನ್ನಡೆಗೆ ಕಾರಣವೇನು?

ಮೊದಲನೆಯ ಹಾಗೂ ಪ್ರಮುಖ ಅಂಶ 'ಒಳ ಜಗಳ'. ಪಕ್ಷದ ಆಂತರಿಕ ಕಲಹ ಮತ್ತು ಉನ್ನತ ನಾಯಕರು ಅಧಿಕಾರಕ್ಕಾಗಿ ಕಿತ್ತಾಡಲು ಆರಂಭಿಸಿದ್ದೇ ಮೊದಲ ಪೆಟ್ಟು ನೀಡಿದೆ. 2019ರ ಚುನಾವಣೆಯಲ್ಲಿ ಹರಿಯಾಣದಲ್ಲಿ ಕಾಂಗ್ರೆಸ್ 31 ಸ್ಥಾನಗಳನ್ನು ಗೆದ್ದಿದೆ. ಈ ಬಾರಿ ದುಪ್ಪಟ್ಟು ಗೆಲುವಿನ ವಿಶ್ವಾಸದಲ್ಲಿ ಕಾಂಗ್ರೆಸ್ ನಾಯಕರು ಚುನಾವಣೆಗೂ ಮುನ್ನವೇ ಸಿಎಂ ಹುದ್ದೆಗಾಗಿ ಪೈಪೋಟಿ ನಡೆಸಿದ್ದರು. ಹಿರಿಯ ನಾಯಕ ಭೂಪಿಂದರ್ ಸಿಂಗ್ ಹೂಡಾ ಮತ್ತು ಹಿರಿಯ ನಾಯಕಿ ಕುಮಾರಿ ಸೆಲ್ಜಾ ನಡುವಿನ ಅಧಿಕಾರದ ಜಗಳವೇ ಹೆಚ್ಚು ಪ್ರಚಾರ ಪಡೆದಿತ್ತು. ಇದು ಜನರ ಮನಸ್ಸಿನ ಮೇಲೆ ನಕಾರಾತ್ಮಕ ಪರಿಣಾಮ ಬೀರಿದೆ. ಇದರಿಂದಲೇ ಕಾಂಗ್ರೆಸ್‌ಗೆ ಬರಬಹುದಾಗಿದ್ದ ಮತಗಳು ಬದಲಾಗಿವೆ ಎಂದು ವಿಶ್ಲೇಷಿಸಲಾಗಿದೆ. ಬಹಳಷ್ಟು ಕ್ಷೇತ್ರಗಳಲ್ಲಿ ಸ್ಥಾನಗಳಲ್ಲಿ ಬಿಜೆಪಿ ಗೆಲುವಿನ ಅಂತರ ತುಂಬಾ ಕಡಿಮೆಯಿದೆ. ಪ್ರಾದೇಶಿಕ ಪಕ್ಷಗಳ ಅಭ್ಯರ್ಥಿಗಳು ಮತ್ತು ಪಕ್ಷೇತರರು ಆಡಳಿತ ವಿರೋಧಿ ಮತಗಳನ್ನು ಕಬಳಿಸಿದ್ದರಿಂದ ಕಾಂಗ್ರೆಸ್ ಅಭ್ಯರ್ಥಿಗಳು ಸ್ವಲ್ಪದರಲ್ಲೇ ಸೋತಿದ್ದಾರೆ. ಪರಿಣಾಮ ಬಿಜೆಪಿಗೆ ಲಾಭವಾಗಿದೆ. ಹೂಡಾ ನೇತೃತ್ವದ ಕಾಂಗ್ರೆಸ್ ಪಕ್ಷ ಜಾಟ್ ಮತಗಳನ್ನು ಕೇಂದ್ರೀಕರಿಸಿತ್ತು. ಜಾಟ್ ಸಮುದಾಯಕ್ಕೆ ಹೊರತಾದ ಮತಗಳನ್ನು ಬಿಜೆಪಿ ಕ್ರೋಢೀಕರಿಸಲು ಗಮನ ಹರಿಸಿತ್ತು.

ಕಾಂಗ್ರೆಸ್-ಎಎಪಿ ಮೈತ್ರಿ ಆಗಿದ್ದರೆ ಫಲಿತಾಂಶ ಭಿನ್ನ

ಜಮ್ಮು-ಕಾಶ್ಮೀರದಲ್ಲಿ ನ್ಯಾಷನಲ್ ಕಾನ್ಫರೆನ್ಸ್-ಕಾಂಗ್ರೆಸ್ ಪಕ್ಷ ಮೈತ್ರಿ ಮಾಡಿಕೊಂಡು ಗೆಲುವಿನ ನಗೆ ಬೀರಿವೆ. ಅದೇ ಬಗೆಯಲ್ಲಿ ಹರಿಯಾಣದಲ್ಲೂ ಕಾಂಗ್ರೆಸ್ ಮತ್ತು ಎಎಪಿ ಚುನಾವಣಾ ಪೂರ್ವ ಮೈತ್ರಿ ಮಾಡಿಕೊಂಡಿದ್ದರೆ ಫಲಿತಾಂಶ ಬೇರೆಯದೇ ಇರುತ್ತಿತ್ತು ಎನ್ನುವುದನ್ನು ವಿವಿಧ ಪಕ್ಷಗಳ ಮತ ಗಳಿಕೆ ಪ್ರಮಾಣ ಎತ್ತಿ ತೋರುತ್ತಿದೆ. ಕಾಂಗ್ರೆಸ್ ಕೇವಲ ಶೇ.0.80 ಮತಗಳ ಅಂತರದಲ್ಲಿ ಹರಿಯಾಣದಲ್ಲಿನ ಗೆಲುವನ್ನು ಬಿಟ್ಟುಕೊಡುವಂತಾ ಗಿದೆ. ಆಡಳಿತ ವಿರೋಧಿ ಅಲೆ ಇದ್ದರೂ 48 ಕ್ಷೇತ್ರಗಳಲ್ಲಿ ಜಯ ಸಾಧಿಸಿರುವ ಬಿಜೆಪಿ ಹ್ಯಾಟ್ರಿಕ್ ಗೆಲುವಿನ ನಗೆ ಬೀರುತ್ತಿದೆ. ಆ ಪಕ್ಷಕ್ಕೆ ಸಿಕ್ಕ ಮತಗಳ ಪ್ರಮಾಣ ಶೇ.39.89. ಪ್ರಬಲ ಪೈಪೋಟಿ ನೀಡಿದ ಕಾಂಗ್ರೆಸ್‌ನ ಮತ ಗಳಿಕೆ ಪ್ರಮಾಣ ಶೇ.39.08. ಎರಡೂ ಪಕ್ಷಗಳ ನಡುವಿನ ಮತ ಗಳಿಕೆ ಅಂತರ ಕೇವಲ ಶೇ.0.80 ಮಾತ್ರ. ಈ ಮಧ್ಯೆ, ಎಎಪಿ ಶೇ.1.79ರಷ್ಟು ಮತ ಗಳಿಸಿದೆ. ಒಂದೊಮ್ಮೆ ಕಾಂಗ್ರೆಸ್ ಮತ್ತು ಎಎಪಿ ಮೈತ್ರಿ ಮಾಡಿಕೊಂಡಿದ್ದರೆ ಒಟ್ಟು ಮತ ಗಳಿಕೆ ಪ್ರಮಾಣ ಶೇ.40.87ರಷ್ಟಿರುತ್ತಿತ್ತು. ಸ್ಥಾನಗಳ ಗಳಿಕೆಯೂ ಸಹಜವಾಗಿಯೇ ಹೆಚ್ಚು ಇರು ತ್ತಿತ್ತು ಎಂದು ವಿಶ್ಲೇಷಣೆ ಮಾಡಲಾಗುತ್ತಿದೆ.

ಎಎಪಿಯಿಂದ ಹರಿಯಾಣ ಕಾಂಗ್ರೆಸ್ ಮತ ವಿಭಜನೆ

ದೆಹಲಿ: ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷ (ಎಎಪಿ) ಪ್ರತ್ಯೇಕವಾಗಿ ಸ್ಪರ್ಧೆ ಮಾಡುವ ಮೂಲಕ ಕಾಂಗ್ರೆಸ್ ಪಕ್ಷದ ಪಾರಂಪರಿಕ ಮತಗಳು ವಿಭಜನೆ ಆಗುವಂತೆ ಮಾಡಿದೆ. ಆ ಮೂಲಕ ಕಾಂಗ್ರೆಸ್ ಚುನಾವಣಾ ಹೋರಾಟ ದುರ್ಬಲವಾಗುವಂತೆ ಮಾಡಿ ಬಿಜೆಪಿಗೆ ನೆರವಾಗಿದೆ ಎಂದು ಎಎಪಿ ಸಂಸದೆ ಸ್ವಾತಿ ಮಲಿವಾಲ್ ಟೀಕಿಸಿದ್ದಾರೆ. ಹರಿಯಾಣ ರಾಜಕಾರಣದಲ್ಲಿ ಕಾಂಗ್ರೆಸ್‌ನ ಭವಿಷ್ಯ ಹಾಳು ಮಾಡುವ ಉದ್ದೇಶದಿಂದಲೇ ಎಎಪಿ ಚುನಾವಣೆಗೆ ಏಕಾಂಗಿಯಾಗಿ ಸ್ಪರ್ಧೆ ಮಾಡಿದೆ. ಎಎಪಿಯ ಈ ನಡೆ 'ಇಂಡಿಯ' ಒಕ್ಕೂಟಕ್ಕೆ ಬಗೆದ ದ್ರೋಹ ಎಂದು ಮಲಿವಾಲ್ ಖಂಡಿಸಿದ್ದಾರೆ. ಎಎಪಿ ನನ್ನನ್ನು ಬಿಜೆಪಿ ಏಜೆಂಟ್ ಎಂದು ಸುಳ್ಳು ಆರೋಪ ಮಾಡುತ್ತಿದೆ. ಆದರೆ, ಎಎಪಿ ತಾನು ಪಾಲುದಾರನಾಗಿರುವ 'ಇಂಡಿ' ಒಕ್ಕೂಟಕ್ಕೇ ದ್ರೋಹ ಬಗೆದಿದೆ. ಇನ್ನಾದರೂ ಎಚ್ಚೆತ್ತುಕೊಳ್ಳಿ. ಅಹಂಕಾರ ಬಿಡಿ, ಜನರಿಗಾಗಿ ಕೆಲಸ ಮಾಡಿ ಎಂದು ಸಲಹೆ ನೀಡಿದ್ದಾರೆ.

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಬೆಂ.ಮ.ಪ್ರ.ಪ್ರಾ.

ಎಲ್.ಆರ್.ಡಿ.ಇ. ಕಟ್ಟಡ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-560 052
ದೂರವಾಣಿ ಸಂಖ್ಯೆ: 22263479

ಸಂಖ್ಯೆ: STRRPA/TP/CLU/94/2024-25 **ಪ್ರಕಟಣೆ** ದಿನಾಂಕ: 07.10.2024

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 19/61ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ಕೈಗಾರಿಕಾ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ-ಗು	ಅನುಮೋದಿತ ಮಹಾ ಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
(1)	(2)	(3)	(4)	(5)	(6)	(7)	(8)	(9)
1	ಶ್ರೀ ಭಕ್ತಪ್ಪ ಬಿನ್ ಗುಳ್ಳಪ್ಪ	ಆನೇಕಲ್	ಸರ್ಜಾಪುರ	ತಿಂಡ್ಲು	204/1	0-19	ಕೈಗಾರಿಕೆ	ವಸತಿ
2	ಶ್ರೀ ಟಿ. ಎನ್. ಮೂರ್ತಿ ಬಿನ್ ನಾರಾಯಣಪ್ಪ	ಆನೇಕಲ್	ಸರ್ಜಾಪುರ	ತಿಂಡ್ಲು	204/2	0-19	ಕೈಗಾರಿಕೆ	ವಸತಿ
3	ಶ್ರೀ ಶ್ರೀನಿವಾಸ್ ಕೆ. ಬಿನ್ ಕೃಷ್ಣಪ್ಪ	ಆನೇಕಲ್	ಸರ್ಜಾಪುರ	ತಿಂಡ್ಲು	205 217	0-33 0-13	ಕೈಗಾರಿಕೆ	ವಸತಿ
4	ಶ್ರೀ ಎಸ್. ವಿ. ನಾಗೇಶ್ ಬಿನ್ ವೆಂಕಟಸ್ವಾಮಿ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ತಿಂಡ್ಲು ಗ್ರಾಮ, ಬೆಂಗಳೂರು-562 125.	ಆನೇಕಲ್	ಸರ್ಜಾಪುರ	ತಿಂಡ್ಲು	206	1-10	ಕೈಗಾರಿಕೆ	ವಸತಿ

ಷರಾ:- ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳ ಪರಿಸರದಲ್ಲಿ ವಸತಿ ಬಡಾವಣೆಗಳು ಬಂದಿದ್ದು/ ಬರುತ್ತಿದ್ದು, ಜಮೀನುಗಳಲ್ಲಿ ಯೋಜಿತ ಬೆಳವಣಿಗೆಯ ವಿನ್ಯಾಸವನ್ನು ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಕಡಿಮೆ ವೆಚ್ಚದಲ್ಲಿ ನಿವೇಶನಗಳನ್ನು ನೀಡುವ ಉದ್ದೇಶವನ್ನು ಹೊಂದಿರುತ್ತೇವೆ ಆದ್ದರಿಂದ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **'ಕೈಗಾರಿಕೆ ವಲಯ'** ದಿಂದ **'ವಸತಿ ವಲಯ'** ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶವಾಗಿ ತಿಳಿಸಿರುತ್ತಾರೆ.

ಸಹಿ/-
ಸದಸ್ಯ ಕಾರ್ಯದರ್ಶಿಗಳು
ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ
ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ
ಪ್ರಾಧಿಕಾರ, ಬೆಂಗಳೂರು.

ವಾ.ಸಾ.ಸಂ.ಇ/2436/ಆಕಾರ್/2024-25

ಇಸ್ರೇಲ್ ದಾಳಿಗೆ ಹಿಜ್ಬೊಲ್ಲಾ ಕಮಾಂಡರ್ ಹುಸೇನಿ ಸಾವು

ಜೆರುಸಲೇಂ: ಹಮಾಸ್, ಹಿಜ್ಬೊಲ್ಲಾ ಉಗ್ರ ಸಂಘಟನೆಗಳು 2023ರ ಅ.7ರ ದಾಳಿಗೆ ವರ್ಷವಾಗಿದ್ದರ ನೆನಪಿನಲ್ಲಿರುವಾಗ ಮರುದಿನವೇ ಇಸ್ರೇಲ್ ವಾಯುಪಡೆ ಲೆಬನಾನ್‌ನ ಪ್ರಮುಖ ನಗರ ಬೈರೂತ್ ಮೇಲೆ ತೀವ್ರ ಸ್ವರೂಪದ ವೈಮಾನಿಕ ದಾಳಿ ನಡೆಸಿದೆ. ಈ ದಾಳಿಯಲ್ಲಿ ಹಿಜ್ಬೊಲ್ಲಾ ಉಗ್ರ ಸಂಘಟನೆಯ ಹಿರಿಯ ಕಮಾಂಡರ್ ಸುಹೇಲ್ ಹುಸೇನಿ ಹತನಾಗಿದ್ದಾನೆ. ಇದನ್ನು ಇಸ್ರೇಲ್ ಸೇನೆಯೇ ಮಂಗಳವಾರ ದೃಢಪಡಿಸಿದೆ. ಸುಹೇಲ್ ಹುಸೇನಿ ಹಿಜ್ಬೊಲ್ಲಾ ಉಗ್ರ ಸಂಘಟನೆಯ ಸಾರಿಗೆ ಸಂಚಾರ ವ್ಯವಸ್ಥೆ ಮತ್ತು ಹಣಕಾಸು ವ್ಯವಸ್ಥೆಯ ಉಸ್ತುವಾರಿ ಹೊತ್ತಿದ್ದ. ಆತನ ಸಾವಿನಿಂದ ಸಂಘಟನೆಯ ಪ್ರಮುಖ ಆಧಾರ ಸ್ಥಂಬವೇ ಉರುಳಿದಂತಾಗಿದೆ ಎನ್ನಲಾಗಿದೆ. ಹಿಜ್ಬೊಲ್ಲಾದಿಂದ ತಕ್ಷಣದ ಪ್ರತಿಕ್ರಿಯೆ ಬಂದಿಲ್ಲ.

ಇ.ಡಿ ಎದುರು ಅಜರ್ ಹಾಜರು



ಹೈದರಾಬಾದ್: ಹೈದರಾಬಾದ್ ಕ್ರಿಕೆಟ್ ಅಸೋಸಿಯೇಷನ್(ಎಚ್‌ಸಿಎ)ನಲ್ಲಿನ ಅವ್ಯವಹಾರದ ಹಣ ಅಕ್ರಮ ವರ್ಗಾವಣೆ ಮಾಡಿದ ಆರೋಪದಡಿ ಮಾಜಿ ಕ್ರಿಕೆಟಿಗ, ಕಾಂಗ್ರೆಸ್ ಮುಖಂಡ ಮೊಹಮ್ಮದ್ ಅಜರುದ್ದೀನ್ ಮಂಗಳ ವಾರ ಜಾರಿ ನಿರ್ದೇಶನಾಲಯದ (ಇ.ಡಿ) ಎದುರು ವಿಚಾರಣೆಗೆ ಹಾಜರಾದರು. ಇ.ಡಿ ಅಧಿಕಾರಿಗಳು ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅನ್ವಯ ಆರೋಪಿಯ ಹೇಳಿಕೆ ದಾಖಲಿಸಿ ಕೊಂಡಿದ್ದಾರೆ. ಅಜರುದ್ದೀನ್ ಎಚ್‌ಸಿಎ ಅಧ್ಯಕ್ಷರಾಗಿದ್ದಾಗ ಅವ್ಯವಹಾರ ದಲ್ಲಿನ ಅವರ ಪಾತ್ರದ ಕುರಿತೂ ಇ.ಡಿ ವಿಚಾರಣೆ ನಡೆಸಲಿದೆ. ಇ.ಡಿ ಕಳೆದ ನವೆಂಬರ್‌ನಲ್ಲಿ ಕ್ರಿಕೆಟ್ ಅಸೋಸಿಯೇಷನ್ ಮತ್ತು ಆರೋಪಿತರ ಮನೆ- ಕಚೇರಿಗಳಲ್ಲಿ ಶೋಧ ನಡೆಸಿತ್ತು.



ಫಾಲ್ಕೆ ಪ್ರಶಸ್ತಿ ಪ್ರದಾನ

ದೆಹಲಿಯ ವಿಜ್ಞಾನ್ ಭವನ್‌ನಲ್ಲಿ ಮಂಗಳವಾರ ಸಂಜೆ ಆಯೋಜಿತವಾಗಿದ್ದ ಆಕರ್ಷಕ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರತಿಷ್ಠಿತ 'ದಾದಾ ಸಾಹೇಬ್ ಫಾಲ್ಕೆ' ಪ್ರಶಸ್ತಿಯನ್ನು ಹಿರಿಯ ನಟ ಮಿಥುನ್ ಚಕ್ರವರ್ತಿ ಅವರಿಗೆ ಪ್ರದಾನ ಮಾಡಿದರು. ಈ ಸಂದರ್ಭ ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್, ಸಹಾಯಕ ಸಚಿವ ಎಲ್.ಮುರುಗನ್ ಉಪಸ್ಥಿತರಿದ್ದರು. ಭಾರತದ ಚಲನಚಿತ್ರ ರಂಗಕ್ಕೆ ಅತ್ಯುತ್ತಮ ಕೊಡುಗೆ ನೀಡಿದ್ದಕ್ಕಾಗಿ ಪಶ್ಚಿಮ ಬಂಗಾಳ ಮೂಲದ ಮಿಥುನ್ ಚಕ್ರವರ್ತಿ ಅವರಿಗೆ 2022ರ ಸಾಲಿನ ಪ್ರಶಸ್ತಿ ಸಂದಿದೆ.

ಆರ್‌ಜಿ ಕರ್ ಆಸ್ಪತ್ರೆ 50 ವೈದ್ಯರ ರಾಜೀನಾಮೆ

ಕೋಲ್ಕತ್ತ: ಕೆಲಸದ ಸ್ಥಳದಲ್ಲಿ ಮಹಿಳಾ ವೈದ್ಯರಿಗೆ ಸುರಕ್ಷತೆ ಖಾತರಿ ಪಡಿಸಬೇಕು, ತಾರತಮ್ಯ ನೀತಿ ನಿವಾರಿಸಬೇಕು, 31 ವರ್ಷದ ಕಿರಿಯ ವೈದ್ಯೆ ಹತ್ಯಾಚಾರ ಪ್ರಕರಣದಲ್ಲಿ ತ್ವರಿತ ನ್ಯಾಯ ದೊರಕಿಸಿಕೊಡಬೇಕು ಎಂಬ ಬೇಡಿಕೆಗಳನ್ನು ಮುಂದಿಟ್ಟು ಆಮರಣಾಂತ ಉಪವಾಸ ಕೈಗೊಂಡಿರುವ ಪಶ್ಚಿಮ ಬಂಗಾಳದ ವಿವಿಧ ಆಸ್ಪತ್ರೆಗಳ 7 ಕಿರಿಯ ವೈದ್ಯರಿಗೆ ಬೆಂಬಲ ವ್ಯಕ್ತಪಡಿಸಿ ಕೋಲ್ಕತ್ತ ನಗರದ ಆರ್‌ಜಿ ಕರ್ ಸರಕಾರಿ ವೈದ್ಯಕೀಯ ಕಾಲೇಜು-ಆಸ್ಪತ್ರೆಯ 50 ಹಿರಿಯ ವೈದ್ಯರು ತಮ್ಮ ಹುದ್ದೆಗೆ ಮಂಗಳವಾರ ರಾಜೀನಾಮೆ ಸಲ್ಲಿಸಿದ್ದಾರೆ.

ಸೆನ್ಸೆಕ್ಸ್ 585 ಅಂಕ ಏರಿಕೆ: 6 ದಿನಗಳ ಕುಸಿತಕ್ಕೆ ತಡೆ

ಮುಂಬೈ: ಆರು ದಿನಗಳಿಂದ ಸತತವಾಗಿ ಕುಸಿತ ಕಂಡಿದ್ದ ಮುಂಬೈ ಷೇರುಪೇಟೆಯ ಸಂವೇದಿ ಸೂಚ್ಯಂಕ ಮಂಗಳವಾರ ಕುಸಿತದ ಹಾದಿಯಿಂದ ತಿರುವು ಪಡೆದು ಏರಿಕೆ ದಾಖಲಿಸಿದೆ. ಸೆನ್ಸೆಕ್ಸ್ ಮಂಗಳವಾರ 584.81 ಅಂಕಗಳ ಏರಿಕೆ ದಾಖಲಿಸಿರುವುದನ್ನು ಕಂಡು ಲಕ್ಷಾಂತರ ಹೂಡಿಕೆದಾರರು ಸಮಾಧಾನದ ನಿಟ್ಟುಸಿರು ಬಿಟ್ಟಿದ್ದಾರೆ.



ಸಂವೇದಿ ಸೂಚ್ಯಂಕ ಮಂಗಳವಾರ ಸಂಜೆ 81,634.81 ಅಂಕಗಳಲ್ಲಿ ದಿನದ ವಹಿವಾಟು ಅಂತ್ಯಗೊಳಿಸಿದೆ.

ರಾಷ್ಟ್ರೀಯ ಷೇರು ವಿನಿಮಯ ಕೇಂದ್ರದ (ಎನ್‌ಎಸ್‌ಇ) ನಿಫ್ಟಿ ಕೂಡ 217.40 ಅಂಕಗಳ ಏರಿಕೆ ದಾಖಲಿಸಿ 25,013.15 ಅಂಕಗಳಿಗೆ ಏರಿ ದಿನದ ವಹಿವಾಟು ಕೊನೆಗೊಳಿಸಿದೆ. ಕಳೆದೊಂದು ವಾರದಲ್ಲಿ ಸೂಚ್ಯಂಕಗಳ ಕುಸಿತದಿಂದ ದೇಶದ ಹೂಡಿಕೆದಾರರು 26 ಲಕ್ಷ ಕೋಟಿ ರು. ನಷ್ಟ ಅನುಭವಿಸಿದ್ದರು.

ಮುಂಬೈ ಷೇರು ವಿನಿಮಯ ಕೇಂದ್ರ (ಬಿಎಸ್‌ಇ)ದಲ್ಲಿ ನೋಂದಣಿಯಾದ ಕಂಪನಿಗಳ ಹೂಡಿಕೆ ಮೊತ್ತ 452 ಲಕ್ಷ ಕೋಟಿ ರು.ಗೆ ಕುಸಿದಿತ್ತು.

ಸಮಾಚಾರ ಸಣ್ಣದಲ್ಲ

ಚುನಾವಣೆಯ ವೇಳಾಪಟ್ಟಿ ಪ್ರಕಟ

ಲಿಂಗಸೂಗೂರು: 2024-29ನೇ ಅವಧಿಗೆ ರಾಜ್ಯ ಸರಕಾರಿ ನೌಕರರ ಸಂಘದ ಚುನಾವಣೆಯ ವೇಳಾಪಟ್ಟಿ ಪ್ರಕಟಗೊಂಡಿದ್ದು ಅ 2024 ರಿಂದ ಅ 28 2024 ರವರೆಗೆ ತಾಲೂಕ ಶಾಖೆಯ ನಿರ್ದೇಶಕ ಸ್ಥಾನಗಳ ಚುನಾವಣೆ ನಡೆಸಲಾಗುವುದು ಹಾಗೂ ಅ 30 2024 ರಿಂದ ನ 16 2024 ರ ವರೆಗೆ ಶಾಖೆಯ ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸಲಾಗುವುದೆಂದು ಚುನಾವಣೆ ಅಧಿಕಾರಿಯಾದ ಅಮರಪ್ಪ ಸಾಲಿ ಮುಖ್ಯಗುರುಗಳು, ಸಮಾಹಿಪ್ರಾ.ಶಾಲೆ ಕಾಳಾಪೂರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ: 9448902023 ಹಾಗೂ ಸಹಾಯಕ ಚುನಾವಣಾಧಿಕಾರಿಯಾದ ಕೆ.ಸುಭಾಸ್ ಮುಖ್ಯಗುರುಗಳು ಶಾ.ಮಾ.ಹಿ.ಪ್ರಾ. ಶಾಲೆ ಲಿಂಗಸುಗೂರು ಇವರ ಮೊಬೈಲ್ ಸಂಖ್ಯೆ 9902243189 ಈ ನಂಬರುಗಳಿಗೆ ತಾವು ಸಂಪರ್ಕಿಸಬಹುದಾಗಿದೆ ಎಂದು ಕೋರಿದೆ.

ಗೌರವಧನಕ್ಕೆ ಅರ್ಜಿ ಆಹ್ವಾನ

ರಾಯಚೂರು: ಜಿಲ್ಲಾ ವಿಶೇಷಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ವತಿಯಿಂದ 2024-25ನೇ ಸಾಲಿನ ಸೆರೆಬ್ರಲ್ ಪಾಲ್ಸಿ, ಮಸ್ಕುಲರ್ ಡಿಸ್ಟೋಫಿ, ಪಾರ್ಕಿನ್ಸನ್ಸ್ ಮತ್ತು ಮಲ್ಟಿಪಲ್ ಸ್ಕೆರೋಸಿಸ್ ಕಾಯಿಲೆಯಿಂದ ಬಳಲುತ್ತಿರುವ ವಿಕಲಚೇತನ ವ್ಯಕ್ತಿಗಳ ಆರೈಕೆದಾರರಿಗೆ ಪ್ರತಿ ಮಾಹೆ 1000 ರು. ಗಳನು ನೀಡುವ ಯೋಜನೆಯಡಿ ಆರೈಕೆದಾರರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಆಯಾ ತಾಲೂಕು ಪಂಚಾಯಿತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಂ.ಆರ್.ಡಬ್ಲ್ಯೂ ಕಾರ್ಯಕರ್ತರನ್ನು ಸಂಪರ್ಕ ಮಾಡಬಹುದಾಗಿದೆ. ಜಿಲ್ಲಾ ಕಚೇರಿಯ ದೂರವಾಣಿ ಸಂಖ್ಯೆ: 08532- 200992ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪವರ್‌ಮ್ಯಾಕ್ ಕಂಪನಿ ನೌಕರರಿಂದ ಧರಣಿ

ರಾಯಚೂರು: ವೈಟಿಪಿಎಸ್‌ನ ನಿರ್ವಹಣೆ ಗುತ್ತಿಗೆ ಪಡೆದ ಪವರ್ ಮ್ಯಾಕ್ ಕಂಪನಿ ನೌಕರರಿಗೆ ಸೌಲಭ್ಯ ನೀಡದಿರುವುದು ಖಂಡಿಸಿ ಗುತ್ತಿಗೆ ನೌಕರರ ಸಂಘದಿಂದ ಧರಣಿ ಹಮ್ಮಿಕೊಳ್ಳಲಾಗಿದೆ. ವೈಟಿಪಿಎಸ್ ಮುಂದೆ ಗುತ್ತಿಗೆ ನೌಕರರ ಸಂಘದ ನೇತೃತ್ವದಲ್ಲಿ ಧರಣಿ ಆರಂಭಿಸಿದ್ದು ಗುತ್ತಿಗೆ ಕಾರ್ಮಿಕರಿಗೆ ನೀಡಬೇಕಾದ ಕನಿಷ್ಟ ವೇತನ, ಭತ್ಯೆ, ಗ್ರಾಚೂಟಿ ಒದಗಿಸುತ್ತಿಲ್ಲ, ಈ ಬಗ್ಗೆ ಮನವಿ ಮಾಡಿದರೂ ಕಂಪನಿಯವರಾಗಲಿ, ವೈಟಿಪಿಎಸ್ ಅಧಿಕಾರಿಗಳಾಗಲಿ ಗಮನಿಸದೆ ಬೇಜವಾಬ್ದಾರಿ ತೋರಿಸುತ್ತಿದ್ದಾರೆ ಎಂದು ದೂರಿದ್ದಾರೆ. ಕನಿಷ್ಟ ವೇತನ ಒಪ್ಪಿದ್ದರೂ ಅದನ್ನು ನೀಡಿ ಭವಿಷ್ಯ ನಿಧಿ ಇತರೆ ಸೌಲಭ್ಯ ನೀಡದೆ ಅನ್ಯಾಯ ಮಾಡಲಾಗುತ್ತಿದೆ. ಹೀಗಾಗಿ, ತಕ್ಷಣ ಖಾಸಗಿ ಕಂಪನಿಗೆ ಗುತ್ತಿಗೆ ವಹಿಸಬಾರದು, ನಿಗಮದ ಅಧಿಕಾರಿಗಳು ನಮ್ಮ ಸಮಸ್ಯೆ ಆಲಿಸಿ ಪರಿಹರಿಸಲು ಮುಂದಾಗಬೇಕು, ವಿವಿಧ ವಿಭಾಗದಲ್ಲಿನ ಕಾರ್ಮಿಕರಿಗೆ ಸೇವಾ ಭದ್ರತೆ, ರಕ್ಷಣಾ ಸಾಮಾಗ್ರಿ ಒದಗಿಸಲು ಆಗ್ರಹಿಸಿ ಈ ಹೋರಾಟ ನಡೆಯುತ್ತಿದೆ. ಈ ಧರಣಿಯಲ್ಲಿ ವಿವಿಧ ವಿಭಾಗದ ನೌಕರರು ಭಾಗವಹಿಸಿದ್ದಾರೆ.

ಅಪ್ರಾಪ್ತೆ ಮೇಲೆ ಅತ್ಯಾಚಾರ: ಶಿಕ್ಷೆ

ಕೊಪ್ಪಳ: ಇಲ್ಲಿನ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಹಾಗೂ ತ್ವರಿತ ವಿಲೇವಾರಿ ನ್ಯಾಯಾಲಯ (ಪೋಕ್ಸೊ) ಅಪ್ರಾಪ್ತ ಬಾಲಕಿ ಅಪಹರಿಸಿ ಅತ್ಯಾಚಾರ ಎಸಗಿದ ಆರೋಪಿಗೆ 10 ವರ್ಷ ಜೈಲು ಶಿಕ್ಷೆ ಹಾಗೂ 20 ಸಾವಿರ ರು. ದಂಡವಿಧಿಸಿ ಆದೇಶಿಸಿದೆ. ಕಾರಟಗಿ ತಾಲೂಕು ಯರಡೋಣ ಗ್ರಾಮದ ಮಾರೆಪ್ಪ ಸೋಂಪುರ ಶಿಕ್ಷೆಗೆ ಗುರಿಯಾದ ವ್ಯಕ್ತಿ. ಕಳೆದ 2016ರ ಜನವರಿ 1ರಂದು ಕಾರಟಗಿ ಪೊಲೀಸ್ ಠಾಣೆ ವ್ಯಾಪ್ತಿಯ ಯರಡೋಣ ಗ್ರಾಮದ ಸರಕಾರಿ ಶಾಲೆ ಹಿಂದೆ ಅಪ್ರಾಪ್ತೆ ಬಹಿರ್ದೆಸೆಗೆ ಹೋಗಿದ್ದಾಗ ಆರೋಪಿ ಆಕೆಯನ್ನು ಹಿಂಬಾಲಿಸಿ ಅತ್ಯಾಚಾರ ಮಾಡಿದ್ದಾಗಿ ಕಾರಟಗಿ ಪೊಲೀಸ್ ಠಾಣೆ ಪಿಎಸ್‌ಐ ಮಲ್ಲಪ್ಪ ಪ್ರಕರಣ ದಾಖಲಿಸಿಕೊಂಡಿದ್ದರು. ಪ್ರಕರಣದ ತನಿಖೆಯನ್ನು ಪ್ರಭಾಕರ ಧರ್ಮಟ್ಟಿ, ಕಾಳಿಕೃಷ್ಣ ಹಾಗೂ ಗಂಗಾವತಿ ಗ್ರಾಮೀಣ ವೃತ್ತ ಪೊಲೀಸ್ ಅಧಿಕಾರಿ ದೀಪಕ ಆರ್ ಬೂಸರೆಡ್ಡಿ ನಿರ್ವಹಿಸಿದ್ದರು. ಆರೋಪ ಸಾಭೀತಾಗಿವೆ ಎಂದು ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಹಾಗೂ ಪೋಕ್ಸೋ ತ್ವರಿತ ವಿಲೇವಾರಿ ನ್ಯಾಯಾಧೀಶ ಕುಮಾರ ಡಿ.ಕೆ 1ತೀರ್ಪು ನೀಡಿದ್ದಾರೆ. ಸರಕಾರದ ಪರವಾಗಿ ವಿಶೇಷ ಸರಕಾರಿ ಅಭಿಯೋಜಕಿ ಗೌರಮ್ಮ ದೇಸಾಯಿ ವಾದಿಸಿದ್ದರು.

ಆನಂದದ ಆಲ್ಬಂ
ವಿವಾಹ್
ಪ್ರತಿ ಬುಧವಾರ

ಪತ್ರಿಕಾ ಪ್ರಕಟಣೆ

ಧಾರವಾಡ ಜಿಲ್ಲಾ, ಮನಗುಂಡಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ಬೆಳ್ಳಿಗಟ್ಟಿ ಗ್ರಾಮದ ಸರ್ವೆ ನಂ.183/4 (39) ಇದರ ಕ್ಷೇತ್ರ 02ಎಕರೆ 22ಗುಂಟೆ ಜಮೀನನ್ನು ನಿವೇಶನ ವಿದ್ದು, ಇದರಲ್ಲಿ ನಾನು ಪ್ಲಾಟುಗಳನ್ನು ಖರೀದಿಸಲು ಬಯಸಿದ್ದು, ಇದಕ್ಕೆ ಯಾರದಾದರೂ ತಂಟೆ ವ ತಕರಾರುಗಳು ಇದ್ದಲ್ಲಿ ಈ ನೋಟೀಸ ಪ್ರಕಟಗೊಂಡ 7 ದಿವಸಗಳ ಅವಧಿಯ ಒಳಗಾಗಿ ತಮ್ಮ ತಕರಾರನ್ನು ಈ ಕೆಳಗೆ ಕಾಣಿಸಿದ ವಿಳಾಸಕ್ಕೆ ಲಿಖಿತ ದಾಖಲೆಗಳೊಂದಿಗೆ ಕಳುಹಿಸಬೇಕು ನಂತರ ಬಂದ ತಕಾರರುಗಳನ್ನು ಪರಿಗಣಿಸಲಾಗುವುದಿಲ್ಲ ಅಂತಾ ಕೊಟ್ಟ ಸಾರ್ವಜನಿಕ ಪತ್ರಿಕಾ ಪ್ರಕಟಣೆ.

ಸೋಮಣ್ಣವರ ಬಿ.ಎನ್, ವಕೀಲರು,
ಕೇ/ಆಫ್: ಆರ್.ಆರ್.ಕೋಟಿ,
ಮಾಳಾಪೂರ ರೋಡ, ಧಾರವಾಡ.
ಮೊ :9242203013
8277070005
8971998084
ಧಾರವಾಡ,
08/10/2024

ಗಂಗಾವತಿ ಟ್ರಾಫಿಕ್ ಠಾಣೆ ಪೊಲೀಸರಿಂದ ಕ್ರಮ | ಕಾನ್ ವೇ ವಿರುದ್ಧ ಚಾಲನೆ ಪ್ರಕರಣ

ರೆಡ್ಡಿ, ಬೆಂಬಲಿಗರ 3 ಕಾರು ವಶಕ್ಕೆ

ಕೊಪ್ಪಳ: ಸಿಎಂ ಮತ್ತವರ ಬೆಂಗಾವಲು ವಾಹನಗಳ ವಿರುದ್ಧ ದಿಕ್ಕಿನಲ್ಲಿ ಕಾರು ಚಾಲನೆ ಮಾಡಿದ, ಶಾಸಕ ಜನಾರ್ದನ ರೆಡ್ಡಿ ಮತ್ತವರ ಬೆಂಬಲಿಗರ 3 ಕಾರುಗಳನ್ನು ಪೊಲೀಸರು ಮಂಗಳವಾರ ವಶಕ್ಕೆ ಪಡೆದಿದ್ದಾರೆ.

ಶಾಸಕ ಜನಾರ್ದನ ರೆಡ್ಡಿ ಬಳಸುವ ಐಷಾರಾಮಿ ರೇಂಜ್ ರೋವರ್, ಬೆಂಬಲಿಗರ ಫಾರ್ಚುನರ್ ಹಾಗು ಮಹೇಂದ್ರ ಥಾರ್ ಕಾರುಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಸಂಚಾರಿ ನಿಯಮ ಉಲ್ಲಂಘನೆ ಹಾಗೂ ನಿರ್ಲಕ್ಷ್ಯದಿಂದ ಕಾರು ಚಾಲನೆ ಆರೋಪದಡಿ ಗಂಗಾವತಿ ಟ್ರಾಫಿಕ್ ಪೊಲೀಸ್ ಠಾಣೆಯಲ್ಲಿ ಅ.6 ರಂದು ಪ್ರಕರಣ ದಾಖಲಾಗಿತ್ತು. ಈ ಹಿನ್ನೆಲೆ ಪೊಲೀಸರು ಬೆಂಗಳೂರಿನಲ್ಲಿ ಈ ಮೂರು ಕಾರುಗಳನ್ನು ವಶಕ್ಕೆ ಪಡೆದಿದ್ದಾರೆ. ಗಂಗಾವತಿ ಸಂಚಾರಿ ಪೊಲೀಸ್ ಠಾಣೆ ಪಿಎಸ್‌ಐ ಇಸ್ಮಾಯಿಲ್ ನೇತೃತ್ವದ ತಂಡ ಬೆಂಗಳೂರಿನಲ್ಲಿ ರೆಡ್ಡಿ ಮತ್ತವರ ಬೆಂಬಲಿಗರ ಕಾರಗಳನ್ನು ವಶಕ್ಕೆ ಪಡೆದಿದ್ದಾರೆ.

ಜಾಮೀನು: ಪೊಲೀಸರು ಮಂಗಳವಾರ ಬೆಳಗ್ಗೆ ಚಾಲಕರ ಸಮೇತ ಕಾರು ವಶಕ್ಕೆ ಪಡೆದಿದ್ದಾರೆ. ಪೊಲೀಸ್ ಠಾಣೆಯಲ್ಲೇ ಜಾಮೀನು ನೀಡಬಹುದಾದ ಕಲಂನಡಿ ಎಫ್ ಐಆರ್ ಮಾಡಿದ್ದು, ಚಾಲಕರಿಗೆ ಜಾಮೀನು ನೀಡಲಾಗಿದೆ. ಇನ್ನು ವಾಹನಗಳ ಬಿಡುಗಡೆ ಕೂಡ ರೆಡ್ಡಿ ಪರ ವಕೀಲರು ತಯಾರಿ ಮಾಡಿಕೊಂಡಿದ್ದಾರೆ. ಕೋರ್ಟ್ ಮೂಲಕ ವಾಹನಗಳ ರಿಲೀಜ್ ಗೂ ತಯಾರಿ ಮಾಡಿಕೊಂಡಿದ್ದು, ಮೂರು ಕಾರುಗಳ ಚಾಲಕರು ಬೆಳಗ್ಗೆಯಿಂದ ಪೊಲೀಸ್ ಠಾಣೆ ಆವರಣದಲ್ಲಿ ಇದ್ದಾರೆ.

> ಸುಮಾರು ಅರ್ಧ ಗಂಟೆ ನಾನು ಟ್ರಾಫಿಕ್ ನಲ್ಲೇ ಕಾಯ್ದಿದ್ದೇನೆ. ಆದರೂ, ಸಿಎಂ ಮತ್ತವರ ಕಾನ್ ವೇ ಬರಲಿಲ್ಲ. ಪೂಜೆ ಕಾರ್ಯಕ್ರಮದಲ್ಲಿ ಭಾಗವಹಿಸಲು ನಾನು ಬಳ್ಳಾರಿಗೆ ಹೋಗಬೇಕಾಗಿದ್ದರಿಂದ ಕಾನ್ ವೇ ಬರುವ ಮೊದಲೇ ಪಾಸ್ ಆಗಬಹುದು ಅಂತಾ ಕಾರು ಡಿವೈಡರ್ ಮೇಲಿಂದ ಹೋಗಿದೆ. ನನಗೆ ಬೇರೆ ಯಾವ ಉದ್ದೇಶವೂ ಇರಲಿಲ್ಲ.
>
> -ಜನಾರ್ದನ ರೆಡ್ಡಿ, ಶಾಸಕ

ಗಂಗಾವತಿ ಪೊಲೀಸ್ ಠಾಣೆ ಆವರಣದಲ್ಲಿ ನಿಂತಿರುವ ಶಾಸಕ ಜನಾರ್ದನ ರೆಡ್ಡಿ ಮತ್ತವರ ಬೆಂಬಲಿಗರ ಕಾರುಗಳು

ಪ್ರಕರಣಕ್ಕೆ ರಾಜಕೀಯ ತಿರುವು..!

ಶಾಸಕ ಜನಾರ್ದನ ರೆಡ್ಡಿ ನಡೆ ಮತ್ತು ಕಾರು ಸೀಜ್ ಮಾಡಿರುವ ಕ್ರಮ ರಾಜಕೀಯ ತಿರುವು ಪಡೆದುಕೊಂಡಿವೆ. ಉಭಯ ನಾಯಕ ಬೆಂಬಲಿಗರು ಸಾಮಾಜಿಕ ಜಾಲತಾಣದಲ್ಲಿ ಅವರವರ ನಾಯಕರ ಪರ ಬ್ಯಾಟಿಂಗ್ ಮಾಡುತ್ತಿದ್ದಾರೆ. ಆರಂಭದಲ್ಲಿ ಜೀರೋ ಟ್ರಾಫಿಕ್ ಬೇಡ ಎಂದಿದ್ದ ಸಿಎಂ ಸಿದ್ದರಾಮಯ್ಯ ಈಗ ಜೀರೋ ಟ್ರಾಫಿಕ್ ವ್ಯವಸ್ಥೆ ಪಡೆದು ಸಾರ್ವಜನಿಕರಿಗೆ ತೊಂದರೆ ಕೊಡುತ್ತಿದ್ದಾರೆ ಎಂದು ರೆಡ್ಡಿ ಬೆಂಬಲಿಗರು ಟೀಕೆ ಮಾಡಿದ್ದಾರೆ. ಇದಕ್ಕೆ ತಿರುಗೇಟು ನೀಡಿರುವ ಕಾಂಗ್ರೆಸ್ ಕಾರ್ಯಕರ್ತರು, ಭದ್ರತೆ ದೃಷ್ಟಿಯಿಂದ ಪೊಲೀಸರು ಅನಿವಾರ್ಯವಾಗಿ ಸಿಎಂಗೆ ಜೀರೋ ಟ್ರಾಫಿಕ್ ವ್ಯವಸ್ಥೆ ಮಾಡುತ್ತಾರೆ ಎಂದು ತಿರುಗೇಟು ನೀಡಿದ್ದಾರೆ. ರೆಡ್ಡಿ ಹಣ ಮತ್ತು ಅಧಿಕಾರದ ಮದದಿಂದ ಹೀಗೆ ವರ್ತಿಸುತ್ತಾರೆ ಎಂದಿದ್ದ ಸಚಿವ ಶಿವರಾಜ ತಂಗಡಗಿಗೆ ಜನಾರ್ದನ ರೆಡ್ಡಿ, ಅಧಿಕಾರದ ಅಮಲು, ದುರಹಂಕಾರ ಹೆಚ್ಚಾಗಿರುವುದು ನನಗಲ್ಲ. ಸಚಿವ ಶಿವರಾಜ ತಂಗಡಗಿ ಅವರಿಗೆ ಎಂದು ತಿರುಗೇಟು ನೀಡಿದ್ದಾರೆ.

ಪ್ರಕರಣದ ಹಿನ್ನೆಲೆ: ಕಳೆದ ಅಕ್ಟೋಬರ್ 5 ರಂದು ರಾಯಚೂರು ಜಿಲ್ಲಾ ಪ್ರವಾಸದಲ್ಲಿದ್ದ ಸಿಎಂ ಸಿದ್ದರಾಮಯ್ಯ, ಗಂಗಾವತಿ ಮಾರ್ಗವಾಗಿ ಕೊಪ್ಪಳಕ್ಕೆ ತೆರಳುತ್ತಿದ್ದರು. ಸಿಎಂ ಸಿದ್ದರಾಮಯ್ಯ ತೆರಳಲು ಮಾರ್ಗದಲ್ಲಿ ಪೊಲೀಸರು ಝೀರೋ ಟ್ರಾಫಿಕ್ ವ್ಯವಸ್ಥೆ ಮಾಡಿದ್ದರು. ಈ ವೇಳೆ ಶಾಸಕ ಜನಾರ್ದನ ರೆಡ್ಡಿ ಕಾರು ಕೂಡ ಟ್ರಾಫಿಕ್ ನಲ್ಲಿ ಸಿಲುಕಿದ್ದರು. ಈ ವೇಳೆ ರೆಡ್ಡಿ ಚಾಲಕ ಡಿವೈಡರ್ ಮೇಲೆ ಕಾರು ಹತ್ತಿಸಿಕೊಂಡು, ಸಿಎಂ ಕಾರುಗಳು ಬರುವ ವಿರುದ್ಧ ದಿಕ್ಕಿನಲ್ಲಿ ಚಲಾಯಿಸಿದ್ದರು. ರೆಡ್ಡಿ ಕಾರು ಡಿವೈಡರ್ ದಾಟಿದ ಕೇವಲ 30 ಸೆಕೆಂಡ್ ನಲ್ಲಿ ಸಿಎಂ ಭದ್ರತೆ ಮತ್ತು ಬೆಂಗಾವಲು ಪಡೆ ವಾಹನ ಬಂದಿದ್ದು, ಭಾರಿ ಅನಾಹುತ ತಪ್ಪಿತ್ತು.

ಶಾಸಕ ಜನಾರ್ದನ ರೆಡ್ಡಿ ನಡೆಗೆ ಕೊಪ್ಪಳ ಜಿಲ್ಲಾದ್ಯಂತ ವ್ಯಾಪಕ ಟೀಕೆ ವ್ಯಕ್ತವಾಗಿದ್ದವು. ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಪ್ರಕರಣವನ್ನ ಗಂಭೀರವಾಗಿ ಪರಿಗಣಿಸಿ, ಸಯುಕ್ತ ಈ ಬಗ್ಗೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಪೊಲೀಸರಿಗೆ ಸೂಚನೆ ನೀಡಿದ್ದರು.

ಚನ್ನಮ್ಮ ಜಯಂತಿ ಅ.23ಕ್ಕೆ

ಕೊಪ್ಪಳ: ಜಿಲ್ಲಾ ಕೇಂದ್ರದಲ್ಲಿ ಅ. 23 ರಂದು ಆಚರಿಸಲಾಗುವ ಕಿತ್ತೂರು ರಾಣಿ ಚನ್ನಮ್ಮ ಜಯಂತ್ಯುತ್ಸವ ಕಾರ್ಯಕ್ರಮಕ್ಕೆ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಎಡಿಸಿ ಸಿದ್ರಾಮೇಶ್ವರ ಹೇಳಿದರು.

ನಗರದ ಜಿಲ್ಲಾಡಳಿತ ಭವನದ ಕೆಸ್ವಾನ್ ವಿಡಿಯೋ ಕಾನ್ಫರೆನ್ಸ್ ಹಾಲ್ ನಲ್ಲಿ ನಡೆದ ಕಿತ್ತೂರು ರಾಣಿ ಚನ್ನಮ್ಮ ಜಯಂತಿ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲಾ ಕೇಂದ್ರದಲ್ಲಿ ಅ. 23 ರಂದು ಜಯಂತಿ ಕಾರ್ಯಕ್ರಮದ ಹಿನ್ನೆಲೆ ಶಿಷ್ಟಾಚಾರದಂತೆ ಆಮಂತ್ರಣ ಪತ್ರಿಕೆ ಮುದ್ರಿಸಿ ಎಲ್ಲ ಗಣ್ಯರಿಗೆ ಆಹ್ವಾನ ನೀಡಬೇಕು. ಕೆಲಸ ಹಂಚಿಕೆ ಮಾಡಿದಂತೆ ಆಯಾ ಇಲಾಖೆಗಳ ಅಧಿಕಾರಿಗಳು ಪರಸ್ಪರ ಸಮನ್ವಯದೊಂದಿಗೆ ಸಿದ್ಧತೆ ಮಾಡಿಕೊಳ್ಳಬೇಕು. ನಗರದ ಪ್ರಮುಖ ವೃತ್ತಗಳಲ್ಲಿ ನಗರಸಭೆಯಿಂದ ದೀಪಾಲಂಕಾರ ಮಾಡಬೇಕು. ಮೆರವಣಿಗೆ ಸಾಗುವ ಮಾರ್ಗದಲ್ಲಿ ಶುಚಿತ್ವ ಕಾರ್ಯವಾಗಬೇಕು. ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಸ್ವಚ್ಛತೆ, ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು ಎಂದರು.

ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧೀಕ್ಷಕಿ ನಾಗವ್ವ ಎಚ್, ತಾಲೂಕು ಅಭಿವೃದ್ಧಿ ಅಧಿಕಾರಿ ಸುರೇಶ ಬಿ.ಕೆ., ಜಿಲ್ಲಾ ಆಯುಷ್ ಇಲಾಖೆ ಸಹಾಯಕ ಆಡಳಿತ ಅಧಿಕಾರಿ ಸೀತಾ, ಸಾರಿಗೆ ನಿಗಮದ ಅಧಿಕಾರಿಗಳಾದ ಸತ್ಯನಾರಾಯಣ, ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕ ಡಿ. ನಾಗರಾಜ, ರೇಷ್ಮೆ ಇಲಾಖೆಯ ನಿರ್ದೇಶಕರಾದ ಅಕ್ಕಮಹಾದೇವಿ ಬಡಿಗೇರ, ಪೂರ್ವ ವಿಶ್ವವಿದ್ಯಾಲಯದ ಉಪ ನಿರ್ದೇಶಕರಾದ ಎಂ ರಮೇಶ್, ಡಿಎಸ್‌ಓ ಕೊಪ್ಪಳ ಸುಧಾಕರ್ ಮಾನೆ, ಕೌಶಲ್ಯಾಭಿವೃದ್ಧಿ ಇಲಾಖೆಯ ಎಡಿ ಮಂಜುನಾಥ ಬಿಲ್ಲದ್, ಪಂಚಾಯಿತಿ ರಾಜ್ ಎಂಜಿನೀಯರಿಂಗ್ ವಿಭಾಗದ ಅಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು, ಗಿರಿಜಾ ಪೊಲೀಸ್ ಪಾಟೀಲ್, ಸುಮಂಗಲಾ ಹಂಚಿನಾಳ, ಸುಜಾತಾ ಎಸ್. ಪಟ್ಟಣಶೆಟ್ಟಿ, ಮಹಾಂತೇಶ ಮಲ್ಲನಗೌಡರ, ಎಸ್.ಟಿ ಹಂಚಿನಾಳ, ರಾಣಿ ಸುರಟೂರು ಸೇರಿ ಇತರರು ಇದ್ದರು.

ನಗರದ ಜಿಲ್ಲಾಡಳಿತ ಭವನದ ಕೆಸ್ವಾನ್ ವಿಡಿಯೋ ಕಾನ್ಫರೆನ್ಸ್ ಹಾಲ್ ನಲ್ಲಿ ನಡೆದ ಕಿತ್ತೂರು ರಾಣಿ ಚನ್ನಮ್ಮ ಜಯಂತಿ ಪೂರ್ವಭಾವಿ ಸಭೆ ನಡೆಯಿತು.

ಮಮದಾಪೂರಲ್ಲಿ ನವರಾತ್ರಿ ಉತ್ಸವ | ಸಾಧಕರಿಗೆ ಸೇವಾರತ್ನ ಪ್ರಶಸ್ತಿ ಪ್ರದಾನ

ಮಕ್ಕಳಿಗೆ ಶಿಕ್ಷಣದ ಜತೆ ಸಂಸ್ಕಾರ ನೀಡಿ

ರಾಯಚೂರು: ಮಕ್ಕಳಿಗೆ ಶಿಕ್ಷಣದ ಜತೆಗೆ ಆಧ್ಯಾತ್ಮ ಮತ್ತು ಸಂಸ್ಕಾರ ನೀಡಿದರೆ ಸಮಾಜದಲ್ಲಿ ಉತ್ತಮ ವ್ಯಕ್ತಿಯಾಗಲು, ದುಶ್ಚಟಗಳಿಂದ ದೂರವಿರಲು ಸಾಧ್ಯವಾಗಲಿದೆ ಎಂದು ಶಾಸಕ ಬಸನಗೌಡ ದದ್ದಲ್ ಹೇಳಿದರು.

ತಾಲೂಕಿನ ಮಮದಾಪೂರದ ಗಧಾರ ಮಾರಿಕಾಂಬಾ ದೇವಿಯ ವೈಭವ, 11ನೇ ವರ್ಷದ ಶರನ್ನವರಾತ್ರಿ ವಿಶೇಷ ಸಾಂಸ್ಕೃತಿಕ, ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ನವರಾತ್ರಿಯಲ್ಲಿ ಭಕ್ತಿ ಪೂರ್ವಕವಾಗಿ ಎಲ್ಲರೂ ಮಾಲೆಯನ್ನ ಹಾಕಿ ದೇವಿ ಆರಾಧನೆ ಮಾಡುತ್ತ ಸಮಾಜದಲ್ಲಿ ಪರಿವರ್ತನೆ ಮಾಡುತ್ತಾ ದುಶ್ಚಟಗಳಿಂದ ದೂರವಾಗುವತ್ತ ಹೆಜ್ಜೆ ಹಾಕಬೇಕು. ನೀರು ಗಾಳಿ ಎಷ್ಟು ಮುಖ್ಯವೋ ಆಧ್ಯಾತ್ಮ ಚಿಂತನೆ ಪ್ರಾರ್ಥನೆ ಅಷ್ಟೇ ಮುಖ್ಯವಾಗಿದೆ. ಕಲಿಯುಗದಲ್ಲಿ ಧರ್ಮದ ಕಾರ್ಯ ಮಾಡುವಾಗ ಅನೇಕ ಅಡಚಣೆಗಳು ಬರುವುದು ಸಹಜ ಬಂದರೂ ಸಹ ಜಗನ್ಮಾತೆ ದೇವಿ ಧರ್ಮದ ಕಾರ್ಯ ಮಾಡುವವರನ್ನು ರಕ್ಷಿಸುತ್ತಾಳೆ ಎಂದು ತಿಳಿಸಿದರು.

ಕಳೆದ ವರ್ಷ ಇಲ್ಲಿಗೆ ಬಂದಾಗ ಬರಗಾಲ ಇತ್ತು ಆ ಸಮಯದಲ್ಲಿ ನಾನು ದೇವಿಗೆ ವಿಶೇಷ ಪ್ರಾರ್ಥನೆ ಸಲ್ಲಿಸಿ ಮುಂದಿನ ವರ್ಷದೊಳಗೆ ಮಳೆ ಬೆಳೆ ಚೆನ್ನಾಗಿ ಆಗಿ ರೈತರಿಗೆ ಸಮೃದ್ಧಿ ಆಗಲಿ ಎಂದು ಬೇಡಿಕೊಂಡಿದ್ದೆ ಅದರಂತೆಯೇ, ಪ್ರಾರ್ಥನೆಯ ಫಲವಾಗಿ ದೇವಿಯು ಆಶೀರ್ವದಿಸಿ ಈ ವರ್ಷ ಮಳೆ ಬೆಳೆ ಚೆನ್ನಾಗಿ ನೀಡಿದ್ದೂ ಖುಷಿ ತಂದಿದೆ, ರೈತರ ಮೊಗದಲ್ಲಿ ಹರ್ಷ ತಂದಿದೆ ಎಂದರು.

ಶಿಕ್ಷಕ ವೀರೇಶ ತೇರದಾಳ, ಚಂದ್ರಶೇಖರ್ ಪಾಟೀಲ ಆಶಾಪುರ ಮಾತನಾಡಿದರು. ಕಾರ್ಯಕ್ರಮದಲ್ಲಿ ಪರಿಸರ ಕ್ಷೇತ್ರದ ವನಸಿರಿ ಫೌಂಡೇಶನ್ ಸಂಸ್ಥಾಪಕ ಅಮರೇಗೌಡ ಮಲ್ಲಾಪುರ, ಪಕ್ಷಿ ಪ್ರೇಮಿ ಸಲಾವುದ್ದೀನ್ ಮಾನ್ವಿ, ಶಿಕ್ಷಣ ಕ್ಷೇತ್ರಕ್ಕೆ ವೀರೇಶ್ ತೇರದಾಳ ಸಮಾಜ ಸೇವೆಗಾಗಿ ಬಸವರಾಜ್ ಹೊಸಪೇಟೆ ಅವರಿಗೆ ಅತ್ಯುತ್ತಮ ಸೇವಾರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಗ್ರಾಮದ ಎಂಜಿ ಆಂಗ್ಲ ಮಾಧ್ಯಮ ಶಾಲೆಯ ಮಕ್ಕಳಿಂದ ಹಾಗೂ ಮಮದಾಪುರ ಗ್ರಾಮದ ಸರಕಾರಿ ಶಾಲೆಯ ಮಕ್ಕಳ ವತಿಯಿಂದ ಹಾಗೂ ಕುಮಾರಿ ಅಮೃತ ಶ್ರೀನಿವಾಸನ್ ನಾಟ್ಯ ಬಳಗ ರಾಯಚೂರು ವತಿಯಿಂದ ಸಾಂಸ್ಕೃತಿಕ ನೃತ್ಯ ಕಾರ್ಯಕ್ರಮಗಳು ಯಶಸ್ವಿಯಾಗಿ ಜರುಗಿದವು.

ತಾಲೂಕಿನ ಮಮದಾಪೂರದ ಗಧಾರ ಮಾರಿಕಾಂಬಾ ದೇವಿಯ ವೈಭವ, 11ನೇ ವರ್ಷದ ಶರನ್ನವರಾತ್ರಿ ವಿಶೇಷ ಸಾಂಸ್ಕೃತಿಕ, ಸಾಧಕರಿಗೆ ಸನ್ಮಾನ ಮಾಡಲಾಯಿತು.

> ಭಕ್ತರ ಅನುಕೂಲಕ್ಕಾಗಿ ಮಾರಿಕಾಂಬ ದೇವಸ್ಥಾನ ಹತ್ತಿರ ಕಲ್ಯಾಣ ಮಂಟಪ ನಿರ್ಮಾಣ ಮಾಡಲು 25 ಲಕ್ಷ ರುಪಾಯಿಗಳ ಅನುದಾನವನ್ನು ಮಂಜೂರು ಮಾಡಲಾಗಿದ್ದು, ದಸರಾ ಮುಕ್ತಾಯದ ನಂತರ ಕಾಮಗಾರಿ ಆರಂಭ ಮಾಡಲಾಗುವುದು.
>
> - ಬಸನಗೌಡ ದದ್ದಲ್, ಶಾಸಕ

ರೈತ ದಸರಾಗೆ ಡಿಸಿಎಂ ಚಾಲನೆ

ರಾಯಚೂರು: ಪಕ್ಷಭೇದ, ಜಾತಿ, ಧರ್ಮ ಮರೆತು ದಸರಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಮೂಲಕ ಕಲ್ಯಾಣ ಕರ್ನಾಟಕಕ್ಕೆ ಮಾದರಿಯಾಗುವ ಮೂಲಕ ಹೊಸರೂಪವನ್ನು ನೀಡಲಾಗಿದೆ ಎಂದು ಉಪ ಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್ ಅವರು ಹೇಳಿದರು.

ಅವರು ಅ.8ರ ಮಂಗಳವಾರ ದಂದು ಜಿಲ್ಲೆಯ ಸಿಂಧನೂರು ನಗರದ ಎ.ಪಿ.ಎಮ್.ಸಿ ಆವರಣದಲ್ಲಿ ನಗರಸಭೆ, ನಗರ ಯೋಜನಾ ಪ್ರಾಧಿಕಾರ, ಕೃಷಿ ಇಲಾಖೆಯವತಿಯಿಂದ ಹಮ್ಮಿಕೊಳ್ಳಲಾಗಿದ್ದ ರೈತ ದಸರಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಮಾತನಾಡಿದರು.

ಕೆಲದಿನಗಳಿಂದ ರಾಜ್ಯದ ಬಯಲುಸೀಮೆ 7 ಜಿಲ್ಲೆಗಳ ಲಕ್ಷಾಂತರ ಜನರಿಗೆ ಕುಡಿಯುವ ನೀರು ಪೂರೈಸುವ ಬೃಹತ್ ಎತ್ತಿನಹೊಳೆ ಯೋಜನೆಯ ಮೊದಲ ಹಂತವು ಲೋಕಾರ್ಪಣೆಗೊಂಡಿದ್ದು, ಆಭಾಗದ ಹಾಸನ, ಚಿಕ್ಕಮಗಳೂರು, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಿಗೆ ಅನುಕೂಲವಾಗಿದೆ. ಅದೇ ರೀತಿಯಲ್ಲಿ ಈ ಭಾಗದಲ್ಲಿ ತುಂಗಭದ್ರ ಅಚ್ಚುಕಟ್ಟು ಪ್ರದೇಶದಲ್ಲಿ ಕ್ರಮ ಕೈಗೊಂಡು, ಅನುಕೂಲ ಮಾಡಿಕೊಡಲಾಗುವುದೆಂದರು.

ಇದೇ ಸಂದರ್ಭದಲ್ಲಿ ಹಿಂದುಳಿದ ವರ್ಗಗಳು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಶಿವರಾಜ್ ತಂಗಡಗಿ, ಕರ್ನಾಟಕ ವಿಧಾನ ಪರಿಷತ್ ಸರಕಾರಿ ಮುಖ್ಯ ಸಚೇತಕರಾದ ಸಲೀಂ ಅಹ್ಮದ್, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ಸಿಂಧನೂರು ಕ್ಷೇತ್ರದ ಶಾಸಕ ಹಂಪನಗೌಡ ಬಾದರ್ಲಿ, ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಹಾಗೂ ಮಸ್ಕಿ ಕ್ಷೇತ್ರದ ಶಾಸಕ ಆರ್.ಬಸನಗೌಡ ತುರ್ವಿಹಾಳ, ಕೊಪ್ಪಳ ಕ್ಷೇತ್ರದ ಶಾಸಕರಾದ ರಾಘವೇಂದ್ರ ಹಿಟ್ನಾಳ, ವಿಧಾನ ಪರಿಷತ್ ಸದಸ್ಯರಾದ ಶರಣಗೌಡ ಪಾಟೀಲ್ ಬಯ್ಯಾಪೂರ, ಬಸನಗೌಡ ಬಾದರ್ಲಿ, ಕೊಪ್ಪಳ ಶಾಸಕ ರಾಘವೇಂದ್ರ, ಶಿರುಗುಪ್ಪ ಶಾಸಕ ನಾಗರಾಜ್, ಮಾಜಿ ಸಚಿವ ವೆಂಕಟರಾವ್ ನಾಡಗೌಡ, ಮಾಜಿ ಸಂಸದ ಕೆ.ವಿರೂಪಾಕ್ಷಪ್ಪ, ಜಿಲ್ಲಾಧಿಕಾರಿ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ತುಕಾರಾಮ್ ಪಾಂಡ್ವೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಎಂ.ಪುಟ್ಟಮಾದಯ್ಯ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

ನಗರ ಯೋಜನಾ ಪ್ರಾಧಿಕಾರ, ಕೃಷಿ ಇಲಾಖೆಯವತಿಯಿಂದ ಹಮ್ಮಿಕೊಳ್ಳಲಾಗಿದ್ದ ರೈತ ದಸರಾ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

> ರೈತನಿಗೆ ಸಂಬಳ ಇಲ್ಲ, ಪ್ರಮೋಷನ್ ಇಲ್ಲ. ಪೆನ್ಷನ್ ಇಲ್ಲ,ರಿಟೈರ್ ಮೆಂಟ್ ಇಲ್ಲ. ದೇಶಕ್ಕೆ ಸೈನಿಕ, ಶಿಕ್ಷಕ, ಕೃಷಿಕ ಪಿಲ್ಲರ್ ಇದ್ದಂತೆ. ರೈತರು ನಂಬಿಕೆಯಿಂದ ವ್ಯವಸಾಯವನ್ನು ಮಾಡುತ್ತಿದ್ದು, ಮನುಷ್ಯರಿಗೆ ನಂಬಿಕೆ ಇಲ್ಲ ಅಂದ್ರೆ, ಯಾವ ಕಾರ್ಯದಲ್ಲಿ ಯಶಸ್ಸು ಅಸಾಧ್ಯ.
>
> - ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ

ಅನುದಾನ ಪಿಡಿಒ ದುರ್ಬಳಕೆ: ದೂರು

ರಾಯಚೂರು: ಸಾಮಾನ್ಯ ಸಭೆ ಮಾಡದೆ 15ನೇ ಹಣಕಾಸು ಯೋಜನೆ ಅನುದಾನ ದುರ್ಬಳಕೆ ಮಾಡಿಕೊಂಡಿರುವ ತಾಲೂಕಿನ ಜಾಗೀರ ವೆಂಕಟಾಪೂರು ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿ ವಿರುದ್ದ ಕ್ರಮ ವಹಿಸಲು ಸದಸ್ಯರು, ಮುಖಂಡರು ದೂರು ಸಲ್ಲಿಸಿದ್ದಾರೆ.

ಜಿಲ್ಲಾ ಪಂಚಾಯಿತಿ ಸಿಇಒ ಪಾಂಡ್ವೆ ರಾಹುಲ್ ತುಕಾರಾಂ ಅವರ ಭೇಟಿಯಾದ ಜಾಗೀರ ವೆಂಕಟಾಪೂರು ಪಂಚಾಯಿತಿ ಸದಸ್ಯರು ಮತ್ತು ಮುಖಂಡರು ಅಭಿವೃದ್ಧಿ ಅಧಿಕಾರಿಯೂ ಸರ್ವಾಧಿಕಾರಿಯಂತೆ ನಡೆದುಕೊಳ್ಳುತ್ತಿದ್ದಾರೆ. ಪಂಚಾಯಿತಿಗೆ ಮಂಜೂರಾದ 15ನೇ ಹಣಕಾಸು ಯೋಜನೆಯ ಕಾಮಗಾರಿ, ಅನುದಾನವನ್ನು ಸಾಮಾನ್ಯ ಸಭೆ ಕರೆದು ಚರ್ಚಿಸದೆ, ಕನಿಷ್ಠ ಸದಸ್ಯರ ಗಮನಕ್ಕೂ ತಾರದೆ

ಏಕಪಕ್ಷಿಯವಾಗಿ ತಮಗೆ ಗೊತ್ತಿರುವ ಏಜೆನ್ಸಿಗೆ ಹಣ ಜಮೆ ಮಾಡಿದ್ದಾರೆ ಇದು ಅಧಿಕಾರಿದ ದುರ್ಬಳಕೆ ಎಂದು ಪರಿಗಣಿಸಲು ಆಗ್ರಹಿಸಿದರು. ತಕ್ಷಣವೇ ಪಿಡಿಒ ಅವರಿಗೆ ಖಾತೆಯಲ್ಲಿರುವ 15ನೇ ಹಣಕಾಸು ಯೋಜನೆಯ ಅನುದಾನ ವರ್ಗಾವಣೆ ಮಾಡ ಬಾರದು ಸಭೆ ಮಾಡಿ ಸದಸ್ಯರ ವಿಶ್ವಾಸಕ್ಕೆ ಪಡೆದು ಮಂಜೂರಾತಿ ಪಡೆಯಲು ಸೂಚಿಸಬೇಕು ಎಂದು ಕೋರಿದರು.

ಈ ಬಗ್ಗೆ ತಾಲೂಕು ಪಂಚಾಯಿತಿ ಇಒ ಅವರಿಗೆ ಸೂಚಿಸಿ ಪಿಡಿಒಗೆ ಕಟ್ಟುನಿಟ್ಟಿನ ಸೂಚನೆ ನೀಡುವುದಾಗಿ ಸಿಇಒ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಪಂಚಾಯಿತಿಯ ಸದಸ್ಯರಾದ ಸಿದ್ದಲಿಂಗಯ್ಯ, ಶಶಿಕಲಾ, ಲಕ್ಷ್ಮೀ, ಸುನಿತಾ, ಹನುಮಂ ತಮ್ಮ, ಗಾಯತ್ರಿ, ತಾಯಮ್ಮ, ಜಯದೇವಿ, ಪಾರ್ವತಿ ಸೇರಿ ಮುಖಂಡರಿದ್ದರು.

ಜಾಗೀರ ವೆಂಕಟಾಪೂರು ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿ ವಿರುದ್ದ ಕ್ರಮ ವಹಿಸಲು ಸದಸ್ಯರು, ಮುಖಂಡರು ದೂರು ಸಲ್ಲಿಸಿದ್ದಾರೆ.

15 ದಿನಗಳ ಕಾಲ ಖಾದಿ ವಸ್ತು ಪ್ರದರ್ಶನ, ಮಾರಾಟ ಮೇಳಕ್ಕೆ ಚಾಲನೆ

ಖಾದಿ ವಸ್ತುಗಳ ಬಳಕೆಗೆ ಬಸನಗೌಡ ಸಲಹೆ

ರಾಯಚೂರು: ಎಲ್ಲರೂ ಖಾದಿ ಬಟ್ಟೆ ಧರಿಸುವ ಮೂಲಕ ಖಾದಿ ಗ್ರಾಮೋದ್ಯೋಗ ಉಳಿಸಲು ಪ್ರಯತ್ನ ಮಾಡಬೇಕೆಂದು ಕರ್ನಾಟಕ ರಾಜ್ಯ ಖಾದಿ ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಹಾಗೂ ಮಸ್ಕಿ ಶಾಸಕ ಬಸನಗೌಡ ತುರ್ವಿಹಾಳ ಸಲಹೆ ಮಾಡಿದರು.

ಅವರು ನಗರದ ವೀರಶೈವ ಕಲ್ಯಾಣ ಮಂಟಪದಲ್ಲಿ ಎರಡು ಸಪ್ತಾಹಗಳ ಕಾಲ ನಡೆಯಲಿರುವ ಖಾದಿ ಗ್ರಾಮೋದ್ಯೋಗ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳ ಉದ್ಘಾಟಿಸಿ ಮಾತನಾಡಿ, ಸ್ವಾತಂತ್ರ್ಯ ಪೂರ್ವದಿಂದಲೂ ಮಹಾತ್ಮಗಾಂಧಿಯವರು ಖಾದಿ ಸ್ವತಃ ನೇಯ್ದು ಮತ್ತು ಬಳಕೆ ಮಾಡಿ ದೇಶದ ಜನರಲ್ಲಿ ಖಾದಿ ಉತ್ಪನ್ನದ ಮಹತ್ವ ಸಾರಿದದ್ದಲ್ಲದೆ, ಗ್ರಾಮೀಣ ಪ್ರದೇಶದಲ್ಲಿ ಗುಡಿ ಕೈಗಾರಿಕೆಗಳ ಸ್ಥಾಪನೆಗೆ ಪ್ರೇರಣೆ ನೀಡಿದ್ದರು. ಅದನ್ನು ಈಗ ಮತ್ತಷ್ಟು ಬೆಳೆಸುವ ಅಗತ್ಯ ಇದೆ ಎಂದರು.

ಆಧುನಿಕತೆ ಬೆಳೆದಂತೆ ಖಾದಿಯ ಬಗ್ಗೆ ಒಲವು ಕಡಿಮೆಯಾಗುತ್ತಿದೆ. ಖಾದಿ ಎಲ್ಲಾ ವಾತಾವರಣಕ್ಕೂ ಹೊಂದಿಕೊಳ್ಳುವ ಉಡುಪಾಗಿದ್ದು, ಅದನ್ನು ಎಲ್ಲರೂ ಮಂಡಳಿ ವತಿಯಿಂದ ಗ್ರಾಮೀಣ ಪ್ರದೇಶದಲ್ಲಿ ಗುಡಿ ಕೈಗಾರಿಕೆ ಸ್ಥಾಪಿಸಲೂ ಸಹ ಸಾಲ ಸೌಲಭ್ಯ ನೀಡಲಾಗುತ್ತಿದೆ. ಇದರ ಸೌಲಭ್ಯ ಪಡೆದು ನಿರುದ್ಯೋಗ ಯುವಜನರು ಸ್ವ ಉದ್ಯೋಗ ಸ್ಥಾಪನೆ ಮಾಡಿ ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗಗಳನ್ನು ಸ್ಥಾಪಿಸುವಂತೆ ಸಲಹೆ ಮಾಡಿದರು.

ನಗರದ ವೀರಶೈವ ಕಲ್ಯಾಣ ಮಂಟಪದಲ್ಲಿ ಎರಡು ಸಪ್ತಾಹಗಳ ಕಾಲ ನಡೆಯಲಿರುವ ಖಾದಿ ಗ್ರಾಮೋದ್ಯೋಗ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳ ನಡೆಯಿತು.

> 1952 ರಲ್ಲಿ ಖಾದಿ ಮಂಡಳಿ ಸ್ಥಾಪನೆಗೊಂಡು ಅಲ್ಲಿಂದ ಇಲ್ಲಿಯವರೆಗೆ ಖಾದಿ ಉತ್ಪನ್ನಗಳಿಗೆ ಉತ್ತೇಜನ ಮತ್ತು ಮಾರುಕಟ್ಟೆ ಒದಗಿಸುವ ಕಾರ್ಯ ಮಾಡುತ್ತಿದೆ.
>
> -ಎಂ.ಟಿ.ವೆಂಕಟೇಶ್, ಕಾರ್ಯನಿರ್ವಾಹಕ ಅಧಿಕಾರಿ

ಸೇವಾ ಪ್ರಜ್ಞೆ ಬೆಳೆಸುವ ಎನ್‌ಎಸ್‌ಎಸ್ ಶಿಬಿರ

ರಾಯಚೂರು: ರಾಷ್ಟ್ರೀಯ ಸೇವಾ ಯೋಜನಾ ದಿನದ ಅಂಗವಾಗಿ ರಾಯಚೂರು ವಿಶ್ವವಿದ್ಯಾಲಯದ ಕೃಷ್ಣತುಂಗಾ ಆವರಣದಲ್ಲಿ ವಿವಿಯ ಎನ್‌ಎಸ್‌ಎಸ್ ಘಟಕದ ವತಿಯಿಂದ ಇತ್ತೀಚಿಗೆ 'ಸ್ವಚ್ಛತೆಯೇ ಸೇವೆ' ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಶ್ರಮಾದಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಮೌಲ್ಯಮಾಪನ ಕುಲಸಚಿವರಾದ ಪ್ರೊ. ಯರಿಸ್ವಾಮಿ.ಎಂ ಅವರು, ಸ್ವಚ್ಛ, ಸುಂದರ ಹಾಗೂ ಆರೋಗ್ಯಕರ ಪರಿಸರ ಪ್ರತಿಯೊಬ್ಬ ನಾಗರೀಕನ ಹಕ್ಕು ಜೊತೆಗೆ ಜವಾಬ್ದಾರಿ ಕೂಡ ಹೌದು. ವಿದ್ಯಾರ್ಥಿಗಳಲ್ಲಿ ನಾಗರೀಕ ಪ್ರಜ್ಞೆಯನ್ನು ಬೆಳೆಸುವುದು ಶಿಕ್ಷಣದ ಮೂಲ ಉದ್ದೇಶಗಳಲ್ಲಿ ಒಂದಾಗಿರುವುದರಿಂದ ಸ್ವಚ್ಛತೆ, ಶ್ರಮಾದಾನ ಕಲಿಸಿಕೊಡುವ ರಾಷ್ಟ್ರೀಯ ಸೇವಾ ಯೋಜನೆಯು ನಮ್ಮಲ್ಲಿ ಸೇವಾ ಮನೋಭಾವವನ್ನು ಬೆಳೆಸುತ್ತದೆ. ಇದೇ ಕಾರಣಕ್ಕೆ ಶಾಲಾ-ಕಾಲೇಜುಗಳನ್ನೊಳಗೊಂಡಂತೆ ವಿಶ್ವವಿದ್ಯಾಲಯಗಳಲ್ಲಿ ಎನ್‌ಎಸ್‌ಎಸ್ ಘಟಕವನ್ನು ಸ್ಥಾಪಿಸಿ ನಡೆಸುವುದನ್ನು ಸರಕಾರ ಕಡ್ಡಾಯಗೊಳಿಸಿದೆ. ಈ ಸಂದರ್ಭದಲ್ಲಿ ವಿದ್ಯಾರ್ಥಿ ಕಲ್ಯಾಣಾಧಿಕಾರಿಗಳು ಹಾಗೂ ಎನ್‌ಎಸ್‌ಎಸ್ ಸಂಯೋಜನಾಧಿಕಾರಿಗಳಾದ ಡಾ.ಜಿ.ಎಸ್.ಬಿರಾದಾರ್, ನಾಗವೇಣಿ.ವಿ.ಸರೋದೆ, ಶಿವರಾಜ್ ಹರವಿ, ಮೈ ಭಾರತ್ ಪೋರ್ಟಲ್ನ ಸಂಯೋಜಕರಾದ ಡಾ. ಮಂಜುನಾಥ್, ಡಾ. ಶ್ರೀಮತ್ ಸುಧೀರ್, ಅಭಿಯಂತರ ಪಂಪಾಪತಿ, ಡಾ. ವೆಂಕಟೇಶ್. ಉಪಸ್ಥಿತರಿದ್ದರು.

ಜನಸ್ಪಂದನ ಅರ್ಜಿಗೆ ಸಕಾಲಕ್ಕೆ ಪರಿಹಾರ ಒದಗಿಸಿ

ಕುಷ್ಟಗಿ: ಜಿಲ್ಲೆ ಹಾಗೂ ಎಲ್ಲ ತಾಲೂಕು ಮಟ್ಟದಲ್ಲಿ ಜನಸ್ಪಂದನ ಕಾರ್ಯಕ್ರಮ ಆಯೋಜಿಸುವುದರೊಂದಿಗೆ ಜನರ ಸಮಸ್ಯೆ ಪರಿಹರಿಸುವುದು ಕಾರ್ಯಕ್ರಮದ ಮೂಲ ಉದ್ದೇಶ ಎಂದು ಜಿಲ್ಲಾಧಿಕಾರಿ ನಲಿನ್ ಅತುಲ್ ಹೇಳಿದರು.

ತಾಲೂಕಿನ ಹನುಮನಾಳ ಗ್ರಾಮದ ಸರಕಾರಿ ಶಾಲೆ ಆವರಣದಲ್ಲಿ ಜನಸ್ಪಂದನ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಂಗಳವಾರ ಮಾತನಾಡಿದರು.

ಜನರು ಸಲ್ಲಿಸಿದ ಅರ್ಜಿಗೆ ನಿಗದಿತ ಕಾಲದಲ್ಲಿ ಪರಿಹಾರ ಒದಗಿಸಲಾಗುವುದು. ಅಲ್ಲದೇ ಯಾವ ಕ್ರಮ ಕೈಗೊಂಡಿದ್ದಾರೆ ಎಂಬುದನ್ನು ಜನರು ಆನ್‌ಲೈನ್ ಮೂಲಕ ಪರಿಶೀಲಿಸಲು ಅನುಕೂಲವಾಗುವಂತೆ ಐ.ಪಿ.ಜಿ.ಆರ್.ಎಸ್ ನಲ್ಲಿ ಅಪ್ಲೋಡ್ ಮಾಡಲಾಗುವುದು. ಇದರಿಂದ ಜನರು ಕಚೇರಿಗೆ ಅಲೆದಾಡುವುದನ್ನು ತಪ್ಪಿಸುವುದರ ಜತೆಗೆ ಆನ್‌ಲೈನ್ ಮೂಲಕ ಪರಿಶೀಲಿಸಲು ಅನುಕೂಲ ಮಾಡಿಕೊಡಲಾಗುತ್ತಿದ್ದು ಇದರ ಸದುಪಯೋಗ ಪಡಿಸಿಕೊಳ್ಳಬೇಕು. ಜನಸ್ಪಂದನ ಕಾರ್ಯಕ್ರಮದಲ್ಲಿ ಸ್ವೀಕೃತವಾಗುವ ಸಾರ್ವಜನಿಕ ಅಹವಾಲುಗಳಿಗೆ ಸಂಬಂಧಿಸಿ, ಇಲಾಖೆ ಅಧಿಕಾರಿಗಳು ತ್ವರಿತವಾಗಿ ಸ್ಪಂದಿಸುವ ಮೂಲಕ ಸಮಸ್ಯೆಗೆ ಪರಿಹಾರ ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ಸೂಚಿಸಿದರು.

ಜಿಪಂ ಸಿಇಒ ರಾಹುಲ್ ರತ್ನಂ ಪಾಂಡೆ ಮಾತನಾಡಿದರು. ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಉಪ ವಿಭಾಗಧಿಕಾರಿ ಕ್ಯಾ. ಮಹೇಶ ಮಲಗಿತ್ತಿ, ತಹಸೀಲ್ದಾರ್ ಅಶೋಕ್ ಸಿಗ್ಗಾವಿ, ತಾಪಂ ಇಒ ಪಂಪಾಪತಿ ಹಿರೇಮಠ, ಗ್ರಾಪಂ ಅಧ್ಯಕ್ಷೆ ಸುಜಾತ ತೆವರಪ್ಪ ಚಿಕ್ಕನಾಳ ಸೇರಿ ಇತರರು ಭಾಗವಹಿಸಿದ್ದರು. ಇದ್ದರು.

ಕುಷ್ಟಗಿ ತಾಲೂಕು ಹನುಮನಾಳ ಗ್ರಾಮದ ಸರಕಾರಿ ಶಾಲೆ ಆವರಣದಲ್ಲಿ ನಡೆದ ಜನಸ್ಪಂದನ ಕಾರ್ಯಕ್ರಮದಲ್ಲಿ ಕೃಷಿ ಯಂತ್ರೋಪಕರಣ ಮಾರಾಟ ಮೇಳವನ್ನು ಡಿಸಿ ವೀಕ್ಷಿಸಿದರು.

ಮಹಾಸಭಾ ಘಟಕಕ್ಕೆ ಪದಾಧಿಕಾರಿಗಳ ಆಯ್ಕೆ

ಮಾನ್ವಿ: ಪಟ್ಟಣದ ಶ್ರೀ ಒಳಬಳ್ಳಾರಿ ಉಚಿತ ಪ್ರಸಾದ ನಿಲಯದ ಸಭಾಂಗಣದಲ್ಲಿ ನಡೆದ ಅಖಿಲಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಘಟಕದ ಕಾರ್ಯಕಾರಿಣಿ ಸಮಿತಿಯ ಸಭೆಯಲ್ಲಿ ಅವಿರೋಧವಾಗಿ ಅಖಿಲಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಘಟಕದ ವಿವಿಧ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ತಾ.ಘಟಕದ ಅಧ್ಯಕ್ಷರಾದ ಅರುಣ ಚಂದಾ ಸನ್ಮಾನಿಸಿ ಗೌರವಿಸಿ ಮಾತನಾಡಿ,ತಾ. ಗೌರವಾಧ್ಯಕ್ಷರನ್ನಾಗಿ ಕಲ್ಮಠದ ಶ್ರೀ ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳನ್ನು ,ಉಪಾಧ್ಯಕ್ಷರನ್ನಾಗಿ ರಂಗನಗೌಡ ಮಾಲಿಪಾಟೀಲ್ ಗೋರ್ಕಲ್, ಪ್ರಧಾನ ಕಾರ್ಯದರ್ಶಿ ಶಿವಲಿಂಗಯ್ಯಸ್ವಾಮಿ ಜಂಬಲದಿನ್ನಿ,ಕಾರ್ಯದರ್ಶಿಯಾಗಿ ರವಿಕುಮಾರ ಪಾಟೀಲ್ ಚಿಮ್ಮಾಲಪುರ್,ಖಜಾಂಚಿಯಾಗಿ ಶರಣಬಸವ ಮುಂದಿನಮನೆ ಹಾಗೂ ಕಾನೂನು ಸಲಹೆಗಾರರಾಗಿ ಶರಣಬಸವ ವಕೀಲರನ್ನು, ಮಹಿಳಾ ಘಟಕದ ತಾ.ಅಧ್ಯಕ್ಷರನ್ನಾಗಿ ಅನುರಾಧ ಸೂಗಪ್ಪ ಹರವಿ, ತಾ.ಉಪಾಧ್ಯಕ್ಷರನ್ನಾಗಿ ದಾನೇಶ್ವರಿ ಹಿರೇಮಠ,ಕಾರ್ಯದರ್ಶಿಯಾಗಿ ನಿರ್ಮಲ ಚನ್ನಬಸವ,ಕಾರ್ಯಕಾರಿ ಸದಸ್ಯರಾಗಿ ಅಶ್ವಿನಿ ಸಂಗಮೇಶ ಮುಧೋಳ ರವರನ್ನು ಆಯ್ಕೆ ಮಾಡಲಾಗಿದ್ದು ಮುಂದಿನ ದಿನಗಳಲ್ಲಿ ಆಯ್ಕೆಯಾದ ಎಲ್ಲಾ ಪದಾಧಿಕಾರಿಗಳು ತಾಲೂಕಿನ ವೀರಶೈವ ಲಿಂಗಾಯತ ಸಮುದಾಯವನ್ನು ಸಂಘಟಿಸುವ ಮೂಲಕ ಸಮಾಜವನ್ನು ಬಲಪಡಿಸುವಂತೆ ಕರೆ ನೀಡಿದರು.

ಸಮಾಚಾರ ಸಣ್ಣದಲ್ಲ

ರೈತರಿಗೆ ಮೋಸ: ಆರೋಪಿಗಳ ಬಂಧನ

ಹೊಸಪೇಟೆ: ರೈತರಿಗೆ ಕತ್ತೆ ನೀಡಿ ಅವರಿಂದ ಹಾಲು ಖರೀದಿಸುವ ವ್ಯವಹಾರ ನಡೆಸುತ್ತಿದ್ದ ಜೆನ್ನಿಮಿಲ್ಕ್ ಕಂಪನಿಯಿಂದ 318ಕ್ಕೂ ಅಧಿಕ ರೈತರಿಗೆ ಮೋಸ ಹೋಗಿರುವ ಆರೋಪಕ್ಕೆ ಸಂಬಂಧಿಸಿದಂತೆ ಪೊಲೀಸರು ಮೂವರು ಆರೋಪಿಗಳನ್ನು ಸೋಮವಾರ ಬಂಧಿಸಿದ್ದಾರೆ. ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಆಂಧ್ರಪ್ರದೇಶದ ನೆಲ್ಲೂರು ಜಿಲ್ಲೆಯ ವೇದಯ ಪಾಳ್ಯಂ ಗ್ರಾಮದ ನೂತಲಪಾಟಿ ಮುರುಳಿ (43), ಕಂಪನಿಯ ವ್ಯವಸ್ಥಾಪಕ ಕಡಪ ಜಿಲ್ಲೆಯ ಗಾಲೀವೀಡು ಗ್ರಾಮದ ಕಾವಲಪಲ್ಲಿ ಉಮಾಶಂಕರ್ ರೆಡ್ಡಿ (33) ಹಾಗೂ ಕಂಪನಿಯ ಸೂಪರ್‌ವೈಸರ್ ಆಗಿದ್ದ ಕಡಪ ಜಿಲ್ಲೆಯ ಪೋರ್ ಮಾಮಿಲ್ಲ ಮಂಡಲಂ ಗ್ರಾಮದ ಸೈಯದ್ ಮಹಮ್ಮದ್ ಗೌಸ್ (27) ಬಂಧಿತ ಆರೋಪಿಗಳು. ಕಂಪನಿಯ ಐದು ಬ್ಯಾಂಕ್ ಖಾತೆಗಳನ್ನು (ಹೊಸಪೇಟೆಯಲ್ಲಿ ಮೂರು, ಅಂಧ್ರದಲ್ಲಿ ಎರಡು) ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಆರೋಪಿಗಳನ್ನು ಪೊಲೀಸ್ ಕಸ್ಟಡಿಗೆ ಪಡೆದ ಬಳಿಕ ಇನ್ನಷ್ಟು ಮಾಹಿತಿ ಲಭಿಸಬಹುದು, ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ತಿಳಿಸಿದ್ದಾರೆ.

ಶ್ರೀದೇವಿ ಮಹಾತ್ಮೆ ಪುರಾಣ ಪ್ರವಚನ

ಬಳ್ಳಾರಿ: ಜಿಲ್ಲೆಯ ಕುರುಗೋಡು ತಾಲೂಕು, ದಮ್ಮೂರಿನ ಶ್ರೀ ವೆಂಕಾವಧೂತರ ಮಠದಲ್ಲಿ ಶರನ್ನವರಾತ್ರಿಯ ಶುಭ ಸಂದರ್ಭದಲ್ಲಿ ಶ್ರೀದೇವಿ ಮಹಾತ್ಮೆ ಪುರಾಣ ಪ್ರವಚನವನ್ನು ಆಯೋಜಿಸಲಾಗಿದೆ. ಪುರಾಣ ಪ್ರವಚನವನ್ನು ನಗರದ ಶಿಕ್ಷಕ ಬಸವರಾಜ ಅಮಾತಿ, ಸಂಗೀತ ಗಾಯನ ಎಂ.ಎಂ ಶಾಂತಯ್ಯ ಸಿರುಗುಪ್ಪ, ತಬಲಾ ಶ ವಿರೂಪಾಕ್ಷಪ್ಪ ದೇವಲಾಪುರ. ನೆರವೇರಿಸಿದರು. ವೆಂಕಾವಧೂತ ಸೇವಾ ಟ್ರಸ್ಟ್ ಕಾರ್ಯಕ್ರಮವನ್ನು ಆಯೋಜಿಸಿದೆ.

ದಸರಾ ಉತ್ಸವಕ್ಕೆ ಪ್ರತಿಭಾ ಪುರಸ್ಕಾರ

ಬಳ್ಳಾರಿ: ನಗರದ ದೊಡ್ಡ ಮಾರುಕಟ್ಟೆಯ ಹತ್ತಿರ ಶ್ರೀಸಾಲೇಶ್ವರ ದೇವಸ್ಥಾನದಲ್ಲಿ ಶ್ರೀ.1008 ಜಗದ್ಗುರು ಬಸವರಾಜ ಪಟ್ಟದಾರ್ಯ ಮಹಾಸ್ವಾಮಿಗಳು ಪಟ್ಟಸಾಲಿ ನೇಕಾರ ಪೀಠ ಗುಳೇದಗುಡ್ಡ. ದಸರಾ ಉತ್ಸವ ಅಂಗವಾಗಿ ಪ್ರತಿಭಾ ಪುರಸ್ಕಾರ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿದರು ಈ ಸಂದರ್ಭದಲ್ಲಿ ಡಾ.ಹೆಚ್ .ತಿಪ್ಪೇಸ್ವಾಮಿ. ಎಂ.ಎನ್.ಸಿಂಧೂರ. ಸಾಲೇಶ್ವರ ದೇವಸ್ಥಾನ ಆಡಳಿತ ಮಂಡಳಿಯ ಸದಸ್ಯರು ಭಾಗವಹಿಸಿದ್ದರು.

ನವರಾತ್ರಿಗೆ ಗಾಯತ್ರಿ ದೇವಿ ಅಲಂಕಾರ

ಬಳ್ಳಾರಿ: ಸಿರುಗುಪ್ಪ ರೋಡ್ ಅವಂಬಾವಿ ಕಾಲುವೆ ಹತ್ತಿರ ಗುರು ಶಾಂತಪ್ಪ ಲೇಔಟ್ನಲ್ಲಿರುವ ಸೀತಾರಾಮ ಆಶ್ರಮದಲ್ಲಿ ದಸರಾ ನವರಾತ್ರಿ ಹಬ್ಬದ ಪ್ರಯುಕ್ತ ಶ್ರೀಗಾಯತ್ರೀ ದೇವಿಗೆ ಅಲಂಕಾರ ಮಾಡಲಾಗಿತ್ತು. ಪೂಜೆಯಲ್ಲಿ ಗಾಯತ್ರೀ ದೇವಿ ಸಹಸ್ರ ನಾಮ, ಕುಂಕುಮ ಪೂಜೆ, ಪುಷ್ಪಾರ್ಚನೆ ನೆರವೇರಿಸಿದರು. ಹಾಗೆಯೇ ನವದುರ್ಗ, ದಶ ಮಹಾವಿದ್ಯೆ ಪೂಜೆ ಹೋಮಗಳನ್ನು ನಡೆಸಲಾಗಿದೆ. ವಾಸ್ತು, ಜ್ಯೋತಿಷ್ಯ ಪಂಡಿತರು ಸೀತಾರಾಮ ಆಶ್ರಮಮ್ ಟ್ರಸ್ಟ್ ನ ಅಧ್ಯಕ್ಷ ನೇತಿ ಸೀತಾರಾಮಯ್ಯ ಶರ್ಮ ಸಿದ್ಧಾಂತಿ ಅವರ ನೇತೃತ್ವದಲ್ಲಿ ಕಾರ್ಯಕ್ರಮಗಳು ಜರುಗಿದವು.

ಶ್ರೀ ಕೃಷ್ಣ ಅರ್ಜುನ ಸನ್ನಿವೇಶ ಪ್ರದರ್ಶನ

ಕಂಪ್ಲಿ: ತಾಲೂಕಿನ ಮಾವಿನಹಳ್ಳಿ ಗ್ರಾಮದ ಶ್ರೀಸಿದ್ದೇಶ್ವರ ರಂಗ ಸಂಸ ಕಲ್ಚರಲ್ ಟ್ರಸ್ಟ್ ಮಾವಿನಹಳ್ಳಿ 'ವಿಶ್ವವಿಖ್ಯಾತ ಮೈಸೂರು ದಸಾರ'ದಲ್ಲಿ-2024 ಬಳ್ಳಾರಿ ಜಿಲ್ಲೆಯ ಗ್ರಾಮೀಣ ಸೊಗಡು 'ಬಯಲಾಟ' ವೀರ ಅಭಿಮನ್ಯು ಕಾಳಗದಲ್ಲಿ 'ಶ್ರೀ ಕೃಷ್ಣ ಅರ್ಜುನ' ಸನ್ನಿವೇಶ ಪ್ರಸಂಗಗಳು ಪ್ರದರ್ಶನವಾಯಿತು. ಬಹಳಷ್ಟು ಸೊಬಗನ್ನು ಮೈಸೂರಿನಲ್ಲಿ ಬಯಲಾಟದ ಆಂಗೀಕ,ವಾಚಿಕ,ಆಹಾರ್ಯ ಮತ್ತು ಸ್ವಾತಿಕದಿಂದ ಪ್ರೇಕ್ಷಕರ ಕಣ್ಮನ ಸೆಳೆಯಿತು. ಬಯಲಾಟದ ಹಾರ್ಮೂನಿಯಂ ಮಾಸ್ಟರ್ ಶ್ರೀ ವೆಂಕಟೇಶ, ಬಾಲಕೃಷ್ಣ ಪಾತ್ರವನ್ನು ಬಿ.ಕೆ ತಿಮ್ಮರಾಜ, ಶ್ರೀ ಕೃಷ್ಣ ಪಾತ್ರವನ್ನು ಬಿ ಕೆ ಸಿದ್ದಪ್ಪ ಧರ್ಮಪ್ಪ, ಅರ್ಜುನ ಪಾತ್ರವನ್ನು ಕೊಳ್ಳಿ ವಿರೇಶ, ಸಾರಥಿ ಶ್ರೀ ಸಿದ್ದೇಶ್ವರ ರಂಗ ಸಂಸ ಕಲ್ಚರಲ್ ಟ್ರಸ್ಟಿನ ಕಾರ್ಯದರ್ಶಿ ಕುರುಬರ ಹೇಮೇಶ್ವರ ನಿರ್ವಹಿಸಿದರು. ಮುಮ್ಮೇಳ ಗಾಯಕರು ಶ್ರೀ ಬಾದನಹಟ್ಟಿ ಎ ದೊಡ್ಡಬಸಪ್ಪ,ಹಿನ್ನೆಲೆ ಗಾಯಕರು ಕುದುರೆ ಪಂಪಾಪತಿ,ಜಾನಕುಂಟೆ ಪ್ರಕಾಶ್, ಕುಬೇರ,ಮಣಿಕಂಠ,ಮಾರುತಿ ಬಿ ಕೆ,ಕುಮಾರಸ್ವಾಮಿ ಸಹಕರಿಸಿದರು.

{ಡಿ.ಕೆ.ಶಿವಕುಮಾರ} ಡಿಸಿಎಂ

ಹರಿಯಾಣ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲುವ ಆತ್ಮವಿಶ್ವಾಸವಿತ್ತು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರು ನೀಡಿರುವ ತೀರ್ಪನ್ನು ಒಪ್ಪುತ್ತೇನೆ. ಕಾಂಗ್ರೆಸ್ ಎಲ್ಲಿ ಎಡವಿದೆ ಎನ್ನುವುದನ್ನು ಪರಿಶೀಲಿಸಲಿದೆ.



87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ | ಅ.19- 20ರಂದು ಜಿಲ್ಲಾದ್ಯಂತ ಸಂಚಾರ

ಕನ್ನಡ ಜ್ಯೋತಿ ರಥಯಾತ್ರೆ ಅಗತ್ಯ ಸಿದ್ಧತೆಗೆ ಎಸಿ ಸೂಚನೆ

ಬಳ್ಳಾರಿ: 87 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅಂಗವಾಗಿ ಕನ್ನಡ ಜ್ಯೋತಿ ಹೊತ್ತ ಕನ್ನಡ ರಥಯಾತ್ರೆಯು ಅ.19 ಮತ್ತು 20 ರಂದು ಜಿಲ್ಲೆಯಾದ್ಯಂತ ಸಂಚರಿಸಲಿದ್ದು, ರಥಯಾತ್ರೆಗೆ ಗೌರಯುತವಾಗಿ ಸ್ವಾಗತ ಮತ್ತು ಬೀಳ್ಕೊಡುಗೆಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಸಹಾಯಕ ಆಯುಕ್ತ ಪ್ರಮೋದ್ ಹೇಳಿದರು.

ಜಿಲ್ಲೆಯಲ್ಲಿ ಕನ್ನಡ ಜ್ಯೋತಿ ಹೊತ್ತ ಕನ್ನಡ ರಥ ಯಾತ್ರೆಯ ಸಂಚಾರ ಹಿನ್ನಲೆಯಲ್ಲಿ ಈ ಕುರಿತು ಅಗತ್ಯ ಸಿದ್ಧತೆಗಾಗಿ ಮಂಗಳವಾರ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಏರ್ಪಡಿಸಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಅ.19 ಮತ್ತು 20 ರಂದು ಸಿರುಗುಪ್ಪ ತಾಲೂಕಿಗೆ ಆಗಮಿಸಲಿದೆ. ಕನ್ನಡ ಜ್ಯೋತಿ ಹೊತ್ತ ಕನ್ನಡ ರಥವನ್ನು ಅಲ್ಲಿನ ತಾಲೂಕು ಆಡಳಿತ ಸ್ವಾಗತಿಸಲಾಗುವುದು. ರಥವು ಸಿರುಗುಪ್ಪದಿಂದ ಕುರುಗೋಡು, ಬಳ್ಳಾರಿ, ಸಂಡೂರು, ಕಂಪ್ಲಿ ತಾಲ್ಲೂಕು ಮೂಲಕ ವಿಜಯನಗರ ಜಿಲ್ಲೆಗೆ ಸಂಚರಿಸಲಿದೆ ಎಂದು ತಿಳಿಸಿದರು.

ಆಯಾ ತಾಲೂಕುಗಳಲ್ಲಿ ಸಂಚರಿಸುವ ವ್ಯವಸ್ಥೆ ಮಾಡಬೇಕು. ನಂತರ ತಾಲ್ಲೂಕಿನ ಗಡಿ ಭಾಗಗಳಲ್ಲಿ ಬೀಳ್ಕೊಡಬೇಕು ಎಂದು ಹೇಳಿದರು.

ಕನ್ನಡ ರಥಯಾತ್ರೆ ಸಂಚರಿಸುವ ವೇಳೆಯಲ್ಲಿ ಅಚ್ಚುಕಟ್ಟಾಗಿ ಹಾಗೂ ವ್ಯವಸ್ಥಿತವಾಗಿ ಯಾವುದೇ ಅಡ್ಡಿಯಿಲ್ಲದಂತೆ ಸಂಚರಿಸಲು ಸೂಕ್ತ ವ್ಯವಸ್ಥೆ ಮಾಡಬೇಕು. ರಥಯಾತ್ರೆಯು ಆಯಾ ತಾಲೂಕುಗಳಲ್ಲಿ ಸಂಚರಿಸುವಾಗ ಮತ್ತು ವಾಸ್ತವ್ಯದ ಸ್ಥಳಗಳಲ್ಲಿ ಸೂಕ್ತ ಪೋಲಿಸ್ ಭದ್ರತೆಯನ್ನು ಒದಗಿಸಬೇಕು ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಕನ್ನಡ ಜ್ಯೋತಿ ಹೊತ್ತ ಕನ್ನಡ ರಥ ಯಾತ್ರೆಯ ಸಂಚಾರ ಕುರಿತು ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಏರ್ಪಡಿಸಿದ್ದ ಪೂರ್ವಭಾವಿ ಸಭೆ ನಡೆಸಿದರು.

ತಾಲೂಕು ಆಡಳಿತ, ಜಿಲ್ಲಾ ಸಾಹಿತ್ಯ ಪರಿಷತ್ತು ಸೇರಿದಂತೆ ಆಯಾ ತಾಲೂಕಿನ ತಾಲೂಕು ಮಟ್ಟದ ಅಧಿಕಾರಿಗಳು ಕನ್ನಡ ಪರ ಸಂಘಟನೆಗಳು, ಶಾಲಾ-ಕಾಲೇಜುಗಳ ಪ್ರಾಂಶುಪಾಲರು ಹಾಗೂ ವಿವಿಧ ಸಂಘಟನೆಗಳ ಪೂರ್ವಭಾವಿ ಸಭೆ ಏರ್ಪಡಿಸುವ ಮೂಲಕ ಕನ್ನಡ ಜ್ಯೋತಿ ರಥಯಾತ್ರೆಯನ್ನು ಯಶಸ್ವಿಯಾಗಿ ಆಯೋಜಿಸಬೇಕು ಮತ್ತು ಎಲ್ಲರೊಂದಿಗೆ ಸೂಕ್ತ ಸಮನ್ವಯ ಸಾಧಿಸಿ, ರಥಯಾತ್ರೆಯನ್ನು ಯಶಸ್ವಿಗೊಳಿಸಲು ಕ್ರಮವಹಿಸಬೇಕು ಎಂದು ಸೂಚನೆ ನೀಡಿದರು.

> ಕನ್ನಡ ಜ್ಯೋತಿ ಹೊತ್ತ ಕನ್ನಡ ರಥಯಾತ್ರೆಯು ಯಶಸ್ವಿಯಾಗಿ ಜರುಗಬೇಕು. ರಥಯಾತ್ರೆ ಆಗಮಿಸಿದಾಗ ಸ್ಥಳೀಯ ಶಾಸಕರು, ಜನಪ್ರತಿನಿಧಿಗಳು, ಕನ್ನಡಪರ, ರೈತ, ಕಾರ್ಮಿಕ ಸಂಘಟನೆಗಳು, ವಿದ್ಯಾ ಸಂಸ್ಥೆಗಳು, ಎನ್‌ಸಿಸಿ., ಎನ್‌ಎಸ್ ಎಸ್, ಸ್ಕೌಟ್ಸ್ ಮತ್ತು ಗೈಡ್ಸ್, ಸ್ತ್ರೀ-ಶಕ್ತಿ ಸಂಘಗಳು ಸೇರಿದಂತೆ ಇತರ ಸಂಘ-ಸಂಸ್ಥೆಗಳು ಹಾಗೂ ಸಾರ್ವಜನಿಕರನ್ನು ಜತೆಗೂಡಿಸಿಕೊಂಡು ಕನ್ನಡ ರಥಕ್ಕೆ ಗೌರವಯುತವಾಗಿ ಸ್ವಾಗತಿಸಬೇಕು.
>
> -ಪ್ರಮೋದ್, ಎಸಿ

ಸಭೆಯಲ್ಲಿ ವಿವಿಧ ಕನ್ನಡ ಪರ ಸಂಘಟನೆಗಳ ಪದಾಧಿಕಾರಿಗಳು, ಕನ್ನಡ ಜ್ಯೋತಿ ಹೊತ್ತ ಕನ್ನಡ ರಥ ಯಾತ್ರೆಯ ಸಂಚಾರ ಯಶಸ್ಸಿಗೆ ತಮ್ಮ ಸಲಹೆ-ಸೂಚನೆ ನೀಡಿದರು.

ಈ ವೇಳೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ಜಿಲ್ಲಾಧಿಕಾರಿ ಕಚೇರಿಯ ತಹಶೀಲ್ದಾರರಾದ ಗೌಸಿಯ ಅವರು ಸೇರಿದಂತೆ ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು, ಮತ್ತೀತರರು ಉಪಸ್ಥಿತರಿದ್ದರು.

ಅವಳಿ ಜಿಲ್ಲೆ ರೈಲ್ವೆ ಅಭಿವೃದ್ಧಿಗೆ ಆಗ್ರಹ

ಬಳ್ಳಾರಿ-ಹೊಸಪೇಟೆ ಭಾಗದ ರೈಲ್ವೆ ಸಾರಿಗೆ ಅಭಿವೃದ್ಧಿಗೆ ಆಗ್ರಹಿಸಿ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಅಲ್ಲಂ ಪ್ರಶಾಂತ್‌ಗೆ ಮನವಿ ಪತ್ರ ಸಲ್ಲಿಸಿದ್ದರು.

ಬಳ್ಳಾರಿ: ಬಳ್ಳಾರಿ-ಹೊಸಪೇಟೆ ಭಾಗದ ರೈಲ್ವೆ ಸಾರಿಗೆ ಅಭಿವೃದ್ಧಿಗೆ ಆಗ್ರಹಿಸಿ ರೈಲ್ವೆ ಖಾತೆ ರಾಜ್ಯ ಸಚಿವ ಸೋಮಣ್ಣ ಅವರಿಗೆ ಕೆಪಿಸಿಸಿ ಮಾಜಿ ಅಧ್ಯಕ್ಷರು ಹಾಗೂ ಮಾಜಿ ಸಚಿವ ಅಲ್ಲಂ ವೀರಭದ್ರಪ್ಪ ಹಾಗೂ ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಅಲ್ಲಂ ಪ್ರಶಾಂತ್ ಮನವಿ ಪತ್ರ ಸಲ್ಲಿಸಿದ್ದಾರೆ. ಮನವಿ ಪತ್ರದಲ್ಲಿ ಬೆಂಗಳೂರು-ಚೆನ್ನೈಗೆ ಪಶ್ಚಿಮ ಮತ್ತು ಉತ್ತರ ಭಾಗಗಳಿಗೆ ಅನೇಕ ರೈಲುಗಳು ಸೇವೆ ಸಲ್ಲಿಸುತ್ತಿವೆ. ಬೆಂಗಳೂರು-ಗುಂತಕಲ್ ನಡುವೆ ಸಂಚಾರವನ್ನು ಸುಗಮಗೊಳಿಸಲು ಮತ್ತು ಅಂತರವನ್ನು ಕಡಿಮೆ ಮಾಡಲು, ತುಮಕೂರು-ಚಳ್ಳಕೆರೆ ನಡುವಿನ ಹೊಸ ಸಂಪರ್ಕವನ್ನು ಸ್ಥಾಪಿಸಬೇಕು. ಈಗಾಗಲೇ ಚಳ್ಳಕೆರೆ-ಬಳ್ಳಾರಿ-ಗುಂತಕಲ್ ಜಂಕ್ಷನ್ ನಡುವೆ ಸಂಪರ್ಕವಿದೆ. ಅನೇಕ ರೈಲುಗಳು ಬೆಂಗಳೂರು-ಹುಬ್ಬಳ್ಳಿ ವಿಭಾಗದಿಂದ ಗುಂತಕಲ್‌ಗೆ ತಲುಪುತ್ತಿವೆ ಮತ್ತು ರಾಯಚೂರು-ಗುಲ್ಬರ್ಗಾ- ಹೈದ್ರಾ ಬಾದ್ -ಮುಂಬೈ ಮತ್ತು ಇತರ ಸ್ಥಳಗಳಿಗೆ ಸಂಪರ್ಕಿಸುತ್ತಿವೆ. ತುಮ ಕೂರು-ಬಳ್ಳಾರಿ ಸಂಪರ್ಕಿಸಿದ ನಂತರ, ಬಳ್ಳಾರಿ- ಆದೋನಿ ಮಾರ್ಗವನ್ನು ಸಂಪರ್ಕಿಸಬಹುದು. ಈ ಮೂಲಕ ಅನೇಕ ರೈಲುಗಳನ್ನು ಬೆಂಗ ಳೂರು-ಉತ್ತರ ಭಾಗಗಳಿಗೆ ತಿರುಗಿಸಬಹುದು. ಬಸವ ಎಕ್ಸ್‌ಪ್ರೆಸ್, ಕೆ.ಕೆ ಎಕ್ಸ್‌ಪ್ರೆಸ್ ಮತ್ತು ಇತರ ರೈಲುಗಳನ್ನು ಈ ಮಾರ್ಗದ ಮೂಲಕ ಸಂಪರ್ಕಿಸಬಹುದು. ಬಳ್ಳಾರಿ ಭಾಗವು ಕಬ್ಬಿಣದ ಅದಿರು ಪ್ರಸಿದ್ಧವಾಗಿದೆ. ಅಲ್ಲಿ ಕಬ್ಬಿಣ ಅದಿರನ್ನು ವಿವಿಧ ಬಂದರುಗಳು ಮತ್ತು ಭಾರತದ ವಿವಿಧ ರಾಜ್ಯಗಳಿಗೆ ರಫ್ತು ಮಾಡಲಾಗುತ್ತದೆ.

ವಾಲ್ಮೀಕಿ ಜಯಂತಿ ಅಚ್ಚುಕಟ್ಟಾಗಿ ನಡೆಯಲಿ

ಹೊಸಪೇಟೆ: ವಿಜಯನಗರ ಜಿಲ್ಲೆಯಲ್ಲಿ ಅ.17ರಂದು ಆಚರಿಸಲಾಗುವ 2024ನೇ ಸಾಲಿನ ಮಹರ್ಷಿ ವಾಲ್ಮೀಕಿ ಜಯಂತ್ಯುತ್ಸವ ಕಾರ್ಯಕ್ರಮಕ್ಕೆ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು. ಜಯಂತ್ಯುತ್ಸವ ಕಾರ್ಯಕ್ರಮವು ಅಚ್ಚುಕಟ್ಟಾಗಿ ನಡೆಯುವಂತಾಗಬೇಕು ಎಂದು ಮಹರ್ಷಿ ವಾಲ್ಮೀಕಿ ಜಯಂತ್ಯುತ್ಸವ ಸಮಿತಿ ಅಧ್ಯಕ್ಷರು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಆಡಿಟೋರಿಯಂ ಹಾಲ್‌ನಲ್ಲಿ ನಡೆದ ಜಯಂತ್ಯುತ್ಸವದ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಜಯಂತಿ ಹಿನ್ನೆಲೆಯಲ್ಲಿ ಸರಕಾರದ ಆದೇಶಗಳ ಪ್ರಕಾರ ಶಿಷ್ಟಾಚಾರ ಪಾಲಿಸಿ ಆಹ್ವಾನ ಪತ್ರಿಕೆಗಳನ್ನು ಮುದ್ರಿಸಿ ವಿತರಣೆ ಮಾಡಬೇಕು.

ಜಯಂತಿ ನಿಮಿತ್ತ ಸರಕಾರಿ ಅರೇ ಸರಕಾರಿ ಕಚೇರಿಗಳಲ್ಲಿ, ಶಾಲಾ-ಕಾಲೇಜುಗಳು ಹಾಗು ವಿಶ್ವವಿದ್ಯಾಲಯದಲ್ಲಿ ಮಹರ್ಷಿ ವಾಲ್ಮೀಕಿಯವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಬೇಕು ಎಂದು ಹೇಳಿದರು.

ಸಮಾಜದ ಮುಖಂಡ ಗುಜ್ಜಲ್ ಶ್ರೀನಾಥ ಮಾತನಾಡಿ, ಪ್ರತಿ ವರ್ಷದಂತೆ ಈ ವರ್ಷವು ಸಹ ಸಮಾರಂಭದಲ್ಲಿ ವಿಜಯನಗರ ಜಿಲ್ಲೆಯಲ್ಲಿ ಪರಿಶಿಷ್ಟ ಪಂಗಡ ಸಮುದಾಯದಲ್ಲಿ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಬೇಕು. ಅದೇ ರೀತಿ ವಿಶೇಷ ಸಾಧನೆ ತೋರಿದ ಪರಿಶಿಷ್ಟ ಪಂಗಡ ಸಮುದಾಯದ ವಿದ್ಯಾರ್ಥಿ-ಯುವಜನರು ಮತ್ತು ಗಣ್ಯರಿಗೆ ಸಹ ಸನ್ಮಾನಿಸಿ ಗೌರವಿಸಬೇಕು ಎಂದು ಸಭೆಗೆ ಸಲಹೆ ಮಾಡಿದರು.

ಸಮಾರಂಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿ ಬಾಬು ಬಿ.ಎಲ್, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ಶಾಶುಮೋದ್ದೀನ್, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮನೋಹರ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಮಂಜುನಾಥ ಎಚ್.ಎಸ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ರಾಮಚಂದ್ರಪ್ಪ ಕೆ.ಬಿ., ಸಮಾಜದ ಮುಖಂಡರಾದ ಗುಜ್ಜಲ ಗಣೇಶ, ಗೋಸಲ ಭರಮಪ್ಪ, ಇನ್ನೀತರ ಮುಖಂಡರು, ವಿವಿಧ ಸಂಘ ಸಂಸ್ಥೆಗಳ ಸದಸ್ಯರು, ಸಾರ್ವಜನಿಕರು, ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಇದ್ದರು.

ಜಿಲ್ಲಾಧಿಕಾರಿಗಳ ಕಚೇರಿಯ ಆಡಿಟೋರಿಯಂ ಹಾಲ್‌ನಲ್ಲಿ ಜಯಂತ್ಯುತ್ಸವದ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಮಾತನಾಡಿದರು.

> ನಗರದ ಮಹರ್ಷಿ ವಾಲ್ಮೀಕಿ, ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಶ್ರೀವೀರ ಮದಕರಿ ನಾಯಕ ವೃತ್ತ ಸೇರಿದಂತೆ ವಿವಿಧ ಕಡೆಗಳಲ್ಲಿ ದೀಪಾಲಂಕಾರ ಮಾಡಬೇಕು. ಸರ್ಕಲ್‌ಗಳ ಸುತ್ತಲು ಸ್ವಚ್ಛತೆ ಕಾಪಾಡಲು, ಕಾರ್ಯಕ್ರಮದ ಆವರಣದಲ್ಲಿ ಶುಚಿತ್ವ ಕಾರ್ಯ ನಡೆಸಲು ಮತ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ನಗರಸಭೆ ಪೌರಾಯುಕ್ತರಿಗೆ ಸೂಚಿಸಿದರು.
>
> -ಎಂ.ಎಸ್.ದಿವಾಕರ, ಜಿಲ್ಲಾಧಿಕಾರಿ

ಕೈಗಾರಿಕಾ ಸಂಸ್ಥೆ ಅಧ್ಯಕ್ಷರಾಗಿ ಯಶವಂತರಾಜ್

ಕೈಗಾರಿಕಾ ಸಂಸ್ಥೆಯ ನೂತನ ಅಧ್ಯಕ್ಷರಾದ ಯಶವಂತರಾಜ್ ನಾಗಿರೆಡ್ಡಿ ಅವರಿಗೆ ಬಳ್ಳಾರಿ ಡಿಸ್ಟ್ರಿಕ್ಟ್ ಇಂಡಸ್ಟ್ರಿಯಲ್ ಅಸೋಸಿಯೇಷನ್ ವತಿಯಿಂದ ಸನ್ಮಾನಿಸಿದರು.

ಬಳ್ಳಾರಿ: ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ನೂತನ ಅಧ್ಯಕ್ಷರಾದ ಯಶವಂತರಾಜ್ ನಾಗಿರೆಡ್ಡಿ ಅವರಿಗೆ ಬಳ್ಳಾರಿ ಡಿಸ್ಟ್ರಿಕ್ಟ್ ಇಂಡಸ್ಟ್ರಿಯಲ್ ಅಸೋಸಿಯೇಷನ್ ವತಿಯಿಂದ ಸನ್ಮಾನಿಸಿ, ಅಭಿನಂದಿಸಿ, ಶುಭ ಹಾರೈಸಿದ್ದಾರೆ. ಬಳ್ಳಾರಿ ಡಿಸ್ಟ್ರಿಕ್ಟ್ ಇಂಡಸ್ಟ್ರಿಯಲ್ ಅಸೋಸಿಯೇಷನ್ ಅಧ್ಯಕ್ಷ ವಿ. ರಾಮಚಂದ್ರ ಹಾಗೂ ಕಾರ್ಯದರ್ಶಿ ವಾಸುದೇವ್ ಆಚಾರ್ ಮಾತನಾಡಿ, ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಗೆ ಯುವ ಮಂದಾಳತ್ವ ಸಿಕ್ಕಿದೆ. ಈ ಅವಧಿಯಲ್ಲಿ ಸಂಸ್ಥೆಯು ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸಲಿ ಎಂದರು. ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಜಂಟಿ ಕಾರ್ಯದರ್ಶಿ ಡಾ. ಮರ್ಚೇಡ್ ಮಲ್ಲಿಕಾರ್ಜುನಗೌಡ, ಕಾರ್ಯಕಾರಿ ಸಮಿತಿ ಸದಸ್ಯ ಟಿ. ಶ್ರೀನಿವಾಸರಾವ್, ಬಳ್ಳಾರಿ ಡಿಸ್ಟ್ರಿಕ್ಟ್ ಇಂಡಸ್ಟ್ರಿಯಲ್ ಅಸೋಸಿಯೇಷನ ವೆಂಕಟೇಶ್, ನಿರ್ಮಾಪೇಂಟ್‌ಸನ ನಾಗರಾಜ್, ಸುಧಾಕರ ಪೈಪಸ್‌ನ ಅನಂತಲ ಸುಧಾಕರ, ನಾಗಪ್ಪ ಪಾಟೀಲ್, ಪವನ್ ಕುಮಾರ್ ರೆಡ್ಡಿ, ಮಲ್ಲಿಕಾರ್ಜುನ ರೆಡ್ಡಿ, ಸಾಯಿ ಗಣೇಶ್ ಬಸವ, ಅನಿಲ್ ಕುಮಾರ್, ಶ್ರೀಧರ್ ಇನ್ನಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಪುರಸಭೆ ಅಧ್ಯಕ್ಷ, ಉಪಾಧ್ಯಕ್ಷರ ಪದಗ್ರಹಣ



ಹಗರಿಬೊಮ್ಮನಹಳ್ಳಿ ಪಟ್ಟಣದ ಪುರಸಭೆಯಲ್ಲಿ ನೂತನ ಅಧ್ಯಕ್ಷ, ಉಪಾಧ್ಯಕ್ಷರ ಪದಗ್ರಹಣ ಕಾರ್ಯಕ್ರಮ ಜರುಗಿತು.

ಹಗರಿಬೊಮ್ಮನಹಳ್ಳಿ: ಪಟ್ಟಣದ ಪುರಸಭೆಗೆ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಮರಿರಾಮಪ್ಪ, ಉಪಾಧ್ಯಕ್ಷೆ ಅಂಬಿಕಾ ದೇವೆಂದ್ರಪ್ಪರವರ ಅಧಿಕಾರ ಸ್ವೀಕಾರದ ಪದಗ್ರಹಣ ಕಾರ್ಯಕ್ರಮ ಸೋಮವಾರ ನೆರವೇರಿಸಲಾಯಿತು.

ಈ ವೇಳೆ ಮಾಜಿ ಶಾಸಕ ಹಾಗೂ ಕೆಎಂಎಫ್ ಅಧ್ಯಕ್ಷ ಭೀಮಾನಾಯ್ಕ ನೂತನ ಅಧ್ಯಕ್ಷ, ಉಪಾಧ್ಯಕ್ಷರಿಗೆ ಶುಭಕೋರಿ ಮಾತನಾಡಿ, ಪುರಸಭೆಯ ನೂತನ ಕಟ್ಟಡದ ಕಾಮಗಾರಿಗೆ ವಿಳಂಬವಾಗಿದೆ. ನಮ್ಮ ಅಧಿಕಾರದ ಅವಧಿಯಲ್ಲಿ 4 ಲಕ್ಷ ರು.ವೆಚ್ಚದ ಅನುದಾನ ನೀಡಲಾಗಿದೆ. ಸದ್ಯ ಟೆಂಡರ್ ಕರೆದಿದ್ದು, ಕೆಲವೇ ದಿನಗಳಲ್ಲಿ ಹೊಸ ಕಟ್ಟಡದ ಕೆಲಸ ಪ್ರಾರಂಭವಾಗಲಿದೆ ಎಂದರು. ಹಾಲಿ ಕ್ಷೇತ್ರದ ಶಾಸಕರ ಕಮಿಷನ್ ಹಾವಳಿ ಹೆಚ್ಚಾಗಿದ್ದು, ಸರಕಾರಿ ಕೆಲಸಗಳಲ್ಲಿ ಅವರ ಹಸ್ತಕ್ಷೇಪದಿಂದ ಕ್ಷೇತ್ರದಲ್ಲಿ ಅನೇಕ ಕೆಲಸಗಳು ವಿಳಂಬವಾಗುತ್ತಿವೆ. ಪಟ್ಟಣದ ತೇರು ಬೀದಿ ಕಾಮಗಾರಿಗೆ ಶೇ.60 ಕಮಿಷನ್‌ಗೆ ಬೇಡಿಕೆ ಇಟ್ಟಿದ್ದಾರೆ ಎಂದು ಆರೋಪಿಸಿದರು. ಈ ವೇಳೆ ಪುರಸಭೆ ಅಧ್ಯಕ್ಷ ಮರಿರಾಮಪ್ಪ ಮಾತನಾಡಿದರು. ಉಪಾಧ್ಯಕ್ಷೆ ಅಂಬಿಕಾ ದೇವೆಂದ್ರಪ್ಪ, ಮುಖಂಡರಾದ ಪವಾಡಿ ಹನುಮಂತಪ್ಪ, ಅಜೀಜ್ ಉಲ್ಲಾ, ಕುರಿ ಶಿವಮೂರ್ತಿ, ಯು.ಸೋಮಪ್ಪ, ಸೆರೆಗಾರ ಹುಚ್ಚಪ್ಪ, ರಾಜೇಶ್ ಬ್ಯಾಡ್ಗಿ, ಬಾನಮ್ಮ, ಬಾಳಪ್ಪ, ಪತ್ರೇಶ್, ಕುರುಬರ ವೆಂಕಟೇಶ್ ಮತ್ತಿತರರಿದ್ದರು.

ಸ್ಪರ್ಧಾತ್ಮಕ ಪರೀಕ್ಷೆಗಳ ಯಶಸ್ಸಿಗೆ ಶ್ರಮ ಅಗತ್ಯ

ಬಳ್ಳಾರಿ: ವಿದ್ಯಾರ್ಥಿಗಳು, ಉದ್ಯೋಗಾಕಾಂಕ್ಷಿಗಳು ಉನ್ನತ ಗುರಿ ಹೊಂದಲು ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಹೊಂದಲು ಅವಿರತವಾಗಿ ಶ್ರಮಿಸಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಜಿಲ್ಲಾ ಖನಿಜ ಪ್ರತಿಷ್ಠಾನ ಸಹಯೋಗದಲ್ಲಿ ನಗರದ ಡಾ.ರಾಜ್‌ಕುಮಾರ್ ರಸ್ತೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹೊಂಗಿರಣದಲ್ಲಿ ಕೆಎಎಸ್ ಪರೀಕ್ಷೆಗೆ ಉಚಿತವಾಗಿ ತರಬೇತಿ ಪಡೆಯಲು ಆಯ್ಕೆಯಾದ ಅಭ್ಯರ್ಥಿಗಳಿಗೆ 5 ತಿಂಗಳ ಕೆಎಎಸ್ ಪರೀಕ್ಷಾ ಉಚಿತ ಪೂರ್ವ ತರಬೇತಿ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಪ್ರಸ್ತುತ ಜಗತ್ತು ಸ್ಪರ್ಧಾತ್ಮಕವಾಗಿದ್ದು, ಎಲ್ಲಾ ಕ್ಷೇತ್ರಗಳಲ್ಲಿ ಸ್ಪರ್ಧೆ ಸಾಮಾನ್ಯವಾಗಿದೆ. ವಿದ್ಯಾರ್ಥಿಗಳು ಮತ್ತು ಆಕಾಂಕ್ಷಿಗಳು ಸ್ಪರ್ಧಾ ಮನೋಭಾವವನ್ನು ಬೆಳೆಸಿಕೊಂಡು ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಯ ಅವಕಾಶಗಳನ್ನು ಬಳಸಿಕೊಳ್ಳಬೇಕು ಎಂದು ಹೇಳಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಮಾತನಾಡಿ, ವಿದ್ಯಾರ್ಥಿಗಳು ಹೊಸದನ್ನು ಕಲಿಯುವ ಕುತೂಹಲವನ್ನು ಬೆಳೆಸಿಕೊಳ್ಳಬೇಕು ಮತ್ತು ಆಲೋಚನೆಗಳು ಮತ್ತು ಮಾಹಿತಿಗೆ ತೆರೆದುಕೊಳ್ಳಬೇಕು ಎಂದು ಹೇಳಿದರು.

ಕೆಎಎಸ್ ಪರೀಕ್ಷಾ ಉಚಿತ ಪೂರ್ವ ತರಬೇತಿ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಮಾತನಾಡಿದರು.

> ಯಶಸ್ಸಿಗೆ ದಿನಕ್ಕೆ 5 ರಿಂದ 6 ಗಂಟೆಗಳ ಏಕಾಗ್ರ ಅಧ್ಯಯನ ಅಗತ್ಯವಾಗಿದ್ದು, ಅಧ್ಯಯನದ ಹೊರತಾಗಿ ಆಕಾಂಕ್ಷಿಗಳು ಸಹನೆಯನ್ನು ಬೆಳೆಸಿಕೊಳ್ಳಬೇಕು ಮತ್ತು ಶ್ರಮದಿಂದ ಹಿಂದೆ ಸರಿಯಬಾರದು.
>
> -ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾಧಿಕಾರಿ

ಆಕಾಂಕ್ಷಿಗಳು ತಮ್ಮ ಪ್ರಚಲಿತ ವಿದ್ಯಮಾನಗಳ ಜ್ಞಾನವನ್ನು ಹೆಚ್ಚಿಸಲು ಪತ್ರಿಕೆಗಳನ್ನು ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು. ವಿದ್ಯಾರ್ಥಿಗಳು ಮತ್ತು ಆಕಾಂಕ್ಷಿಗಳು ಕಠಿಣ ಪರಿಶ್ರಮ ಅಥವಾ ವೈಫಲ್ಯದ ಭಯದಿಂದ ಹಿಂಜರಿಯಬಾರದು. ವೈಫಲ್ಯವು ಯಶಸ್ಸಿನ ಮೆಟ್ಟಿಲು ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು ಎಂದರು.

ಕೆಎಎಸ್ ಪರೀಕ್ಷಾ ಉಚಿತ ಪೂರ್ವ ತರಬೇತಿಗೆ ಒಟ್ಟು 192 ವಿದ್ಯಾರ್ಥಿಗಳು, ಆಕಾಂಕ್ಷಿಗಳು ಆಯ್ಕೆಯಾಗಿದ್ದು, ಅವರಿಗೆ 5 ತಿಂಗಳವರೆಗೂ ಬೆಳಿಗ್ಗೆ 8.30 ರಿಂದ ಮಧ್ಯಾಹ್ನ 2.30 ರವರೆಗೆ ನಗರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹೊಂಗಿರಣ ಸಭಾಂಗಣದಲ್ಲಿ ತರಬೇತಿ ನೀಡಲಾಗುವುದು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ಜಿಲ್ಲಾ ಕೌಶಲಾಭಿವೃದ್ಧಿ ಅಧಿಕಾರಿ ಪ್ರಾಣೇಶ್ ಸೇರಿದಂತೆ ಆಕಾಂಕ್ಷಿಗಳು ಹಾಗೂ ಇತರರು ಉಪಸ್ಥಿತರಿದ್ದರು.

ಅಲ್ಪಸಂಖ್ಯಾತರ ಇಲಾಖೆಗೆ ಅರ್ಜಿ ವಿಸ್ತರಣೆ

ಬಳ್ಳಾರಿ: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳ ಪ್ರಸಕ್ತ ಶೈಕ್ಷಣಿಕ ಸಾಲಿಗೆ ಪ್ರವೇಶಾತಿಗೆ ಅರ್ಜಿ ಸಲ್ಲಿಸಲು ನವೆಂಬರ್ 11ರ ವರೆಗೆ ಅವಧಿ ವಿಸ್ತರಿಸಲಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ವಿಠೋಬಾ ಹೊನಕಾಂಡೆ ಅವರು ತಿಳಿಸಿದ್ದಾರೆ. ಆಸಕ್ತ ವಿದ್ಯಾರ್ಥಿಗಳು ರಾಜ್ಯ ವಿದ್ಯಾರ್ಥಿನಿಲಯ ತಂತ್ರಾಂಶದ ವೆಬ್‌ಸೈಟ್‌ನ https://shp.karnataka.gov.inಲಿಂಕ್ ಮೂಲಕ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂ.08392-200125/224, ಮೊ.8746818180 ಹಾಗೂ ಆಯಾ ತಾಲ್ಲೂಕು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಕಚೇರಿಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೈಲು ಸಂಚಾರ ಆರಂಭ ಇಂದು

ಹೊಸಪೇಟೆ: ಮಾರ್ಗವಾಗಿ ಸಿಕಂದರಾಬಾದ್- ವಾಸ್ಕೋ-ಡ-ಗಾಮಾ (ಗೋವಾ)ನಡುವೆ ನೂತನ ರೈಲು ಸಂಚಾರ ಅ. 9 ರಿಂದ ಆರಂಭವಾಗಲಿದೆ. ಈ ರೈಲು (17039) ವಾರದಲ್ಲಿ ಪ್ರತಿ ಬುಧವಾರ ಮತ್ತು ಶುಕ್ರವಾರದಂದು ಸಿಕಂದರಾಬಾದ್ ನಿಲ್ದಾಣದಿಂದ ಬೆಳಿಗ್ಗೆ 10 ಗಂಟೆಗೆ ನಿರ್ಗಮಿಸಿ ಕಾಚಿಗೂಡ, ಜೆಡ್ಚರ್ಲ, ಗದ್ವಾಲ್, ಕರ್ನೂಲ್ ಸಿಟಿ, ಧೋನ್, ಗುಂತಕಲ್, ಬಳ್ಳಾರಿ ಮಾರ್ಗವಾಗಿ ಹೊಸಪೇಟೆಗೆ ರಾತ್ರಿ 7.50ಕ್ಕೆ ಆಗಮಿಸಲಿದೆ. ನಂತರ ಕೊಪ್ಪಳ, ಗದಗ ಮೂಲಕ ಹುಬ್ಬಳ್ಳಿಗೆ ರಾತ್ರಿ 10.50ಕ್ಕೆ ತಲುಪಿ, ಧಾರವಾಡ, ಲೋಂಡಾ, ಮಡಗಾಂವ ಮಾರ್ಗವಾಗಿ ವಾಸ್ಕೋ-ಡ-ಗಾಮಾ ನಿಲ್ದಾಣ ಬೆಳಿಗ್ಗೆ 5.45ಕ್ಕೆ ತಲುಪಲಿದೆ. ವಾಸ್ಕೋ-ಡ-ಗಾಮಾ ರೈಲು (17040) ಪ್ರತಿ ಗುರುವಾರ ಮತ್ತು ಶನಿವಾರದಂದು ಬೆಳಿಗ್ಗೆ 9 ಗಂಟೆಗೆ ನಿರ್ಗಮಿಸಿ ಅದೇ ಮಾರ್ಗವಾಗಿ ಹೊಸಪೇಟೆಗೆ ಸಂಜೆ 5 ಗಂಟೆಗೆ ಆಗಮಿಸಲಿದೆ. ಬಳ್ಳಾರಿ, ಗುಂತಕಲ್ ಮಾರ್ಗವಾಗಿ ಮುಂಜಾನೆ 6.20ಕ್ಕೆ ಸಿಕಂದರಾಬಾದ್ ನಿಲ್ದಾಣ ತಲುಪಲಿದೆ ತಿಳಿಸಿದೆ. ಈಗ ನೇರ ಸಂಪರ್ಕ ಕಲ್ಪಿಸಿರುವುದರಿಂದ ತೆಲಂಗಾಣ, ಆಂಧ್ರಪ್ರದೇಶ, ಕರ್ನಾಟಕ, ಹಾಗೂ ಗೋವಾ ರಾಜ್ಯಗಳ ಪ್ರವಾಸೋದ್ಯಮ ಹಾಗೂ ವಾಣಿಜ್ಯ ಚಟುವಟಿಕೆಗಳು ವೃದ್ಧಿಯಾಗುತ್ತವೆ. ಜತೆಗೆ ಪ್ರಯಾಣಿಕರ ಸಂಚಾರ ಅವಧಿ ಕಡಿಮೆಯಾಗುತ್ತದೆ ಎಂದು ವಿಜಯನಗರ ರೈಲ್ವೆ ಅಭಿವೃದ್ಧಿ ಕ್ರಿಯಾ ಸಮಿತಿ ಅಧ್ಯಕ್ಷ ವೈ.ಯಮುನೇಶ್, ಕಾರ್ಯ ದರ್ಶಿ ಮಹೇಶ್ ಕುಡುತಿನಿ ತಿಳಿಸಿದ್ದಾರೆ.

ರಕ್ತದೊತ್ತಡ, ಸಕ್ಕರೆ ಕಾಯಿಲೆ ನಿಯಂತ್ರಿಸಿ

ಬಳ್ಳಾರಿ: ಜೀವನ ಶೈಲಿಯ ರೋಗಗಳಾದ ರಕ್ತದೊತ್ತಡ, ಸಕ್ಕರೆ ಕಾಯಿಲೆಯನ್ನು ಒಮ್ಮೆ ಗುರುತಿಸಿದ ನಂತರ ವೈದ್ಯರ ಸಲಹೆ ಮೇರೆಗೆ ನಿಯಮಿತವಾಗಿ ಔಷಧಿ ಸೇವಿಸುವ ಮೂಲಕ ಸದೃಢ ಆರೋಗ್ಯ ತಮ್ಮದಾಗಿಸಿಕೊಳ್ಳಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ರಮೇಶಬಾಬು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಅಸಾಂಕ್ರಾಮಿಕ ರೋಗಗಳ ನಿಯಂತ್ರಣ ಘಟಕ ಇವರ ಆಶ್ರಯದಲ್ಲಿ ತೋರಣಗಲ್ಲಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮಂಗಳವಾರ ಆಯೋಜಿಸಿದ್ದ ಆಯುಷ್ಮಾನ ಆರೋಗ್ಯ ತಪಾಸಣಾ ಶಿಬಿರದಲ್ಲಿ ಮಾತನಾಡಿದರು.

ತಜ್ಞವೈದ್ಯರಿಂದ ಒಂದು ಸಮುದಾಯ ಆರೋಗ್ಯ ಕೇಂದ್ರದಲ್ಲಿ ಹಾಗೂ ಉಳಿದ ಎಲ್ಲ ಆರೋಗ್ಯ ಕೇಂದ್ರಗಳಲ್ಲಿ ಪ್ರತಿ ಮಂಗಳವಾರದಂದು ಸ್ಥಳೀಯ ವೈದ್ಯರಿಂದ ತಪಾಸಣೆ ಮಾಡುವ ಕಾರ್ಯ ಕೈಗೊಳ್ಳಲಾಗುತ್ತಿದ್ದು, ಇದರ ಸದುಪಯೋಗ ಪಡೆಯಬೇಕು ಎಂದು ತಿಳಿಸಿದರು. ಜಿಲ್ಲಾ ಮಾನಸಿಕ ಕಾರ್ಯಕ್ರಮಾಧಿಕಾರಿ ಡಾ.ವಿರೇಂದ್ರಕುಮಾರ ಮಾತನಾಡಿ, ಹಲವು ವರ್ಷಗಳಿಂದ ಇರುವ ನರ ಮತ್ತು ಚರ್ಮದ ಖಾಯಿಲೆಯಾಗಿರುವ ಕುಷ್ಠರೋಗವನ್ನು ಆರಂಭದಲ್ಲಿ ಗುರ್ತಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಮಾನಸಿಕ ಆರೋಗ್ಯಕ್ಕಾಗಿ ಉಚಿತ ಸಹಾಯವಾಣಿ 14416 ಟೆಲಿಮನಸ್‌ಗೆ ಕರೆ ಮಾಡಿ ಸದುಪಯೋಗ ಪಡೆಯಬೇಕು ಎಂದರು.

ತಪಾಸಣೆ ಶಿಬಿರದಲ್ಲಿ ವಿಮ್ಸ್‌ನಿಂದ ಆಗಮಿಸಿದ ಎಲುಬು ಕೀಲು, ಸರ್ಜರಿ, ಚರ್ಮರೋಗ ತಜ್ಞವೈದ್ಯರಾದ ಡಾ.ರಘುವೀರ, ಡಾ.ಪ್ರಜ್ವಲ್, ಡಾ.ಅತೀರಾ ಹಾಗೂ ಡಾ.ಮಣಿಕಂಠ, ಡಾ.ಶ್ರಾವಣಿ, ಡಾ.ಆರುಂಧತಿ ಅವರ ತಂಡವು ಸೇರಿ 153 ಜನರ ಆರೋಗ್ಯ ತಪಾಸಣೆ ಮಾಡಿದರು.

ಕಾರ್ಯಕ್ರಮದಲ್ಲಿ ತೋರಣಗಲ್ಲು ಸಮುದಾಯ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ.ಗೋಪಾಲರಾವ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ, ಕಚೇರಿ ಅಧೀಕ್ಷಕ ಹರ್ಷ, ಆರೋಗ್ಯ ನಿರೀಕ್ಷಣಾಧಿಕಾರಿ ಶಕೀಲ್ ಅಹಮ್ಮದ್, ಫಾರ್ಮಸಿಷ್ಟ್ ಮಂಜುನಾಥ, ಕ್ಷಕಿರಣ ತಂತ್ರಜ್ಞರಾದ ಅಶ್ವಿನಿ, ಎನ್‌ಸಿಡಿ ಸಲಹೆಗಾರ ವೆಂಕಪ್ಪ, ಪ್ರಯೋಗಾಲಯ ತಂತ್ರಜ್ಞ ಇಮ್ರಾನ್, ಬಸವರಾಜ್, ಆರೋಗ್ಯ ಮಿತ್ರ ವಿಜಯಭಾಸ್ಕರ್, ಶುಶ್ರೂಷಣಾಧಿಕಾರಿ ಮಾರೇಶ, ರೇಷ್ಮಾ ಸೇರಿದಂತೆ ಸಾರ್ವಜನಿಕರು ಹಾಗೂ ಇತರರು ಉಪಸ್ಥಿತರಿದ್ದರು.

ಅ.23ಕ್ಕೆ ಚೆನ್ನಮ್ಮ ಜಯಂತಿ ಆಚರಣೆ

ಬಳ್ಳಾರಿ: ಜಿಲ್ಲಾಡಳಿತದಿಂದ ಅ.23ರಂದು ಕಿತ್ತೂರು ರಾಣಿ ಚೆನ್ನಮ್ಮ ಜಯಂತಿಯ ಅರ್ಥಪೂರ್ಣ ಆಚರಣೆಗೆ ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸಹಾಯಕ ಆಯುಕ್ತ ಪ್ರಮೋದ್ ಸೂಚನೆ ನೀಡಿದರು. ನಗರದ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಮಂಗಳವಾರ ಏರ್ಪಡಿಸಿದ್ದ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಆಚರಣೆ ಪೂರ್ವಭಾವಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು. ಅ.23 ರಂದು ಬೆಳಿಗ್ಗೆ 11ಕ್ಕೆ ನಗರದ ಡಾ. ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ಎಲ್ಲಾ ಸಂಘ ಸಂಸ್ಥೆಯ ಮುಖಂಡರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದರು. ಬೆಳಿಗ್ಗೆ 10 ಗಂಟೆಗೆ ಜಯಂತಿಯ ಮೆರವಣಿಗೆಯು ಎಚ್.ಆರ್.ಗವಿಯಪ್ಪ ವೃತ್ತದಿಂದ ಡಾ. ಜೋಳದರಾಶಿ ದೊಡ್ಡನಗೌಡ ರಂಗಮಂದಿರದ ವೇದಿಕೆ ಕಾರ್ಯಕ್ರಮದವರೆಗೆ ನಡೆಯಲಿದೆ. ಕಿತ್ತೂರು ರಾಣಿ ಚೆನ್ನಮ್ಮ ಅವರ ಕುರಿತು ಸಂಪನ್ಮೂಲ ವ್ಯಕ್ತಿಗಳಿಂದ ವಿಶೇಷ ಉಪನ್ಯಾಸ ಏರ್ಪಡಿಸಬೇಕು ಎಂದರು. ಜಿಲ್ಲಾ ಮಟ್ಟದ ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಗಳ ಎಲ್ಲಾ ಅಧಿಕಾರಿಗಳು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಹೇಳಿದರು. ವಚನ ಗಾಯನ ಇರಲಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಅವರು ತಿಳಿಸಿದರು. ಜಿಲ್ಲಾಧಿಕಾರಿಗಳ ಕಚೇರಿಯ ತಹಸೀಲ್ದಾರ ಗೌಸಿಯಾ ಉಪಸ್ಥಿತರಿದ್ದರು.

ಅವೆನ್ಯೂ ರೋಡ್

ನಿತ್ಯದ ವಿಂಡೋ ಶಾಪಿಂಗ್

ವಿಶ್ವವಾಣಿ
09.10.2024 ಬುಧವಾರ
vishwavani.news

ದಿನ ದರ್ಶಿಕೆ

ಅಶ್ವಿನ ಮಾಸ, ಶುಕ್ಲ ಪಕ್ಷ, ಷಷ್ಠಿ ತಿಥಿ, ಮೂಲಾ ನಕ್ಷತ್ರ, ಸೌಭಾಗ್ಯ ಯೋಗ, ಧನು ರಾಶಿ, ಕನ್ಯಾ ಲಗ್ನ, ಹಸ್ತ ಸೂರ್ಯ ನಕ್ಷತ್ರ, 1946 ಕ್ರೋಧಿನಾಮ ಸಂವತ್ಸರ, 2081 ವಿಕ್ರಮ ಶಕ ಸಂವತ್ಸರ

ಮನೆಮದ್ದು

ತುಳಸಿ ಎಣ್ಣೆಯನ್ನು ಹಣೆಗೆ ಹಚ್ಚಿಕೊಂಡರೆ ಸ್ನಾಯುಗಳಿಗೆ ಹಿತ ಸಿಗುವುದು. ಇದರಿಂದ ತಲೆನೋವಿಗೆ ಪರಿಹಾರ ಸಿಗುತ್ತದೆ. ಇನ್ನೊಂದು ವಿಧಾನವೆಂದರೆ ಕುದಿಯುತ್ತಿರುವ ನೀರಿಗೆ ಸ್ವಲ್ಪ ತುಳಸಿ ಎಲೆಗಳನ್ನು ಹಾಕಬೇಕು. ತದನಂತರ ಇದನ್ನು 2-3 ನಿಮಿಷ ಕುದಿಯಲು ಬಿಡಬೇಕು. ಇದನ್ನು ಸೋಸಿಕೊಂಡು ಚಹಾದಂತೆ ಕುಡಿಯಬೇಕು.

ಸೌಂದರ್ಯ ಸೂತ್ರ

ಹಸಿ ಆಲೂಗಡ್ಡೆಯನ್ನು ಚಿಕ್ಕದಾಗಿ ತುರಿದು ರಸ ತೆಗೆಯಿರಿ. ಹತ್ತಿ ಉಂಡೆಯನ್ನು ಈ ರಸದಲ್ಲಿ ಅದ್ದಿ ಕಣ್ಣುಗಳನ್ನು ಮುಚ್ಚಿಕೊಂಡು ಕಪ್ಪು ವರ್ತುಲ, ಕಣ್ಣಿನ ರೆಪ್ಪೆ, ಹುಬ್ಬುಗಳಿಗೆ ಲೇಪಿಸಿ. ಈ ಉಂಡೆಗಳು ಸುಮಾರು ಹತ್ತು ನಿಮಿಷವಾದರೂ ಕಣ್ಣಿನ ಮೇಲೆ ಹಾಗೇ ಇರಲಿ. ಬಳಿಕ ತಣ್ಣೀರಿನಿಂದ ತೊಳೆಯಿರಿ. ಇದರಿಂದ ಡಾರ್ಕ್ ಸರ್ಕಲ್ ಕಡಿಮೆಯಾಗುತ್ತದೆ.

ದಿನ ಭವಿಷ್ಯ

ಮೇಷ
ಬಹುಕಾಲದಿಂದ ಇದ್ದ ಜೀವನದ ಒತ್ತಡಗಳಿಂದ ಇಂದು ಶಮನ ಪಡೆಯುತ್ತೀರಿ. ಜೀವನ ಶೈಲಿ ಬದಲಿಸಿರಿ.

ವೃಷಭ
ಮನೆಯಲ್ಲಿ ತೊಂದರೆಗಳು ಹುಟ್ಟಿಕೊಂಡರೂ ಸಣ್ಣ ಸಣ್ಣ ವಿಷಯಗಳಿಗೆ ನಿಮ್ಮ ಸಂಗಾತಿಯನ್ನು ಟೀಕಿಸುವುದನ್ನು ತಪ್ಪಿಸಿ.

ಮಿಥುನ
ರಿಯಲ್ ಎಸ್ಟೇಟ್ ಮತ್ತು ಆರ್ಥಿಕ ವ್ಯವಹಾರಗಳಿಗೆ ಒಳ್ಳೆಯ ದಿನ. ಕಚೇರಿಯ ಕೆಲಸದಲ್ಲಿ ಸುಧಾರಣೆ ಮಾಡುತ್ತೀರ.

ಕಟಕ
ಬಾಸ್ ಕೇಳುವ ಮೊದಲೇ ಬಾಕಿಯಿರುವ ಕೆಲಸಗಳನ್ನು ಪೂರ್ಣಗೊಳಿಸಿ. ಒಬ್ಬ ಆಧ್ಯಾತ್ಮಿಕ ನಾಯಕರು ಮಾರ್ಗದರ್ಶನ ನೀಡುತ್ತಾರೆ.

ಸಿಂಹ
ಆರೋಗ್ಯ ದೃಷ್ಟಿಯಿಂದ ಉತ್ತಮವಾದ ದಿನ. ಹಾಯಾಗಿರುವ ಮನಸು ಜೀವನದ ಉತ್ಸಾಹವನ್ನು ಹೆಚ್ಚಿಸುತ್ತದೆ. ಆತ್ಮವಿಶ್ವಾಸ ತರುತ್ತದೆ.

ಕನ್ಯಾ
ಧಾರ್ಮಿಕ, ಆಧ್ಯಾತ್ಮಿಕ ಆಸಕ್ತಿಗಳನ್ನು ಅನುಸರಿಸಲು ಒಳ್ಳೆಯ ದಿನ. ಹಣದ ಲಾಭವಾಗುವ ಪೂರ್ತಿ ಸಾಧ್ಯತೆ ಇದೆ.

ತುಲಾ
ಯಾವುದೆ ನಿರ್ಧಾರಗಳನ್ನು ತೆಗೆದುಕೊಳ್ಳುವ ಮೊದಲು ಇತರರರ ಅವಶ್ಯಕತೆಗಳನ್ನು ತಿಳಿಯಲು ಪ್ರಯತ್ನಿಸಿ.

ವೃಶ್ಚಿಕ
ಕುಟುಂಬದೊಂದಿಗೆ ಸಾಮಾಜಿಕ ಚಟುವಟಿಕೆಯಿಂದ ಆಹ್ಲಾದಕರವಾಗಿಡುತ್ತದೆ. ಕಟ್ಟುಕತೆಗಳು ಮತ್ತು ವದಂತಿಗಳಿಂದ ದೂರವಿರಿ.

ಧನು
ಮಾನಸಿಕ ಶಾಂತಿಗಾಗಿ ಕೆಲವು ದಾನ ಧರ್ಮಗಳಲ್ಲಿ ತೊಡಗಿಸಿಕೊಳ್ಳಿ. ಧಾರ್ಮಿಕ ಸ್ಥಳಕ್ಕೆ ಭೇಟಿ ಮಾಡಿ, ದಿನ ಚನ್ನಾಗಿರುತ್ತದೆ.

ಮಕರ
ಸ್ನೇಹಿತರ ಸಹಾಯದಿಂದ ಹಣಕಾಸು ಸಮಸ್ಯೆಗಳು ನಿವಾರಣೆಯಾಗುತ್ತವೆ. ಗಾಡಿ ಚಾಲನೆ ಮಾಡುವಾಗ ಹುಷಾರಾಗಿರಿ.

ಕುಂಭ
ದಿನ ಉತ್ತಮವಾಗಿದೆ, ಇತರರೊಂದಿಗೆ ಸಮಯ ಕಳೆಯಿರಿ. ಸಂಗಾತಿ ನೆರೆಹೊರೆಯಲ್ಲಿ ಸಮಸ್ಯೆಯ ಮಾಡಿಕೊಳ್ಳಬಹುದು.

ಮೀನ
ದಿಟ್ಟ ಕ್ರಮ, ನಿರ್ಧಾರಗಳು ಅನುಕೂಲಕರ ಲಾಭ ತರುತ್ತದೆ. ಸಮಯಕ್ಕೆ ಅನುಗುಣವಾಗಿ ಪ್ರತಿ ಕೆಲಸ ಪೂರೈಸುವುದು ಉತ್ತಮ.

• ಕೆ.ಬಿ.ಸಂತೋಷ್ ಗುರೂಜಿ

ನಿಮಗೆ ಸೂರ್ಯ ಕಾಣಿಸ್ತಿದ್ದಾನಾ? ಅದರ ಮಧ್ಯೆ ದೊಡ್ಡ ದೊಡ್ಡದಾದ ಕಪ್ಪು ವರ್ತುಲವೂ ಕಾಣಿಸ್ತಿದೆಯಾ? ಆ ಕಪ್ಪು ವರ್ತುಲ ಚಂದ್ರ. ಇದು ಸೂರ್ಯಗ್ರಹಣ, ಚಿಲಿನಲ್ಲು ಹೋದವಾರ ಕಂಡ ಈ ವಿಶೇಶವನ್ನು ತಮ್ಮ ಕ್ಯಾಮರಾದಲ್ಲಿ ಸೆರೆಹಿಡಿದಿದ್ದು ಅಲೆಕ್ಸಿಸ್ ತ್ರಿಗೋ.

ದಿನಕ್ಕೊಂದು ಪ್ರಶ್ನೆ

• ಎಲ್.ಪಿ.ಕುಲಕರ್ಣಿ, ಬಾದಾಮಿ

• ವಿಷ್ಣು ದೇವ ಸಾಯಿ ಭಾರತದ ಯಾವ ರಾಜ್ಯದ ಹೊಸ ಮುಖ್ಯಮಂತ್ರಿ?

- ಎ. ಛತ್ತೀಸ್‌ಗಢ.
- ಬಿ. ಮಣಿಪುರ.
- ಸಿ. ಉತ್ತರ ಪ್ರದೇಶ.
- ಡಿ. ಅಸ್ಸಾಂ.

ಉತ್ತರ: ಎ. ಛತ್ತೀಸ್‌ಗಢ.

ಮಾಹಿತಿ

ಭಾರತೀಯ ಜನತಾ ಪಕ್ಷದ (ಬಿಜೆಪಿ) ಪ್ರಮುಖ ಬುಡಕಟ್ಟು ಮುಖ ವಿಷ್ಣು ದೇವ್ ಸಾಯಿ ಅವರು ಛತ್ತೀಸ್‌ಗಢದ ಮುಂದಿನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಹಾಗೆ 15 ವರ್ಷಗಳ ಕಾಲ ರಾಜ್ಯ ಸರಕಾರ ನಡೆಸಿದ ರಮಣ್ ಸಿಂಗ್ ಅವರನ್ನು ರಾಜ್ಯ ವಿಧಾನಸಭೆಯ ಸ್ಪೀಕರ್‌ನ್ನಾಗಿ ಮಾಡಲಾಗಿದೆ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ನಂಬಿಕೆಯೇ ದೇವರು

ತತ್ವಶಾಸ್ತ್ರದ ಪ್ರೊಫೆಸರ್ ಮತ್ತು ವಿದ್ಯಾರ್ಥಿಯ ನಡುವೆ ನಡೆದ ಸಂವಾದ

ಪ್ರೊಫೆಸರ್: ನೀನು ದೇವರನ್ನು ನಂಬುತ್ತೀಯಾ?
ವಿದ್ಯಾರ್ಥಿ: ಖಂಡಿತವಾಗಿಯೂ.
ಪ್ರೊಫೆಸರ್: ಹಾಗಾದರೆ ದೇವರು ಒಳ್ಳೆಯವನಾ?
ವಿದ್ಯಾರ್ಥಿ: ಹೌದು.
ಪ್ರೊಫೆಸರ್: ದೇವರು ಶಕ್ತಿವಂತನಾ?
ವಿದ್ಯಾರ್ಥಿ: ಹೌದು.
ಪ್ರೊಫೆಸರ್: ನನ್ನ ತಮ್ಮ ದೇವರ ದೊಡ್ಡ ಭಕ್ತ. ಅವನಿಗೆ ಕ್ಯಾನ್ಸರ್ ಬಂದು ತೀರಿಕೊಂಡ. ದೇವರಲ್ಲಿ ತುಂಬಾ ನಂಬಿಕೆ ಇದ್ದವನು. ನಾವೆಲ್ಲರೂ ರೋಗದಿಂದ ನರಳುತ್ತಿರುವವರಿಗೆ ಸಹಾಯ ಮಾಡುತ್ತೇವೆ, ದೇವರು ಎಂದಾದರು ಮಾಡಿದ್ದಾನಾ? ಹಾಗಾದರೆ ದೇವರು ಹೇಗೆ ಒಳ್ಳೆಯವನು?
ವಿದ್ಯಾರ್ಥಿ: ಮೌನ.
ಪ್ರೊಫೆಸರ್: ವಿಜ್ಞಾನದ ಪ್ರಕಾರ ಮನುಷ್ಯನಿಗೆ ತನ್ನ ಸುತ್ತಮುತ್ತಲಿದನ್ನು ನೋಡಲು ಮತ್ತು ಅನುಭವಿಸಲು ಪಂಚೇಂದ್ರಿಯಗಳಿವೆ, ಹೌದು ತಾನೇ? ಹಾಗಾದರೆ ನೀನು ಎಂದಾದರೂ ದೇವರನ್ನು ನೋಡಿದ್ದೀಯಾ?
ವಿದ್ಯಾರ್ಥಿ: ಇಲ್ಲ.
ಪ್ರೊಫೆಸರ್: ನೀನು ಎಂದಾದರೂ ದೇವರ ಮಾತನ್ನು ಆಲಿಸಿದ್ದಿಯಾ?
ವಿದ್ಯಾರ್ಥಿ: ಇಲ್ಲ.
ಪ್ರೊಫೆಸರ್: ನೀನು ಎಂದಾದರೂ ದೇವರ ಸ್ಮೆಲ್ ಅಥವಾ ರುಚಿ ನೋಡಿದ್ದಿಯಾ? ಎಂದಾದರೂ ನೀನು ಮಾಡುವ ಕೆಲಸಗಳಿಗೆ ದೇವರು ಸಲಹೆ ನೀಡಿದ್ದಾನಾ?
ವಿದ್ಯಾರ್ಥಿ: ಇಲ್ಲ.
ಪ್ರೊಫೆಸರ್: ಆದರೂ ಕೂಡ ನೀನು ದೇವರನ್ನು ನಂಬುತ್ತೀಯಾ?
ವಿದ್ಯಾರ್ಥಿ: ಹೌದು.
ಪ್ರೊಫೆಸರ್: ವಿಜ್ಞಾನದ ಹಾಗೂ ಸಂಶೋಧನೆಗಳ ಪ್ರಕಾರ ದೇವರು ಇಲ್ಲ. ಈ ಮಾತಿಗೆ ನೀನು ಏನು ಹೇಳುತ್ತಿಯಾ?
ವಿದ್ಯಾರ್ಥಿ: ನನಗೆ ನಂಬಿಕೆ ಇದೆ.
ಪ್ರೊಫೆಸರ್: ಅದೇ ವಿಜ್ಞಾನದ ಮುಂದೆ ಇರುವ ದೊಡ್ಡ ತಲೆನೋವು ಎಂದು ಸುಮ್ಮನಾದ.

ಈಗ ಆ ವಿದ್ಯಾರ್ಥಿ ಪ್ರಶ್ನಿಸಲಾರಂಭಿಸಿದ

ವಿದ್ಯಾರ್ಥಿ : ಕತ್ತಲು ಎನ್ನುವುದು ಇದೆಯೇ ಪ್ರೊಫೆಸರ್?
ಪ್ರೊಫೆಸರ್: ರಾತ್ರಿ ಏನು ಕಾಣುತ್ತೇವೋ ಅದೇ ಕತ್ತಲು.
ವಿದ್ಯಾರ್ಥಿ: ನೀವು ತಪ್ಪು ಹೇಳುತ್ತಿದ್ದೀರಿ. ಕತ್ತಲು ಎನ್ನುವುದು ಯಾವುದೋ ಅದು ಬೆಳಕಿನ ಇಲ್ಲದಿರುವಿಕೆ ಅಷ್ಟೇ. ಬೆಳಕಿನಲ್ಲಿಹಲವು ವಿಧಗಳಿವೆ, ಮಂದ ಬೆಳಕು, ಸಾಧಾರಣ ಬೆಳಕು, ಮಿನುಗುವ ಬೆಳಕು, ಗಾಢ ಬೆಳಕು, ಬೆಳಕು ಇಲ್ಲದೇ ಇರುವುದು ಹೀಗೆ..... ಆದರೆ ಏನು ನಿಯಮಿತವಾಗಿ ಬೆಳಕೆ ಇಲ್ಲದೇ ಇರುವುದನ್ನು ಕತ್ತಲು ಅನ್ನುತ್ತೇವೆ ಅಲ್ಲವೇ? ಕತ್ತಲನ್ನು ಇನ್ನೂ ಗಾಢವಾಗಿ ಮಾಡಲು ನಿಮ್ಮಿಂದ ಸಾಧ್ಯವೇ?
ಪ್ರೊಫೆಸರ್: ಹಾಗಾದರೆ ನೀನು ಏನು ಹೇಳ ಹೊರಟಿದ್ದಿಯಾ?
ವಿದ್ಯಾರ್ಥಿ: ನಿಮ್ಮ ಆಧ್ಯಾತ್ಮಿಕ ಚಿಂತನೆ ದುಷ್ಟವಾಗಿದೆ ಅಂತ.
ಪ್ರೊಫೆಸರ್: ದುಷ್ಟವೇ? ವಿವರಿಸುತ್ತಿಯಾ?
ವಿದ್ಯಾರ್ಥಿ: ನಿಮಗೆ ನಿಮ್ಮಲ್ಲೇ ದ್ವಂದ್ವ ಇದೆ. ನಿಮ್ಮ ಪ್ರಕಾರ ಬದುಕು ಮತ್ತು ಸಾವು ಎರಡೂ ಇದೆ ಹಾಗೆ ಒಳ್ಳೇ ದೇವರು ಮತ್ತು ಕೆಟ್ಟ ದೇವರಿದ್ದಾರೆ. ನೀವು ದೇವರನ್ನು ಒಂದು ವಸ್ತು, ನಾವು ಅದನ್ನು ಅಳೆಯಬಹುದು ಅನ್ನುತ್ತಿದ್ದೀರ. ಸಾವು ಎಂಬುದು ಬದುಕಿನ ವಿರುದ್ಧ ಪದ ಅಲ್ಲ ಕೇವಲ ಬದುಕಿನ ಇಲ್ಲದಿರುವಿಕೆ ಅಷ್ಟೇ. ಹಾಗೆ ಅದು ವಿರುದ್ಧ ಅಂತ ಹೇಳಬೇಕಾದರೆ ನೀವದನ್ನ ಅನುಭವಿಸಿರಬೇಕು. ನಿಮ್ಮ ಪ್ರಕಾರ ಈಗ ಹೇಳಿ ಸರ್ ನೀವು ನಿಮ್ಮ ವಿಧ್ಯಾರ್ಥಿಗಳಿಗೆ ಮಾನವನ ಉಗಮ ಮಂಗಗಳಿಂದ ಆಯಿತು ಅಂತ ಬೋಧಿಸುತ್ತೀರಾ?
ಪ್ರೊಫೆಸರ್: ನೀನು ನೈಸರ್ಗಿಕ ಬದಲಾವಣೆಯ ಬಗ್ಗೆ ಹೇಳುವುದಾದರೆ, ಹೌದು ನಾನು ಹಾಗೆ ಬೋಧಿಸುತ್ತೇನೆ.
ವಿದ್ಯಾರ್ಥಿ: ನಿಮ್ಮ ಕಣ್ಣಿನಿಂದ ಎಂದಾದರೂ ಈ ಬದಲಾವಣೆಯನ್ನು ನೋಡಿದ್ದೀರಾ ಸರ್?

ಈ ಮಾನವನ ವಿಕಾಸವನ್ನು ಯಾರೂ ತಮ್ಮ ಕಣ್ಣಿನಿಂದ ನೋಡಿಲ್ಲ ಮತ್ತು ಹೀಗೆ ಆಗಿದೆ ಅಂತ ವಾದಿಸುವ ಹಾಗೆ ಕೂಡ ಇಲ್ಲ.

ವಿದ್ಯಾರ್ಥಿ: ತರಗತಿಯಲ್ಲಿರುವ ಯಾರಾದರೂ ನಮ್ಮ ಪ್ರೊಫೆಸರ್ ಮೆದುಳು ನೋಡಿದ್ದೀರ?
ವಿದ್ಯಾರ್ಥಿ: ಯಾರಾದರೂ ಅವರ ಮೆದುಳಿನ ಮಾತು ಕೇಳಿದ್ದೀರಾ? ಮುಟ್ಟಿದ್ದೀರಾ? ಪರಿಮಳ ಅನುಭವಿಸಿದ್ದೀರಾ? ಇಲ್ಲ ಎನ್ನುವುದಾದರೆ ಅವರದೇ ವಿಜ್ಞಾನದ ಪ್ರಕಾರ ನಮ್ಮ ಪ್ರೊಫೆಸರ್‌ಗೆ ಮೆದುಳೇ ಇಲ್ಲ. ಸರ್ ನಾವೆಲ್ಲರೂ ನಿಮ್ಮನ್ನು ಗೌರವಿಸುತ್ತೇವೆ ಆದರೆ ಮೆದುಳೇ ಇಲ್ಲದಿದ್ದರೆ ನಿಮ್ಮನ್ನು ನಂಬುವುದು ಹೇಗೆ ಅದೇ ಸರ್ ಎಂದಾಗ ಪ್ರೊಫೆಸರ್ ಸೋಲೊಪ್ಪಿಕೊಂಡರು.

ಮನುಷ್ಯ ಮತ್ತು ದೇವರ ನಡುವಿನ ಕೊಂಡಿಯೇ ನಂಬಿಕೆ. ಅದೇ ಈ ಬದುಕನ್ನು ಜೀವಂತವಾಗಿರುಸುತ್ತೆ ಮತ್ತು ಮುನ್ನೆಡೆಸುತ್ತೆ.

ಇಂತಹ ನಂಬಿಕೆಗಳು ನಮ್ಮನ್ನು ಸದಾ ಕಾಯಲಿ.

ಮಾತಲ್ಲಿರಲಿ ಗಮ್ಮತ್ತು; ಅಳತೆ ಮೀರಿದರೆ ಆಪತ್ತು

• ಕೆ.ಟಿ.ಮಲ್ಲಿಕಾರ್ಜುನಯ್ಯ

ನಾವಾಡುವ ಮಾತುಗಳಿಂದ ಸಂಬಂಧಗಳನ್ನು ಬೆಳೆಸಲೂಬಹುದು ಕಳೆದುಕೊಳ್ಳಲೂಬಹುದು. ಪೂರ್ವಾಪರ ಯೋಚನೆ ಮಾಡದೆ ಆಡುವ ಮಾತುಗಳು ಗಂಭೀರ ಪರಿಣಾಮಗಳನ್ನು ಎದುರಿಸಬೇಕಾದೀತು. ಕೋಪದ ಕೈಗೆ ಬುದ್ಧಿಯನ್ನು ಕೊಟ್ಟು ಏರು ಧ್ವನಿಯಲ್ಲಿ ಮಾತನಾಡಿ ಹಲವಾರು ಅವಾಂತರಗಳಿಗೆ ಈಡಾಗುವವರೆ ಹೆಚ್ಚು. ಕೆಲವರು ಬೆಣ್ಣೆಯಲ್ಲಿ ಕೂದಲನ್ನು ತೆಗೆಯುವಂತೆ ನಯನಾಜೂಕಿನಿಂದ ಮಾತನಾಡಿ ಎಂತಹ ಸಂದರ್ಭಗಳನ್ನೇ ಆಗಲಿ ತಮ್ಮಿಷ್ಟದಂತೆ ತಿರುಗಿಸಿ ಕೊಳ್ಳಬಲ್ಲರು.

ಬುದ್ಧಿವಂತಿಕೆಯ ಮಾತುಗಳು..

ರಸಿಕನ ಮಾತಿಗೂ ಅರಸಿಕನ ಮಾತಿಗೂ ವ್ಯತ್ಯಾಸವನ್ನು ತಿಳಿಸುತ್ತಾ ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ ರಸಿಕನಲ್ಲದವನ ಬರಿ ಮಾತು ಕಿವಿಯೊಳು ಕೂರ್ದಸಿಯ ಬಡಿದಂತೆ ಎಂದಿದ್ದಾರೆ ಸರ್ವಜ್ಞ.

ನಿಮ್ಮ ಪದಗಳನ್ನು ಬುದ್ಧಿವಂತಿಕೆಯಿಂದ ಬಳಸುವುದು ಪರಿಣಾಮಕಾರಿ ಸಂವಹನ ಮತ್ತು ಸಕಾರಾತ್ಮಕ ಸಂಬಂಧಗಳನ್ನು ಬೆಳೆಸಲು ನಿರ್ಣಾಯಕವಾಗಿದೆ. ಸರಿಯಾದ ಸಮಯದಲ್ಲಿ ಸರಿಯಾದ ಮಾತುಗಳನ್ನಾಡುವುದು ಸಹ ಒಂದು ಕಲೆ. ಮೊಸಳೆ ಮತ್ತು ಕೋತಿ ಕಥೆಯಲ್ಲಿ ಕೋತಿಯನ್ನು ತಿನ್ನಲು ಮೊಸಳೆ ಹೇಗೆ ಉಪಾಯವನ್ನು ಮಾಡಿತ್ತೋ, ಹಾಗೆಯೇ ಕೋತಿಯೂ ಸಹ ಅಯ್ಯೋ ನನ್ನ ಹೃದಯ ಮಾವಿನ ಮರದಲ್ಲಿಯೇ ಇದೆ. ದಯವಿಟ್ಟು ನನ್ನನ್ನು ಮಾವಿನ ಮರದ ಹತ್ತಿರ ಕರೆದುಕೊಂಡು ಹೋದರೆ ಅಲ್ಲಿಂದ ಹೃದಯವನ್ನು ತಂದು ನಿನಗೊಪ್ಪಿಸುವೆ, ಎಂದು ನಯವಾಗಿ ಹೇಳುತ್ತಾ ಅಪಾಯದಿಂದ ಪಾರಾದುದನ್ನು ನಾವೆಲ್ಲರೂ ಚಿಕ್ಕಂದಿನಲ್ಲಿ ಓದಿಯೇ ಇರುತ್ತೇವೆ. ಸಂಕಷ್ಟದ ಸಮಯದಲ್ಲೂ ನಮ್ಮ ಜಾಣ್ಮೆಯ ಮಾತುಗಳು ನಮ್ಮನ್ನು ಕಾಪಾಡ ಬಲ್ಲವು. ಕೋಪದಲ್ಲಿದ್ದಾಗ ನಮ್ಮ ಮನಸ್ಸು ಸರಿ ಹಾಗೂ ತಪ್ಪುಗಳನ್ನು ಸರಿಯಾಗಿ ಗ್ರಹಿಸುವುದಿಲ್ಲ. ಸರಿಯಾದ ಮಾತುಗಳು ನಮ್ಮ ವಿರುದ್ಧವಾಗಿಯೇ ಇವೆ ಎಂದು ಭಾಸವಾಗುತ್ತದೆ. ಅತಿಯಾದ ಮೊಬೈಲ್ ಗೀಳಿಗೆ ಬಿದ್ದ ತನ್ನ ಮಗನಿಗೆ ಜೋರು ಧ್ವನಿಯಲ್ಲಿ ಮೊಬೈಲ್ ಬಳಸಬೇಡವೆಂದು ಹೇಳಿದ್ದಕ್ಕೆ ಮಗ ಆತ್ಮಹತ್ಯೆಗೆ ಶರಣಾದ ಸುದ್ದಿ ನಾವೆಲ್ಲ ಪತ್ರಿಕೆಗಳಲ್ಲಿ ಓದಿರುತ್ತೇವೆ.

ಬಸ್ಸಿನಲ್ಲಿ ಪಯಣಿಸುವಾಗ ಆಕಸ್ಮಿಕವಾಗಿ ಬೇರೆಯವರಿಗೆ ಕೈ-ಕಾಲೋ ಟಚ್ ಆದ ತಕ್ಷಣವೇ ಆಕಾಶ ಕಳಚಿ ಬಿದ್ದಂತೆ ರಂಪಾ ರಾಮಾಯಣ ಮಾಡುವ ಎಷ್ಟು ಜನರನ್ನು ನಾವು ನೋಡಿರುವುದಿಲ್ಲ ಹೇಳಿ. ಇಂತಹ ಒಂದು ಸಣ್ಣ ಘಟನೆ, ಆ ದಿನದ ಖುಷಿಯನ್ನೆಲ್ಲ ನುಂಗಿ ಹಾಕಿಬಿಡುತ್ತದೆ. ಮನೆಯಲ್ಲಿ ಉಂಟಾದ ಸಣ್ಣಪುಟ್ಟ ಅಸಮಾಧಾನಗಳು ಕಚೇರಿಯಲ್ಲೋ ಶಾಲೆಯಲ್ಲೋ ತಮ್ಮ ಪರಿಣಾಮವನ್ನು ಬೀರುತ್ತವೆ. ಘಟಕ ಪರೀಕ್ಷೆಯಲ್ಲಿ ತನ್ನ ಮಗ ಕಡಿಮೆ ಅಂಕ ಪಡೆದನೆಂದು ಒಬ್ಬ ತಾಯಿ ತರಗತಿ ಶಿಕ್ಷಕಿಯ ಎದುರೇ ತಲೆಗೆ ಮೊಟಕಿ 'ನಿನ್ನ ಯೋಗ್ಯತೆಗೆ ಇಷ್ಟೇನಾ ಅಂಕ ಪಡೆಯುವುದು, ಮುಂದೆ ನಿನ್ನನ್ನು ಡಾಕ್ಟರ್ ಮಾಡಬೇಕೆಂದುಕೊಂಡಿರುವೆ, ಈ ತರಹ ಅಂಕಗಳನ್ನು ಪಡೆದರೆ ನಮ್ಮ ಮರ್ಯಾದೆಯ ಪ್ರಶ್ನೆ ಏನು..? ನೋಡು ನಿನ್ನ ಸ್ನೇಹಿತ ಎಷ್ಟೊಂದು ಅಂಕಗಳನ್ನು ಪಡೆದಿದ್ದಾನೆ. ನಿನ್ನನ್ನು ಹೆತ್ತಿದ್ದು ನನ್ನದೇ ತಪ್ಪು' ಎಂದು ಶರಂಪರ ಮಾಡಿದರು. 'ನಿಮಗೆ ಪಾಠ ಅರ್ಥವಾಗದಿದ್ದರೆ ಎಷ್ಟು ಬಾರಿ ಬೇಕಾದರೂ ಕೇಳಿ ಹೇಳುತ್ತೇನೆ.' ಎನ್ನುವ ಶಿಕ್ಷಕ ಕೆಲವೊಮ್ಮೆ ವಿದ್ಯಾರ್ಥಿ ಕೇಳುವ ಪ್ರಶ್ನೆಗೆ ತಣ್ಣೀರು ಎರಚುವಂತೆ, 'ಇಷ್ಟೊಂದು ಚಿಕ್ಕ ಪ್ರಶ್ನೆಯನ್ನು ಕೇಳುತ್ತಿಯಲ್ಲ, ಪಾಠ ಮಾಡಬೇಕಾದರೆ ಏನು ಮಾಡುತ್ತಿದ್ದೆ, ಕುಳಿತುಕೋ ಸುಮ್ಮನೆ' ಎನ್ನುವುದನ್ನು ಕಂಡು ಕೇಳಿರುತ್ತೇವೆ. ಈ ತರಹದ ಘಟನೆಗಳನ್ನು ಪಟ್ಟಿ ಮಾಡುತ್ತಾ ಹೋದರೆ ಹನುಮಂತನ ಬಾಲದಂತೆ ಬೆಳೆಯುತ್ತಾ ಹೋಗುತ್ತದೆ.

ಹಾಗಾದರೆ ಏನು ಮಾಡಬೇಕು..?

ಕೋಪದಲ್ಲಿದ್ದಾಗ ಯಾವುದೇ ಪ್ರತಿಕ್ರಿಯೆ ಸಲಹೆಯನ್ನು ನೀಡಬಾರದು. ಬಿಟ್ಟ ಬಾಣ ಆಡಿದ ಮಾತು ಎಂದಿಗೂ ಹಿಂದಿರುಗುವುದಿಲ್ಲ. ಮಾತನಾಡುವ ಮುಂಚೆ ಅದರ ಪರಿಣಾಮಗಳನ್ನು ಯೋಚಿಸಿ ಮಾತನಾಡಬೇಕು. ಎದುರಿಗಿರುವವರು ಕೋಪ ಅಸಮಾಧಾನದಲ್ಲಿದ್ದಾಗ ಯಾವುದೇ ರೀತಿಯ ಮಾತುಗಳು ರುಚಿಸುವುದಿಲ್ಲ ಎನ್ನುವುದನ್ನು ತಿಳಿದುಕೊಂಡಿರಬೇಕು. ಮೇಲಿನ ಘಟನೆಗಳನ್ನು ತೆಗೆದುಕೊಂಡಾಗ, ನಮ್ಮ ಕೈಯೊ ಕಾಲೋ ಬೇರೆಯವರಿಗೆ ತಾಗಿದಾಗ, ಅಥವಾ ಅವರಿಂದ ನಮಗೆ ತಾಗಿದಾಗ ಸಾರಿ ಅಥವಾ ಒಂದು ಮುಗುಳುನಗೆ ಸಾಕು. ಮಗ ಅಥವಾ ಮಗಳು ಕಡಿಮೆ ಅಂಕಗಳನ್ನು ಪಡೆದಾಗ, ಕಾರಣಗಳನ್ನು ಹುಡುಕಿ, ನಿಧಾನವಾಗಿ ಸಮಾಧಾನ ಮಾಡುತ್ತಾ, ಮುಂದಿನ ಪರೀಕ್ಷೆಗಳನ್ನು ಎದುರಿಸಲು ಸಕಾರಾತ್ಮಕವಾಗಿ ಪ್ರೋತ್ಸಾಹಿಸುತ್ತಾ ಹುರಿದುಂಬಿಸಬೇಕು. ಎಷ್ಟೇ ಒತ್ತಡದಲ್ಲಿದ್ದರೂ ಶಿಕ್ಷಕ ಪ್ರತಿ ವಿದ್ಯಾರ್ಥಿಯ ಪ್ರಶ್ನೆಗಳನ್ನು ಸಮಾಧಾನ ಚಿತ್ತದಿಂದ ಆಲಿಸುತ್ತ ಪರಿಹಾರಗಳನ್ನು ಸೂಚಿಸಬೇಕು. ಪ್ರಶ್ನಿಸುವ ಮನೋಭೂಮಿಕೆಯನ್ನು ಮಕ್ಕಳಿಗೆ ತಿಳಿಸುತ್ತಾ ಪ್ರೋತ್ಸಾಹಿಸಬೇಕು. ಒಮ್ಮೆ ಒಬ್ಬ ವಿದ್ಯಾರ್ಥಿಯ ಪ್ರಶ್ನಿಸುವ ಕೌಶಲವನ್ನು ಮೊಟಕುಗೊಳಿಸಿದರೆ ಮುಂದೆಂದೂ ಆತ ಸಮಾಜದ ಅಂಕುಡೊಂಕುಗಳನ್ನು ಪ್ರಶ್ನಿಸಲಾರ ಎನ್ನುವ ಕನಿಷ್ಠ ತಿಳುವಳಿಕೆಯನ್ನು ಶಿಕ್ಷಕ ಹೊಂದಿರಬೇಕಾಗುತ್ತದೆ.

ಚನ್ನವೀರ ಕಣವಿಯವರು ಮೃದು ಮಧುರ ಹಿತನುಡಿಗಳ ಆಡಬೇಕೆಂದು ಆಶಿಸುತ್ತಾ

ನಾವು ಆಡುವ ಮಾತು ಹೀಗಿರಲಿ ಗೆಳೆಯ
ಮೃದುವಚನ ಮೂಲೋಕ ಗೆಲ್ಲುವುದು ತಿಳಿಯ
ಮುಂಜಾವದಲಿ ಹಸಿರು ಹುಲ್ಲ ಮಕ ಮಲ್ಲಿನಲಿ
ಪಾರಿಜಾತವು ಹೂವ ಸುರಿಸಿದಂತೆ
ಮೌನ ಮೊಗ್ಗೆಯನೊಡೆದು ಮಾತರಳಿ ಬರಲಿ

ಮೂರು ಗಳಿಗೆಯ ಬಾಳು ಮಗ ಮಗಿಸುತಿರಲಿಎಂದು ಮಾತಿನ ರೀತಿನೀತಿಯನ್ನು ಮನೋಜ್ಞವಾಗಿ ತಿಳಿಸಿದರೆ,

ಏನ ಬಂದಿರಿ ಹದುಳವಿದ್ದಿರೇ? ಎಂದರೆ
ನಿಮ್ಮ ಮೈಸಿರಿ ಹಾರಿ ಹೋಹುದೆ?

ಕುಳ್ಳಿರೆಂದರೆ ನೆಲ ಕುಳಿ ಹೋಹುದೆ? ಎಂಬ ಬಸವಣ್ಣನವರ ಪ್ರಶ್ನೆಯಲ್ಲಿ ಸಾಮಾನ್ಯ, ದೈನಂದಿನ ವ್ಯವಹಾರಗಳಲ್ಲಿಯೂ ನಯ ವಿನಯವಿರಬೇಕೆಂಬ ಮಾರ್ಗದರ್ಶನವಿದೆ.



ಪ | ದ | ಬಂ | ಧ



ಎಡದಿಂದ ಬಲಕ್ಕೆ

1. ನಯವಾಗಿರುವ ನಮ್ರತೆ (3)
2. ನಾವು ಉಸಿರಾಡಲು ಬೇಕಾದ ಗಾಳಿಯ ಘಟಕ (5)
5. ಗುಹೆಗೆ ಮತ್ತೊಂದು ಹೆಸರು (2)
6. ಹೊಗೆಸೊಪ್ಪಿನ ಕಡ್ಡಿಗಳ ಹುಡಿ (4)
8. ಕಣ್ಣಿಗೆ ಹಾಕುವ ಅಂಜನ (3)
10. ಗೆಲುವಿಗೆ ಇನ್ನೊಂದು ಪದ (2)
11. ತಿರುಗಿ ಬಂದ ಭೂಮಿ (2)
12. ಅನಂತರ ಎನ್ನುವ ಮತ್ತೊಂದು ಪದ (3)
14. ಹೀನ ಅಥವಾ ಕಿರಿಯ ಎಂದರ್ಥ (3)
16. ಹೊಲಗದ್ದೆಗಳ ಅಂಚಿನಲ್ಲಿ ನಿರ್ಮಿಸಿದ ಮಣ್ಣಿನ ದಂಡೆ (2)
17. ತುಂಟ ಹುಡುಗನಿಗೆ ಒಪ್ಪುವ ಹೆಸರು (2)
19. ಸಿಟ್ಟುಗೊಂಡ ಎಂದರ್ಥ (3)
21. ಕುದುರೆಯ ಸೇವಕ ಎಂದರ್ಥ (4)
23. ವಿಕ್ರಯಿಸು ಎಂದರ್ಥ (2)
24. ಭಕ್ತಿಯಿಂದ ಉಡುಪಿಯ ಕೃಷ್ಣನನ್ನೇ ತಿರುಗಿಸಿದ ದಾಸರು (5)
25. ಹೆಚ್ಚಳವನ್ನು ಧ್ವನಿಸುವ ಪದ (3)

ಎಡದಿಂದ ಬಲಕ್ಕೆ

1. ದೇವತೆಗಳ ಶಿಲ್ಪಿ (4)
2. ನೀರಿನ ಹಬೆ (2)
3. ಧಾನ್ಯಗಳನ್ನು ಹಸನು ಮಾಡುವ ರಂಧ್ರಗಳುಳ್ಳ ಸಾಧನ (3)
4. ದುಡಿತಕ್ಕೆ ಹೆಸರಾದ ಪ್ರಾಣಿ (2)
5. ಗಾಡಿಯಲ್ಲಿ ಹೋಗುವ ಕಾಣಿಸಿದ ಸೀಮೆ (2)
7. ವಿಗ್ರಹಕ್ಕೆ ಮತ್ತೊಂದು ಹೆಸರು (3)
8. ಕೈಲಾಸ ತೋರಿಸಬಲ್ಲ ಕೆಲಸ (3)
9. ಒಳ್ಳೆಯ ಮಿತ್ರ (3)
12. ಜೀವನಕ್ಕೆ ಮತ್ತೊಂದು ಹೆಸರು (3)
13. ತಿಂಡಿಪೋತನಿಗೆ ಸಿಕ್ಕಿದ ಪಾರಿವಾಳ (3)
15. ಸಾರವೇ ಇಲ್ಲದಿರುವುದು (3)
18. ತಾಳ ಹಾಕುತ್ತ ಮಾಡಿದ ಸಂಪು (4)
20. ಶಿವನ ಧನುಸ್ಸಿನ ಹೆಸರು (3)
21. ನಾಲ್ಕು ಚಕ್ರದ ಮೋಟಾರು ವಾಹನ (2)
22. ಪರೀಕ್ಷೆಯಲ್ಲಿ ತೇರ್ಗಡೆಯಾಗಲು ಸಿಗಬೇಕಾದ ಮಾರ್ಕ್ (2)
23. ತಿಂಗಳಿಗೆ ಮತ್ತೊಂದು ಹೆಸರು (2)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಮಾತಂಗ 3. ಮಂಟಪ 6. ದಾರಂದ 7. ದಶಕ 8. ರಕ್ಷಕ 10. ವಿರಾಮ 12. ಮಾಟ 13. ಣಿರಾಗು 14. ಪತಿ 15. ಣರುವ 17. ಅರಸ 20. ಮಸಣ 21. ಮನವಾ 22. ಕಠೋರ 23. ತುಣುಕು

ಮೇಲಿನಿಂದ ಕೆಳಕ್ಕೆ: 1. ಮಾಳಿಗೆ 2. ಗದಾಧರಾ 3. ಮಂದರ 4. ಪದಕ 5. ತಾಕಲಾಟ 9. ಕ್ಷಮಾಗುಣ 10. ವಿನಂತಿ 11. ಮಣಿಹಾರ 12. ಮಾಧವ 14. ಪರಿಮಳ 16. ರುಜುವಾತು 17. ಅಣಕ 18. ಸಮರ 19. ಧಿಮಾಕು

• ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಮಮ್ಮಿಯಾಗಿರುವ ದೇಹ

ಪಾಶ್ಚಿಮಾತ್ಯರಲ್ಲಿ ಕೆಲವು ಕಡೆ, ಅವರದೇ ಸಂಸ್ಕೃತಿಯಂತೆ ಸತ್ತವರ ದೇಹವನ್ನು ಮಮ್ಮಿ ಮಾಡಿ ಬಹಳ ವರ್ಷಗಳ ಕಾಲ ಸಂರಕ್ಷಿಸುವ ಪದ್ಧತಿಯಿದೆ. ಆದರೆ ಭಾರತದಲ್ಲೂ ಇದೇ ರೀತಿ ದೇಹವನ್ನು ಕಾಪಿಡುವ ಪದ್ಧತಿ ಇರುವುದು ಬಹುತೇಕರಿಗೆ ತಿಳಿದೇ ಇಲ್ಲ. ತಿರುಚಿನಾಪಳ್ಳಿಯಲ್ಲಿನ ಶ್ರೀರಂಗನಾಥ ಸ್ವಾಮಿ ದೇವಸ್ತಾನದಲ್ಲಿ ವೈಷ್ಣವ ತತ್ವಜ್ಞಾನಿ, ಧರ್ಮದ ಪ್ರತಿಪಾದಕ ರಾಮಾನುಜಾಚಾರ್ಯರ ದೇಹವನ್ನು ಕ್ರಿಸ್ತ ಶಕ 1137ರಿಂದ ಅಂದರೆ ಸುಮಾರು 885 ವರ್ಷಗಳಿಂದ ಕೆಡದಂತೆ ಸಂರಕ್ಷಿಸಿ ಇಡಲಾಗಿದೆ. ದೇಹದ ಸಂರಕ್ಷಣೆಗೆ ರಾಸಾಯನಿಕದ ಬದಲಾಗಿ, ಶ್ರೀಗಂಧ ಮತ್ತು ತಾಜಾ ಕುಂಕುಮವನ್ನು ಬಳಸಲಾಗಿದೆ. ವರ್ಷಕ್ಕೆ ಎರಡು ಬಾರಿ ಕೇಸರಿ ಮತ್ತು ಕರ್ಪೂರದ ಮಿಶ್ರಣವನ್ನು ಲೇಪಿಸಲಾಗುತ್ತದೆ.

ಪುಸ್ತಕ ಲೋಕ



ಎಮರ್ಜೆನ್ಸಿ

ಸಂವಿಧಾನದ ಕೊಲೆಗೆ ನಡೆದ ಸಂಚು ಕುರಿತು ಬರೆದಿರುವ ರೋಹಿತ್ ಚಕ್ರತೀರ್ಥ ಅವರ ಸಂಪಾದಿತ ಲೇಖನ ಸಂಕಲನವಾಗಿದೆ. ಇಲ್ಲಿ 1975 ರಲ್ಲಿ ಕಾಂಗ್ರೆಸ್ ಪಕ್ಷದ ಇಂದಿರಾ ಗಾಂಧಿ ಘೋಷಿಸಿದ ತುರ್ತು ಪರಿಸ್ಥಿತಿಯ ಕುರಿತು ವಿವರಿಸಲಾಗಿದೆ. ಇನ್ನು ಇದೊಂದು ಭಾರತದ ಪ್ರಜಾಪ್ರಭುತ್ವ ಇತಿಹಾಸದಲ್ಲಿ ಅಳಿಸಲಾರದ ಕಪ್ಪುಚುಕ್ಕೆ. ಇದು ಏಕಾಯಿತು, ಹೇಗಾಯಿತು ಇದರ ಪರಿಣಾಮಗಳೇನು, ಸಂವಿಧಾನದ ಸ್ವರೂಪಕ್ಕೆ ಆದ ಘಾಸಿಯ ಪ್ರಮಾಣ ಎಂಥದ್ದು, ಷಾ ಆಯೋಗದ ವರದಿಯಲ್ಲಿ ದಾಖಲಿಸಿದ ಸತ್ಯಗಳೇನು, ಅ ವರದಿಯನ್ನು 35 ವರ್ಷ ಮುಚ್ಚಿಡುವುದಕ್ಕೆ ಏನು ಕಾರಣ. ಇತ್ಯಾದಿ -ಕನ್ನಡದಲ್ಲಿ ಇದುವರೆಗೂ ಪ್ರಕಟವಾಗದ ಮಾಹಿತಿಗಳನ್ನು ಸಂಗ್ರಹ ರೂಪದಲ್ಲಿ ಕೊಡುವ ಕೃತಿಯಿದು.

ಟ್ವೀಟ್‌ಮೆಂಟ್

ಕೇಲ್: ಡಾಕ್ಟರ್ ಹೇಳಿದರು, ಆರೋಗ್ಯದಿಂದಿರಿ. ಅದಕ್ಕೆ ನಾನು ಏಕೆ ಎಂದು ಕೇಳಿದೆ ಅವರು, ಅದರಿಂದ ನೀವು ತುಂಬ ದಿನ ಬದುಕಬಹುದು ಎಂದು ಹೇಳಿದರು.
ತುಂಬಾ ದಿನ ಬದುಕಿದ್ದೂ ಮಾಡೋದೇನಿದೆ?
ಮೈಕೆಲ್: ಹೌದು, ನಿನ್ನಂಥವರು ಭೂಮಿ ಮೇಲೆ ಇದ್ದರೆ ಭೂಮಿಯ ಭಾರ ಹೆಚ್ಚಾಗುತ್ತದೆ.

ಈ ದಿನ ಇತಿಹಾಸ

- 1949: ಭಾರತದ ಆಗಿನ ರಾಷ್ಟ್ರಪತಿ ಸಿ.ರಾಜಗೋಪಾಲಚಾರಿ ಅವರು ಭಾರತೀಯ ಪ್ರಾದೇಶಿಕ ಸೈನ್ಯವನ್ನು ಉದ್ಘಾಟನೆ ಮಾಡಿದರು.
- ವಿಶ್ವ ಪೋಸ್ಟ್ ದಿನ
- ಖ್ಯಾತ ಸರೋದ್ ವಾದಕ ಅಮ್ಜದ್ ಅಲಿ ಖಾನ್‌ರ ಹುಟ್ಟುಹಬ್ಬ

ಚಿತ್ರಸ್ಫೂರ್ತಿ

ಸಮಾಚಾರ ಸಣ್ಣದಲ್ಲ

ಟಿ20ಯಿಂದ ಮಹಮದುಲ್ಲಾ ನಿವೃತ್ತಿ

ದೆಹಲಿ: ಬಾಂಗ್ಲಾದೇಶದ ಅನುಭವಿ ಆಲ್‌ರೌಂಡರ್ ಮಹಮದುಲ್ಲಾ ಅವರು ಅಂತಾರಾಷ್ಟ್ರೀಯ ಟಿ20 ಕ್ರಿಕೆಟ್‌ಗೆ ಮಂಗಳವಾರ ವಿದಾಯ ಹೇಳಿದ್ದಾರೆ. ಈಗ ಭಾರತ ವಿರುದ್ಧ ನಡೆಯು ತ್ತಿರುವ ಟಿ20 ಸರಣಿಯ ಮೂರನೇ ಹಾಗೂ ಅಂತಿಮ ಪಂದ್ಯ ಅವರ ಪಾಲಿಗೆ ಕೊನೆಯ ಪಂದ್ಯವಾಗಲಿದೆ. ಹಾಲಿ ಟಿ20 ಸರಣಿಯ ಎರಡನೇ ಪಂದ್ಯ ಬುಧವಾರ ದೆಹಲಿಯಲ್ಲಿ ಹಾಗೂ ಅಂತಿಮ ಪಂದ್ಯ ಶನಿವಾರ ಹೈದರಾಬಾದಿನಲ್ಲಿ ನಡೆಯಲಿದೆ. ಈ ಸರಣಿಯ ಅಂತಿಮ ಪಂದ್ಯದ ನಂತರ ಟಿ20 ಅಂತಾರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತ ನಾಗುತ್ತಿದ್ದೇನೆ ಎಂದು ಅವರು ಭಾರತ ವಿರುದ್ಧ ಎರಡನೇ ಪಂದ್ಯಕ್ಕೆ ಪೂರ್ವಭಾವಿಯಾಗಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಪ್ರಕಟಿಸಿದರು. ಇದು ವಿದಾಯಕ್ಕೆ ಸಕಾಲವಾಗಿದ್ದು, ಏಕದಿನ ಕ್ರಿಕೆಟ್ನತ್ತ ಹೆಚ್ಚು ಗಮನಹರಿಸುತ್ತೇನೆ ಎಂದರು. 38 ವರ್ಷದ ಈ ಆಟಗಾರ 2007ರಲ್ಲಿ ಬಾಂಗ್ಲಾ ತಂಡಕ್ಕೆ ಪದಾರ್ಪಣೆ ಮಾಡಿದ್ದರು. 50 ಟೆಸ್ಟ್, 232 ಏಕದಿನ ಹಗೂ 139 ಟಿ20 ಪಂದ್ಯಗಳನ್ನು ಆಡಿದ್ದಾರೆ. ಟಿ20 ಕ್ರಿಕೆಟ್‌ನಲ್ಲಿ ಅವರು ಎಂಟು ಅರ್ಧ ಶತಕ ಸೇರಿದಂತೆ 2395 ರನ್ ಗಳಿಸಿದ್ದಾರೆ. ಆಫ್ ಸ್ಪಿನ್ ದಾಳಿಯಲ್ಲಿ 40 ವಿಕೆಟ್ಗಳನ್ನು ಪಡೆದಿದ್ದಾರೆ.ಟಿ20 ತಂಡಕ್ಕೆ ನಾಯಕರಾ ಗಿದ್ದ ಅವರು 2021ರಲ್ಲಿ ಟೆಸ್ಟ್ ಕ್ರಿಕೆಟ್‌ನಿಂದ ನಿವೃತ್ತರಾಗಿದ್ದರು.

ಐಟಿಎಫ್: ಮುಖ್ಯಸುತ್ತಿಗೆ 7 ಭಾರತೀಯರು

ಮೈಸೂರು: ಅಪೂರ್ವ ವೇಮುರಿ, ಮಂಡ್ಯದ ಕಾಶ್ವಿ ಸುನಿಲ್ ಸೇರಿ ಏಳು ಭಾರತೀಯ ಆಟಗಾರ್ತಿಯರು ಇಲ್ಲಿ ನಡೆಯುತ್ತಿರುವ ಐಟಿಎಫ್- ಮಹಿಳೆಯರ ವಿಶ್ವ ಟೆನಿಸ್ ಟೂರ್ ಟೂರ್ನಿಯ ಮುಖ್ಯಸುತ್ತಿಗೆ ಸೋಮವಾರ ಪ್ರವೇಶ ಪಡೆದರು. ಚಾಮರಾಜಪುರಂನ ಮೈಸೂರು ಟೆನಿಸ್ ಕ್ಲಬ್ (ಎಂಟಿಸಿ)ನಲ್ಲಿ ನಡೆದ ಪಂದ್ಯದಲ್ಲಿ ಅಪೂರ್ವ ವೇಮುರಿ 5-3ರಿಂದ ಚೆವಿಕಾ ರೆಡ್ಡಿ ಸಮಾ ವಿರುದ್ಧ ಮೊದಲ ಸೆಟ್ ಗೆದ್ದರು. ಈ ವೇಳೆ ಗಾಯಗೊಂಡು ಚೆವಿಕಾ ನಿವೃತ್ತರಾದರು. ಮಂಡ್ಯದ ಕಾಶ್ವಿ ಸುನಿಲ್ ಟೂರ್ನಿಯ ಅಗ್ರಶ್ರೇಯಾಂಕಿತೆ ಪ್ರಿಯಾಂಶಿ ಭಂಡಾರಿ ಅವರನ್ನು ಅರ್ಹತಾ ಸುತ್ತಿನ ಫೈನಲ್‌ನಲ್ಲಿ ಎದುರಾದರು. 5-7, 0-3ರಿಂದ ಮುನ್ನಡೆ ಸಾಧಿಸಿದ್ದ ಪ್ರಿಯಾಂಶಿ, ಭುಜದ ನೋವಿನಿಂದ ನಿವೃತ್ತರಾದರು. ಅದರಿಂದ ಕಾಶ್ವಿ ಹಿನ್ನಡೆ ಅನುಭವಿಸಿದ್ದರೂ ಮುಖ್ಯ ಸುತ್ತಿಗೆ ಪ್ರವೇಶ ಪಡೆಯುವ ಅವಕಾಶ ಸಿಕ್ಕಿತು. ಮೂರನೇ ಶ್ರೇಯಾಂಕಿತೆ ಅಭಯಾ ವೇಮುರಿ ಅವರು ಈಶ್ವರಿ ಮಾತೆರೆ ವಿರುದ್ಧ 6-1, 6-2ರಿಂದ ಗೆದ್ದರೆ, ಲಕ್ಷ್ಮಿಪ್ರಭಾ ಅರುಣ್ ಕುಮಾರ್ 6-2, 6-3ರಿಂದ ಹಾಕ್ಕಾಂಗ್‌ನ ನಿಯೊಮಿ ಹಾಗಿ ಅವರನ್ನು ಮಣಿಸಿದರು.

ಮೊದಲ ಪಂದ್ಯದಲ್ಲೇ ಬಾಂಗ್ಲಾ ವಿರುದ್ಧ ಭರ್ಜರಿ ಜಯ | ಟೆಸ್ಟ್ ಪಂದ್ಯಗಳನ್ನೂ ಸ್ವೀಪ್ ಮಾಡಿದ್ದ ಬ್ಲೂ ಬಾಯ್ಸ್

ಮತ್ತೆ ಭಾರತಕ್ಕೆ ಒಲಿಯಲಿದೆಯೇ ವಿಜಯ?

ದೆಹಲಿ: ಇಲ್ಲಿನ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಇಂದು ನಡೆಯಲಿರುವ ಎರಡನೇ ಟಿ 20 ಪಂದ್ಯದಲ್ಲಿ ಆತಿಥೇಯ ಭಾರತ, ಬಾಂಗ್ಲಾದೇಶ ತಂಡಗಳು ಪರಸ್ಪರ ಸೆಣಸಲಿದೆ. ಮೊದಲ ಪಂದ್ಯದಲ್ಲಿ ಮೆನ್ ಇನ್ ಬ್ಲೂ ತಂಡ 49 ಎಸೆತಗಳು ಬಾಕಿ ಇರುವಾಗಲೇ 7 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿತ್ತು. ಬಾಂಗ್ಲಾ ದೇಶದ ಬ್ಯಾಟರ್‌ಗಳನ್ನು ಕಡಿಮೆ ಸ್ಕೋರ್‌ಗೆ ನಿಯಂತ್ರಿಸುವಲ್ಲಿ ಯಶಸ್ವಿಯಾದ ಕಾರಣ ತವರು ತಂಡವು ಅಮೋಘ ಪ್ರದರ್ಶನ ನೀಡಿತ್ತು. ಪರಿಣಾಮ ವಾಗಿ ಸುಲಭ ಗೆಲುವು ದಾಖಲಿಸಿತ್ತು.

ತದ್ವಿರುದ್ಧವಾಗಿ, ನಜ್ಮುಲ್ ಹುಸೇನ್ ಶಾಂಟೊ ನೇತೃತ್ವದ ತಂಡವು ಮೊದಲ ಇನಿಂಗ್ಸ್‌ನಲ್ಲಿ ಬ್ಯಾಟಿಂಗ್ ಕುಸಿತವನ್ನು ಎದುರಿಸಿತು. ಗೆಲುವಿಗೆ ಬೇಕಾಗುಷ್ಟು ರನ್ ಗಳಿಸಲು ವಿಫಲವಾಯಿತು. ಬ್ಯಾಟಿಂಗ್ ಟ್ರ್ಯಾಕ್‌ನಲ್ಲಿ ಭಾರತೀಯ ಬ್ಯಾಟರ್ ಗಳನ್ನು ನಿರ್ಬಂಧಿಸಲು ಅವರಿಗೆ ಕಷ್ಟವಾಯಿತು. ಎರಡನೇ ಪಂದ್ಯವು ರಾಷ್ಟ್ರ ರಾಜಧಾನಿಯಲ್ಲಿ ನಡೆಯ ಲಿರುವುದರಿಂದ ಅದು ಕೂಡ ಬ್ಯಾಟಿಂಗ್ ಟ್ರ್ಯಾಕ್ ಆಗಿದೆ. ಹೀಗಾಗಿ ಪ್ರವಾಸಿ ತಂಡ ಯೋಜನೆ ರೂಪಿಸ ಬೇಕಾಗಿದೆ. ಆಟದ ಮೊದಲ ಆರು ಓವರ್‌ಗಳಲ್ಲಿ ಸಾಕಷ್ಟು ರನ್‌ಗಳನ್ನು ಗಳಿಸಬೇಕಾಗಿದೆ.

ಮೊದಲ ಪಂದ್ಯದಲ್ಲಿ ಮಯಾಂಕ್ ಯಾದವ್ ಮತ್ತು ನಿತೀಶ್ ಕುಮಾರ್ ರೆಡ್ಡಿ ಚೊಚ್ಚಲ ಪಂದ್ಯದಲ್ಲೇ ಉತ್ತಮ ಸಾಧನೆ ಮಾಡಿದ್ದರು. ಎಲ್ಲ ವಿಭಾಗಗಳಲ್ಲಿ ಮೊದಲ ಪಂದ್ಯದಲ್ಲಿ ಪ್ರಾಬಲ್ಯದ ಪ್ರದರ್ಶನ ದೊಂದಿಗೆ ಮೆನ್ ಇನ್ ಬ್ಲೂ ತಮ್ಮ ಇಲೆವೆನ್‌ನಲ್ಲಿ ಹೆಚ್ಚಿನ ಬದಲಾವಣೆ ಮಾಡಲಿದೆ.

ಪ್ರವಾಸಿ ಬಾಂಗ್ಲಾದೇಶ ತಂಡ ಸರಣಿಯನ್ನು ಜೀವಂತವಾಗಿಡಲು ಇಂದಿನ ಪಂದ್ಯದಲ್ಲಿ ತಮ್ಮ ಕಾರ್ಯತಂತ್ರವನ್ನು ಬದಲಾಯಿಸಲು ನೋಡ ಬಹುದು.

ವೇಗದ ಬೌಲರ್ ಟಸ್ಕಿನ್ ಅಹ್ಮದ್ ಕೇವಲ 17 ಎಸೆತಗಳಲ್ಲಿ 44 ರನ್ ನೀಡಿದ್ದರು. ತಂಝಿಮ್ ಹಸನ್ ಸಾಕಿಬ್ ಉತ್ತಮ ಪ್ರದರ್ಶನ ನೀಡುವ ಸಾಧ್ಯತೆಗಳಿವೆ.

ಪಿಚ್ ವರದಿ

ಅರುಣ್ ಜೇಟ್ಲಿ ಕ್ರೀಡಾಂಗಣದ ಪಿಚ್ ಬ್ಯಾಟರ್‌ಗಳಿಗೆ ಅನುಕೂಲಕರವಾಗಿದೆ. ವರ್ಷಗಳಲ್ಲಿ ಪಿಚ್ ಹೆಚ್ಚಾಗಿ ಒಣ ಪರಿಸ್ಥಿತಿಗಳು ಮತ್ತು ಸಣ್ಣ ಬೌಂಡರಿಗಳ ಕಾರಣಕ್ಕೆ ಬ್ಯಾಟಿಂಗ್ ಸ್ನೇಹಿಯಾಗಿದೆ. ಬೌಂಡರಿಗಳನ್ನು ಹೊಡೆಯುವುದು ಸುಲಭದ ಆಯ್ಕೆಯಾಗಿದೆ. ಪಂದ್ಯ ಮುಂದುವರೆದಂತೆ, ಪಿಚ್ ಸ್ಪಿನ್ನರ್‌ಗಳಿಗೆ ಸಹಾಯ ಮಾಡುತ್ತದೆ. ಈ ಮೈದಾನದಲ್ಲಿ ಆಡಿದ ಒಟ್ಟು 13 ಪಂದ್ಯಗಳಲ್ಲಿ ಮೊದಲ ಇನ್ನಿಂಗ್ಸ್ ಸರಾಸರಿ ಸ್ಕೋರ್ 139 ರನ್ ಮತ್ತು ಮೊದಲು ಬ್ಯಾಟಿಂಗ್ ಮಾಡುವ ತಂಡಗಳು ನಾಲ್ಕು ಬಾರಿ ಗೆದ್ದಿವೆ.

ಮುಖಾಮುಖಿ ಸಾಧನೆ

ಆಡಿದ ಪಂದ್ಯಗಳು	15
ಭಾರತಕ್ಕೆ ಗೆಲುವು	14
ಬಾಂಗ್ಲಾ ವಿರುದ್ಧ ಗೆಲುವು	01
ಫಲಿತಾಂಶ ಇಲ್ಲ	00
ಮೊದಲ ಪಂದ್ಯ	06/06/09
ಇತ್ತೀಚಿನ ಫಿಕ್ಚರ್	06/10/24

ಸಂಭಾವ್ಯ ತಂಡಗಳು

ಭಾರತ: ಅಭಿಷೇಕ್ ಶರ್ಮಾ, ಸಂಜು ಸ್ಯಾಮ್ಸನ್ (ವಿಕೆಟ್ ಕೀಪರ್), ಸೂರ್ಯ ಕುಮಾರ್ ಯಾದವ್ (ನಾಯಕ), ನಿತೀಶ್ ರೆಡ್ಡಿ, ಹಾರ್ದಿಕ್ ಪಾಂಡ್ಯ, ರಿಯಾನ್ ಪರಾಗ್, ರಿಂಕು ಸಿಂಗ್, ವಾಷಿಂಗ್ಟನ್ ಸುಂದರ್, ವರುಣ್ ಚಕ್ರವರ್ತಿ, ಅರ್ಷ್ ದೀಪ್ ಸಿಂಗ್, ಮಯಾಂಕ್ ಯಾದವ್.

ಬಾಂಗ್ಲಾದೇಶ: ಲಿಟನ್ ದಾಸ್ (ವಿಕೆಟ್ ಕೀಪರ್), ಪರ್ವೇಜ್ ಹುಸೇನ್ ಎಮೋನ್, ನಜ್ಮುಲ್ ಹುಸೇನ್ ಶಾಂಟೊ (ನಾಯಕ), ತೌಹಿದ್ ಹೃದೋಯ್, ಮಹಮುದುಲ್ಲಾ, ಜೇಕರ್ ಅಲಿ, ಮೆಹಿದಿ ಹಸನ್ ಮಿರಾಜ್, ರಿಷದ್ ಹುಸೇನ್, ತಸ್ಕಿನ್ ಅಹ್ಮದ್ / ತಂಜಿಮ್ ಹಸನ್ ಸಾಕಿಬ್, ಮುಸ್ತಾಫಿಜುರ್ ರಹಮಾನ್, ಶೋರಿಫುಲ್ ಇಸ್ಲಾಂ.

ಸ್ಥಳ: ಅರುಣ್ ಜೇಟ್ಲಿ ಕ್ರೀಡಾಂಗಣ, ದೆಹಲಿ
ದಿನಾಂಕ ಮತ್ತು ಸಮಯ: ಅಕ್ಟೋಬರ್ 9, ಬುಧವಾರ, ಸಂಜೆ 7 ಗಂಟೆಗೆ

ಬಳ್ಳಾರಿಯಲ್ಲಿ ನಡೆದ ರಾಜ್ಯಮಟ್ಟದ ಮಾಸ್ಟರ್ಸ್‌ಸ್ವಿಮ್ಮಿಂಗ್ ಚಾಂಪಿಯನ್‌ಶಿಪ್

ಈಜು: ರಜನಿ ಲಕ್ಕಗೆ 6 ಚಿನ್ನ

ಬಳ್ಳಾರಿ: 25ನೇ ರಾಜ್ಯಮಟ್ಟದ ಮಾಸ್ಟರ್ಸ್ ಸ್ವಿಮ್ಮಿಂಗ್ ಚಾಂಪಿಯನ್‌ಶಿಪ್-2024 ವತಿಯಿಂದ ಅ.5 ಮತ್ತು 6 ರಂದು ಬೆಂಗಳೂರಿನಲ್ಲಿ ನಡೆದ ಈಜು ಸ್ಪರ್ಧೆಯಲ್ಲಿ ರಜನಿ ಲಕ್ಕ ಅವರು ಆರು ಚಿನ್ನ, ಒಂದು ಬೆಳ್ಳಿ ಪದಕ ಸೇರಿ 7 ಪದಕಗಳನ್ನು ಗೆದ್ದು ಮುಡಿಗೇರಿಸಿಕೊಂಡಿದ್ದಾರೆ.

ರಾಜ್ಯಮಟ್ಟದ ಮಾಸ್ಟರ್ಸ್ ಸ್ವಿಮ್ಮಿಂಗ್ ಚಾಂಪಿಯನ್‌ಶಿಪ್-2024 ವತಿಯಿಂದ ಆಯೋಜಿಸಿದ್ದ ವಿವಿಧ ಈಜು ಸ್ಪರ್ಧೆಗಳಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಸ್ಪರ್ಧಾಳುಗಳು ಭಾಗವಹಿಸಿದ್ದರು. ಜಿಲ್ಲೆಯನ್ನು ಪ್ರತಿನಿಧಿಸಿ ರಜನಿ ಲಕ್ಕ ಅವರು ಆಯ್ಕೆಯಾಗಿದ್ದರು.

ಅವರು, ಈಜು ಸ್ಪರ್ಧೆಯಲ್ಲಿ 100 ಮೀ. ಬ್ಯಾಕ್ ಸ್ಟ್ರೋಕ್ , 200 ಮೀ. ಐಎಂ, 50 ಮೀ. ಫ್ರೀ ಸ್ಟೈಲ್, 50 ಮೀ. ಬಟ್ಲರ್ ಫ್ಲೈ, 4X50 ಫ್ರೀ ರಿಲೇ ವಿಭಾಗಗಳಲ್ಲಿ ಭಾಗವಹಿಸಿ, ಪ್ರಥಮ ಸ್ಥಾನ ಪಡೆದುಕೊಂಡು 6 ಚಿನ್ನ, 1 ಬೆಳ್ಳಿ ಪದಕ ಹಾಗೂ ಪ್ರಶಸ್ತಿ ಪ್ರಮಾಣ ಪತ್ರ ತಮ್ಮದಾಗಿಸಿಕೊಂಡಿದ್ದಾರೆ.

ರಜನಿ ಲಕ್ಕ ಅವರು, ರಾಜ್ಯ ಮಟ್ಟದ, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿ 100 ಕ್ಕೂ ಹೆಚ್ಚು ಪದಕಗಳನ್ನು ಹೊಂದಿದ್ದಾರೆ.

ನವೆಂಬರ್ 10 ರಿಂದ 12 ರ ವರೆಗೆ ಭೂಪಾಲ್‌ನಲ್ಲಿ ನಡೆಯುವ ರಾಷ್ಟ್ರ ಮಟ್ಟದ ಮಾಸ್ಟರ್ಸ್ ಸ್ವಿಮ್ಮಿಂಗ್ ಚಾಂಪಿಯನ್‌ಶಿಪ್-2024 ಗೆ ಆಯ್ಕೆಯಾಗಿದ್ದು, ಅಲ್ಲಿ ನಡೆಯುವ ಈಜು ಸ್ಪರ್ಧೆಗಳಲ್ಲಿ ಭಾಗವಹಿಸುವರು.

ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ, ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭರಾಣಿ.ವಿ.ಜೆ., ಜಿಪಂ ಸಿಇಒ ರಾಹುಲ್ ಶರಣಪ್ಪ ಸಂಕನೂರ, ಎಡಿಸಿ ಮಹಮ್ಮದ್ ಝುಬೇರ್, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಕೆ.ಗ್ರೇಸಿ ಅವರು ಅಭಿನಂದಿಸಿದ್ದಾರೆ.

ರಾಜ್ಯಮಟ್ಟದ ಮಾಸ್ಟರ್ಸ್ ಸ್ವಿಮ್ಮಿಂಗ್ ಚಾಂಪಿಯನ್‌ಶಿಪ್-2024 ವತಿಯಿಂದ ಆಯೋಜಿಸಿದ್ದ ವಿವಿಧ ಈಜು ಸ್ಪರ್ಧೆಗಳಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಸ್ಪರ್ಧಾಳುಗಳು ಭಾಗವಹಿಸಿದ್ದರು.

ಐಸಿಸಿ ಬ್ಯಾಟಿಂಗ್‌ನಲ್ಲಿ 12 ಸ್ಥಾನಕ್ಕೇರಿದ ಹರ್ಮನ್‌ಪ್ರೀತ್‌ಗೆ 610 ಪಾಯಿಂಟ್

ನಿಯಮ ಉಲ್ಲಂಘನೆಗೆ ಅರುಂಧತಿ ರೆಡ್ಡಿಗೆ ಡಿಮೆರಿಟ್ ಪಾಯಿಂಟ್

ಮಹಿಳಾ ಕ್ರಿಕೆಟಿಗರ ಮುನ್ನಡೆ, ಹಿನ್ನಡೆ

ದುಬೈ: ಭಾರತ ಕ್ರಿಕೆಟ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರು ಮಂಗಳವಾರ ಪ್ರಕಟವಾದ ಐಸಿಸಿ ಮಹಿಳಾ ಟಿ20 ರ‍್ಯಾಂಕಿಂಗ್ ಪಟ್ಟಿಯ ಬ್ಯಾಟರ್‌ಗಳ ವಿಭಾಗದಲ್ಲಿ ನಾಲ್ಕು ಸ್ಥಾನ ಬಡ್ತಿ ಕಂಡು 12ನೇ ಸ್ಥಾನಕ್ಕೇರಿದ್ದಾರೆ.

ಹರ್ಮನ್‌ಪ್ರೀತ್ ಜತೆ ಶ್ರೀಲಂಕಾದ ಹರ್ಷಿತಾ ಸಮರವಿಕ್ರಮ (610 ಪಾಯಿಂಟ್ಸ್) ಅವರು 12ನೇ ಸ್ಥಾನ ಹಂಚಿಕೊಂಡಿದ್ದಾರೆ. ಅನುಭವಿ ಆಟಗಾರ್ತಿ ಸ್ಮೃತಿ ಮಂದಾನಾ ಒಂದು ಸ್ಥಾನ ಕೆಳಗಿಳಿದು ಐದನೇ ಸ್ಥಾನದಲ್ಲಿದ್ದಾರೆ. ಜೆಮಿಮಾ ರಾಡ್ರಿಗಸ್ ಕೂಡ ಹಿಂಬಡ್ತಿ ಪಡೆದು 20ನೇ ಸ್ಥಾನಕ್ಕಿಳಿದಿದ್ದಾರೆ. ಬೆತ್ ಮೂನಿ (761) ಅಗ್ರಸ್ಥಾನದಲ್ಲಿದ್ದಾರೆ. ಬೌಲರ್‌ಗಳ ಪಟ್ಟಿಯಲ್ಲಿ ಕನ್ನಡತಿ, ಆಫ್ ಸ್ಪಿನ್ನರ್ ಶ್ರೇಯಾಂಕ ಪಾಟೀಲ ಅವರು 9 ಸ್ಥಾನ ಮೇಲೇರಿ 29ನೇ ಸ್ಥಾನದಲ್ಲಿ ದ್ದಾರೆ. ಅನುಭವಿ ಆಫ್ ಸ್ಪಿನ್ನರ್ ದೀಪ್ತಿ ಶರ್ಮಾ ನಾಲ್ಕನೇ ಸ್ಥಾನಕ್ಕೆ ಸರಿದಿದ್ದಾರೆ. ವೇಗದ ಬೌಲರ್ ರೇಣುಕಾ ಸಿಂಗ್ ಠಾಕೂರ್ ಐದನೇ ಸ್ಥಾನ ಉಳಿಸಿಕೊಂಡಿದ್ದಾರೆ.

ಸಾದಿಯಾ ಇಕ್ಬಾಲ್ ಅಲ್ಪಕಾಲ ಅಗ್ರಸ್ಥಾನಕ್ಕೇರಿದ್ದು, ಈ ಗೌರವಕ್ಕೆ ಪಾತ್ರರಾದ ಮೊದಲ ಪಾಕ್ ಆಟಗಾರ್ತಿ ಎಂಬ ಗೌರವಕ್ಕೆ ಪಾತ್ರರಾಗಿದ್ದರು. ಅವರು ದೀರ್ಘಕಾಲ ಅಗ್ರಸ್ಥಾನದಲ್ಲಿದ್ದ ಇಂಗ್ಲೆಂಡ್‌ನ ಸೋಫಿ ಎಕ್ಲೆಸ್ಟೋನ್ ಅವರನ್ನು ಹಿಂದೆಹಾಕಿದ್ದರು. ಟಿ20 ವಿಶ್ವಕಪ್ ಎ ಗುಂಪಿನಲ್ಲಿ ಲಂಕಾ ವಿರುದ್ಧ 17 ರನ್ನಿಗೆ 3 ವಿಕೆಟ್ ಪಡೆದು ಅಗ್ರಸ್ಥಾನಕ್ಕೇರಿದ್ದ ಅವರು, ಬಾಂಗ್ಲಾ ವಿರುದ್ಧ ವಿಕೆಟ್ ಪಡೆಯಲು ವಿಫಲರಾದರು. ಇನ್ನೊಂದೆಡೆ ದಕ್ಷಿಣ ಆಫ್ರಿಕಾ ವಿರುದ್ಧ 15 ರನ್ನಗೆ 2 ವಿಕೆಟ್ ಪಡೆದ ಎಕ್ಲೆಸ್ಟೋನ್ ಪಂದ್ಯದ ಆಟಗಾರ್ತಿ ಗೌರವದ ಜತೆಗೆ ಅಗ್ರ ಕ್ರಮಾಂಕ (762 ಪಾಯಿಂಟ್) ಮರಳಿ ಪಡೆದರು.

ಅರುಂಧತಿ ರೆಡ್ಡಿಗೆ ವಾಗ್ದಂಡನೆ

ದುಬೈ: ಪಾಕಿಸ್ತಾನ ವಿರುದ್ಧದ ಪಂದ್ಯದ ವೇಳೆ ಐಸಿಸಿಯ ನಿಯಮ ಉಲ್ಲಂಘಿಸಿದ ಭಾರತದ ತಂಡದ ಬೌಲರ್ ಅರುಂಧತಿ ರೆಡ್ಡಿ ಅವರನ್ನು ವಾಗ್ದಂಡನೆಗೆ ಗುರಿಪಡಿಸಲಾಗಿದೆ. ಐಸಿಸಿ ಮಹಿಳಾ ಟಿ20 ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಭಾನುವಾರ ಭಾರತ ತಂಡವು ಆರು ವಿಕೆಟ್‌ಗಳಿಂದ ಜಯ ಸಾಧಿಸಿತ್ತು. ಈ ಪಂದ್ಯದಲ್ಲಿ ಮೂರು ವಿಕೆಟ್ ಪಡೆದು ಗೆಲುವಿನ ರೂವಾರಿಯಾಗಿ ದ್ದರು. ಆದರೆ, ಅರುಂಧತಿ ಅವರು ಪಾಕ್ ತಂಡದ ನಿದಾ ದಾರ್ ಅವರನ್ನು ಔಟ್ ಮಾಡಿದ ನಂತರ ಆಕ್ರಮಣಕಾರಿಯಾಗಿ ಸಂಭ್ರಮಿಸಿದ್ದರು. ಅಲ್ಲದೆ, ಪೆವಿಲಿಯನ್‌ಗೆ ಹೋಗುವಂತೆ ಕೈ ಸನ್ನೆ ಮಾಡಿದ್ದರು. ಐಸಿಸಿಯ ನೀತಿ ಸಂಹಿತೆಯ ವಿಧಿ 2.5 ಅನ್ನು ಉಲ್ಲಂಘಿಸಿದ್ದಕ್ಕಾಗಿ ಅರುಂಧತಿ ರೆಡ್ಡಿ ತಪ್ಪಿತಸ್ಥರೆಂದು ಸಾಬೀತಾಗಿದೆ. ಯಾವುದೇ ಆಟಗಾರರು ಔಟಾದಾಗ ಆಕ್ರಮಣಕಾರಿ ವರ್ತನೆ ತೋರುವುದು ಮತ್ತು ಪಂದ್ಯದ ವೇಳೆ ಅವಾಚ್ಯ ಭಾಷೆ, ಕ್ರಿಯೆಗಳು ಅಥವಾ ಸನ್ನೆಗಳನ್ನು ಬಳಸುವುದನ್ನು ಈ ನಿಯಮ ಸೂಚಿಸುತ್ತದೆ. ಅರುಂಧತಿ ಅವರಿಗೆ ಒಂದು ಡಿಮೆರಿಟ್ ಪಾಯಿಂಟ್ ನೀಡಲಾಗಿದೆ ಎಂದು ಐಸಿಸಿಯ ಪ್ರಕಟಣೆ ತಿಳಿಸಿದೆ.

ಸಿಕ್ಸ್‌ಪ್ಯಾಕ್ ಅವತಾರದಲ್ಲಿ ಸುದೀಪ್



ಕಿಚ್ಚ ಸುದೀಪ್ ಮ್ಯಾಕ್ಸ್ ಮೂಲಕ ಭರ್ಜರಿಯಾಗಿ ತೆರೆಗೆ ಎಂಟ್ರಿಕೊಡಲು ಸಿದ್ಧವಾಗಿದ್ದಾರೆ. ಶೂಟಿಂಗ್ ಮುಗಿಸಿರುವ ಮ್ಯಾಕ್ಸ್ ರಿಲೀಸ್‌ಗೆ ರೆಡಿಯಾಗಿದ್ದು, ಡಿಸೆಂಬರ್‌ನಲ್ಲಿ ಮ್ಯಾಕ್ಸ್ ಚಿತ್ರವನ್ನು ಕಣ್ತುಂಬಿ ಕೊಳ್ಳಬಹುದು ಎನ್ನಲಾಗುತ್ತಿದೆ. ಈ ನಡುವೆ ಬಿಗ್‌ಬಾಸ್ ಸಾರಥ್ಯ ವಹಿಸಿರುವ ಕಿಚ್ಚ ಸುದೀಪ್ ಪ್ರೇಕ್ಷಕರನ್ನು ರಂಜಿಸುತ್ತಿದ್ದಾರೆ. ಇದರ ಜತೆಗೆ ಬಿಲ್ಲ ರಂಗ ಬಾಷ ಚಿತ್ರದಲ್ಲಿ ನಟಿಸಲು ತಯಾರಿ ನಡೆಸುತ್ತಿದ್ದಾರೆ. ಈಗಾಗಲೇ ಈ ಚಿತ್ರದ ಪ್ರೀ ಪ್ರೊಡಕ್ಷನ್ ಕೆಲಸಗಳು ಆರಂಭವಾಗಿವೆ. ಕಿಚ್ಚ ಸುದೀಪ್ ಈ ಚಿತ್ರದಲ್ಲಿ ಮೂರು ವಿಭಿನ್ನ ಶೇಡ್‌ಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎಂಬ ನಿರೀಕ್ಷೆಯೂ ಇದೆ. ಬಿಲ್ಲ ರಂಗ ಬಾಷ ಸಿನಿಮಾದಲ್ಲಿ ಕಿಚ್ಚ ಸಿಕ್ಸ್ ಪ್ಯಾಕ್ ಅವತಾರದಲ್ಲಿಯೂ ಮಿಂಚಲಿದ್ದಾರೆ. ಅದಕ್ಕಾಗಿಯೇ ಪ್ರತಿ ದಿನ ಜಿಮ್‌ನಲ್ಲಿ ಕಸರತ್ತು ನಡೆಸುತ್ತಿದ್ದು, ದೇಹವನ್ನು ದಂಡಿಸು ತ್ತಿದ್ದಾರೆ. ಸೋಷಿಯಲ್ ಮೀಡಿಯಾದಲ್ಲಿ ಈ ಫೋಟೋವನ್ನು ಹಂಚಿಕೊಂಡಿದ್ದು, ವರ್ಕೌಟ್ ಮಾಡಿ ಕಿಚ್ಚ ಫಿಟ್ ಆಗಿ ಮಿಂಚುತ್ತಿದ್ದಾರೆ. ಈ ಹಿಂದೆ ಪೈಲ್ವಾನ್ ಚಿತ್ರ ಕ್ಕಾಗಿಯೂ ಸುದೀಪ್ ಜಿಮ್‌ನಲ್ಲಿ ಕಸರತ್ತು ನಡೆಸಿ ಪಾತ್ರಕ್ಕೆ ಜೀವ ತುಂಬಿದ್ದರು. ಅಂತೆಯೇ ಈಗ ಬಿಲ್ಲ ರಂಗ ಬಾಷ ಚಿತ್ರ ಕ್ಕಾಗಿಯೂ ಸಿದ್ಧತೆ ನಡೆಸಿದ್ದಾರೆ. ಅನೂಪ್ ಭಂಡಾರಿ ನಿರ್ದೇಶನದಲ್ಲಿ ಮೂಡಿಬರಲಿ ರುವ ಈ ಚಿತ್ರ ಅದ್ದೂರಿಯಾಗಿ ನಿರ್ಮಾಣ ವಾಗಲಿದ್ದು, ಪ್ಯಾನ್ ಇಂಡಿಯಾ ಇಂಡಿಯಾ ಸಿನಿಮಾವಾಗುವುದು ಖಚಿತವಾಗಿದೆ.

ನರ್ತನ್ ಚಿತ್ರದಲ್ಲಿ ಕಿಚ್ಚ

ಬಿಲ್ಲ ರಂಗ ಬಾಷ ಚಿತ್ರದ ಬಳಿಕ ಸುದೀಪ್ ನರ್ತನ್ ನಿರ್ದೇಶನದ ಚಿತ್ರದಲ್ಲಿ ನಟಿಸಲಿದ್ದಾರೆ ಎನ್ನಲಾಗುತ್ತಿದೆ. ಸುದೀಪ್ ಅವರಿಗಾಗಿ ಅದ್ಭುತ ಕಥೆ ಹೆಣೆದಿರುವ ನರ್ತನ್ ಅದನ್ನು ಸುದೀಪ್ ಅವರಿಗೆ ಹೇಳಿದ್ದಾರಂತೆ. ಸ್ಟೋರಿ ಕೇಳಿ ಕಿಚ್ಚ ಕೂಡ ಮೆಚ್ಚಿದ್ದಾರೆ. ಈ ಚಿತ್ರ ಇನ್ನು ಮಾತುಕತೆಯ ಹಂತದಲ್ಲಿದ್ದು ಮುಂದಿನ ದಿನಗಳಲ್ಲಿ ಸೆಟ್ಟೇರುವ ನಿರೀಕ್ಷೆಯೂ ಇದೆ. ಬಿಲ್ಲರಂಗ ಬಾಷ ಚಿತ್ರ ದಲ್ಲಿ ನಟಿಸಲಿರುವ ಕಿಚ್ಚ, ಆ ಬಳಿಕ ತಮಿಳು ನಟ, ನಿರ್ದೇಶಕ ಚೇರನ್ ನಿರ್ದೇಶನದ ಸಿನಿಮಾದಲ್ಲಿ ಅಭಿನಯಿಸಲಿದ್ದಾರೆ. ಆ ಬಳಿಕ ನರ್ತನ್ ಆ್ಯಕ್ಷನ್ ಕಟ್ ಹೇಳಲಿರುವ ಸಿನಿಮಾದಲ್ಲಿ ಅಭಿನಯಿಸಲಿದ್ದಾರೆ. ಅದಕ್ಕಾಗಿ ಇನ್ನೂ ಒಂದಷ್ಟು ದಿನ ಕಾಯಲೇಬೇಕು.

ಮುಂಬೈನಲ್ಲಿ ಟಾಕ್ಸಿಕ್ ತಂಡ

ಯಶ್ ಅಭಿನಯದ ಟಾಕ್ಸಿಕ್ ಆರಂಭದಿಂದಲೂ ಕುತೂಹಲ ಮೂಡಿಸಿದೆ. ಅದ್ದೂರಿಯಾಗಿ ಮುಹೂರ್ತ ಆಚರಿಸಿಕೊಂಡ ಟಾಕ್ಸಿಕ್ ತಂಡ, ಬೆಂಗಳೂರಿನ ಹೊರವಲಯದಲ್ಲಿ ಅದ್ದೂರಿ ಸೆಟ್ ನಿರ್ಮಿಸಿ ಶೂಟಿಂಗ್ ನಡೆಸಿತ್ತು. ಸದ್ಯ ಮೊದಲ ಶೆಡ್ಯೂಲ್ ಶೂಟಿಂಗ್ ಮುಗಿಸಿರುವ ಚಿತ್ರತಂಡ ಮುಂಬೈಗೆ ಹೊರಟಿದೆ. ಮುಂಬೈನ ಹೊರವಲಯದಲ್ಲಿ ಒಂದಷ್ಟು ಸನ್ನಿವೇಶಗಳನ್ನು ಚಿತ್ರೀಕರಿಸಿಕೊಳ್ಳ ಲಿದ್ದು, ಅದಕ್ಕಾಗಿ ಅಲ್ಲಿಯೂ ಬೃಹತ್ ಸೆಟ್ ನಿರ್ಮಿಸಲಾಗುತ್ತಿದೆ. ಮುಂಬೈನಲ್ಲಿ ಸುಮಾರು ನಲವತ್ತು ದಿನಗಳ ಶೂಟಿಂಗ್ ನಡೆಯಲಿದೆ. ವಿಶೇಷ ಎಂದರೆ ಬಾಲಿವುಡ್ ನಟಿ ಕಿಯಾರಾ ಅಡ್ವಾಣಿ ಚಿತ್ರತಂಡ ಸೇರಲಿದ್ದಾರೆ. ಕಿಯಾರಾ, ಯಶ್‌ಗೆ ನಾಯಕಿಯಾಗಿ ನಟಿಸಲಿದ್ದು, ಭರ್ಜರಿಯಾಗಿ ಮಿಂಚಲಿದ್ದಾರೆ. ಬಹುಭಾಷಾ ನಟಿ ನಯನಾ ತಾರಾ ಕೂಡ ಚಿತ್ರದಲ್ಲಿ ಅಭಿನಯಿಸುತ್ತಿದ್ದು, ಪ್ರಮುಖ ಪಾತ್ರದಲ್ಲಿ ಬಣ್ಣಹಚ್ಚುತ್ತಿದ್ದಾರೆ. ಮುಂಬೈನಲ್ಲಿ ಎರಡನೇ ಶೆಡ್ಯೂಲ್ ಶೂಟಿಂಗ್ ಮುಗಿದ ಬಳಿಕ ಚಿತ್ರತಂಡ ಲಂಡನ್‌ಗೆ ಹಾರಲಿದೆ. ವಿದೇಶದಲ್ಲಿ ಚಿತ್ರದ ಪ್ರಮುಖ ದೃಶ್ಯದ ಶೂಟಿಂಗ್ ನಡೆಸಲಿದೆ. ಟಾಕ್ಸಿಕ್, ಡ್ರಗ್ಸ್ ಮಾಫಿಯಾದ ಕುರಿತ ಕಥೆಯನ್ನು ಒಳಗೊಂಡಿದ್ದು, ಜತೆಗೆ ಭೂಗತ ಲೋಕದ ಸ್ಟೋರಿಯೂ ಇದೆ. ಯಶ್ ಈ ಚಿತ್ರದಲ್ಲಿ ಗ್ಯಾಂಗ್‌ಸ್ಟರ್ ಆಗಿ ಮಿಂಚಲಿದ್ದಾರೆ. ಈ ಚಿತ್ರಕ್ಕಾಗಿ ಸಾಕಷ್ಟು ಶ್ರಮವಹಿಸಿರುವ ಯಶ್, ಸ್ಟೈಲಿಶ್ ಗೆಟಪ್‌ನಲ್ಲಿ ಮಿಂಚಲಿದ್ದಾರೆ. ಮಲೆಯಾಳಂನ ಖ್ಯಾತ ನಿರ್ದೇಶಕಿ ಗೀತು ಮೋಹನ್‌ದಾಸ್ ನಿರ್ದೇಶನ ಮಾಡುತ್ತಿದ್ದಾರೆ. ಟಾಕ್ಸಿಕ್‌ನಲ್ಲಿ ಹಲವು ಹಾಲಿವುಡ್ ತಂತ್ರಜ್ಞರು ಕಾರ್ಯನಿರ್ವಹಿಸುತ್ತಿದ್ದು, ಹಾಲಿವುಡ್ ಸ್ಟೈಲ್‌ನಲ್ಲಿ ಸಿನಿಮಾ ಮೂಡಿಬರಲಿದೆಯಂತೆ. ಟಾಕ್ಸಿಕ್ ಅದ್ದೂರಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿದ್ದು, ಪ್ಯಾನ್ ವರ್ಲ್ಡ್ ಸಿನಿಮಾವಾಗಿ ತೆರೆಗೆ ಬರಲಿದೆ.

ವಿಟಾಕೀಸ್

ಆಂಜನೇಯನ ಸನ್ನಿಧಿಯಲಿ

ಕುಲದಲ್ಲಿ ಕೀಳ್ಯಾವುದೋ

ಕಾಮಿಡಿ ಕಿಲಾಡಿಗಳು ಖ್ಯಾತಿಯ ಮಡೆನೂರು ಮನು ಚಿತ್ರರಂಗದಲ್ಲಿ ಬ್ಯುಸಿಯಾಗಿದ್ದಾರೆ. ಇತ್ತೀಚೆಗೆ ಬಿಡುಗಡೆಯಾದ ಕೇದಾರನಾಥ ಕುರಿಫಾರಂ ಚಿತ್ರದಲ್ಲಿ ಕಾಮಿಡಿ ಕಚಗುಳಿಯಿಟ್ಟ ಮನು ಈಗ ಮತ್ತೊಂದು ಹೊಸ ಕಥೆಯ ಮೂಲಕ ತೆರೆಯಲ್ಲಿ ಮಿಂಚಲು ಸಿದ್ಧವಾಗಿದ್ದಾರೆ. ಕುಲದಲ್ಲಿ ಕೀಳ್ಯಾವುದೋ ಶೀರ್ಷಿಕೆಯ ಸಿನಿಮಾದಲ್ಲಿ ನಾಯಕನಾಗಿ ನಟಿಸುತ್ತಿದ್ದಾರೆ. ಕೆ. ರಾಮನಾರಾಯಣ್ ನಿರ್ದೇಶನದ ಈ ಚಿತ್ರದ ಮುಹೂರ್ತ ಚನ್ನರಾಯ ಪಟ್ಟಣದ ನುಗ್ಗೇಹಳ್ಳಿ ಶ್ರೀವೀರಾಂಜನೇಯಸ್ವಾಮಿ ದೇವಸ್ಥಾನದಲ್ಲಿ ನೆರವೇರಿತು. ನಿರ್ಮಾಪಕಿ ವಿದ್ಯಾ ಆರಂಭ ಫಲಕ ತೋರುವ ಮೂಲಕ ಚಿತ್ರಕ್ಕೆ ಚಾಲನೆ ನೀಡಿದರು. ಯೋಗ ರಾಜ್ ಸಿನಿಮಾಸ್ ಅರ್ಪಿಸುವ ಈ ಚಿತ್ರವನ್ನು ಪರ್ಲ್ ಸಿನಿ ಕ್ರಿಯೇಷನ್ಸ್ ಲಾಂಛನದಲ್ಲಿ ಎ.ಕೆ.ಸಂತೋಷ್ ಕುಮಾರ್ ಮತ್ತು ವಿದ್ಯಾ ಒಟ್ಟಾಗಿ ನಿರ್ಮಿಸುತ್ತಿದ್ದಾರೆ. ಕುಲದಲ್ಲಿ ಕೀಳ್ಯಾವುದೋ ಚಿತ್ರಕ್ಕೆ ಯೋಗ ರಾಜ್ ಭಟ್ ಹಾಗೂ ಇಸ್ಲಾಮುದ್ದೀನ್ ಕಥೆ ಬರೆದಿದ್ದು, ಗೀತರಚನೆಕಾರರಾಗಿ, ನಿರ್ದೇಶಕರಾಗಿ ಜನಪ್ರಿಯರಾಗಿರುವ ಕೆ.ರಾಮನಾರಾಯಣ್ ನಿರ್ದೇಶನ ಮಾಡುತ್ತಿದ್ದಾರೆ. ಯೋಗ ರಾಜ್ ಭಟ್ ಹಾಗೂ ಜಯಂತ್ ಕಾಯ್ಕಿಣಿ ಸಾಹಿತ್ಯದಲ್ಲಿ ಹಾಡುಗಳು ಮೂಡಿಬಂದಿದ್ದು, ಮನೋಮೂರ್ತಿ ಸಂಗೀತ ಸಂಯೋಜಿಸುತ್ತಿದ್ದಾರೆ. ಮಡೆನೂರು ಮನುಗೆ ಜತೆಯಾಗಿ ಕಿರುತೆರೆ ಧಾರಾವಾಹಿಯಲ್ಲಿ ನಟಿಸುತ್ತಿರುವ ಮೌನ ಗುಡ್ಡೆಮನೆ ಅಭಿನಯಿಸುತ್ತಿದ್ದಾರೆ.



ದಡವಿರದ ಕಡಲಿನಲಿ ಭೈರತಿ

ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್ ಅಭಿನಯದ ಭೈರತಿ ರಣಗಲ್ ಆರಂಭದಿಂದಲೂ ನಿರೀಕ್ಷೆ ಮೂಡಿಸಿದೆ. ನವೆಂಬರ್‌ನಲ್ಲಿ ಭೈರತಿ ರಣಗಲ್ ಆಗಮನವಾಗಲಿದ್ದು, ಅದಕ್ಕೂ ಮೊದಲು ಟೀಸರ್‌ನಲ್ಲಿಯೇ ಸಖತ್ ಸದ್ದು ಮಾಡುತ್ತಿದೆ. ಈಗ ಚಿತ್ರದ ಲಿರಿಕಲ್ ಹಾಡು ಬಿಡುಗಡೆಯಾಗಿದ್ದು ಸಿನಿಮಾದ ಬಗ್ಗೆ ನಿರೀಕ್ಷೆ ಹೆಚ್ಚುವಂತೆ ಮಾಡಿದೆ. ಕಾವಲಿಗ..ಕಾವಲಿಗ.. ಎಂಬ ಹಾಡು ಇದಾಗಿದ್ದು ಕೇಳಲು ಬಲು ಮಧುರ ವಾಗಿದೆ. ಸಾಯಿ ಸರ್ವೇಶ್ ಸಾಹಿತ್ಯ ಈ ಹಾಡಿಗೆ ಗಾಯಕ ವಿಜಯ್ ಪ್ರಕಾಶ್ ದನಿಯಾಗಿದ್ದು, ರವಿಬಸ್ರೂರು ಸಂಗೀತ ಸಂಯೋಜಿಸಿದ್ದಾರೆ. ಬಡವರ ಕಣ್ಣೀರು ಒರೆಸುವ ಭೈರತಿಯಾಗಿ ಶಿವಣ್ಣ ಗಮನಸೆಳೆಯುತ್ತಾರೆ. ಗೋಪಾಲ್ ಕೃಷ್ಣ ದೇಶಪಾಂಡೆ, ರುಕ್ಮಿಣಿ ವಸಂತ್ ಮುಂತಾದವರು ಹಾಡಿನಲ್ಲಿ ಕಾಣಿಸಿಕೊಂಡಿದ್ದಾರೆ. ಈ ಗೀತೆಗಾಗಿ ಅದ್ದೂರಿ ಸೆಟ್ ಹಾಕಿ ಅಲ್ಲಿಯೇ ಚಿತ್ರೀಕರಣ ನಡೆಸಲಾಗಿದೆ. ಭೈರತಿ ರಣಗಲ್, ಮಫ್ತಿ ಚಿತ್ರದ ಪ್ರೀಕ್ವೆಲ್ ಆಗಿದ್ದು ನರ್ತನ್ ನಿರ್ದೇಶನದಲ್ಲಿ ಮೂಡಿಬಂದಿದೆ. ಚಿತ್ರದಲ್ಲಿ ಒಳ್ಳೆಯ ಕಥೆ ಇರುವುದು ಈಗಾಗಲೇ ಸ್ಪಷ್ಟವಾಗಿದ್ದು, ಈ ಹಿಂದೆ ಎಂದೂ ಕಂಡಿರದ ಲುಕ್‌ನಲ್ಲಿ ಶಿವಣ್ಣ ಮಿಂಚಲಿ ದ್ದಾರೆ. ಗೀತಾ ಪಿಕ್ಚರ್ಸ್ ಬ್ಯಾನರ್‌ನಲ್ಲಿ ಗೀತಾ ಶಿವರಾಜ್ ಕುಮಾರ್ ಚಿತ್ರ ನಿರ್ಮಾಣ ಮಾಡಿ ದ್ದಾರೆ. ಈಗಾಗಲೇ ಶೂಟಿಂಗ್ ಮುಗಿಸಿರುವ ಭೈರತಿ ರಣಗಲ್ ನವೆಂಬರ್‌ನಲ್ಲಿ ಅದ್ದೂರಿಯಾಗಿ ತೆರೆಗೆ ಬರಲಿದೆ. ಕಾವಲಿಗೆ..ಕಾವಲಿಗ.. ಹಾಡು ಬಿಡುಗಡೆಯಾದ ಕೆಲವೇ ಗಂಟೆಗಳಲ್ಲಿ ಹನ್ನೆರಡು ಮಿಲಿಯನ್‌ಗೂ ಹೆಚ್ಚು ವೀಕ್ಷಣೆ ಕಂಡಿದೆ.